ಶ್ರೀಗುರುಬಸವಲಿಂಗಾಯ ನಮಃ

ಶ್ರೀ

ಶಿಲವಡಿ ವಿರಕ್ತಮಠದ

ಶ್ರೀ ಗುರುಶಾಂತಶಿವಯೋಗೀಶ್ವರ ಚರಿತಂ

*

ಪ್ರಕಾಶಕರು :

ಶ್ರೀ. ನಿ. ಪ್ರ. ಗುರುಶಾಂತ ಮಹಾಸ್ವಾಮಿಗಳು

ವಿರಕ್ತಮಠ, ಶಿಲವಡಿ

*

ಕವಿಗಳು :

ಆಸ್ಥಾನ ವಿದ್ವಾನ್ ಪಂಡಿತ ವೈ. ನಾಗೇಶಶಾಸ್ತ್ರಿಗಳು

ಬಳ್ಳಾರಿ

೧೯೬೫

ಶ್ರೀಗುರುಬಸವಲಿಂಗಾಯ ನಮಃ

ಶ್ರೀ

ಶಿಲವಡಿ ವಿರಕ್ತಮಠದ

ಶ್ರೀ ಗುರುಶಾಂತಶಿವಯೋಗೀಶ್ವರ ಚರಿತಂ

*

ಪ್ರಕಾಶಕರು:

ಶ್ರೀ. ನಿ. ಪ್ರ. ಗುರುಶಾಂತ ಮಹಾಸ್ವಾಮಿಗಳು
ವಿರಕ್ತಮಠ, ಶಿಲವಡಿ

*

ಕವಿಗಳು:

ಆಸ್ಥಾನ ವಿದ್ವಾನ್ ಪಂಡಿತ ವೈ. ನಾಗೇಶಶಾಸ್ತ್ರಿಗಳು
ಬಳ್ಳಾರಿ

ಪ್ರಕಾಶಕರು :

ಶ್ರೀ ನಿ. ಪ್ರ. ಗುರುಶಾಂತ ಮಹಾಸ್ವಾಮಿಗಳು
ವಿರಕ್ತಮಠ ಶಿಲವಡಿ.

ಪ್ರಥಮ ಮುದ್ರಣ ೧೯೬೫
೧೦೦೦ ಪ್ರತಿಗಳು

ಬೆಲೆ [illegible]

Rs 35000

ಮುದ್ರಕರು :

ವ್ಯವಸ್ಥಾಪಕರು, ಅಖಿಲ ಭಾರತ ಶಿವಾನುಭವ ಸಂಸ್ಥೆಯ
ಶ್ರೀ ಜಗದ್ಗುರು ಜಯವಿಭವ ಮುರುಘರಾಜೇಂದ್ರ ಮುದ್ರಣಾಲಯ
ಮುರುಘಾಮಠ ಮೃತ್ಯುಂಜಯನಗರ, ಧಾರವಾಡ

ಅರಿಕೆ

ಶ್ರೀ ಗುರುಶಾಂತಶಿವಯೋಗಿಗಳು ಮಹಾ ಧರ್ಮನಿಷ್ಠರು, ದಾಸೋಹಂಭಾವಿಗಳು ಮೇಲಾಗಿ ಲಿಂಗಪೂಜಾನುರಾಗಿಗಳು. ಭಕ್ತರ ಉದ್ಧಾರನೇ ತಮ್ಮ ನಿತ್ಯದ ಕಾಯಕ ಬಗೆದು ಹಗಲಿರುಗಳು ಶ್ರಮಿಸಿದ ಮಹಾನುಭಾವರವರು. ಅವರ ಶಿವ ಪೂಜೆಯ ಶಕ್ತಿ ಗಟ್ಟಿಗೊಂಡುದರಿಂದಲೇ ಬರಬರುತ್ತ ಅವರು ಕೈಕೊಂಡ ಕ್ರಿಯೆಗಳೆಲ್ಲ ಪವಾಡಮಯವಾಗಿ ನಡೆದು ಹೋದವು. ಅಂತಹ ಶಿವಯೋಗಿಗಳ ನಾಮಸ್ಮರಣೆ ನಮ್ಮ ಮನಸ್ಸನ್ನು ಶುದ್ಧಗೊಳಿಸುತ್ತದೆ; ಬಂದ ಸಂಕಟಗಳನ್ನು ಪರಿಹರಿಸುತ್ತದೆ. ನಮ್ಮನ್ನು ಸರ್ವವಿಧದಿಂದಲೂ ಕಾಯುತ್ತದೆ. ಆ ಪುಣ್ಯಪುರುಷರ ಜೀವನ ಚರಿತೆಯನ್ನು ಪುರಾಣರೂಪದಲ್ಲಿ ಹಿಡಿದಿಟ್ಟರೆ ಅದೊಂದು ಮುಂಬರುವ ಜನತೆಗೆ ದಾರಿದೀಪವಾಗಿ ಪರಿಣಮಿಸಬಹುದೆಂಬ ಆಶೆಯಿಂದ ಅದನ್ನು ಈಗ ಪ್ರಕಟಗೊಳಿಸುತ್ತಿದ್ದೇವೆ. ಈ ಕೃತಿಯನ್ನು ಸದ್ಭಕ್ತರೂ ಸಾಹಿತ್ಯ ಪ್ರೇಮಿಗಳೂ ತತ್ವ ಜಿಜ್ಞಾಸುಗಳೂ ಭಕ್ತಿಯಿಂದ ಬರಮಾಡಿಕೊಳ್ಳುವರೆನ್ನುವ ವಿಶ್ವಾಸ ನಮಗಿದೆ.

ವೀರಶೈವ ಪುರಾಣಗಳು ವೈಶಿಷ್ಟ್ಯಪೂರ್ಣವಾಗಿವೆ ಭಕ್ತಿ-ಜ್ಞಾನ-ವೈರಾಗ್ಯವೇ ಮೂರ್ತಿವೆತ್ತು ಬಂದಂತಿರುವ ಮಹಾಪುರುಷನ ಜೀವನ ಚರಿತೆಯನ್ನು ಕೊಡುವದರ ಜೊತೆಗೆ ವೀರಶೈವ ತತ್ವಜ್ಞಾನವು ಸ್ಪಷ್ಟವಾಗಿ ಮೂಡುವಂತೆ ಮಾಡುವುದು ಪುರಾಣಕಾರನ ಆದ್ಯ ಕರ್ತವ್ಯ. ಕಥೆಯೊಡನೆ ತತ್ವವನ್ನು ಮುನ್ನಡೆಸುವ ಅವನ ಕೌಶಲ್ಯ ನಿಜವಾಗಿಯೂ ಅವರ್ಣನಿಯ. ಪವಾಡಗಳನ್ನು ಹೆಣೆಯುವಲ್ಲಿಯೂ ತತ್ವ ನಿರೂಪಣೆಯನ್ನೇ ಮುಖ್ಯವಾಗಿ ಗಮನದಲ್ಲಿಟ್ಟು ಬರೆಯಬೇಕಾಗುತ್ತದೆ. ಪುರಾಣಕಾರ ಇಂತಹ ಕೆಲವಾರು ಕಟ್ಟನಿಟ್ಟುಗಳನ್ನಿಟ್ಟುಕೊಂಡು ಭಕ್ತಿರಸದಿಂದ ತುಂಬಿ ತುಳುಕುವ ಪುರಾಣಗಳನ್ನು ರಚಿಸುವದಕ್ಕೂ ಒಂದು ಅರ್ಹತೆಬೇಕು. ಆಧುನಿಕ ಯುಗದಲ್ಲಿ ಪುರಾಣಗಳನ್ನು ಬರೆಯುವ ಶಕ್ತಿಯನ್ನು ಪಡೆದವರು ವಿರಳ. ಇದ್ದವರಲ್ಲಿಯೇ ಶ್ರೇಷ್ಠರೆನಿಸಿಕೊಂಡಿದ್ದಾರೆ ಶ್ರೀ ವಾಯ್ ನಾಗೇಶಶಾಸ್ತ್ರಿಗಳವರು.

ಆಸ್ಥಾನ ವಿದ್ವಾನ್ ಸರ್ವದರ್ಶನತೀರ್ಥ ಕಳಾಪ್ರಪೂರ್ಣ ಶಿವಾನುಭವ ಕವಿಪುಂಗವರೆಂದು ಖ್ಯಾತಿವೆತ್ತ ಏಳು ಬೆಂಚಿಯ ಪಂಡಿತ ನಾಗೇಶ ಶಾಸ್ತ್ರಿಗಳವರು ಈಗಾಗಲೇ ಅನೇಕ ಪುಣ್ಯ ಪುರುಷರ, ತಪೋನಿಷ್ಠರ ದಿವ್ಯಚರಿತೆಗಳನ್ನು ಪುರಾಣಗಳನ್ನು ರಚಿಸಿ ಶ್ರೇಷ್ಠವರ್ಗದ ಕವಿಗಳೆಂದು ಪ್ರಸಿದ್ಧಿ ಪಡೆದಿದ್ದಾರೆ. ಅವರ ಪಾಂಡಿತ್ಯಪ್ರತಿಭೆಗಳ ಬಲದಿಂದ ಮೂಡಿಬಂದ ವೀರಶೈವ ಪುರಾಣಗಳು ಕನ್ನಡ ಸಾಹಿತ್ಯೇತಿಹಾಸದಲ್ಲಿ

ಒಂದು ನೂತನ ಯುಗವನ್ನೇ ಆರಂಭಿಸಿವೆ ಎಂದು ಹೇಳುವಷ್ಟು ವೈಶಿಷ್ಟ್ಯಪೂರ್ಣವಾಗಿವೆ. ಅವರೇ ಈ ಶ್ರೀ ಗುರುಶಾಂತಶಿವಯೋಗೀಶ್ವರ ಚರಿತೆಯನ್ನು ಪುರಾಣ ರೂಪದಲ್ಲಿ ಬರೆದುಕೊಟ್ಟು ಭಕ್ತವೃಂದಕ್ಕೆ ಮಹದುಪಕಾರ ಮಾಡಿದ್ದಾರೆ. ಶ್ರೀ ಶಿವಯೋಗಿಗಳು ಅವರನ್ನು ಸದಾ ಕಾಪಾಡಲಿ.

ಪುರಾಣವಂತೂ ಸಿದ್ಧವಾಯಿತು. ಅದರ ಪ್ರಕಟನೆಯ ಕಾರ್ಯ ನಡೆಯಬೇಡವೆ? ಶ್ರೀ ಗುರುಶಾಂತಶಿವಯೋಗಿಗಳವರಲ್ಲಿ ಭಕ್ತಿ ವಿಶ್ವಾಸಗಳನ್ನು ತಳೆದ ಭಕ್ತರು ಪ್ರಕಟನೆಯ ವೆಚ್ಚವನ್ನು ವಹಿಸಿ ಸ್ವಾಮಿಯ ಭಕ್ತಿಗೆ ಒಳಗಾದರು.

ಈ ಚರಿತ್ರೆಯ ಕಥಾಸಾರವನ್ನು ನಿಡಗುಂದಿ ಶ್ರೀ ನಿ. ಪ್ರ. ಮಲ್ಲಿಕಾರ್ಜುನ ಮಹಾಸ್ವಾಮಿಗಳು ರಸವತ್ತಾಗಿ ಬರೆದಿದ್ದಾರೆ, ಹಾಗೂ ಹೊಸಹಳ್ಳಿಯ ಶ್ರೀ ನಿ. ಪ್ರ. ಪ್ರಭುಸ್ವಾಮಿಗಳವರು ತಮ್ಮ ಪಾಂಡಿತ್ಯ ಪ್ರಪೂರ್ಣವಾದ ಒಂದು ಮುನ್ನುಡಿಯನ್ನು ಈ ಕೃತಿಗೆ ಆಶೀರ್ವದಿಸಿ ನಮ್ಮೆಲ್ಲರಿಗೂ ಮಹದುಪಕಾರ ಮಾಡಿದ್ದಾರೆ. ಅವರೀರ್ವರನ್ನು ಇಲ್ಲಿ ನೆನೆಯದೆ ಇರಲಾರೆವು.

ಕೊನೆಯದಾಗಿ, ಧಾರವಾಡ ಶ್ರೀ ಜಗದ್ಗುರುಜಯವಿಭವ ಮುರುಘರಾಜೇಂದ್ರ ಅಚ್ಚುಕೂಟದವರು ಈ ಕೃತಿಯನ್ನು ಸುಂದರವಾಗಿ ಅಚ್ಚುಹಾಕಿದ್ದಾರೆ. ಸರ್ವರಿಗೂ ಶಿವಯೋಗೀಶ್ವರನು ಸುಖಶಾಂತಿಗಳನ್ನಿತ್ತು ಕಾಪಾಡಲೆಂದು ಹಾರೈಸುತ್ತೇವೆ.

ಮಾಘ ಶುದ್ಧ ಪಂಚಮಿ
ದಿ. ೬–೨–೧೯೬೫

ಪ್ರಕಾಶಕರು

ಅನುಕ್ರಮಣಿಕೆ

—※—

ವಿಷಯ	ಪುಟ
ಹದಿನಾರನೆಯ ಸಂಧಿ	೧೬೧-೧೬೮
ಹದಿನೇಳನೆಯ ಸಂಧಿ	೧೬೯-೧೮೨
ಹದಿನೆಂಟನೆಯ ಸಂಧಿ	೧೮೩-೧೯೭
ಹತ್ತೊಂಬತ್ತನೆಯ ಸಂಧಿ	೧೯೮-೨೦೬
ಇಪ್ಪತ್ತನೆಯ ಸಂಧಿ	೨೦೭-೨೧೫

ಮುನ್ನುಡಿ

ಪುರಾಣಗಳು ಹಿಂದಿನಕಾಲದಲ್ಲಿದ್ದ ಮಹಾಪುರುಷರ ಚರಿತ್ರೆ ಕಥೆಗಳನ್ನು ತಕ್ಕಂತೆ ವಿಸ್ತರಿಸಿ ಹೇಳುತ್ತವೆ. ಆ ಮಹಾನುಭಾವರು ತಮ್ಮ ದಿನಗಟ್ಟಲೆಯ ಜೀವನಕ್ರಮದಲ್ಲೂ, ವಿಶೇಷಸನ್ನಿವೇಶದಲ್ಲೂ, ಅನುಸರಿಸುತ್ತಿದ್ದ ನೀತಿಗಳನ್ನೂ, ಆಚರಿಸುತ್ತಿದ್ದ ಧರ್ಮಗಳನ್ನೂ, ವರ್ಣಿಸಿ ತಿಳಿಸುತ್ತವೆ. ಎಲ್ಲಕ್ಕಿಂತ ಮೇಲಾಗಿ ತತ್ವಗಳನ್ನು ಎಂದರೆ ಈ ಪ್ರಪಂಚ, ಜೀವ, ಈಶ್ವರ, ಇವರ ಮೂಲಕ ತತ್ವದ ಸ್ವರೂಪವನ್ನು ವಿಶದವಾಗಿ ವಿವರಿಸಿ ಹೃದಯಂಗಮವಾಗಿರುವಂತೆ ತಿಳಿಯಹೇಳುತ್ತವೆ.

ಈ ಪುರಾಣಗಳ ವ್ಯಾಸಂಗದಿಂದ ಉಂಟಾಗುವ ತಿಳಿವಳಿಕೆಯು ನಮ್ಮ ಜೀವನಕ್ರಮದಲ್ಲಿ ನಮಗೂ ಬಂದೊದಗುವ ಸಮಸ್ಯೆಗಳನ್ನು ಬಿಡಿಸಿಕೊಂಡು ಸರಿಯಾದ ರೀತಿಯಲ್ಲಿ ನಾವೂ ಮುಂದುವರಿಯಲು ಸಹಾಯ ಮಾಡುತ್ತವೆ. ಆದುದರಿಂದ ಪುರಾಣ ಶಬ್ದಕ್ಕೆ ' ಪುರಾಽಪಿ ನವಮಿವ ಪುರಾಣಂ " ಎಂದೂ " ಪುರಾನೀಯತೇ ಇತಿ ಪುರಾಣಂ " ಎಂದೂ ವ್ಯುತ್ಪತ್ತಿಯನ್ನು ವಿವರಿಸಿರುವುದು ಉಚಿತವಾಗಿ ಅನ್ವರ್ಥವಾಗಿರುವಂತೆ ಕಂಡುಬರುತ್ತದೆ. ಇದರಿಂದ ಕಥೆಗಳೂ ವ್ಯಕ್ತಿಗಳೂ ಭಿನ್ನವಾದರೂ ವೇದಾಂತ ತತ್ವವು ಒಂದೇ ಆಗಿರುತ್ತದೆಂಬುದೂ ನಮಗೆ ಮನವರಿಕೆಯಾಗುತ್ತದೆ. ಆದುದರಿಂದಲೇ ಈ ಉತ್ತಮ ಗ್ರಂಥಗಳು ಜನಾನುರಾಗಕ್ಕೆ ಪಾತ್ರವಾಗಿರುತ್ತವೆ. ಅವರ ನಡೆ ನುಡಿ ಭಾವಗಳನ್ನು ಸಂಸ್ಕೃತಿಮಯವಾಗಿ ಬೆಳೆಯಿಸಿ ಉನ್ನತಿ ಮಾರ್ಗದತ್ತ ಕರೆದೊಯ್ಯುತ್ತವೆ. ಇದರಿಂದ ನಮಗೆ ಸತ್ಕಾರ್ಯದಲ್ಲಿ ಪ್ರವೃತ್ತಿಯೂ, ಅಸತ್ಕಾರ್ಯದಲ್ಲಿ ನಿವೃತ್ತಿಯೂ ಉಂಟಾಗುತ್ತದೆ. ಅರ್ಥ ಕಾಮಗಳಲ್ಲೇ ಆಸಕ್ತವಾಗಿರುವ ಜನಗಳ ಮನಸ್ಸನ್ನು ಧರ್ಮ ಮೋಕ್ಷಗಳ ಕಡೆಗೆ ಒಲಿಯುವಂತೆ ಮಾಡುವುದೇ ಈ ಪುರಾಣಗಳ ಉದ್ದೇಶವಾಗಿದೆ. ಈ ಕಾರಣದಿಂದ ಪುರಾಣಗಳನ್ನು ಸನ್ಮಿತ್ರನೆಂದು ಸಾಹಿತ್ಯದಲ್ಲಿ " ಯಥಾರ್ಥಪ್ರವಣಾತ್ ಪುರಾಣ ವಚನಾದಿಸಂ ಸುಹೃತ್ಸಂಮಿತಾತ್ " ಎಂದು ಮನ ಮುಟ್ಟುವಂತೆ ಬೋಧಿಸುತ್ತದೆ. ಆ ನಿಮಿತ್ತ ಪಂ॰ ಶ್ರೀ ನಾಗೇಶಶಾಸ್ತ್ರಿಗಳವರು " ಶ್ರೀ ಗುರುಶಾಂತ ಶಿವಯೋಗೀಶ್ವರ ಪುರಾಣ " ವನ್ನು ವಿರಚಿಸಿ ಮಹದುಪಕಾರ ಮಾಡಿದ್ದಾರೆ.

ವೀರಶೈವರಲ್ಲಿ ಶಿವಯೋಗಿಗಳ ಪರಂಪರೆಯ ಪ್ರವಾಹವು ಅವ್ಯಾಹತವಾಗಿ ಹರಿದು ಬಂದು ಹೆದ್ದೊರೆಯಾಗಿ ನಿಂತಿದೆ.

ಜೀವಭಾವವಳಿದು ಶಿವಭಾವವಾಗಿ ಪರಿಣಮಿಸಿ, ನಿಜವರಿತು ಆಚರಿಸಿ, ಲಿಂಗ ಭೋಗೋಪಭೋಗಿಯಾಗಿ ಲಿಂಗಾಂಗಸಾಮರಸ್ಯ ಪಡೆದು, ನಿತ್ಯ ಶಿವಯೋಗ ಸಾಮ್ರಾಜ್ಯದಲ್ಲಿ ನೆರೆಮೆರೆದು, ಶಿವಾತ್ಮಕಲಿಂಗದಲ್ಲಿ ಬೇರಿಲ್ಲದೆ ಇರುವುದೇ ಶಿವ ಯೋಗ. ಶಿವಯೋಗವನ್ನಾಚರಿಸಿ ಶಿವನಾದವರೇ ಶಿವಯೋಗಿಗಳು. ಅವರು ತಮ್ಮ ಅನುಪಮವಾದ, ದಿವ್ಯವಾದ ಈ ಶಿವಯೋಗ ಸಾಧನೆಯ ಪ್ರಭಾವದಿಂದ ಘನತೆ, ಗೌರವಗಳನ್ನು ಸಂಪಾದಿಸಿಕೊಂಡಿದ್ದಾರೆ. ಜಗವನ್ನು ಪಾವನ ಮಾಡಿದ್ದಾರೆ.

"ಗಿರಿಗಳೊಳೆಲ್ಲ ಹೇಮಗಿರಿಯೇ ಹಿರಿಯಂ ತರುಕೋಟಿಯೆಲ್ಲರೋಳ್
ಸುರತರುವೆ ಸದಾ ಹಿರಿದು ತಾರಗೆಯಲ್ಲರೊಳಂ ಶಶಾಂಕನೇ |
ಹಿರಿಯಂ ತಟಾಕವೆಲ್ಲರೊಳು ವಾರಿಧಿಯೆ ಹಿರಿಯಂ, ಮನುಜರೊಳ್
ನಿರುಪಮ ಲಿಂಗ ಶಿವಯೋಗಿ ಮಹಾಹಿರಿಯಂ ಗುರುಶಂಕರೇಶ್ವರಾ |"

ಇಂತಹ ವಿಶಿಷ್ಟ ಸಂಸ್ಕೃತಿ ಸಾಂಪ್ರದಾಯದಲ್ಲಿ ಬೆಳೆದು ಬಾಳಿದ ಸಾವಿರಾರು ಶಿವಶರಣ ರಲ್ಲಿ ಶ್ರೀ ಗುರುಶಾಂತ ಶಿವಯೋಗಿಗಳೊಬ್ಬರು. ಶಿವಶರಣರ ಸಾಂಪ್ರದಾಯವನ್ನು ಪೂರ್ವಪುರಾತನರು, ಬಸವಾದಿ ಪುರಾತನರು, ನೂತನ ಪುರಾತನರು, ಎಂದು ವಿಭಾಗಿ ಸಿದರೆ ಶ್ರೀ ಗುರುಶಾಂತ ಶಿವಯೋಗಿಗಳನ್ನು ನೂತನ ಪುರಾತನರ ಪಂಕ್ತಿಯಲ್ಲಿ ಸೇರಿಸ ಬೇಕಾಗುತ್ತದೆ

ಹಂಪಸಾಗರದ ತೋಂಟದಾರ್ಯ ಮಹಾಸ್ವಾಮಿಗಳವರ ವರ ಪ್ರಸಾದದಿಂದ ಕೊಪ್ಪಳ ಪ್ರಾಂತದ ಚಿಕ್ಕೇನಕೊಪ್ಪ ಎಂಬ ಚಿಕ್ಕಗ್ರಾಮದ ಹಿರಿಯಮಠದ ವಂಶದಲ್ಲಿ ಶ್ರೀ ಗುರುಶಾಂತ ಶಿವಯೋಗಿಗಳ ಉದಯವಾಯಿತು. ಶೀರ ಚಿಕ್ಕವರಿರುವಾಗಲೇ ತಂದೆ ತಾಯಿಗಳು ಗದುಗಿನ ಶ್ರೀ ಜಗದ್ಗುರು ತೋಂಟದಾರ್ಯ ಮಠಕ್ಕೆ ತಂದೊ ಪ್ಪಿಸಿದರು. ಅಲ್ಲಿ ದೊಡ್ಡವರಾಗಿ ನಯವಿನಯದಿಂದ ಸದಾಚರಣೆಯಿಂದ ವರ್ತಿಸಿ ಗುರು ಕೃಪೆಗೆ ಪಾತ್ರರಾಗಿ ಶಿವದೀಕ್ಷಾಸಂಸ್ಕಾರವನ್ನು ಹೊಂದಿ, ಭಯಭಕ್ತಿಯಿಂದ ಗುರುಸೇವೆ ಯನ್ನು ಮಾಡಿದರು. ಪಾಠಶಾಲೆಯಲ್ಲಿ ಕನ್ನಡ ಸಂಸ್ಕೃತಾಭ್ಯಾಸವನ್ನು ಮಾಡಿ ವಿದ್ಯೆ ಯನ್ನು ಸಂಪಾದಿಸಿದರು. ಪ್ರೌಢಾವಸ್ಥೆಗೆ ಬಂದನಂತರ ಮಠದ ಆಡಳಿತದ ಭಾರ ವನ್ನು ದಾಸೋಹದ ಮಹಾಕಾಯಕವನ್ನು ಗುರುಜಂಗಮರ ಸೇವೆಯನ್ನು ಕೈಕೊಂಡು ದಕ್ಷತೆಯಿಂದ ನೆಡೆಯಿಸಿದರು ವಿದ್ಯಾರ್ಥಿಗಳಿಗೆ ಅಭಯ, ಅನ್ನ, ಪುಸ್ತಕ, ವಸತಿ, ವಸನಗ ಳನ್ನು ಒದಗಿಸಿಕೊಟ್ಟು ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹವನ್ನುಂಟು ಮಾಡಿದರು. ಶ್ರೀಮಠ ದಲ್ಲಿ ಶಿವಭಜನೆ ಶಿವಕೀರ್ತನೆ ಪುರಾಣ ಪ್ರವಚನ ಧಾರ್ಮಿಕ ಸಭೆ ಸಮ್ಮೇಳನಗಳನ್ನೇ ರ್ಪಡಿಸಿ ಜನಜಾಗ್ರತೆಯನ್ನುಂಟು ಮಾಡಿ ಶ್ರೀ ಮಠದ ಕೀರ್ತಿಯನ್ನು ಗೌರವವನ್ನು ಹೆಚ್ಚಿಸಿದರು ಇದೆಲ್ಲ ಕಾರಣದಿಂದ ಗುರುಕೃಪೆಗೂ ಜನಾನುರಾಗಕ್ಕೂ ಪಾತ್ರರಾದರು.

ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರು ಗುರುಶಾಂತಸ್ವಾಮಿಗಳ ಕಾರ್ಯಕುಶಲತೆಯನ್ನು, ದಾಸೋಹಂ ಭಾವವನ್ನು, ಜನಾನುರಾಗವನ್ನು ಕಂಡು ತಮ್ಮ ಬೃಹನ್ಮಠಕ್ಕೆ ಬರಮಾಡಿಕೊಂಡು ಸಂಸ್ಥಾನದ ಸರ್ವ ಆಡಳಿತೆಯನ್ನು ವಹಿಸಿಕೊಟ್ಟರು. ಹನ್ನೆರಡುವರುಷಗಳವರೆಗೆ ಸಂಸ್ಥಾನದ ಪದ್ಧತಿಯಂತೆ ಜರುಗಬೇಕಾದ ಅನೇಕ ಕಾರ್ಯಗಳನ್ನು ಸಾಂಗವಾಗಿಯೂ ಸುಸೂತ್ರವಾಗಿಯೂ ಜರುಗಿಸಿದರು. ಶ್ರೀ ಜಗದ್ಗುರುಗಳ ಅಪ್ಪಣೆಯಂತೆ ಹರಿಹರದ ಮಹಾಜನಗಳ ಅಪೇಕ್ಷೆಯಂತೆ ಹರಿಹರದ ವಿರಕ್ತಮಠದ ನಿರಂಜನ ಚರಪಟ್ಟಾಧಿಕಾರವನ್ನು ಹೊಂದಿದರು. ಶ್ರೀ ಗುರುಶಾಂತ ಶಿವಯೋಗಿಗಳು ಹರಿಹರದ ವಿರಕ್ತ ಮಠಾಧಿಪತಿಗಳಾಗಿ, ಆಶ್ರಮ ಧರ್ಮನಿಷ್ಠರಾಗಿ, ದಾಸೋಹಂಭಾವಿಗಳಾಗಿ, ಲಿಂಗಪೂಜಾಸಕ್ತರಾಗಿ ಮಠಕ್ಕೆ ಬಂದ ಭಕ್ತರಿಗೆ ಭಕ್ತಿಯನ್ನು, ನೀತಿಯನ್ನು, ಧರ್ಮತತ್ವವನ್ನು ಉಪದೇಸಿಸುತ್ತಲಿದ್ದರು. ಶ್ರೀ ಮಠವನ್ನು ಜೀರ್ಣೋದ್ಧಾರಗೊಳಿಸಿ ಮಠದ ಆವರಣದಲ್ಲಿ ಅರವತ್ತು ಮೂರು ಪುರಾತನರ ಕುರುಹಾಗಿ ಅರುವತ್ತು ಮೂರು ಬಿಲ್ವವೃಕ್ಷಗಳನ್ನು ನಟ್ಟು ಸಂಸ್ಕರಿಸಿ ಸಂರಕ್ಷಿಸಿದರು. ತಮ್ಮ ಷಟ್‌ಸ್ಥಲಾಚರಣೆಯ ಪ್ರಭಾವದಿಂದ ಕ್ರಿಯಾಸಿದ್ಧಿಯಿಂದ ಪೂತರಾದ ಶ್ರೀ ಗುರುಶಾಂತ ಶಿವಯೋಗಿಗಳ ಮಹಿಮೆಯಿಂದ—

"ವರತನುಜರಂ ಪಡೆದುಕೊಂಡರು
ಸಿರಿಯನ್ನೈಸಲೆ ಗಳಿಸಿಕೊಂಡರು
ನೆರೆರುಜೆಯ ಪರಿಹರಿಸಿಕೊಂಡರು ಮೂಕರುಂ ಬಿಡದೇ
ಸರಸವಾಣಿಯೊಳೊಪ್ಪುತಿರ್ದರು
ಕುರುಡರಮಳಾಕ್ಷಿಗಳನಾಂತರು
ಹರಿಹರದ ಸದ್ಗುರುವರನ ಪರಕೆಯೊಳು ಜನತೆಯೊಳು ।"

ಇಂತು ಮಹಿಮೆಗಳ ನಟಿಸಿ ಭಕ್ತೋದ್ಧಾರ ಮಾಡುತ್ತ ಪೂಜ್ಯರೆನಿಸಿ ಇರುತ್ತಲಿರಲು.,

ನಾವಳ್ಳಿಯ ತೋಂಟದಾರ್ಯನೆಂಬವನು ಬಂದು ನಮ್ಮೂರಿಗೆ ದಯಮಾಡಿಸಬೇಕೆಂದು ಪ್ರಾರ್ಥಿಸಲು ಅದನ್ನಂಗೀಕರಿಸಿ, ಆಗಮಿಸಿ ಅಲ್ಲಿಯ ಭಕ್ತರ ಭಕ್ತಿಯಸೇವೆಯನ್ನು ಕೈಕೊಂಡು ಧರ್ಮೋಪದೇಶ ಮಾಡಿ, ಪುನರಾಗಮನ ಮಾಡುವಾಗ ಪಾದಚಾರಿಗಳಾಗಿ ಹಳ್ಳಿಗೆ ಏಕ ರಾತ್ರಿಯನ್ನು ಪಟ್ಟಣಕ್ಕೆ ಪಂಚರಾತ್ರಿಯನ್ನು ಮಾಡುತ್ತ ಶಲವಡಿಗೆ ಶಿರಿ ಒದಗಿ ಬಂದಂತೆ ಬಂದರು.

"ಕೆಲವೆ ದಿನಗಳು ಕಳೆಯೆ ಬಳಿಕೀ
ನೆಲೆಗೆ ಶಿವಯೋಗೀಂದ್ರನೋರ್ವನು
ನಲವಿನಿಂದೈತರುವನಲ್ಲಿಂ ಮುಂದೆ ನಿಮ್ಮೂರ್ರೊಳ್ ।

ತೊಲಗಿ ದೈಸಿರಿ ಮರಳುತಿರ್ಪುದು
ಕಳವಳವನೊಂದದೆಯೆ ತದ್ಗುರು
ತಿಲಕನಾಗಮನವನೆ ಕಾದಿರವೇಳ್ಕುಮೆನೆ ಬಳಿಕ "

ಎಂದು ಶ್ರೀ ಜಗದ್ಗುರು ತೋಂಟದಾರ್ಯ ಮಹಾಸ್ವಾಮಿಗಳು ಈ ಮೊದಲು ನಮ್ಮೂರಿಗೆ ದಯಮಾಡಿಸಿ ಆಶೀರ್ವದಿಸಿ ಅಪ್ಪಣೆ ಕೊಡಿಸಿದ ಈ ವಚನ ಸತ್ಯವಾಯಿತೆಂದು ಶ್ರೀ ಗುರುಶಾಂತೇಶ್ವರನ ಆಗಮನದಿಂದ ಆನಂದ ಭರಿತರಾದರು. ಇವರ ವಿರತಿಯನ್ನು ಧರ್ಮಾಚರಣೆಯನ್ನು ಶಿವಕಳೆಯನ್ನು ಕಂಡು ಭಕ್ತಿವಿಶ್ವಾಸದಿಂದ ಪಾಳು ಬಿದ್ದಿದ್ದ, ಏನೊಂದೂ ಇಲ್ಲದ, ಸುಸ್ಥಿತಿಯಲ್ಲಿಲ್ಲದ ಸೂಸಂಗಿಯ ವಿರಕ್ತಮಠಕ್ಕೆ ಕರೆದೊಯ್ದು ಸತ್ಕರಿಸಿದರು. ಮಹಾಜನಗಳೆಲ್ಲರು ಸೇರಿ ಸ್ವಾಮಿ, ಈ ಮಠದಲ್ಲಿ ನೆಲೆಯಾಗಿ ನಿಂದು ನಮ್ಮನ್ನು, ನಮ್ಮ ಊರನ್ನು, ಈ ಮಠವನ್ನು ಉದ್ಧರಿಸಬೇಕೆಂದು ಪ್ರಾರ್ಥಿಸಿದರು. ಶ್ರೀ ಗುರುಶಾಂತೇಶ್ವರನು ಇದು ಶಿವಸಂಕೇತವೆಂದು ಭಾವಿಸಿ ಸಂತೋಷದಿಂದ ಸಮ್ಮತಿಸಿ ಭಕ್ತರ ಭಕ್ತಿಯ ಸೇವೆಯನ್ನು ಕೈಕೊಳ್ಳುತ್ತ ಲಿಂಗ ಪೂಜಾಸಕ್ತರಾಗಿರುತ್ತಿರಲು

" ನಡೆದೊಡೆ ಭೂಮಿಪಾವನ ಮಹಾಶರಣಂ ಸಹಜಾನುಭಾವದಿಂ
ನುಡಿದೊಡೆ ಸರ್ವಜೀವಿಗಳ ಜನ್ಮನಿವಾರಣವೊಮ್ಮೆ ನೋಡಿ ಕಂ
ಡೊಡವನೆ ಕೃತಾರ್ಥ ಕರಸಂಕಜ ಮಂಡೆಯ ಮೇಲೆ ಬಂದು ಬೀ
ಳ್ದೊಡೆ ಕುಲಕೋಟಿಯುಲ್ಲಕೆ ಸಮುದ್ಧರಣಂ ಗುರುಶಂಕರೇಶ್ವರಾ " ।
" ಕಂಡುದೆಲ್ಲಾ ಪಾವನ, ಕೇಳುವುದೆಲ್ಲಾ ಪರಮಬೋಧೆ,
ಮುಟ್ಟಿತೆಲ್ಲಾ ಪರುಷದ ಸೋಂಕು, ಒಡನೆ ನುಡಿದವರೆಲ್ಲಾ
ಸದ್ಯೋನ್ಮುಕ್ತರು, ಸುಳಿದ ಸುಳುಹೆಲ್ಲಾ ಜಗತ್ಪಾವನ,
ಮುಟ್ಟಿದ ಧರೆಯೆಲ್ಲವೂ ಅವಿಮುಕ್ತ ಕ್ಷೇತ್ರ, ಸೊಂಕಿದ
ಜಲವೆಲ್ಲವೂ ಪುಣ್ಯತೀರ್ಥಂಗಳು, ಶರಣೆಂದು ಭಕ್ತಿ
ಮಾಡಿದವರೆಲ್ಲರೂ ಸಾಯುಜ್ಯರು, ಗುಹೇಶ್ವರನ ಶರಣನ
ಸುಳುಹಿನ ಸೊಗಸನುಪಮಿಸಬಾರದು " ।

ಇಂತಹ ಮಹಾಮಹಿಮರ ದರ್ಶನಾಶೀರ್ವಾದಗಳನ್ನು ಪಡೆದವರೇ ಧನ್ಯರು. ಶ್ರೀ ಗುರುಶಾಂತಶಿವಯೋಗಿಗಳು ಜೀರ್ಣವಾದ ಮಠವನ್ನು ಜೀರ್ಣೋದ್ಧಾರಗೊಳಿಸಿದರು. ಶಿವಶರಣರಸಾಂಪ್ರದಾಯದಂತೆ ದಾಸೋಹವನ್ನೇರ್ಪಡಿಸಿದರು. ವೀರಶೈವ ಸಂಸ್ಕೃತಿಯ ಬೆಳೆವಣಿಗೆಗಾಗಿ ಪಾಠಶಾಲೆಯನ್ನೇರ್ಪಡಿಸಿ ವಿದ್ಯಾರ್ಥಿಗಳಿಗೆ ಅಭಯ, ಅನ್ನ, ವಿದ್ಯೆ, ವಸತಿ, ವಸನ, ಪುಸ್ತಕದಾನಗಳನ್ನು ಮಾಡಿದರು. ಮಠದಲ್ಲಿ ಅನೇಕ ಧಾರ್ಮಿಕ ಸಭೆ

ಸಮ್ಮೇಳನಗಳನ್ನೇರ್ಪಡಿಸಿ ಜನಸಾಮಾನ್ಯರಿಗೆ ಜ್ಞಾನವನ್ನುಂಟುಮಾಡಿದರು ಪಂಡಿತರಿಗೆ, ಪ್ರವಚನಕಾರರಿಗೆ, ಉಪನ್ಯಾಸಕರಿಗೆ, ಪೌರಾಣಿಕರಿಗೆ, ಕೀರ್ತನಕಾರರಿಗೆ, ಸಂಗೀತಜ್ಞರಿಗೆ ಸಹಾಯ ಸೌಕರ್ಯಗಳನ್ನಿತ್ತು ಪ್ರೋತ್ಸಾಹಿಸಿದರು. ಮಕ್ಕಳಿಲ್ಲದವರಿಗೆ ಸಂತಾನವನ್ನು, ರೋಗಿಗಳಿಗೆ ಆರೋಗ್ಯವನ್ನು, ಮಳೆ ಬರದಾಗ ಮಳೆಗರೆಯಿಸುವದನ್ನು, ಅಲ್ಪಪ್ರಸಾದದಿಂದ ಬಹಳ ಜನಗಳಿಗೆ ಉಣಿಸುವುದನ್ನು, ಮಾರಿಕಾ ಕಾಲರಾ ಬೇನೆ ನಿವಾರಣೆಯನ್ನು ಇಂತ್ಹನಂತ ಪವಾಡಗಳನ್ನೆಸಗಿದರು. ಶ್ರೀ ಗುರುಶಾಂತಶಿವಯೋಗಿಗಳು ಪರಮತಪಸ್ವಿಗಳು, ಆಶ್ರಮಧರ್ಮನಿಷ್ಠರು, ವಿರಾಗಿಗಳು, ವಾಕ್ಸಿದ್ಧಿಯುಳ್ಳವರು, ದಾಸೋಹಂಭಾವಿಗಳು, ಭೂತದಯಾಪರರು, ಸಮಾಜ, ತತ್ವ ಸಂಸ್ಕೃತಿ ಅಭಿಮಾನವುಳ್ಳವರು, ಭಕ್ತಪ್ರೇಮಿಗಳು ಆಗಿ ವಿರಾಜಿಸಿದರು.

ಪಂಡಿತ ಶ್ರೀ ನಾಗೇಶಶಾಸ್ತ್ರಿಗಳವರು ಇಂತಹ ಪಾವನ ಚರಿತ ಶರಣರಂ ನೆನೆವುದೇ ಘನಮುಕ್ತಿಪದಂ ಎಂಬ ಮಹದುಕ್ತಿಯುಂ ನೆನೆದು “ಶ್ರೀ ಗುರುಶಾಂತ ಶಿವಯೋಗೀಶ್ವರ ಚರಿತೆಯನ್ನು ಪುರಾಣ ರೂಪದಲ್ಲಿ ರಚಿಸಿ ಲೋಕೋಪಕಾರ ಮಾಡಿದ್ದಾರೆ.

ಸರ್ವದರ್ಶನತೀರ್ಥ ಆಸ್ಥಾನ ವಿದ್ವಾನ್ ಏಳುಬೆಂಚೆ ಶ್ರೀ ನಾಗೇಶಶಾಸ್ತ್ರಿಗಳವರು ಬಹುಭಾಷಾವಿಶಾರದರು. ಮಹಾ ಪಂಡಿತರು. ಶಾಸ್ತ್ರಕುಶಲರು. ಮೇಲಾಗಿ ಪ್ರತಿಭಾನ್ವಿತ ಕವಿಗಳು. ಅವರು ಸಂಸ್ಕೃತ ಕನ್ನಡಗಳೆರಡರಲ್ಲಿಯೂ ಅಪಾರವಾದ ಪಾಂಡಿತ್ಯವನ್ನು ಸಂಪಾದಿಸಿಕೊಂಡಿದ್ದಾರೆ. ತೆಲುಗು, ಮರಾಠಿ, ಹಿಂದಿ, ಬಂಗಾಲಿ ಮತ್ತು ಅಂಗ್ಲಭಾಷೆಗಳನ್ನು ಬಲ್ಲವರಾಗಿದ್ದಾರೆ. ಅವರ ಕಾವ್ಯಪ್ರತಿಭೆ ನೈಸರ್ಗಿಕವಾದುದು. ಮಹಾ ಕವಿ ಕಾಳಿದಾಸನ ರಘುವಂಶ, ಕುಮಾರಸಂಭವ ಮತ್ತು ಭಗದ್ಗೀತೆಗಳನ್ನು ಕನ್ನಡಕ್ಕಿಳಿಸಿದ್ದಾರೆ. ಶಿವಾನುಭವಸೂತ್ರ, ವಿಶೇಷಾರ್ಥ ಪ್ರಕಾಶಿಕೆ, ಶತಕತ್ರಯಗಳನ್ನು ಟೀಕೆ ಟಿಪ್ಪಣೆಗಳೊಡನೆ ವಿವರಿಸಿದ್ದಾರೆ.

ಅಷ್ಟಾವರಣ ವಿವೇಕ, ಪಂಚಾಚಾರ ಪ್ರಕಾಶಿಕೆ, ಷಟ್‌ಸ್ಥಲ ತತ್ವದರ್ಪಣ, ಶಿವಯೋಗ ಮುಂತಾದ ತತ್ವಗ್ರಂಥಗಳನ್ನು ರಚಿಸಿದ್ದಾರೆ.

ಕವಿಗಳಾದ ಶ್ರೀ ನಾಗೇಶಶಾಸ್ತ್ರಿಗಳು ಭಕ್ತಿಯುತರಾಗಿ ಶ್ರೀ ಮರಿಶಿವಯೋಗೀಶ್ವರ ಪುರಾಣ, ಶ್ರೀ ಗವಿಸಿದ್ಧೇಶ್ವರ ಪುರಾಣ, ಶ್ರೀ ಸಿದ್ಧಲಿಂಗ ಸ್ವಾಮಿಗಳ ಪುರಾಣ, ಶ್ರೀ ಫಲಾಹಾರೇಶ್ವರ ಪುರಾಣ, ಶ್ರೀ ಜಯದೇವ ಲೀಲೆ, ಶ್ರೀ ಚೆನ್ನಬಸವ ಶಿವಯೋಗಿ ಪುರಾಣಗಳಂತಹ ಸತ್ಕಾವ್ಯಗಳನ್ನು ವಿರಚಿಸಿದ್ದಾರೆ.

ಈಗ ಶ್ರೀ ಗುರುಶಾಂತ ಶಿವಯೋಗೀಶ್ವರ ಚರಿತ್ರೆಯು ಮೂಡಿ ಬಂದಿದೆ. ಕವಿಯಿಂದ ವೀರಶೈವ ಕಾವ್ಯ ಸಂಪ್ರದಾಯವನ್ನನುಸರಿಸಿ ಶಿವಶರಣರ ರೀತಿ, ನೀತಿ, ತತ್ವ

ಗಳನ್ನರಿತು ತಮ್ಮ ಪರಿಪಕ್ವ ಅನುಭವದಿಂದ ಭಕ್ತಿಪುರಸ್ಸರವಾಗಿ ಭಾಮಿನೀ ಷಟ್ಪದಿಯಲ್ಲಿ ಮನೋಹರವಾಗಿ ಚಿತ್ರಿತವಾಗಿದೆ. ಸಂಪ್ರದಾಯ ಕಾವ್ಯಗಳಲ್ಲಿ ಗತಾನುಗತಿಕವಾಗಿರುವ ವರ್ಣನೆಗಳಿಗೆ ಇಲ್ಲಿ ಪ್ರಾಶಸ್ತ್ಯವಿರುವುದಿಲ್ಲ. ಕಾವ್ಯರಚನೆಗೆ ಪುಷ್ಟಿಯನ್ನು ಕೊಡಬಲ್ಲ ಪ್ರಾಸಂಗಿಕ ವರ್ಣನೆಗಳು ಅಲ್ಲಲ್ಲಿ ಹಿತಮಿತವಾಗಿ ಬಂದು, ಮನೋಹರವಾಗಿ ನಿಂತಿವೆ. ' ವರ್ಣನೆಗಾಗಿ ಕಾವ್ಯವಲ್ಲ, ಕಾವ್ಯಕ್ಕಾಗಿ ವರ್ಣನೆಗಳು ಎಂಬ ಮಾತನ್ನು ಕವಿ ಶ್ರೀ ನಾಗೇಶ ಶಾಸ್ತ್ರಿಗಳು ಅರಿದು ಆಚರಿಸಿದ್ದಾರೆ. ಕವಿಯ ಕಾವ್ಯರಚನೆಯ ಆಳವಾದ ಅಭ್ಯಾಸದ ಫಲವಾಗಿ ಹಿತಮಿತವಾದ ಮಾತು, ಮೃದು ಮಧುರವಾದ ಗಾಂಭೀರ್ಯ ವಿಶಿಷ್ಟ ಪದರಚನೆ, ವಿಚಾರ ಪ್ರಗಲ್ಭತೆ, ಸುಲಲಿತವಾದ ಸುಲಭಶೈಲಿ, ಲೋಕಾನುಭವಯುಕ್ತವಾದ ಉಪಮಾನೋಪಮೇಯಗಳು ರಸಿಕರ ಮನಸ್ಸನ್ನು ಮುಟ್ಟಿ ಹರ್ಷವನ್ನುಂಟುಮಾಡುವಂತಿವೆ. ಇಲ್ಲಿ ಕನ್ನಡ ನಾಡಿನ ಬಣ್ಣನೆಯು ತುಂಬ ಹೃದಯಂಗಮವಾಗಿದೆ.

" ದಾಸಿಗಳ ಧನಿಕೋತ್ತಮರ ಸ
ನ್ಮಾನಿಗಳ ಧರ್ಮಾತ್ಮರಮಳ
ಜ್ಞಾನಿಗಳ ಸದ್ಭಕ್ತಿನಿಧಿಗಳ ಮೇಣ್ ಕಲಾವಿದರ |
ಭೂನುತರ ಕವಿ ಪಂಡಿತರ ಪರ
ಮಾನುಭವಿಗಳ ವಿಮಳ ಜನ್ಮ
ಸ್ಥಾನಮೆನಿಸುತ್ತಿಸೆಯುವುದು ಕನ್ನಡ ಧರಾತಲವು " |

ಕವಿ ತನಗಿರುವ ಕನ್ನಡ ನಾಡ ಮೇಲಿನ ಪ್ರೇಮವನ್ನು, ಕನ್ನಡ ಜನದ ಅಭಿಮಾನಾದರಗಳನ್ನು ಹೃದಯತುಂಬಿ ಹಾಡಿ ಹರಿಸಿದ್ದಾನೆ.

" ಶಿವಶರಣ ಕೃತ ವಚನ ವಾಙ್ಮಯ
ಸುವಿಮಳ ಕ್ಷೇತ್ರದೊಳು ಸಲೆ ಬೆಳ
ಗುವ ಶಿವಾಮಿತ ಭಕ್ತಿರಸತೀರ್ಥವನು ಕುಡಿಕುಡಿದು
ಭವದ ರುಜೆಯನು ಕಳೆದುಕೊಳ್ಳುತೆ
ಶಿವಸುಭಕ್ತಿಯ ಪಡೆಯುತಂ ಸುಖಿ
ಸುವರು ಕನ್ನಡಿಗರು ನಿರುತಮಾನಾಡ ಮಧ್ಯದೊಳು " |

ಇದು ತುಂಬ ಕಾವ್ಯಮಯವಾಗಿದೆ, ತತ್ವಮಯವಾಗಿದೆ. ಕವಿ ಶಿವಶರಣರ ವಚನ ಶಾಸ್ತ್ರಾಭ್ಯಾಸ ಮಾಡಿ ಪವಿತ್ರ ಭಾವನೆಯಿಂದ ಕಂಡಿದ್ದಾನೆ. ಕವಿಯ ಹೃದಯವೇ ಒಂದು ಪವಿತ್ರ ತೀರ್ಥವಾಗಿ ಪರಿಣಮಿಸಿ ನಿಂದಂತಿದೆ.

" ಕೆಲರು ಶಿವನಂ ಸಕಲನೆಂದೊಡೆ
ಕೆಲರು ನಿಷ್ಕಲನೆಂದೊರೆಯುವರು
ತಿಳಿಯೆ ನಿಷ್ಕಲ ಸಕಲ ರೂಪದ್ವಯುವ ಲೀಲೆಯೊಳು
ತಳೆಯುವನು ಶಿವನೆಂಬುದನು ಷಟ್
ಸ್ಥಲದ ಪಥದೊಳ್ ತಿಳಿದು ನಡೆದು
ಜ್ವಲಿತ ಶರಣರ ತವರೆನಿಸಿದುದು ಕನ್ನಡದ ನಾಡು " ।

" ಒಡಲೆ ಧರಿಸಿರ್ದಿಷ್ಟಲಿಂಗದ
ಗುಡಿಯೆನಿಸುವುದರಿಂದೆ ನಿರುತಂ
ಪಡೆದು ಪಾವನ ಭಾವನೆಯ ಸೂತಕದ ಮಲಿನತೆಗೇ
ಎಡೆಗೊಡದೆ ಶಿವನಾಗಿ ಶಿವನಂ
ಬಿಡದುಪಾಸಿಸುವಾ ವ್ರತವ ಸಲೆ
ಪಿಡಿದ ಭಕ್ತರ ಬೀಡು ಕನ್ನಡ ಪುಣ್ಯ ಭೂಮಿಯದು" ।

ವೀರಶೈವ ಸಿದ್ಧಾಂತ ಶಾಸ್ತ್ರಕಾರರು ಶಿವನನ್ನು ಯಾವ ರೀತಿಯಲ್ಲಿ ಕಂಡಿದ್ದಾರೆ? ಆತನನ್ನು ಯಾವರೀತಿಯಲ್ಲಿ ಉಪಾಶಿಸಬೇಕು? ಉಪಾಸನೆಯಿಂದಾಗುವ ಪರಿಣಾಮವಾದರೂ ಏನು? ಮುಂತಾದ ಸಾಂಸ್ಕೃತಿಕವಾದ, ತಾತ್ವಿಕವಾದ ವಿಚಾರವನ್ನು ಕವಿ ತುಂಬ ಜಾಣ್ಮೆಯಿಂದ ಮಾರ್ಮಿಕವಾಗಿಯೂ ಸರಸವಾಗಿಯೂ, ಸಾರವತ್ತಾಗಿಯೂ ಕೃತಪಡಿಸಿದ್ದಾನೆ.

ಮಗನನಾಗಿಸಿಕೊಂಡ ಲಿಂಗವ
ಮಿಗಿಲೆನಿಸಿದಳ್ತಿಯೊಳು ಸಲಹಿದ
ಮುಗದೆ ಬಿಜ್ಜಮ್ಮೆಯ ತೆರದೆ ಗುರುಶಾಂತ ಜಂಗಮವಾ
ಮಗನೊಳಿಟ್ಟಕ್ಕರೆಯೊಳೇ ಸಲೆ
ಬಗೆಯಲರೆ ತಾನುಪಚರಿಸುತಂ
ಸೊಗದ ಕಡಲೊಳಗೀಸುತಿರ್ದಳು ಚಂಗಳಾಂಬಿಕೆಯು ।

ಅಲ್ಲಲ್ಲಿ ಮೂಡಿಬಂದಿರುವ ಭಕ್ತಿ, ಜ್ಞಾನ, ವೈರಾಗ್ಯ, ಧರ್ಮ, ನೀತಿಗಳ ರಚನೆಯಿಂದ ಭಕ್ತರ ಭಾವನೆಯನ್ನು ಶ್ರದ್ಧಾಭಕ್ತಿಯತ್ತ ಸೆಳೆಯುವಂತೆ ಮಾಡಿದೆ.

ಕವಿ ಶ್ರೀ ನಾಗೇಶ ಶಾಸ್ತ್ರಿಗಳು ಇಂತಹ ಕೃತಿ ರಚನೆಯಿಂದ ಪುಣ್ಯ ಕೀರ್ತಿಗಳೆರಡನ್ನೂ ಸಂಪಾದಿಸಿಕೊಂಡಿದ್ದಾರೆ. ಕನ್ನಡ ಸಾಹಿತ್ಯಚರಿತ್ರೆಯಲ್ಲಿ, ವೀರಶೈವ ತತ್ವ ನಿರೂಪಣೆಯ ಇತಿಹಾಸದಲ್ಲಿ ತಮ್ಮ ಅಂಕಿತವು ಸ್ಥಿರವಾಗಿ ನಿಲ್ಲುವಂತೆ ಮಾಡಿಕೊಂಡಿದ್ದಾರೆ.

ನವಿಲುಗುಂದ ಶ್ರೀ ಗವಿಮಠಾಧಿಪತಿಗಳಾದ ಶ್ರೀ ಮ. ನಿ. ಪ್ರ ಬಸವಲಿಂಗ ಮಹಾಸ್ವಾಮಿಗಳವರು ಜನೋಪಯುಕ್ತವಾದ ಹಲವು ಬಗೆಯ ಕಾರ್ಯಗಳನ್ನೆಸಗಿ ಕನ್ನಡನಾಡಿಗೆ ಸುಪರಿಚಿತರಾಗಿದ್ದಾರೆ. ಶ್ರೀ ಗುರುಶಾಂತ ಶಿವಯೋಗಿಗಳವರ ವಿಮಲ ಜೀವನ ಚರಿತೆಯನ್ನು ರಚಿಸಲು ಕವಿ ಶ್ರೀ ನಾಗೇಶಶಾಸ್ತ್ರಿಗಳವರಿಗೆ ಪ್ರೇರಿಸಿ ಹಲವು ಸಲಹೆ ಸೂಚನೆಗಳನ್ನು ಒದಗಿಸಿಕೊಟ್ಟು ಶ್ರೀಗಳವರಲ್ಲಿರುವ ತಮ್ಮ ಅಚಲವಾದ ಪೂಜ್ಯತೆಯನ್ನು ಪ್ರದರ್ಶಿಸಿದ್ದಾರೆ.

ಶಲವಡಿ ಹೂಸಂಗಿ ಶ್ರೀ ವಿರಕ್ತಮಠಕ್ಕೆ ಶ್ರೀ ಗುರುಶಾಂತ ಶಿವಯೋಗಿಗಳ ನಂತರ ಉತ್ತರಾಧಿಕಾರಿಗಳಾಗಿರುವ ಶ್ರೀ ಮ. ನಿ. ಪ್ರ. ಗುರುಶಾಂತ ಸ್ವಾಮಿಗಳವರು ಆಶ್ರಮ ಧರ್ಮನಿಷ್ಠರು, ಲಿಂಗ ಪೂಜಾಸಕ್ತರು, ದಾಸೋಹಂಭಾವಿಗಳು, ಉತ್ಸಾಹಿಗಳು ಕಾರ್ಯಕುಶಲರು ಆಗಿದ್ದಾರೆ. ಪರಂಪರೆಯಿಂದ ನಡೆದು ಬಂದ ಮಠದಲ್ಲಿ ಜರುಗಬೇಕಾದ ಸಮಸ್ತ ಕಾರ್ಯಗಳನ್ನು ಜರುಗಿಸುತ್ತ ಮಠದ ಗೌರವವನ್ನು ರಕ್ಷಿಸುತ್ತ ಭಕ್ತರ ಭಕ್ತಿ ವಿಶ್ವಾಸಕ್ಕೆ ಪಾತ್ರರಾಗಿದ್ದಾರೆ. ಗುರುಗಳಲ್ಲಿರುವ ಅಪಾರವಾದ ಭಕ್ತಿಯ ದ್ಯೋತಕವಾಗಿ ಗುರುಗದ್ದುಗೆಯ ಮೇಲೆ ಭದ್ರವಾದ ಭವ್ಯವಾದ ಶಿಲಾಮಠವನ್ನು ಕಟ್ಟಿಸಿದ್ದಾರೆ. ಮಠಕ್ಕೆ ಬೇಕಾದ ಹಲವು ಉಪಕರಣಗಳನ್ನು ಸಂಗ್ರಹಿಸಿ ಮಠದ ಅಭಿವೃದ್ಧಿಗೆ ಕಾರಣರಾಗಿದ್ದಾರೆ.

ಶ್ರೀ ಗುರುಶಾಂತೇಶ್ವರ ಪುರಾಣವನ್ನು ಬರೆಯಿಸಿ ಮುದ್ರಣದ ವೆಚ್ಚಕ್ಕೆ ಬೇಕಾಗುವ ಹಣವನ್ನು ಸಂಗ್ರಹಿಸಿ ಕ್ಷಿಪ್ರದಲ್ಲಿಯೇ ಪುರಾಣವು ಪ್ರಕಟವಾಗುವಂತೆ ಮಾಡಿದುದು ತುಂಬ ಸ್ತುತ್ಯವಾದ ವಿಷಯವಾಗಿದೆ. ಶ್ರೀ ಗುರುಶಾಂತ ಶಿವಯೋಗಿಗಳ ಪವಿತ್ರ ಈ ಚಾರಿತ್ರದಿಂದ ನಮ್ಮ ಜನತೆಯ ಚಾರಿತ್ರ ಶುದ್ಧಿಯಾಗಲಿ, ಚಿತ್ತಶುದ್ಧಿಯಾಗಲಿ, ಹೃದಯಸಂಸ್ಕಾರವಾಗಲಿ ಎಂದು ಪ್ರಾರ್ಥಿಸುತ್ತೇನೆ.

ಹೊಸಹಳ್ಳಿ
ಶ್ರೀ ಬೂದಿಸ್ವಾಮಿ ಸಂಸ್ಥಾನಮಠ
ದಿ. ೧೦-೧೦-೧೯೬೪

ಶ್ರೀ ಮ. ನಿ. ಪ್ರ.
ಪ್ರಭುಸ್ವಾಮಿಗಳು

ಶ್ರೀ ಗುರುಶಾಂತ ಶಿವಯೋಗೀಶ್ವರ ಚರಿತೆಯು.

ಕಥಾ ಸಾರವು

ಪೀಠಿಕಾ ಸಂಧಿ

ಅನುಪಮಲಿಂಗದ ಚಿತ್ಕಳೆಯು ಭೂತಲದಲ್ಲಿ ಶ್ರೀ ಗುರುಶಾಂತಸ್ವಾಮಿ ನಾಮದಿಂದುದಿಸಿ ಭಕ್ತಸಮೂಹವನ್ನು ಪೊರೆಯಿತು. ಆ ಸ್ವಾಮಿ ನಮ್ಮ ಹೃದಯ ಕಮಲ ಪೀಠದಲ್ಲಿ ನಿರಂತರ ಶೋಭಿಸುತ್ತಿರಲಿ. ಯಾವನು ತನ್ನ ಲೀಲೆಯಿಂದ ಲಿಂಗಾಂಗ ರೂಪನಾಗಿ ಪೂಜ್ಯ ಪೂಜಕನೆನಿಸಿ ಮೆರೆಯುವನೋ ಆ ಶಿವನ ಕೃಪೆ ನಮಗಿರಲೆಂದು ನುತಿಸುವೆನು ಲಿಂಗದಲ್ಲಿ ಕಳೆಯಾಗಿ ಅಂಗದಲ್ಲಿ ಭಕ್ತಿಯಾಗಿ ಆ ಅಂಗಭಾವವ ಕಳೆದು ಲಿಂಗರೂಪ ಕೊಡುವ ಶಿವೆಯು ಕೃತಿರಚನೆಯಲ್ಲಿ ಶಬ್ದಶಕ್ತಿಯಾಗಿರಲಿ. ಪಾರ್ವತೀ ಪರಮೇಶ್ವರರ ಪ್ರೀತಿಯ ಪುತ್ರನಾದ ಗಣಪತಿಯು ಕಾವ್ಯಕ್ಕೆ ಎಡರಡಸುವದನ್ನು ಪರಿಹರಿಸಲೆಂದು ನೆನೆಯುವೆ. ಶಿವನ ಸದ್ರೂಪವೇ ಗುರು, ಚಿದ್ರೂಪವೇ ಲಿಂಗ, ಆನಂದ ರೂಪವೇ ಜಂಗಮ ಎಂದರಿದು ಗುರುಲಿಂಗ ಜಂಗಮರನ್ನು ಭಕ್ತಿಯಿಂದ ಪೂಜಿಸುವ ವೀರಶೈವರನ್ನು ನುತಿಸಿ ಸುಖಿಸುವೆನು.

ನಿಜಹಸ್ತದೊಳು ಜನ್ಮವನಿತ್ತು ಲಿಂಗವ ಕರುಣಿಸಿ ಶಿವಮಂತ್ರವ ಉಪದೇಶಿಸಿ ಪೊರೆದ ಗುರುವರನ ಪಾದಪದ್ಮವನ್ನು ನುತಿಸುವ ಭಾಗ್ಯ ನಮಗಿರಲಿ. ದೀಕ್ಷೆಯಿಂದ ನಿರ್ಮಲವಾದ ದೇಹದಲ್ಲಿ ಗುರುವರನು ನೆಲೆಗೊಳಿಸಿದ ಇಷ್ಟಲಿಂಗವನ್ನೇ ನೆನೆಯುವ ನಿರೀಕ್ಷಿಸುವ ಪೂಜಿಸುವ ಸೌಖ್ಯದ ನೆಲೆಯೆನಿಸಿ ನಮ್ಮ ಜನ್ಮ ಬೆಳಗಲಿ. ಲಿಂಗಚಿತ್ಕಳೆ ಮೈದಳೆದು ದರ್ಶನವಿತ್ತು ಭವಕಳೆವ ಭಕ್ತಿಯ ಕರುಣಿಸಲು ಸಂಚರಿಪ ಜಂಗಮನ ಪಾದಪಂಕಜ ನಮ್ಮ ಹೃದಯಕಾಸಾರದೊಳು ನಿರಂತರ ವಿರಾಜಿಸಲಿ. ಶಿವನ ಚಿತ್ಕಳೆಯಾಗಿ ಬೆಳಗುವ ವಿಭೂತಿ ಭವದುರಿತ ಕಳೆದು ಶಿವತೇಜವನ್ನುಂಟು ಮಾಡುವದೆಂದು ತಿಳಿದು ಭಸ್ಮವನ್ನು ಧರಿಸುವ ಸುಮತಿ ನಮ್ಮಲ್ಲಿ ನೆಲೆಗೊಂಡಿರಲಿ. ಶಿವನ ಚಿದಕ್ಷಿಗಳಾದ ರುದ್ರಾಕ್ಷಿಗಳನ್ನು ಧರಿಸುವದರಿಂದ ಸುಜ್ಞಾನದೃಷ್ಟಿ ಮೂಡಿ ಶಿವಸುಖ ಪ್ರಾಪ್ತವಾಗುವದೆಂಬ ಶ್ರದ್ಧೆ ನಮ್ಮಲ್ಲಿ ಆಜೀವವಿರಲಿ. ಹೃದಯದಲ್ಲಿ ಮಂತ್ರರೂಪದಿಂದ ನೆಲಸಿದ ಲಿಂಗವು ತಂತ್ರಸಿದ್ಧವೆಂದು ತಿಳಿದು ಮಂತ್ರಮನರಾಗುತ್ತ ಕುತಂತ್ರಗಳಿಗೆ ಎಡೆಗೊಡದೆ ಬಾಳುತ್ತ ಯಂತ್ರವಾಹಕನಾದ ಶಿವನ ಕೃಪೆ ಪಡೆದಿರುವದು ನಮಗಿರಲಿ. ಶಿವಸ್ವರೂಪರಾದ ಗುರುಲಿಂಗ ಜಂಗಮರ ಪಾದತೀರ್ಥವನ್ನು ಚಿತ್ಸುಧೆ

ಯಿಂದರಿವು ಸೇವಿಸಿ ಭವರೋಗ ಕಳೆದುಕೊಂಡು ಪರಮಾನಂದ ಸಾಗರದಲ್ಲಿ ಈಸಾಡುವ ಭಾಗ್ಯ ನಮಗಿರಲಿ. ಗುರುಲಿಂಗ ಜಂಗಮರ ಉಪಾಸನೆಯ ಫಲವೇ ಪ್ರಸಾದವೆಂದು ನಂಬಿ ಪ್ರಸಾದ ಪಡೆಯುವ ನಿಜಾಚರಣೆ ನಮ್ಮಲ್ಲಿರುವಂತೆ ಕರುಣಿಸಲೆಂದು ಗುರುಲಿಂಗ ಜಂಗಮರ ನುತಿಸುವೆನು. ಧರ್ಮಮಂದಿರಕ್ಕೆ ನೀತಿಯೇ ನೆಲಗಟ್ಟೆಂಬ ತತ್ವವನ್ನು ಸತ್ಕ್ರಿಯೆಗಳಿಂದ ಪ್ರತಿಪಾದಿಸುವ ಪಂಚಾಚಾರಗಳನ್ನು ಆಚರಿಸಿ ಸುಗುಣಗಳ ಪಡೆವಳ್ತಿಯ ಗುರುಚರರು ಕರುಣಿಸಲಿ. ಶಕ್ತಿಸಹಿತನಾದ ಶಿವನ ಸ್ವರೂಪವನ್ನು ಭಕ್ತಿಸಹಿತನಾದ ಅಂಗನು ಪಡೆಯುವದೇ ಮುಕ್ತಿಯೆಂದು ಷಟ್‌ಸ್ಥಲ ಸಿದ್ಧಾಂತ ವಿವರಿಸುವದು. ನಮಗದು ಶಿವನ ಕೃಪೆಯಿಂದ ಸಮನಿಸಲಿ.

ಗುರುಪಂಚಪೀಠಾಧಾರಭೂತರೂ ವೀರಶೈವ ಮತೋದ್ಧಾರಕರೂ ಶಿವಸ್ವರೂಪರೂ ಆದ ಪಂಚಾಚಾರ್ಯರ ಚರಣಕಮಲಗಳಿಗೆ ವಂದಿಸಿ ಅನುಗ್ರಹ ಬೇಡುವೆನು. ಹಿಂದಣ ಜನ್ಮದಲ್ಲಿ ಲಿಂಗವ ಮರೆದ ಕಾರಣ,ಜಂಗಮವ ಜರೆದ ಕಾರಣ ಭವ ಬಂಧನ ಭವಪಾಶ ಸಮನಿಸಿದವಯ್ಯಾ ಸಂಗಯ್ಯಾ. ಅರಿದಿದ್ದರೆ ಇವುಗಳಿಗೆ ಎಡೆಗೊಡುತ್ತಿದ್ದೆನೇ ಎಂದೊರೆವ ಬಸವೇಶ ನಿಜಲಿಂಗ ನಿಷ್ಠೆಯ ಕರುಣಿಸಲಿ. ಅರಿದೊಡೆ ಶರಣ ಮರೆದೊಡೆ ಮಾನವ. ಅರಿದ ಶಿವಶರಣರ ಅಡಿಧೂಳಿ ನಮಗೆ ಭಸಿತವಾಗಿರಲಿ. ಆಗಮುಸಮ್ಮತ ಷಟ್‌ಸ್ಥಲ ಭಕ್ತಿಮಾರ್ಗದೊಳು ಪಡೆವ ಭೋಗಮೋಕ್ಷಸ್ಥಿತಿಯ ವಿವರಿಸುವ ವಚನಗಳ ರಚಿಸಿದ ಶಿವಶರಣರ ಆಳಾಗಿ ಸುಖಿಸುವೆನು. ಪಡೆದ ಶಿವಲಿಂಗದಲ್ಲಿ, ಕೈಪಿಡಿದ ಪತಿಯಲ್ಲಿ ಭೇದವೆಣಿಸದೆ ತನುಗಳು ಎರಡಾದರೇನು ? ಚೇತನವೊಂದೆಂದು ನಿಜಪತಿಯೊಡಗೂಡಿ ದಾಂಪತ್ಯ ಜೀವನದಲ್ಲಿ ಶಿವಸುಖವ ಅನುಭವಿಸುತ್ತ ಆದರ್ಶರಾದ ಶಿವಶರಣೆಯರ ಅಡಿಗೆರಗಿ ಬಾಳುವೆವು. ಕಲ್ಯಾಣದೊಳು ಅನುಭವ ಮಂಟಪದಲ್ಲಿ ಶರಣರು ಚರ್ಚಿಸುವ ತತ್ವಗಳನ್ನು ನಿರ್ಣಯಿಸುವ ಅಧಿಕಾರ ಪಡೆದ ಸುವಿಚಾರಿ ಚನ್ನಬಸವೇಶನ ಸ್ಮರಿಸಿ ಸುಖಿಸುವೆವು. ಬಸವೇಶ ರಚಿಸಿದ ಶೂನ್ಯಸಿಂಹಾಸನದಲ್ಲಿ ಮಂಡಿಸಿ ಶರಣರಿಂದ ಪೂಜೆಗೊಂಡು ಲೋಕಮಾನ್ಯನಾದ ಅಲ್ಲಮಪ್ರಭುವಿನ ಚರಣಾರವಿಂದಗಳಲ್ಲಿ ತುಂಬಿಯಾಗುವ ಭಾಗ್ಯ ನಮಗಿರಲಿ. ಕಷ್ಟಕಾರಕ ಯೋಗಗಳನ್ನು ಸಂತ್ಯಜಿಸಿ ಷಟ್‌ಸ್ಥಲ ಲಿಂಗಾಂಗಯೋಗದಲ್ಲಿ ಶಿವಸುಖ ಪಡೆದ ಸಿದ್ಧರಾಮನ ನುತಿಸಿ ಶಿವಯೋಗಪಥದಿರವ ಬೇಡುವೆನು. ಸಾವಿಲ್ಲದ ಕೇಡಿಲ್ಲದ ಶಿವಲಿಂಗವನ್ನು ಪತಿಯನ್ನಾಗಿ ಮಾಡಿಕೊಂಡು, ಜೀವಭಾವ ಹಿಂಗಿ ಮುಕ್ತಳಾದ ಮಹಾದೇವಿಯಕ್ಕನಿಗೆ ನುತಿಪುಷ್ಪ ಸಮರ್ಪಿಸಿ ಹರಕೆಗಳ ಬೇಡುವೆನು.

ಭಕ್ತಿರಸಪೂರಿತ ಕವಿತಾಶಕ್ತಿಯಿಂದ ಚರಿತಗತ ಶಿವಭಕ್ತರನ್ನು ಪಾಠಕರ ಕಣ್ಣೆದಿರಿನಲ್ಲಿ ನಿಲ್ಲಿಸುವ ಯುಕ್ತಿಪಡೆದ ಶಿವಕವೀಂದ್ರರಸ ೂಕ್ತಿ ಸುಧೆಯನ್ನು ಕುಡಿವ ಸಿರಿ ಎನ್ನ ನಾಲಿಗೆಗಿರಲಿ. ಶಿವಭಕ್ತಿರಸಾಮೃತವನ್ನು ತಮ್ಮ ಕವನಪಾತ್ರೆಯೊಳಿರಿಸಿ

ಕಿವಿಮುಖವಾಗಿ ಮಾನವರಿಗೆ ಈಂಟಿಸುತೆ ಭವರೋಗ ಪರಿಹರಿಸುವ ವೈದ್ಯರೇ ಶಿವ ಕವೀಶ್ವರರೆಂದು ನೆರೆನಂಬಿ ವಾಕ್ಯೈದ್ಧಿಗೆ ಔಷಧ ಬೇಡುವೆನು. ಯಾವ ಮಹಾತ್ಮನು ಬರೆದ ಶಿವಶರಣರ ಚರಿತ್ರೆಗಳನ್ನು ಓದುವವರು ಶಿವಭಕ್ತಿರಸ ಕಾಸಾರದೊಳು ಮಿಂದು ಪವಿತ್ರರಾಗುವರೋ ಆ ಹರಿಹರ ಕವೀಶ್ವರನ ಚರಣ ಸ್ಮರಿಸಿ ಆಶೀರ್ವಾದ ಬೇಡುವೆನು. ಸಂಸ್ಕೃತದಲ್ಲಿ ಶಾಸ್ತ್ರಗಳ ಕಲಿಸಿ ನಿಪುಣತೆಯು ಕರುಣಿಸಿದ ಕೊಂಗವಾಡ ಹಿರೇಮಠದ ಬುಧವರ್ಯ ವೀರಭದ್ರ ಶಾಸ್ತ್ರಿಗಳು ಈ ಕೃತಿಗೆ ಸನ್ಮಂಗಳ ಕರುಣಿಸಲೆಂದು ನುತಿಸುವೆನು.

ಈ ಚರವರನ ಚರಿತ್ರ ರಚನೆಗೆ ಯಾವ ಜಂಗಮ ಪುಂಗವನ ಆಶೀರ್ವಚನವಾಯಿತೆಂಬುದನ್ನು ವಿವರಿಸುವೆನು. ಚಲುವ ಕನ್ನಡನಾಡಿನೊಳು ರಂಜಿಸುವ ನವಿಲುಗುಂದಪುರದ ಗವಿಮಠಾಧ್ಯಕ್ಷರೂ ವಿದ್ಯಾಭಿಮಾನಿಗಳೂ ಭಕ್ತೋದ್ಧಾರಕರೂ ಆದ ಬಸವಲಿಂಗ ಮಹಾಸ್ವಾಮಿಗಳ ದರ್ಶನಕ್ಕೋಸುಗ ನಾನುಹೋದಾಗ ಕುವರನೆ! ನರಗುಂದ ಚನ್ನಬಸವ ಚರವರನ ಚರಿತ್ರೆ ಬರೆದಂತೆ ಶಲವಡಿ ಗುರುಶಾಂತ ಚರವರನ ಚರಿತ್ರೆಯನ್ನು ಎಡೆಯೂರ ಸಿದ್ಧಲಿಂಗೇಶ್ವರನ ಸ್ಮರಿಸಿ ರಚಿಸು. ಕಾವ್ಯವು ಸದ್ಭಕ್ತಸೇವ್ಯವೆನಿಸುವದೆಂದು ಹರಸಲು ತಥಾಸ್ತು ಎಂದು ವಂದಿಸಿದೆ. ನನ್ನ ಈ ಕೃತಿಕಾಸಾರವು ವಿರಸಕರ್ಕಶ ಕವನಶಿಲೆಯಲ್ಲಿ ರಚಿತವಾದಾಗ್ಯೂ ಪೂಜ್ಯನಾದ ಗುರುಶಾಂತ ಶಿವಯೋಗಿಯ ಚರಿತ್ರಾಮೃತ ತುಂಬಿರುವದೆಂಬ ನಂಬುಗೆ ನನ್ನಲ್ಲಿ ತುಂಬಿದೆ. ಈ ಮಹಾತ್ಮನ ಚರಿತ್ರೆನಿರವಧಿಕವೂ, ಮಹಿಮಾನ್ವಿತವೂ, ಸತ್ಪುರುಷವಿನುತವೂ, ದೋಷರಹಿತವೂ, ಸರಸಜನಕರ್ಣಾಮೃತವೂ, ಶಿವಭಕ್ತಿರಸ ಕಲಿತವೂ ಆಗಿದೆ. ಧರೆಯೊಳವತರಿಸಿ ವಾಣಿಜ್ಯಪುರಕೈತಂದು ಸದ್ಗುರು ಚನ್ನಬಸವೇಶ್ವರನಿಂದ ಜ್ಞಾನೋಪದೇಶ ಪಡೆದು ಸೇವಿಸಿ, ಸುಖಿಸಿದ ಶ್ರೀ ಸಿದ್ಧಲಿಂಗೇಶ್ವರನು ನಮ್ಮನ್ನು ಸದಾ ರಕ್ಷಿಸಲಿ.

ಮೊದಲನೆಯ ಸಂಧಿ

ಅನಂತ ಜೀವಿಗಳಿಗೆ ಆಶ್ರಯವಿತ್ತು ರಕ್ಷಿಸುವ ಪೃಣ್ಮಯ ಲಿಂಗವೇ ಎಂಬಂತೆ ಗೋಲಾಕಾರವಾದ ಈ ಭೂವಲಯಲ್ಲಿ ಹಲವಾರು ದೇಶದ ಜನಗಳು ಪರಭಯ ನಿವಾರಣೆಗೋಸ್ಕರ ಅದೆಷ್ಟೋ ವಿಧ್ವಂಸಕ ಅಸ್ತ್ರಗಳನ್ನು ನಿರ್ಮಿಸಿಕೊಂಡಾಗ್ಯೂ ಸುಖಶಾಂತಿಗಳನ್ನು ಕಾಣರು. ಇಂಥವರಿಗೆ ಶಾಂತಿಮಾರ್ಗ ತೋರುವ ಅಧ್ಯಾತ್ಮ ತತ್ವಜ್ಞಾನಿಗಳ ನೆಲೆಯೆನಿಸಿದ ಭಾರತದೇಶವು ಭೂದೇವಿಗೆ ಕಂಠಾಭರಣದ ಮಧ್ಯಮಣಿಯಾಗಿ ಪರಿಶೋಭಿಸುವದು. ಭಾರತದ ಉತ್ತರಕ್ಕೆ ಮೆರೆಯುವ ಹಿಮಗಿರಿರಾಜನು ತನ್ನ ಪುತ್ರಿಯಾದ ಪಾರ್ವತಿಯನ್ನು ಪರಮೇಶ್ವರನಿಗೆ ಲಗ್ನ ಮಾಡಿಕೊಟ್ಟು ಸುರಸ್ತುತ್ಯನಾಗಿದ್ದಾನೆ. ಈ ದಿಶೆ ಬಿಟ್ಟು ಮೂರುಕಡೆ ಹಬ್ಬಿರುವ ಸಾಗರವು ಮೇಘಾವಳಿಗೆ ಉದಾರತೆಯಿಂದ ನೀರುಕೊಡುವದು. ಈ ಭಾರತವು ಗೀರ್ವಾಣಭಾಷೆಗೆ ಸದನವಾಗಿದೆ. ಸುಸಂಸ್ಕೃತಿಗೆ ತವರಾಗಿದೆ. ಸದ್ಧರ್ಮದೇವತೆಗೆ ಭೂಸ್ವರ್ಗವಾಗಿದೆ. ಕರ್ಮಭಕ್ತಿಜ್ಞಾನಗಳ ವಿಮರ್ಶನ ಕೇಂದ್ರವಾಗಿದೆ ಎಂದು ಬಲ್ಲವರು ಬಣ್ಣಿಸುವರು. ಭಾರತೀಯರ ಜಾತಿ ಮತ ಭಾಷೆ ಭಿನ್ನವಾಗಿದ್ದರೂ ಸಂಸ್ಕೃತಿ ಮಾತ್ರ ಒಂದೇ ಆಗಿದೆಯೆಂದು ವಿಶ್ವದಲ್ಲಿ ಖ್ಯಾತಿಯಿದೆ ಬಿತ್ತರದ ಗಂಗಾದಿ ನದಿಗಳಿಂದಲೂ ಎತ್ತರದ ವಿಂಧ್ಯಾದಿ ಗಿರಿಗಳಿಂದಲೂ ಉತ್ತಮ ತೀರ್ಥಕ್ಷೇತ್ರಗಳಿಂದಲೂ ಕಮನೀಯ ಕಲಾವಿದರಿಂದಲೂ ಶ್ರೇಷ್ಠ ದಾನಧರ್ಮಗಳಿಂದಲೂ ಭಾರತದೇಶ ಮೆರೆವುದು. ೧—೯

ಭಾರತದೇಶಕ್ಕೆ ಹೃದಯದಂತಿರುವ ಕರ್ನಾಟಕ ರಾಜ್ಯವು ದಕ್ಷಿಣದಿಕ್ಕಿನಲ್ಲಿ ಸದ್ಭಕ್ತಿ ಸದ್ಧರ್ಮಗಳಿಗೆ ತವರಾಗಿದೆ. ಕನ್ನಡನಾಡು ಧನಿಕರಿಂದಲೂ ದಾನಿಗಳಿಂದಲೂ ಸನ್ಮಾನಿಗಳಿಂದಲೂ ಧರ್ಮಾತ್ಮರಿಂದಲೂ ಜ್ಞಾನಿಗಳಿಂದಲೂ ಸದ್ಭಕ್ತರಿಂದಲೂ ಕಲಾವಿದರಿಂದಲೂ ಕವಿಪಂಡಿತರಿಂದಲೂ ಅನುಭವಿಗಳಿಂದಲೂ, ಭೀಮೆ, ಕೃಷ್ಣೆ, ತುಂಗಭದ್ರೆ, ಕಾವೇರಿ ಮುಂತಾದ ನದಿಗಳಿಂದಲೂ ಅಣೆಕಟ್ಟುಗಳಿಂದಲೂ ಸಸ್ಯಸಂಪತ್ತಿನಿಂದಲೂ ಚಿನ್ನಗಣಿಗಳಿಂದಲೂ ಕಬ್ಬಿಣ ದೊರೆಯುವ ಗಿರಿಗಳಿಂದಲೂ ಗಂಧಾದಿ ತರುಗಳಿಂದಲೂ ಹೊಲ-ಗದ್ದೆ ತೋಟಗಳಿಂದಲೂ ಕಂಗೊಳಿಸುತ್ತಿದೆ. ಹಳ್ಳಿ ಪಟ್ಟಣಗಳಲ್ಲಿ ಪ್ರಜ್ವಲಿಸುವ ದೀಪಗಳನ್ನೂ ನಾನಾಬಗೆಯ ಸೌಕರ್ಯಗಳನ್ನುಂಟು ಮಾಡುವ ಶಕ್ತಿಯುಳ್ಳ ವಿದ್ಯುತ್ತನ್ನೂ ಹುಟ್ಟಿಸುವ ಜಲಪಾತಗಳು ಕರ್ನಾಡಿನ ಶುಭ್ರ ಕೀರ್ತಿಯಂತೆ ತೋಭಿಸುವವು.

ಮೃದು ಮಧುರ ಸಾಹಿತ್ಯ ಕ್ಷೇತ್ರದಲ್ಲಿ ಸರಸಕವೀಂದ್ರರು ವಿರಚಿಸಿದ ಕಮನೀಯ ಕಾವ್ಯಗಳ ರಸಕಾಸಾರದಲ್ಲಿ ಮುದದೆ ವಿಹರಿಸುವ ಅಂಚೆವಿಂಡೆನಿಸಿದ ಸಹೃದ

ಯುದ ಸಮೂಹವು ರಸಿಕರ ಬೀಡೆನಿಸಿದ ಕರ್ನಾಡ ತುಂಬ ತುಂಬಿ ನೆಲಸಿದೆ, ಶಿವಶರಣರಚಿತ ವಚನವಾಙ್ಮಯ ವಿಮಳಕ್ಷೇತ್ರದಲ್ಲಿ ತೊಳಗಿ ಬೆಳಗುವ ಶಿವಭಕ್ತಿರಸತೀರ್ಥವನ್ನು ಕುಡಿದು, ಭವರೋಗ ಕಳೆದುಕೊಂಡು, ಶಿವಭಕ್ತಿ ಪಡಕೊಂಡು ಕನ್ನಡಿಗರು ಸುಖಿಸುವರು. ಕನ್ನಡನಾಡಿನ ಶಿಲ್ಪಿಗಳ ಕುಶಲತೆಯನ್ನು ಬಿಂಬಿಸುವ ಕನ್ನಡಿಗಳೆನಿಸಿದ ಗುಡಿ ಬಸದಿ ಮೊದಲಾದ ದಿವ್ಯ ಕಟ್ಟಡಗಳನ್ನು ನೋಡಲು ದೇಶ ದೇಶಗಳಿಂದ ಬಲ್ಲವರು ಬರುವರು. ಹೆಸರಾಂತ ಕರ್ನಾಟಕ ಸಂಗೀತದಲ್ಲಿ ಭಕ್ತಿರಸಗೀತೆಗಳನ್ನು ಹಾಡುವ ಗಾಯಕರು ಗಾನಸುಧೆಯನ್ನು ರಸಿಕರಿಗೆ ಕುಡಿಸುವರು. ೧೦—೧೮

ಎಳೆತನದಲ್ಲಿಯೇ ಗುರು ಕೃಪೆಯಿಂದ ಪಡೆದ ಲಿಂಗವನ್ನು ಕೊರಳಲ್ಲಿ ಧರಿಸಿ ಆ ಲಿಂಗ ಪೂಜಾಧ್ಯಾನಾನಂದದ ತಿಳಿಗೊಳದಲ್ಲಿ ಮಿಂದು, ನಿರ್ಮಲರಾದ ವೀರಶೈವರ ನೆಲೆವೀಡೆನಿಸಿದೆ ಕರ್ನಾಟಕ. ಕೆಲವರು ಶಿವನು ಸಕಲನೆಂದರೆ, ಕೆಲವರು ನಿಷ್ಕಲನೆನ್ನುವರು. ಸಕಲ ನಿಷ್ಕಲ ರೂಪವೆರಡನ್ನೂ ಶಿವನು ಲೀಲೆಯಿಂದ ಧರಿಸಿರುವನೆಂಬುದನ್ನು ಷಟ್ ಸ್ಥಲ ಮಾರ್ಗದಿಂದ ಅರಿದು ಆಚರಿಸಿ ಪ್ರಭಾನ್ವಿತರಾದ ಶಿವಶರಣರ ತವರೆನಿಸಿದೆ ಕನ್ನಡನಾಡು. ದೇಹವು ಧರಿಸಿರ್ದಲಿಂಗದ ದೇವಾಲಯವೆನಿಸುವದು. ಆದ್ದರಿಂದ ಯಾವಾಗಲೂ ಪವಿತ್ರಭಾವನೆ ಹೊಂದಿ ಸೂತಕದ ಮಲಿನತೆಗೆ ಎಡೆಗೊಡದೆ ಶಿವನಾಗಿ ಶಿವನನ್ನು ಪೂಜಿಸುವ ವ್ರತ ಹಿಡಿದ ಶಿವಭಕ್ತರ ಬೀಡು ಕನ್ನಡನಾಡು. ೧೯—೨೧.

ಭಗವಂತನಿಗೆ ಅನಂತ ನಾಮರೂಪಗಳುಂಟು. ಆದ್ದರಿಂದ ತಮ್ಮ ಮನಕ್ಕೊಪ್ಪುವ ನಾಮರೂಪಗಳಿಂದ ಆತನನ್ನು ಭಜಿಸಿ, ಶಾಂತಿಸುಖಗಳನ್ನು ಪಡೆದು ನಿಶ್ಚಿಂತರಾಗುವೆವೆಂದು ನಂಬಿದ ಸಂತರು ಕರ್ನಾಡಿನಲ್ಲಿ ನೆಲಸಿರುವರು. ಭಕ್ತರಾದರೆ ಸಾಕು. ಭಕ್ತಿಕಂಪಿತನಾದ ಶಿವನ ಅನುಗ್ರಹಶಕ್ತಿ ಅವರಲ್ಲಿ ತಾನೇ ನೆಲಸಿ ಭಕ್ತಿಮುಕ್ತಿಗಳನ್ನುಂಟುಮಾಡುವದೆಂಬ ಉಕ್ತಿಯನ್ನು ನೆರೆನಂಬಿ ನಡೆಯುವ ಭಕ್ತಿಜೀವಿಗಳ ನೆಲೆವೀಡು ಕರ್ನಾಡು. ಈ ರೀತಿ ಕವಿ, ಗಮಕಿ, ಗಾಯಕ, ಶಿಲ್ಪಜ್ಞ, ವಿಬುಧ, ಶಿವಶರಣ, ಸಂತರಿಗೆ ಜನ್ಮವಿತ್ತು ಖ್ಯಾತಳೆನಿಸಿದ ಕನ್ನಡ ಭೂಮಾತೆ ಭಾರತ ಧರ್ಮನಿಲಯಕ್ಕೆ ಪುಣ್ಯದ ಜ್ಯೋತಿಯಾಗಿ ಬೆಳಗುವಳು. ಯಾವ ಮಹಾತ್ಮನು ತನ್ನ ಗುರುವರನ ಶಿವಪೂಜೆಗಿರಿಸಿದ ದೀಪದ ಪಣತಿಯಲ್ಲಿ ಎಣ್ಣೆಯಿಲ್ಲದಿರುವದನ್ನು ಕಂಡು ಶಿವಧ್ಯಾನಪೂರ್ವಕ ಪಣತಿಯಲ್ಲಿ ನೀರೆರೆದು ದೀಪವನ್ನುರಿಸಿದನೋ ಆ ಸಿದ್ಧಲಿಂಗನು ನಿರಂತರ ನಮ್ಮನ್ನು ರಕ್ಷಿಸಲಿ.

ಪವಿತ್ರವಾದ ಈ ಚರಿತ್ರೆಯನ್ನು ಹೇಳಿದವರಿಗೆ ಕೇಳಿದವರಿಗೆ ಪಠಿಸಿದವರಿಗೆ ಗುರುಶಾಂತಶಿವಯೋಗೀಶ್ವರನು ಆಯುರಾರೋಗ್ಯ ಸಂಪದಗಳನ್ನು ಕರುಣಿಸುವನಲ್ಲದೆ ಗುರುಲಿಂಗಜಂಗಮರ ಅನುಗ್ರಹ ಕರುಣಿಸುವನು. ಇದು ಸತ್ಯವು. ೨೨—೨೬

ಎರಡನೆಯ ಸಂಧಿ

ಕೊಪ್ಪಳ ಜಿಲ್ಲೆಯಲ್ಲಿ ಚಿಕೇನಕೊಪ್ಪವೆಂಬ ಗ್ರಾಮವಿದೆ. ಬುಧಮಾನ್ಯನೂ ಸಚ್ಚರಿತ್ರನೂ ಭಕ್ತೋದ್ಧಾರಕನೂ ಆದ ಹಾಲಯ್ಯನವರು ಅಲ್ಲಿಯ ಹಿರೇಮಠದ ಒಡೆಯರು. ಪತಿಯ ದೇಹಕ್ಕೆ ಪ್ರಾಣದಂತಿರುವವಳೂ ಸುಗುಣಿಯೂ ಪರಮ ಪುನೀತೆಯೂ ಸದ್ಭಕ್ತಜನರ ಪ್ರೀತಿ ಪಾತ್ರಳಾಗಿ, ಅವರಿಗೆ ತಾಯಿಯಂತಿರುವವಳೂ ಆದ ನೀಲಾಂಬಿಕೆಯು ಅವರ ಸತಿಯು. ಇಂತಿರುವ ಸತಿಯೊಡನೆ ಶಾಂತಿಯಿಂದ ದಾಂಪತ್ಯ ಜೀವನ ಸಾಗಿಸುತ್ತ, ನಿಷ್ಠೆಯಿಂದ ಲಿಂಗಾರ್ಚನೆ ಮಾಡುತ್ತ, ಭಕ್ತರ ಹೃದಯ ಕಮಲಕ್ಕೆ ಸೂರ್ಯನಾಗಿ ಬೆಳಗುವನು. ವೀರಶೈವಾಚರಣೆಯಿಂದ ಸರ್ವಾಂಗ ಲಿಂಗಿಗಳಾದ ಹಾಲಾರ್ಯನೀಲಾಂಬಿಕೆಯರಿಗೆ ದಾಂಪತ್ಯ ಸುಖವು ಲಿಂಗಾಂಗೈಕ್ಯ ಸುಖವಾಗಿ ಪರಿಣಮಿಸಿತ್ತು. ಶ್ರೀ ಮಠದ ಕೃತ್ಯಗಳನ್ನು ಯಥೋಚಿತವಾಗಿ ನಿರ್ವಹಿಸುವ ದಂಪತಿಗಳು ಭಕ್ತರಿಗೆ ಕಾತ್ಯಾಯನೀ ಕೃತ್ತಿವಾಸರಂತೆ ಕಾಣುವರು. ಮಠಕ್ಕೆ ಆಗಮಿಸಿದ ಗುರುಚರರನ್ನು ಆಲಸ್ಯವಿಲ್ಲದೆ ಸೇವಿಸುತ್ತ ಹಮ್ಮಳಿದು ದಾಸೋಹಂ ಭಾವದಿಂದ ನಡೆಯುವ ಗುರುದಂಪತಿಗಳನ್ನು ಕಂಡು ಭಕ್ತರು ಹಿಗ್ಗುವರು. ೧—೮

ಒಮ್ಮೆ ದಂಪತಿಗಳು ಹಂಪಸಾಗರದ ತೋಂಟದಾರ್ಯರ ಮಠಕ್ಕೆ ಹೋಗಿ ಸ್ವಾಮಿಗಳಿಗೆ ವಂದಿಸಿ ಒಂದೆರಡುದಿನ ಸೇವೆಮಾಡಿ, ಜೀವಜಾಡ್ಯಕಳೆವ ಪಾದೋದಕ ಪ್ರಸಾದ ಸ್ವೀಕರಿಸಿ ಹೊರಡುವಾಗ, ಸ್ವಾಮಿಗಳು ನಿಮಗೆ ಸುಪುತ್ರ ಜನಿಸುವನೆಂದು ಹರಸಲು, ತಮ್ಮೂರಿಗೆ ಬಂದು ನಟ್ಟದೃಷ್ಟಿಯಿಂದ ಇಷ್ಟಲಿಂಗ ಪೂಜೆ ಮಾಡುತ್ತ ಶಿವ ಮಂತ್ರ ಜಪಿಸುತ್ತ ಸುಖದಿಂದಿದ್ದರು. ಕೆಲದಿನಗಳಲ್ಲಿ ಗರ್ಭಧರಿಸಿದ ನೀಲಮ್ಮನ ಬಸಿರಗುಡಿ ಜಂಗಮಲಿಂಗವನ್ನೊಳಕೊಂಡಂತೆ ಹಾಲಪ್ಪಯ್ಯನವರಿಗೆ ತೋರಿತು. ಜಂಗಮ ಚಿತ್ಕಳೆ ಗರ್ಭದಲ್ಲಿ ಬೆಳೆಯುತ್ತಿರಲು ಬಿಳುಪೇರಿದ ನೀಲಮ್ಮನ ಶರೀರ ಭಸಿತ ಭೂಷಿತವಾದಂತೆ ಕಂಗೊಳಿಸಿತು. ನೀಲಮ್ಮನಿಗೆ ಮಾತುಗಳಲ್ಲಿ ಬೇಸರ, ಅಂಬಕಗಳಲ್ಲಿ ಆಲಸ್ಯ, ನಡೆಯಲ್ಲಿ ಮಾಂದ್ಯ ಜನಿಸಿದರೂ ಶಿವಪೂಜೆಮಾಡಿ ತೀರ್ಥ ಪ್ರಸಾದ ಪಡೆದುಕೊಳ್ಳುವ ಉತ್ಸುಕತೆ ಹಿರಿದಾಯ್ತು. ನೀಲಮ್ಮನಿಗೆ ಲಿಂಗಾರ್ಚನೆ ಮಾಡಿ ಕೈಗಳು, ಲಿಂಗವನ್ನು ನಿರೀಕ್ಷಿಸಿ ಕಣ್ಣುಗಳು, ಕಥಾಶ್ರವಣ ಕೇಳಿ ಕಿವಿಗಳು, ಲಿಂಗಗೀತೆ ಹಾಡಿ ಬಾಯಿ, ಪತಿಪಾದಕ್ಕೆರಗಿ ದೇಹ ದಣಿಯಲಿಲ್ಲ. ಶಿವಮಂತ್ರ ಜಪಿಸುವ, ಶಿವನಿರ್ಮಾಲ್ಯ ಪುಷ್ಪ ಮುಡಿಯುವ, ವಿಭೂತಿ ಧರಿಸುವ ಬಯಕೆಯಲ್ಲದೆ ನೀಲಮ್ಮನಿಗೆ ಲೋಕದವರ ಬಸುರಬಯಕೆ ಹುಟ್ಟದೆಂದು ಲಲನೆಯರು ಬಣ್ಣಿಸುತ್ತಿರಲು ಎಂಟನೆಯ ತಿಂಗಳಲ್ಲಿ ಹಾಲಪ್ಪಯ್ಯನವರು ನೀಲಮ್ಮನ ಗರ್ಭಕ್ಕೆ ಲಿಂಗಧಾರಣ ಮಾಡಿಸುತ್ತಾರೆ. ೯—೨೦

ನವಮಾಸ ತುಂಬಿ ಶುಭದಿನದಲ್ಲಿ ನೀಲಾಂಬಿಕೆ ಸುಪುತ್ರನನ್ನು ಪಡೆಯಲು, ಶಿವಭಕ್ತ ಪ್ರಮದೆಯರು ಮಗುವನ್ನು ಎವೆಯಿಕ್ಕದೀಕ್ಷಿಸಿ ಕೈಮುಗಿದು ಎತ್ತಿಮುದ್ದಾಡುತ್ತಾರೆ. ನಮ್ಮ ಉದ್ಧಾರಕ್ಕೆ ಕಾರಣಿಕ ಗುರು ಜನಿಸಿದನೆಂದು ಶಿವಭಕ್ತರು ಹಿರಿಹಿರಿ ಹಿಗ್ಗುವರು. ಪಂಚಭೂತಗಳು ಸುಸ್ಥಿತಿಯಲ್ಲಿ ಪ್ರವರ್ತಿಸುತ್ತಿವೆಯೆಂದು ಪಂಡಿತರು ಬಣ್ಣಿಸುತ್ತಾರೆ. ಜಾತಕರ್ಮ ನೆರವೇರಿಸಿ, ಗುರುಶಾಂತನೆಂದು ನಾಮಕರಣ ಮಾಡಿಸಿ, ಸುವಾಸಿನಿಯರು ಮಣಿತೊಟ್ಟಿಲೊಳು ಆ ಸುಂದರ ಮಗುವನ್ನು ಮಲಗಿಸಿ ಜೋಗುಳ ಪಾಡಿದರು. ದಂಪತಿಗಳು ಸಮಾರಂಭಕ್ಕೆ ಬಂದ ಭಕ್ತರನ್ನು ಸತ್ಕಾರಪೂರ್ವಕ ಕಳುಹಿ, ತಮ್ಮ ವಂಶವೆಂಬ ಸಮುದ್ರಕ್ಕೆ ಚಂದ್ರನಂತಿರುವ ಶಿಶುವನ್ನು ಸಲುಹುತ್ತಿದ್ದರು. ಯಾವ ಮಹಿಮನು ತ್ರ್ಯಂಬಕೇಶ್ವರಲಿಂಗದಿಂದ “ ನನಗೆ ಜಂಗಮ ಪ್ರಸಾದ ತೃಪ್ತಿಕರವು ” ಎಂದು ನೆರೆದವರ ಮುಂದೆ ಹೇಳಿಸಿದನೋ ಆ ಸಿದ್ಧಲಿಂಗನು ಅನವರತ ನಮ್ಮನ್ನು ರಕ್ಷಿಸಲಿ. ೨೧....೩೨

ಮೂರನೆಯ ಸಂಧಿ

ನೀಲಾಂಬಿಕೆಯು ಮಗುವಿನ ಮೈತೊಳೆದು ಹಣೆಗೆ ವಿಭೂತಿ ಧರಿಸಿ ಮೊಲೆ ಕುಡಿಸಿತೊಟ್ಟಿಲೊಳು ಮಲಗಿಸಿ ಬೀಸಣಿಕೆ ಬೀಸುವಳು. ಮಗುವು ನಿದ್ರಿಸಲು ನೋಡಿ ಸಂತೋಷಪಡುವಳು. ಕೆಮ್ಮಿದರೆ, ಬಿಕ್ಕಿದರೆ, ಅತ್ತರೆ ನೋಡಿ ಚಿಂತಿಸುವಳು. ನಿದ್ದೆ ಮುಗಿಯುವವರೆಗೆ ತೊಟ್ಟಿಲಲ್ಲಿ ಮಲಗಿಸಿದರೇನಾಯಿತು, ತನ್ನ ಪವಿತ್ರ ನೇತ್ರವೆಂಬ ತೊಟ್ಟಿಲಲ್ಲಿ ಸದಾ ಆ ಸುಂದರ ಶಿಶುವನ್ನು ಮಲಗಿಸಿಕೊಂಡಿರುತ್ತಿದ್ದಳು. ತಾಯಿಯ ಎದೆ ಹಾಸಿಗೆಯಲ್ಲಿ ಮಲಗಿ, ತೊಡೆಗದ್ದುಗೆಯಲ್ಲಿ ಕುಳಿತು, ತೋಳತೊಟ್ಟಿಲಲ್ಲಿ ತೂಗಾಡುತ್ತ ಬಾಲಕನು ಬಾಲಶಶಿಯಂತೆ ಬೆಳೆಯುತ್ತಿದ್ದನು. ತರುಳನು ಅಸಾಮಾನ್ಯನೆಂದು ಅರಿತಿದ್ದರೂ ಲೌಕಿಕರಂತೆ ಹರಳೆಲೆ, ಮಾಗಾಯಿ, ಕರುಗೆಜ್ಜೆ ಮೊದಲಾದ ಆಭರಣಗಳಿಂದ ಅವನನ್ನು ಅಲಂಕರಿಸಿ, ಅರಿವಿನಾಣ್ಮನೇ ಮಠದೈಸಿರಿಯೋ ನನ್ನ ಪುಣ್ಯದರಾಶಿಯೇ! ಜಾಯೆಂದು ನೀಲಾಂಬಿಕೆ ಆನಂದಬಾಷ್ಪ ಸುರಿಸುವಳು. ಕಾಲಕಿರುಗೆಜ್ಜೆ ನುಡಿಯಲು ನಗೆಮಲ್ಲಿಗೆ ಸುರಿಸುತ್ತ ಬಂದು ತೊಡೆಯಮೇಲೆ ಕುಳಿತ ಮಗುವನ್ನು ಅಪ್ಪಿ ಮುದ್ದಾಡುವ ನೀಲಮ್ಮನಿಗೆ ಸುತಸುಖಕ್ಕೆ ಸಮಸುಖ ಇಳೆಯಲ್ಲಿ ಇಲ್ಲೆನಿಸಿತು. ೧—೯

ತಾಯಿ ತಂದೆಗಳು ಮಾಡುವ ಲಿಂಗಪೂಜೆ ಧ್ಯಾನಗಳನ್ನು ಮೂರು ವರ್ಷದ ಮಗು ಕಂಡು, ತಾನೂ ಕೊರಳಲ್ಲಿರುವ ಲಿಂಗವನ್ನು ಕರದಲ್ಲಿ ಪಿಡಿದುಕೊಂಡು, ಅನಿಮಿಷದೃಷ್ಟಿಯಿಂದ ನಿರೀಕ್ಷಿಸುವನು. ಮಗುವಿನ ಈ ಲಿಂಗಯೋಗ ದಿನಗಳೆ

ದಂತೆ ತನುಗಿಂತಲೂ ಮಿಗಿಲಾಗಿದೆಂದು ತಾಯಿತಂದೆಗಳಿಗೆ ತೋರಿ, ಈತನು ಮುಂದೆ ಜನರಿಗೆ ಲಿಂಗಾಂಗಯೋಗ ಬೋಧಿಸುವ ಗುರುವಾಗುವನೆಂದು ಉದ್ಗಾರ ತೆಗೆದರು. ಮಗುವಿಗೆ ಐದನೇ ವರ್ಷದಲ್ಲಿ ಶಿವಷಡಕ್ಷರ ಮಂತ್ರವನ್ನು ಓದಿಸುತ್ತ ಬರೆಯಿಸುತ್ತ ಅಕ್ಷರಾಭ್ಯಾಸ ಮಾಡಿಸುತ್ತಿರಲು, ಯಾವಾಗಲೂ ಅಂಗದ ಮೇಲಿರುವ ಲಿಂಗವನ್ನು ನಿರೀಕ್ಷಿಸುತ್ತ ಮಗುವು ನಲಿದಾಡುವನು. ಇತರರ ಗೊಡವೆ ಬಿಟ್ಟಿರುವ ಮಗನನ್ನು ನೋಡಿ ಯಾವ ಮಹಾತ್ಮನ ವರದಿಂದ ಈತ ಜನಿಸಿರುವನೋ ಆತನಿಗೆ ಈತನನ್ನುಒಪ್ಪಿಸಬೇಕು.ಈತ ಜಗದ ಗುರುವಾಗಿ ಮೆರೆಯುವನೆಂದು ನಿಶ್ಚಯಿಸಿ ದಂಪತಿಗಳು ಮಗನೊಡನೆ ಹಂಪಸಾಗರಕ್ಕೆ ಬಂದು ತೋಂಟದಾರ್ಯರಿಗೆ ನಮಿಸುವರು.

ತೋಂಟದಾರ್ಯರು ಕುಶಲಕೇಳಿ, ಮಗುವನ್ನು ತೊಡೆಯಮೇಲೆ ಕುಳ್ಳಿರಿಸಿಕೊಂಡು, ಈತನಲ್ಲಿ ಗುರುಕಳೆ ತುಂಬಿದೆ. ಇವನನ್ನು ಪಡೆದ ನೀವು ಧನ್ಯರು ಎಂದರು. ಮಹಾತ್ಮರೇ ! ತಮ್ಮ ಕೃಪೆಯಿಂದ ಜನಿಸಿದ ಈತನನ್ನು ನಿಷ್ಕಾಮಭಕ್ತಿಯಿಂದ ತಮಗೆ ಒಪ್ಪಿಸುತ್ತೇವೆ. ಸ್ವೀಕರಿಸಿ ನಮ್ಮನ್ನು ಉದ್ಧರಿಸಬೇಕೆಂದು ದಂಪತಿಗಳು ವಂದಿಸುವರು. ಸ್ವಾಮಿಗಳು ಅವರ ಭಕ್ತಿಗೆ ತಲೆದೂಗಿ, ಮಗುವನ್ನು ಒಪ್ಪಿಸಿಕೊಂಡು, ಜಾಯಾಪತಿಗಳಿಗೆ ಸತ್ಕಾರ ಮಾಡಿ, ಆಶೀರ್ವಾದ ಬೊಕ್ಕಸವನ್ನೇ ಕೊಟ್ಟು ಕಳಿಸುವರು. ನೀಲಾಂಬಿಕೆಯ ಶರೀರ ಪತಿಯ ಹಿಂದೆ ಹೋಗುತ್ತಿದ್ದರೂ ಅವಳ ಮನಸ್ಸು ಮಗನ ಕಡೆಗೆ ಧಾವಿಸುತ್ತಿತ್ತು. ನಿರ್ಮೋಹಿಗಳಿಗೆ ಕೂಡಾ ಮಕ್ಕಳು ಮಮತ್ವ ಹುಟ್ಟಿಸುವರೆಂಬುದು ಸುಳ್ಳೇ ? ಮಗನ ಸುಂದರರೂಪವನ್ನು ಮನದಲ್ಲಿ ತುಂಬಿಕೊಂಡ ನೀಲಾಂಬಿಕೆಗೆ ನಿತ್ಯದ ಲಿಂಗಾರ್ಚನೆಯ ನಂತರ ಲಿಂಗಧ್ಯಾನ ಮಾಡುವುದು ಅಂತರಾಯವಾಯಿತು. ಇಲ್ಲಿದ್ದಂತೆ ಆನಂದವಾಗಿ ಗುರುಗಳಲ್ಲಿ ಮಗನಿರುವನು. ಚಿಂತೆಯೇಕೆ ? ಬೇಕಾದರೆ ಹೋಗಿ ಒಂದೆರಡು ದಿನ ಮಗನೊಡನಿದ್ದು ಬರಬಹುದೆಂದು ಹಾಲಪ್ಪಯ್ಯನವರು ಸತಿಯನ್ನು ಸಂತೈಸುತ್ತಾರೆ. ೧೮—೨೬

ಇತ್ತ ತೋಂಟದಾರ್ಯರು ಗುರುಶಾಂತ ಬಾಲಕನ ರಕ್ಷಣೆಗೆ ಓರ್ವ ಸದ್ಭಕ್ತನನ್ನು ನೇಮಿಸಿ, ಆ ಮಗುವು ಮಠದಲ್ಲಿ ಆನಂದದಿಂದಿರುವಂತೆ ಮಾಡಿದರು. ದರ್ಶನಕ್ಕೆ ಬಂದ ಭಕ್ತರು ಕುವರನ ಮುಖಚಂದ್ರವನ್ನು ಕಂಡು ಸಂತೋಷಸಾಗರದಲ್ಲಿ ಮಿಂದು, ತರುಳನ ತಳಿರಡಿಗೆರಗಿ, ಹೆಗಲಮೇಲೆತ್ತಿಕೊಂಡು ಕುಣಿಯುವರು. ಹಂಪಸಾಗರದವರ ಪುಣ್ಯದ ಸೊಬಗೇ ಮೈದಳೆದಂತಿದ್ದ ಮಗುವನ್ನು ನೋಡಿ, ನಮ್ಮ ಕಣ್ಣುಗಳು ತಂಪಾದವೆಂದು ಹೆಣ್ಣು ಮಕ್ಕಳು ಗುಂಪಾಗಿ ಬಂದು ಕುವರನಅಡಿದಳಿರ ಪಿಡಿದು ನಮಿಸುವದು ಹೆಚ್ಚಾಯಿತು. ಹುಟ್ಟಿದ ಊರನ್ನು ಬಿಟ್ಟು ಬಂದು ತೋಂಟದಾರ್ಯರ ಮಠದಲ್ಲಿ, ಆ ಜಂಗಮ ಪುಂಗವರ ಕೃಪಾಸರೋವರದಲ್ಲಿ ಆನಂದ

ದಿಂದ ವಿಹರಿಸುವ ಹಂಸರೂಪಿ ಆರು ವರ್ಷದ ಗುರುಶಾಂತ ಮಗುವು ಶೋಭಿಸುತ್ತಿದ್ದನು. ನದೀ ತೀರದಲ್ಲಿ ಲಿಂಗಧ್ಯಾನದಿಂದ ಮೈಮರೆದಾಗ ತನಗೆ ಶರಣಾಗತನಾದ ರಾಜನೊರ್ವನ ಶಿರವನ್ನು ಪರರಾಜರು ಬಂದು ತರಿಯಲು, ಧ್ಯಾನವಮುಗಿಸಿ ಕಣ್ದೆರೆದು, ನಡೆದುದನ್ನು ತಿಳಿದು, ಸತ್ತವನಿಗೆ ಪ್ರಾಣದಾನವಿತ್ತು ಕರುಣಿಸಿದ ಸಿದ್ಧಲಿಂಗನು ಸತತ ನಮ್ಮನ್ನು ಪೊರೆಯಲಿ. ೨೭—೩೨.

ನಾಲ್ಕನೆಯ ಸಂಧಿ

ತೋಂಟದಾರ್ಯರು ಗುರುಶಾಂತ ವಟುವಿಗೆ ಕನ್ನಡ ಕಲಿಸುವ ವ್ಯವಸ್ಥೆ ಮಾಡಲು, ವಟುವು ಅನ್ಯವಿಷಯಕ್ಕೆ ಮನವೆಳಸದೆ ಏಕಾಗ್ರ ಚಿತ್ತದಿಂದ ವಿದ್ಯೆ ಕಲಿಯುತ್ತಾನೆ. ಸ್ವಾಭಾವಿಕವಾಗಿ ಶಿವತೇಜವುಳ್ಳ ವಟುವಿಗೆ ಎಂಟನೆಯ ವರ್ಷದಲ್ಲಿ ಅಯ್ಯಾಚಾರ ದೀಕ್ಷಾಸಂಸ್ಕಾರ ಮಾಡಿಸಲು, ಷಣ್ಮುಖನೇ ಒಂದುಮುಖದವನಾದಂತೆ ತೋರಿದನು. ವಿದ್ಯೆಕಲಿತು ವಿನೀತನಾದ ಮರಿದೇವರ ಮುಖವನ್ನೇ ವಾಗ್ದೇವಿಯು ತನ್ನ ವಾಸಸ್ಥಾನವನ್ನಾಗಿಸಿಕೊಂಡಳು. ವಿದ್ಯೆಯ ಫಲವಾದ ವಿನಯ, ಗುರುಸೇವಾ ವ್ರತಕೈಕೊಂಡು ಆತ್ಮೋನ್ನತಿಯ ಸಂಪತ್ತು ಪಡೆದನು. ಪ್ರತಿದಿನ ಅರುಣೋದಯಕ್ಕೆದ್ದು ಹಸ್ತಪಾದ ಮುಖ ತೊಳೆದುಕೊಂಡು, ಗುರುಗಳ ಬಟ್ಟೆ ಮಡಿಮಾಡಿ, ಪತ್ರಿಪುಷ್ಪ ತಂದು, ಶಿವಪೂಜಾಸಾಮುಗ್ರಿಗಳನ್ನು ಬೆಳಗಿ, ಗುರುಗಳಿಗೆ ಸ್ನಾನ ಶಿವಾರ್ಚನೆ ವಿಧ್ಯುಕ್ತವಾಗಿ ಮಾಡಿಸುತ್ತ ಗುರುಕೃಪೆಗೆ ಪಾತ್ರನಾಗಿದ್ದನು. ಅಲ್ಲದೆ ತಾನೂ ಊರ ಸಮೀಪ ತುಂಗಭದ್ರಾತೀರದಲ್ಲಿರುವ ಬಿಲ್ವವನದಲ್ಲಿ ಲಿಂಗಾರ್ಚನೆ ಮಾಡುತ್ತ ಶಿವಯೋಗ ಸಾಧನೆ ಮಾಡುತ್ತಿದ್ದನು. ೧—೮

ವಸಂತಮಾಸ ಬರಲು ಬನಚಿಗಿತು ಎಳೆದಳಿರಲರುಗಳಿಂದ ಶೋಭಿಸುತ್ತಿರಲು ಕೋಗಿಲೆಗಳು ಇಂಚರದಿಂದ ಸ್ವಾಗತಿಸಿದವು. ತುಂಗಭದ್ರಾತೀರದಲ್ಲಿ ಸಾಲಾಗಿರುವ ಮಾಮರಗಳಿಗೆ ಹಬ್ಬಿಕೊಂಡಿರುವ ಕುಸುಮಿತಬಳ್ಳಿಗಳ ಸ್ಥಳಗಳು, ಸ್ಮರನು ಜನರಿಗೆ ನೋಡಲಿಕ್ಕೆ ಏರ್ಪಡಿಸಿದ ಶರಪುಷ್ಪ ಪ್ರದರ್ಶನದಂತೆ ಕಾಣುವವು. ಮರಿದೇವನು ಒಂದು ದಿನ ಸಾಯಂಕಾಲ ನದೀತೀರಕ್ಕೆ ಬಂದು ಪದ್ಧತಿಯಂತೆ ಸ್ನಾನಮಾಡಿ ಪತ್ರಿಪುಷ್ಪ ಎತ್ತಿಕೊಂಡು ಶಾಂತಾಶ್ರಮದಲ್ಲಿ ಶಿವಾರ್ಚನೆಗೆ ಸುಖಾಸನದೆ ಕುಳಿತು, ಮಂತ್ರೋದಕದಿಂದ ಪೂಜಾ ಸಾಮುಗ್ರಿಗಳನ್ನು ಶುದ್ಧಗೊಳಿಸಿ, ಕ್ರಮವಾಗಿ ವಿಭೂತಿ ರುದ್ರಾಕ್ಷಿ ಧರಿಸಿ ಶಿವಾರ್ಚನೆ ಮುಗಿಸಿ, ಲಿಂಗದಲ್ಲಿ ಏಕಾಗ್ರದೃಷ್ಟಿಯಿಟ್ಟು, ಮಂತ್ರಜಪಕ್ಕೆ ಜಿಹ್ವೆಯನ್ನು, ಧ್ಯಾನಕ್ಕೆ ಮನವನ್ನು ಕೊಟ್ಟು, ದೇಹಸ್ಮೃತಿ ಬಿಟ್ಟು, ಲಿಂಗಾಂಗಯೋಗ ಸುಖಶರಧಿಯೊಳು ಮುಳುಗಿದ್ದನು. ವೃಕ್ಷಗಳಲ್ಲಿದ್ದ ಪಕ್ಷಿಗಳ

ನಿಸವದಿಂದ ಆಗ ಎಚ್ಚತ್ತು, ಅಂದಿನ ತಮ್ಮ ಲಿಂಗಪೂಜೆಯ ಅವಧಿಯು ಬೆಳೆದದ್ದ ರಿಂದ ಗುರುಸೇವೆಗೋಸುಗ ಅವಸರದಿಂದ ಮಠಕ್ಕೆ ಬಂದರು. ಗುರುಗಳಿಗೆ ಈ ಸಂಗತಿ ತಿಳಿದು ಬೆರಗಾದರು. ೯—೧೭.

ಶಿವಜ್ಞಾನಪರಸಾದ ಗುರುಶಾಂತದೇವನಿಗೆ ಹದಿನಾರು ವರ್ಷ ತುಂಬಿರಲು ಅವನಲ್ಲಿ ಬೆಳೆಯುತ್ತಿರುವ ವಿರತಿಭಾವವನ್ನು ಕಂಡು ಭಕ್ತರಿಗೆ ಆಶ್ಚರ್ಯವಾಯಿತು. ಸಂಸ್ಕೃತ ವಿದ್ಯೆ ಕಲಿಯುವದಕ್ಕೆ ಗದುಗಿನ ತೋಂಟದಾರ್ಯ ಜಗದ್ಗುರು ಮೃತ್ಯುಂಜಯ ಮಹಾಸ್ವಾಮಿಗಳ ಸನ್ನಿಧಿಗೆ ಗುರುಶಾಂತದೇವನನ್ನು ತೋಂಟದಾರ್ಯರು ಕರೆತಂದು ವಂದನೆ ಮಾಡಿಸಲು, ನೀನು ಮಹಿಮನಾಗುವಿಯೆಂದು ಜಗದ್ಗುರುಗಳು ಗುರುಶಾಂತದೇವನಿಗೆ ಆಶೀರ್ವದಿಸಿದರು. ಇದನ್ನು ಕೇಳಿ ಹಂಪಸಾಗರದಪ್ಪನ್ನು ಮರಿದೇವನನ್ನು ನಾವು ಸಲಹಿದ್ದು ಸಾರ್ಥಕವಾಯಿತೆಂದು ಶ್ರೀ ಜಗದ್ಗುರುಗಳಲ್ಲಿ ಅರಿಕೆ ಮಾಡಿಕೊಂಡರು. ಒಂದೆರಡು ದಿನ ಅಲ್ಲಿ ಇದ್ದು ಜಗದ್ಗುರುಗಳ ಪಾದೋದಕ ಪ್ರಸಾದ ಸೇವಿಸಿ, ಆಶೀರ್ವಾದ ಪಡೆದು ಹೊರಡುವಾಗ, ಗುರುಶಾಂತದೇವನೇ! ಗುರುಸೇವೆಯಲ್ಲಿ ಮನವಿರಿಸು, ಅತಿಥಿಗಳ ಸತ್ಕರಿಸು, ಭಕ್ತೋದ್ಧಾರದ ವಿದ್ಯೆಗಳಿಸು, ವಿರತಿಧನವನ್ನು ಹೆಚ್ಚಿಸು. ಈ ರೀತಿ ಇರುವ ಮರಿಗಳು ಪೂಜ್ಯರೆನಿಸಿ ತಮ್ಮ ಮಠಗಳಿಗೆ ಕೀರ್ತಿಕಲಶವಿಡುವರೆಂದು ಬೋಧಿಸಿದರು. ಅಗಲಿಕೆಯ ದುಃಖವನು ಕಷ್ಟದಿಂದ ಸಹಿಸಿಕೊಂಡು, ಗುರುಶಾಂತದೇವನ ನೇತ್ರಗಳಿಂದಿಳಿವ ದುಃಖಾಶ್ರುಗಳನ್ನು ನಿರೀಕ್ಷಿಸುತ್ತ ತಮ್ಮ ಮಠಕ್ಕೆ ಹೊರಟು ಹೋದರು.

ನೀಲಕಂಠಶಾಸ್ತ್ರಿಗಳಿಂದ ಸಂಸ್ಕೃತ ವಿದ್ಯೆ ಕಲಿಯುವ ಗುರುಶಾಂತದೇವನಿಗೆ ಜಗದ್ಗುರು ಮಠದ ಮರಿದೇವನೂ, ವಿದ್ಯಾವಂತನೂ, ಸದ್ಭಕ್ತಮಾನ್ಯನೂ ಆದ ಚನ್ನವೀರದೇವನು ಪ್ರೀತಿಯ ಗೆಳೆಯನಾದನು. ವಿದ್ಯಾಭ್ಯಾಸ, ಸುದ್ಗುಣ, ಸದಾಚಾರಗಳಿಂದ ಇಬ್ಬರೂ ಜಗದ್ಗುರುಗಳಿಗೆ ಮತ್ತು ಸದ್ಭಕ್ತರಿಗೆ ಬೇಕಾದವರಾಗಿ, ಒಬ್ಬನು ವಿದ್ಯೆಯಲ್ಲಿ ಮುಂದುವರಿಯುತ್ತಿದ್ದರೆ ಇನ್ನೊಬ್ಬನು ಶಿವಯೋಗದಲ್ಲಿ ಮುಂದುವರಿಯುತ್ತಿದ್ದನು. ಯಾವ ಮಹಿಮನು ಶ್ರೇಷ್ಠವಾದ ಲಿಂಗಾಂಗಯೋಗದಿಂದ ಕಂಗೊಳಿಸುತ್ತ, ಉತ್ತುಂಗಜೋಗಿಯ ಗರ್ವದೇಳ್ಗೆಯನ್ನು ನಾಶಮಾಡಿದನೋ? ಅಂತಹ ಲಿಂಗಸುಖಸಾಮ್ರಾಜ್ಯದಧಿಪತಿಯೂ, ಕಾಮಸಂಹರನೂ ಆದ ಆ ತೋಂಟದ ಸಿದ್ಧಲಿಂಗನು ನಮ್ಮನ್ನು ಪಾಲಿಸಲಿ. ೧೮—೩೧

ಐದನೆಯ ಸಂಧಿ

ಮಳೆಗಾಲ ಕಳೆದು ಶರತ್ಕಾಲ ಬರಲು ಒಕ್ಕಲಿಗರು ಹೊಲಗಳಲ್ಲಿ ಕೆಲಸಕ್ಕೆ ತೊಡಗಿ, ಬೆಳೆಯ ಸಿರಿಕಂಡು ನಕ್ಕುನಲಿಯುವರು. ಒಂದು ದಿನ ಗುರುಶಾಂತದೇವನು

ಪ್ರಿಯ ಮಿತ್ರನಾದ ಚನ್ನವೀರದೇವನೊಡನೆ ವಿಹಾರಕ್ಕೆ ಹೊರಟು ಹೂದೋಟದೊಳು ಶಿಲಾತಲದಲ್ಲಿ ಕುಳಿತು, ಪರಿಹಾಸಗೈದು, ಗದುಗಿನಲ್ಲಿ ನೀನು ಸಂಸ್ಕೃತ ವಿದ್ಯೆ ಚನ್ನಾಗಿ ಕಲಿತೆ ಇನ್ನು ಕಾಶಿಗೆ ಹೋಗಿ ಶಾಸ್ತ್ರಗಳನ್ನೆಲ್ಲ ಕಲಿತು ಪಂಡಿತ ಮಾನ್ಯನಾಗಿ ಬಂದು ಗುರುವರನಾಗಿ ಮೆರೆಯುವದನ್ನು ನೋಡುವ ಭಾಗ್ಯ ನನಗೆ ಬರಲೆಂದು ಹೇಳಿದನು. ಚನ್ನವೀರದೇವನು ಪುಲಕಿತನಾಗಿ ಗುರುಶಾಂತದೇವನನ್ನು ಅಮುರ್ದಪ್ಪಿ ಮಿತ್ರನೇ, ನನ್ನ ಶ್ರೇಯಸ್ಸೇ ನಿನ್ನ ಶ್ರೇಯಸ್ಸಾಗಿ ಭಾವಿಸಿರುವೆ. ಆದರೆ ಈ ಸಂಗತಿಯನ್ನು ಗುರುಗಳಿಗೆ ತಿಳಿಸಿದರೆ ಏನನ್ನುವರೋ; ಈ ದಿನ ಕೇಳು ನೋಡೋಣವೆಂದು ಆಗ ತಾನೇ ಉದಯಿಸುವ ಚಂದ್ರನನ್ನು ತೋರಿ, ಕಲಾನಿಧಿಯಾದ ಚಂದ್ರನು ಜನಾನಂದಕರನೆನಿಸಿದನು. ಇದು ಕಲೆಗಳ ಫಲವಲ್ಲವೆ? ಎನ್ನಲು ನೀನು ಕಪಿಯಾಗಿ ಮಾತಾಡಿದ ಮಾತು ಪಂಡಿತರನ್ನು ಆನಂದಗೊಳಿಸುತ್ತದೆಂದು ಗುರುಶಾಂತದೇವನು ನಕ್ಕನು. ೧—೧೨

ಶ್ರೀಮಠಕ್ಕೆ ಬಂದು ಚನ್ನವೀರದೇವನನ್ನು ಕಾಶಿಗೆ ಕಳಿಸುವ ಕೃಪೆಯಾಗಬೇಕೆಂದು ಗುರುಶಾಂತದೇವನು ಜಗದ್ಗುರುಗಳಿಗೆ ಅರಿಕೆ ಮಾಡಿಕೊಳ್ಳಲು, ವಿಚಾರಿಸಿ ತಿಳಿಸುವದಾಗಿ ಅವರು ಅಪ್ಪಣೆ ಕೊಡಿಸಿದರು. ಶುಭ ಕೆಲಸಗಳಿಗೆ ವಿಘ್ನ ಬಹಳ. ಕುತ್ಸಿತ ವಿದ್ಯಾರ್ಥಿಗಳು ಮತ್ಸರದಿಂದ ತಂದೊಡ್ಡಿದ ವಿಘ್ನಗಳನ್ನು ನಿವಾರಿಸಿ, ಗುರುಶಾಂತದೇವನು ಚನ್ನವೀರದೇವನಿಗೆ ಕಾಶಿಗೆ ಹೋಗಲು ಗುರುಗಳಿಂದ ಅನುಮತಿ ಕೊಡಿಸುವನು. ಗದುಗಿನ ಶ್ರೀಮಂತರಾದ ಮಾನ್ವಿಯವರ ಉದಾರಾಶ್ರಯವೂ ದೊರೆಯುವದು. ಶುಭದಿನದಲ್ಲಿ ಜಗದ್ಗುರುಗಳ ಆಶೀರ್ವಾದ ಪಡೆದು ಚನ್ನವೀರದೇವನು ಕಾಶಿಗೆ ಹೋಗಿ ಪಂಡಿತರ ಪ್ರೇಮಗಳಿಸಿ, ಮನಮುಟ್ಟಿ ಶಾಸ್ತ್ರಾಭ್ಯಾಸ ಮಾಡುತ್ತಿದ್ದನು. ೧೩—೨೪

ಇತ್ತ ಗುರುಶಾಂತದೇವನು ಕೇವಲ ವಿದ್ಯಾಭ್ಯಾಸದಲ್ಲಿ ಕಾಲವನ್ನು ಕಳೆಯದೆ, ಗುರುಗಳ ಅಪ್ಪಣೆಯಂತೆ ಮಠದ ಕೆಲಸವನ್ನು ಚಿತ್ತಗೊಟ್ಟು ಮಾಡುವನು. ವಿದ್ಯಾರ್ಥಿಗಳಿಗೆ ಅನ್ನವಸ್ತ್ರ ಪುಸ್ತಕಗಳನ್ನು ಒದಗಿಸುವನು- ಗುರುಜಂಗಮರ ಪೂಜಾಪ್ರಸಾದಗಳ ವ್ಯವಸ್ಥೆ ಮಾಡುವನು. ಗುರುದರ್ಶನಕ್ಕೆ ಬರುಹೋಗುವ ಭಕ್ತರಿಗೆ ಸತ್ಕಾರ ಮಾಡುವನು. ಚರಸಕವಿಗಳಿಗೆ ಆಶೀರ್ವಾದ ಕೊಡಿಸುವನು. ಖ್ಯಾತರೆನಿಸಿದ ವಿದ್ವಾಂಸರಿಂದ ಧಾರ್ಮಿಕ ಭಾಷಣ ಮಾಡಿಸುವನು. ಮಹಿಮರ ಪುರಾಣ ಪ್ರವಚನ ಹೇಳಿಸುವನು. ಶಿವಶರಣರ ವಚನಗಳನ್ನು ಹಾಡಿಸುವನು. ಶ್ರೀಮಠದ ಜಾತ್ರೆಯ ಕಾಲದಲ್ಲಿ ದಕ್ಷತೆ ವಹಿಸುವನು. ಈ ರೀತಿ ಬಹುಮುಖ ಕಾರ್ಯದಿಂದ ಗುರುಗಳಿಗೆ ಸಂತೋಷವನ್ನುಂಟು ಮಾಡಿ, ಭಕ್ತರಿಗೆ ಪೂಜ್ಯನಾಗಿ

ದ್ದನು. ಸುಕ್ಷೇತ್ರ ಉಳವಿಯಲ್ಲಿ ವೈಷ್ಣವ ಪಂಡಿತನನ್ನು ಸೋಲಿಸಿ ಆತ ಬಿಟ್ಟ ಭೂತವನ್ನು ಓಡಿಸಿ, ಶಿವನೇ ಸರ್ವೋತ್ತಮನೆಂದು ಪ್ರಕಟಿಸಿದ ಚರಕುಲತಿಲಕ ಸಿದ್ಧಲಿಂಗನು ಸತತ ನಮ್ಮನ್ನು ರಕ್ಷಿಸಲಿ.

ಆರನೆಯ ಸಂಧಿ

ಅತ್ತ ಕಾಶೀ ಕ್ಷೇತ್ರದಲ್ಲಿ ಪ್ರಖ್ಯಾತವಾದ ಜಂಗಮವಾಡಿ ಮಠದ ವಿಶ್ವಾರಾಧ್ಯ ಪೀಠಕ್ಕೆ ಜಗದ್ಗುರುಗಳಾದ ರಾಜೇಶ್ವರ ಸ್ವಾಮಿಗಳ ಸನ್ನಿಧಿಯಲ್ಲಿದ್ದ ಚನ್ನವೀರ ಪಂಡಿತನಿಗೆ ಶಾಸ್ತ್ರಗಳಧ್ಯಯನ ಮಾಡುವದು, ವೇದಾಗಮರಹಸ್ಯ ನೋಡುವದು ತತ್ವಶೋಧನೆಗೆ ಮತಿನೀಡುವದು, ಪಂಡಿತರೊಡಗೂಡಿ ಮತಸಿದ್ಧಾಂತಗಳ ಚರ್ಚಿಸುವದು ದಿನದ ರೂಢಿಯಾಗಿತ್ತು. ಚನ್ನವೀರ ಪಂಡಿತನು ಆಗಾಗ ತನ್ನ ದೇಶಕ್ಕೈತರುವಾಗ ನಿಲ್ದಾಣದಲ್ಲಿ ಕಾಯ್ದಿದ್ದ ಗುರುಶಾಂತದೇವನನ್ನು ಆಲಿಂಗಿಸಿ, ಕಾಶೀ ಕ್ಷೇತ್ರದ ವಿಷಯಗಳನ್ನು ವಿವರಿಸುತ್ತ, ಮಠಕ್ಕೆ ಬಂದು ಗುರುಗಳಿಗೆ ವಂದಿಸಿ, ವಿದ್ಯಾಭ್ಯಾಸದುನ್ನತಿಯನ್ನು ತಿಳಿಸಿ ಆಶೀರ್ವಾದ ಪಡೆದು, ಮಾನ್ವಿಯವರ ಮನೆಗೆ ಬಂದು ಹಡೆದ ತಾಯಿಯಂತಿದ್ದ ದುಂಡಪ್ಪನ ಧರ್ಮಪತ್ನಿಯಾದ ರುದ್ರಾಂಬೆಯನ್ನು ಕಂಡು ವಿದ್ಯಾಭ್ಯಾಸವೇ ಮೊದಲಾದ ಸಂಗತಿ ತಿಳಿಸಲು, ಆ ತಾಯಿ ನನ್ನ ದೇವನೇ ! ಪಂಡಿತ ಮಾನ್ಯನಾಗೆಂದು ವಂದಿಸಿ ಸ್ನಾನಪೂಜೆ ಭೋಜನ ಮಾಡಿಸಿ ಉಪಚರಿಸುತ್ತಿದ್ದಳು. ಗುರುಶಾಂತದೇವನೊಡನೆ ಕೆಲದಿನವಿದ್ದು ಮತ್ತೆ ಕಾಶಿಗೆ ಹೊರಟು ಹೋಗಲು, ಗುರುಶಾಂತದೇವನು ಮಠದ ಕಾರ್ಯಗಳಲ್ಲಿ ತತ್ಪರನಾಗುವನು. ಕಾಶಿಯಲ್ಲಿ ಚನ್ನವೀರ ಪಂಡಿತನು ಎಲ್ಲ ಶಾಸ್ತ್ರಗಳಲ್ಲಿ ಪಾರಂಗತನಾಗಿ ಪಂಡಿತ ಸಭೆಗಳೊಳಗೆ ಶಾಸ್ತ್ರವಾದಗಳಲ್ಲಿ ಜಯಹೊಂದಿ ಜಯದೇವ ಬಿರುದನ್ನು ಪಡೆದನು.

೧—೧೧

ಇತ್ತ ಕರ್ನಾಟಕದಲ್ಲಿ ಭಕ್ತಿಯ ನೆಲೆಯೆನಿಸಿದ, ಕೀರ್ತಿಶಾಲಿಯಾದ ಚಿತ್ರದುರ್ಗ ಬೃಹನ್ಮಠದ ಪ್ರಭುತ್ವ ಹೊತ್ತು ಧರ್ಮೋದ್ಧಾರ ಮಾಡುವದಕ್ಕೆ ಯೋಗ್ಯನಾದ ವಟುವನ್ನು ಭಕ್ತರು ಹುಡುಕುತ್ತಿರಲು, ಸೊನ್ನಲಾಪುರದ ವಾರದ ಮಲ್ಲಪ್ಪ ಮೊದಲಾದವರು ಜಗದ್ಗುರುಪದವಿಹೊಂದುವ ಯೋಗ್ಯತೆ ಜಯದೇವನಲ್ಲಿ ಇರುವದೆಂದು ಕಾಶಿಯಿಂದ ಕರೆಸಿ ಚಿತ್ರದುರ್ಗದ ಮಠಕ್ಕೆ ಕರೆದೊಯ್ಯುವರು ಸಭೆಯಲ್ಲಿ ವಟುಗಳ ಚುನಾವಣೆಯೊಳಗೆ ಜಯದೇವನಿಗೆ ಬಹುಮತ ದೊರೆಯಲು ಎಲ್ಲರಿಗೆ ಸಂತೋಷವಾಗುವದು. ಚನ್ನವೀರದೇವನಿಗೆ ಬೃಹನ್ಮಠದ ಪ್ರಭುತ್ವ ಪ್ರಾಪ್ತನಾಗಲು ತಾನೇ ಆ ಮಠದ ಗುರುವಾದಂತೆ ತಿಳಿದು ಗುರುಶಾಂತ ದೇವನು ಸಂತಸದಳೆದಿದ್ದನು. ಬಳಿಕ

ಶುಭದಿನದಲ್ಲಿ ಅಭೂತಪೂರ್ವವಾಗಿ ಪೀಠಾಧಿಕಾರ ಮಹೋತ್ಸವ ಜರುಗಿತು.

೧೨—೧೭

ಶ್ರೀ ಜಯದೇವ ಜಗದ್ಗುರುಗಳು ಗುರುಶಾಂತದೇವನನ್ನು ಕುರಿತು, ಗದುಗಿನಲ್ಲಿ ನೀನು ಹೇಳಿದಂತೆ ನಾವು ವಿದ್ಯೆಗಳಿಸಿದ್ದರಿಂದ ಈ ಪೂಜ್ಯಪೀಠ ದೊರೆಯಿತು. ಇನ್ನು ಮುಂದೆ ನೀನು ಇಲ್ಲಿಯೇ ಇದ್ದು ಮಠದ ಕಾರ್ಯದಲ್ಲಿ ನೆರವು ನೀಡಬೇಕೆನ್ನಲು, ಗುರುಶಾಂತ ದೇವನು "ಇಲ್ಲಿಯವರೆಗೆ ಗೆಳೆಯರಾದ ತಾವು ಇನ್ನು ಗುರುಗಳಾದಿರಿ. ತವಾಜ್ಞೆ ಮಾನ್ಯವೆಂದು ಪಾದಾರವಿಂದಗಳಿಗೆ ಪೊಡಮಟ್ಟರು. ಜಗದ್ಗುರುಗಳು ಬೃಹನ್ಮಠದ ಕಾರ್ಯಭಾರವನ್ನು ಗುರುಶಾಂತದೇವನಿಗೆ ವಹಿಸಿಕೊಡುವರು. ಜಯದೇವ ಪ್ರಭುಗಳು ತಮ್ಮ ಸಂಸ್ಥಾನದ ಪದ್ಧತಿಯಂತೆ ದೇಶ ದೇಶಗಳಲ್ಲಿ ಸಂಚರಿಸುತ್ತ ಭಕ್ತರಲ್ಲಿ ಧರ್ಮಜಾಗ್ರತೆಗೊಳಿಸುತ್ತ, ವಿದ್ಯೆಯಲ್ಲಿ ಹಿಂದುಳಿದ ಜನರಿಂದ ಪ್ರಯೋಜನವಿಲ್ಲೆಂದು ಬಡಬಾಲಕರು ವಿದ್ಯೆಕಲಿಯಲಿಕ್ಕೆ, ಊಟವಸತಿಗಳಿಗೆ ಅನುಕೂಲವಾದ ವಿದ್ಯಾರ್ಥಿನಿಲಯಗಳನ್ನು ನಿರ್ಮಿಸಿದ್ದಲ್ಲದೆ ಸಂಸ್ಕೃತ,ಇಂಗ್ಲೀಷ, ಕನ್ನಡ ಕಲಿಯುವವರಿಗೆ ವೇತನ ಕೊಡುವದೇ ಮೊದಲಾದ ಕೃತಿಗಳನ್ನು ಆಶ್ಚರ್ಯಕರವಾಗಿ ಮಾಡಿದರು.

೧೮—೨೮

ಗುರುಶಾಂತದೇವನು ಬೃಹನ್ಮಠದ ಕೃತ್ಯಗಳನ್ನು ಕುಶಲತೆಯಿಂದ ಮಾಡುತ್ತ ನೋಡುವವರ ಚಿತ್ತಕ್ಕೆ ಆಲ್ಹಾದ ನೀಡುತ್ತ, ಮಠದ ಚರಮೂರ್ತಿಗಳಿಗೆ ಮಾನ್ಯನಾಗಿ ಹನ್ನೆರಡು ವರ್ಷಪರ್ಯಂತ ಎಷ್ಟೂ ಕೊರತೆಯಾಗದಂತೆ ಕಾರ್ಯಮಾಡುತ್ತಿದ್ದರು. ಆಗ ಜಯದೇವ ಜಗದ್ಗುರುಗಳು ಗುರುಶಾಂತ ದೇವನನ್ನು ಸನ್ನಿಧಿಗೆ ಕರೆಸಿಕೊಂಡು ಶ್ರೀಮಠದ ಮುಖ್ಯ ಚರಮೂರ್ತಿಯನ್ನಾಗಿ ಮಾಡಿಕೊಂಡು, ಹರಿಹರದ ವಿರಕ್ತಮಠಕ್ಕೆ ಅಧಿಕಾರಿಯಾಗಲಿಕ್ಕೆ ಅಪ್ಪಣೆ ಮಾಡಿ ಅವರನ್ನು ಒಪ್ಪಿಸುವರು. ಪಟ್ಟಾಧಿಕಾರಕ್ಕೆ ಶುಭದಿನದ ನಿರ್ಣಯವಾದದ್ದು ಹರಿಹರದ ಭಕ್ತರಿಗೆ ಸಂತೋಷವನ್ನುಂಟು ಮಾಡಿತು. ವಿರಕ್ತಮಠದಲ್ಲಿ ಸಿಂಗರದ ರಚನೆಯಾಯಿತು. ಹಿಂದಿನ ಜಗದ್ಗುರುಗಳಾದ ಮಹಾಲಿಂಗಸ್ವಾಮಿಗಳ ತಮ್ಮಂದಿರೂ ಶಿವಪೇಟಿ, ರಾಮದುರ್ಗಮಠಗಳೆರಡರ ಅಧಿಕಾರಿಗಳೂ ಆದ ಶಿವಮೂರ್ತಿಸ್ವಾಮಿಗಳನ್ನು ಗುರುಶಾಂತದೇವನಿಗೆ ಜ್ಞಾನಬೋಧೆ ಅನುಗ್ರಹಯುಕ್ತವಾದ ಜಂಗಮ ಸಂಸ್ಕಾರ ಕೊಡಲಿಕ್ಕೆ ಕರೆಸಿದರು. ಜಯದೇವ ಪ್ರಭುಗಳು ದಯಮಾಡಿಸಿದರು. ನಾಡುನಾಡಿನ ಭಕ್ತರು ನೆರೆದರು. ಮಂಗಲಸಮಯ ಪ್ರಾಪ್ತವಾಗಲು, ಸುವಾದ್ಯನಿನಾದ ದಿಗ್ಭರಿತವಾಯಿತು. ವಿಧಿಜ್ಞರು ಗುರುಶಾಂತ ದೇವನಿಗೆ ಮಂಗಳಸ್ನಾನ ಮಾಡಿಸಿ ತುಂಗಪೀಠದೆ ವಿರಾಜಮಾನರಾದ ಶಿವಮೂರ್ತಿ ಸ್ವಾಮಿಗಳಿಗೆ ನಮಸ್ಕಾರ ಮಾಡಿಸಿ, ಎದುರಿಗೆ ಕುಳ್ಳಿರಿಸಿ, ಮಂತ್ರಪಠಿಸುತ್ತಿರಲು, ಸಕ್ರಮವಾಗಿ ಸಂಸ್ಕಾರಮಾಡಿ, ಚರಪಟ್ಟಗಟ್ಟಿದರು. ಆ ಸಮಯದಲ್ಲಿ ಎಲ್ಲ ಮೂರ್ತಿ

ಗಳು ಶಿವಮೂರ್ತಿಸ್ವಾಮಿಗಳಿಂದ ಚಿದುಪದೇಶ ಪಡೆದು ಬಹ್ಮತೇಜದಿಂದ ಬೆಳಗಿದರು. ಜಯದೇವ ಜಗದ್ಗುರುಗಳು ಗುರುಶಾಂತ ಚರಮೂರ್ತಿಗಳಿಗೆ ಹರಿಹರಮಠದ ಸರ್ವಾಧಿಕಾರ ಒಪ್ಪಿಸಿ ಹರಸುವರು. ೨೫—೩೭

ಗುರುಶಾಂತಸ್ವಾಮಿಗಳನ್ನು ಕುಸುಮಾಲಂಕೃತ ಅಡ್ಡಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ಮಹೋತ್ಸವನ್ನು ಹೊರಡಿಸಲು, ತಳಿರು ತೋರಣ ಬಾಳೆಕಂಬ ಚಪ್ಪರಗಳಿಂದ ಸಿಂಗರಿಸಿದ ಬೀದಿಗಳ ಇಕ್ಕೆಲಗಳಲ್ಲಿ ಜನಜಂಗುಳಿ ನೆರೆದು ನೋಡುತ್ತಿತ್ತು. ಕಾವಿಬಟ್ಟೆ, ವಿಭೂತಿ, ರುದ್ರಾಕ್ಷಿಗಳನ್ನು ಧರಿಸಿದ ಗುರುಗಳು ಪಲ್ಲಕ್ಕಿಯಲ್ಲಿ ಮಂಡಿಸಿರುವದನ್ನು ಕಂಡು ಭಕ್ತರ ಹೃದಯ ಭಕ್ತಿರಸದಿಂದ ತುಂಬಿತು. ಭಕ್ತಿಯುಕ್ತರಾದ ಸ್ತ್ರೀಪುರುಷರು ಪಲ್ಲಕ್ಕಿಯನ್ನು ಅಲ್ಲಿಗಲ್ಲಿಗೆ ನಿಲ್ಲಿಸಿ ಗುರುಪುಂಗವನ ಪದಪಲ್ಲವಕ್ಕೆರಗಿ, ತೆಂಗುಗ ಳೊಡೆದು ಆರತಿ ಬೆಳಗಿ ಆಶೀರ್ವಾದ ಪಡೆಯುತ್ತಿದ್ದರು. ಕನ್ನಡಿಗರಲ್ಲಿ ಶೈವ ವೈಷ್ಣವರೆಂಬ ಭೇದಬುದ್ಧಿಯನ್ನು ಪರಿಹರಿಸುವ ಆದರ್ಶವೆಂಬಂತೆ ಹರಿಹರೇಶ್ವರನು ಈ ಪಟ್ಟಣದಲ್ಲಿ ನೆಲಸಿದ ಪುಣ್ಯಕ್ಕೆ ಫಲವೆಂಬಂತೆ ತೇಜಸ್ವಿಗಳಾದ ಗುರುಗಳು ದೊರೆತರೆಂದು ಬುಧರು ಬಣ್ಣಿಸುತ್ತಿದ್ದರು. ಮಹೋತ್ಸವವು ಮುಖ್ಯ ಬೀದಿಗಳಲ್ಲಿ ಹಾಯ್ದು ಮಠಕ್ಕೆ ತಲುಪಿತು. ೩೮—೪೪

ಶೂನ್ಯ ಪೀಠದೊಳು ವಿರಾಜಮಾನರಾದ ಜಯದೇವ ಜಗದ್ಗುರುಗಳ ಸನ್ನಿಧಿಯಲ್ಲಿ ಗುರುಶಾಂತ ಸ್ವಾಮಿಗಳನ್ನು ಮುಹೂರ್ತಮಾಡಿಸಿ, ಭಕ್ತರು ಕಾಣಿಕೆ ಸಲ್ಲಿಸಿದರು. ವೈರಾಗ್ಯಭೂಷಿತರಾದ ಗುರುಶಾಂತ ಸ್ವಾಮಿಗಳು ಜಗದ್ಗುರುಗಳಿಗೆ ವಂದಿಸಿ, ಈ ಮಠದ ಒಡೆತನವು ಜಗದ್ಗುರುಗಳವರದೆಂದು ನಂಬಿ, ಇದರ ಸತ್ಫಲ ಭೋಗವನ್ನು ಭಕ್ತರಿಗೆ, ಗುರುಲಿಂಗಜಂಗಮರಿಗೆ ಕೊಟ್ಟು ನಲಿವ ಸಿರಿಬರಲಿ ನನಗೆ ಎನ್ನಲು ನೆರೆದವರು ಕರತಾಡನಗೈದು ಜಗದ್ಗುರುಗಳಿಗೆ ವಂದಿಸಿ ಆಶೀರ್ವಾದ ಪಡೆದರು. ಭಕ್ತರು ಮಹೊತ್ಸವಕ್ಕೆ ಆಗಮಿಸಿದ ಗುರುಚರರಿಗೆ, ಪಂಡಿತ ಕವಿ ಗಾಯಕರಿಗೆ ಸತ್ಕಾರಮಾಡಿ ಕಳುಹಿದರು. ೪೫—೪೯

ಗುರುಶಾಂತಪ್ಪನೇ ಕೇಳು ನಮ್ಮ ಗುರು ಶಿಷ್ಯಭಾವಕ್ಕಿಂತಲೂ ನಮ್ಮಪೂರ್ವಸ್ನೇಹ ಮೇಲಾದದ್ದು. ಅದನ್ನು ನಾವು ಪಾಲಿಸಬೇಕೆಂದು ಜಗದ್ಗುಗಳು ಅಪ್ಪಣೆ ಕೊಡಿಸಲು, ಗುರುಶಾಂತಸ್ವಾಮಿಗಳು ಕಿರುನಗೆಮಲ್ಲಿಗೆಯ ಚಲ್ಲುತ್ತ ಸುಖಾಶ್ರುಸುರಿಸುತ್ತ, ಮಹಾತ್ಮನೇ ! ನಿನ್ನ ಸತ್ಪ್ರೇಮ ಆಲವಾಲದಲ್ಲಿ ಬೆಳೆಯುವ ಸಸಿಯಿದು. ಇದನ್ನು ಪಾಲಿಸುವ ಹೊಣೆ ನಿನ್ನದೆಂದು ವಂದಿಸಲು, ಜಗದ್ಗುರುಗಳು ಶಿರಹಿಡಿದೆತ್ತಿ ಬೆನ್ನ ಮೇಲೆ ಕೈಯಾಡಿಸಿ, ನಗೆನುಡಿಗಳಿಂದ ಹರಸಿ, ಭಕ್ತರಿಂದ ಬೀಳ್ಕೊಂಡು ಚಿತ್ರದುರ್ಗಕ್ಕೆ

ದಯಮಾಡಿಸಿದರು. ಯಾವ ಸುಚರಿತನು ಕಗ್ಗೆರೆಯ ಬಳಿಯಲ್ಲಿರುವ ಪೂದೋಟ ದೊಳಗೆ ಶ್ರೇಷ್ಠವಾದ ಶಿವಯೋಗಸೌಖ್ಯ ಸಮಾಧಿಯಲ್ಲಿರುವ ಸಮಯದಲ್ಲಿ ಸುತ್ತಲೂ ಬೆಳೆದಿರುವ ಹುತ್ತವನ್ನು ಲಕ್ಷಿಸದೆ ಮೈಮರೆದನೋ ಆ ಸಿದ್ಧಲಿಂಗಯತಿಯು ನುತಿಸಿ ಸುಖಿಸುವೆನು. ೫೦—೫೪

ಏಳನೆಯ ಸಂಧಿ

ಸುಚರಿತರಾದ ಗುರುಶಾಂತ ಸ್ವಾಮಿಗಳಲ್ಲಿರುವ ವೈರಾಗ್ಯ ಸಂಪತ್ತು ಮೊದಲಾದ ದಿವ್ಯ ಗುಣಗಳನ್ನು ಕಂಡು ಹರಿಹರದ ಭಕ್ತರು, ನಮಗೆ ಇಷ್ಟಾರ್ಥ ಕರುಣಿಸುವದಕ್ಕೆ ಅಭಿನವ ಅಲ್ಲಮನಾಗಿ ದಯಮಾಡಿಸಿದರೆಂದು ಹೊಗಳಹತ್ತಿದರು. ಗುರುಶಾಂತಸ್ವಾಮಿಗಳು ಮಠದ ಜೀರ್ಣವಾದ ಭಾಗಗಳನ್ನು ಸರಿಗೊಳಿಸುವ ಕಾರ್ಯ ಕೈಕೊಂಡು, ಮುರಕಲ್ಲ ಮಹಲಿಂಗಪ್ಪ, ಹಂಜಿ ಚನ್ನಬಸವಯ್ಯನವರು, ಜಿ. ಗುರುಸಿದ್ಧಪ್ಪ, ಶಿಪ್ಪಣ್ಣನವರ ಮುರಿಗೆಪ್ಪ ಮುಂತಾದ ವಿಶ್ವಾಸಿಕ ಭಕ್ತರ ಸಹಾಯ ಪಡೆದು, ಚೌಕೀ ಮಠವೇ ಮೊದಲಾದವುಗಳಲ್ಲಿ ಜೀರ್ಣವಾದ ಭಾಗಗಳನ್ನು ಸರಿಪಡಿಸಿದರು- ಹಿಂದೆ ಆಗಿಹೋದ ಸ್ವಾಮಿಗಳ ಗದ್ದುಗೆಗಳ ಪೂಜಾದಿ ವ್ಯವಸ್ಥೆಮಾಡಿದರು. ಮಠದ ಬಯಲಲ್ಲಿ ಪುರಾತನರ ಸ್ಮಾರಕವಾಗಿ ಅರವತ್ತುಮೂರು ಬಿಲ್ವಸಸಿಗಳನ್ನು ಹಚ್ಚಿ, ಭಕ್ತರಿಗೆ ಸಂತೋಷವನ್ನುಂಟು ಮಾಡಿದರು. ಪದ್ಧತಿ ಪ್ರಕಾರ ಮಠಕ್ಕೆ ಆಗಮಿಸುವ ಅತಿಥಿಗಳನ್ನು ತಣಿಸಲು, ಪ್ರಸಾದಾದಿಗಳ ವ್ಯವಸ್ಥೆಯು ಯಾವಾಗಲೂ ಇರುವಂತೆ ಮಾಡಿದರು. ಪ್ರತಿದಿನ ಸಾಯಂಕಾಲದಲ್ಲಿ ದರ್ಶನಕ್ಕೆ ಬಂದ ಭಕ್ತರಿಗೆ ಶಿವಾನುಭವವನ್ನು-ಶಿವಭಕ್ತಿ ಮಾರ್ಗದ ಆಚರಣೆಯನ್ನು ಬೋಧಿಸಿ, ಆಶೀರ್ವದಿಸಿ ಕಳಿಸುವ ಹೊಸ ಪದ್ಧತಿಯನ್ನು ಇಟ್ಟುಕೊಂಡರು. ಈ ರೀತಿಯಾದ ಜಂಗಮರ ಸತ್ಕಾಯಕವನ್ನು ತಪ್ಪದೆ ಯಾವಾಗಲೂ ನಡೆಸುತ್ತಿದ್ದರು. ತಮ್ಮ ಲಿಂಗಾರ್ಚನೆಯನ್ನು ಸದ್ಭಾವದಿಂದ ಮಾಡುತ್ತ, ನಿತ್ಯವೂ ತಮ್ಮ ಪವಿತ್ರ ಜೀವನವು ಶಿವಸುಖಮಯವಾಗಿರುವಂತೆ ಸಾಧಿಸುತ್ತಿದ್ದರು. ೧—೧೦

ದಿನಂಪ್ರತಿ ನಿಜಲಿಂಗ ಸಮುಪಾಸನೆಯೊಳು ಚರಮೂರ್ತಿಯು ತನುವೇ ಆಚಾರಲಿಂಗ, ಆತ್ಮವೇ ಗುರುಲಿಂಗ, ಅಸುವೇ ಶಿವಲಿಂಗ, ಇಂದ್ರಿಯಗಳೇ ಚರಲಿಂಗ, ವಿಷಯವೇ ಪ್ರಸಾದಲಿಂಗ, ಸಂತೃಪ್ತಿಯೇ ಮಹಾಲಿಂಗ, ಈ ರೀತಿ ಷಟ್‌ಸ್ಥಲ ಮಾರ್ಗಗತರಾದ ಗುರುಶಾಂತ ಸ್ವಾಮಿಗಳು ಷಡ್ಲಿಂಗಮಯ ಶಿವಯೋಗಿಗಳಾಗಿ ಮಹಿಮೆಯಿಂದ ಮೊರೆಹೊಕ್ಕ ಭಕ್ತರಿಗೆ ಚಿಂತಿತಾರ್ಥಗಳ ಕೊಡುವ ಮಹಾಂತರಾದರು. ಮಹಿಮೆಯ ವಾರ್ತೆ ಪಟ್ಟಣದಲ್ಲಲ್ಲದೆ ಕನ್ನಡನಾಡಿನ ಕೆಲಭಾಗದಲ್ಲಿ ಹರಡಲು ಭಾಕ್ತಿಕ

ಜನವೃಂದ ಬಂದು, ವಾಭಿಂತಫಲ ಪಡೆಯುವದು ಬೆಳೆಯಿತು. ಮನದಲ್ಲಿ ಧ್ಯಾನಿಸಿ ಕೆಲವರಿಗೆ, ನೋಡಿ ಕೆಲವರಿಗೆ, ಮುಟ್ಟಿ ಕೆಲವರಿಗೆ, ಕೃಪಾಶೀರ್ವಚನಗಳಿಂದ ಕೆಲವರಿಗೆ ಇಷ್ಟಾರ್ಥ ಕೊಡುತ್ತ, ಜನತೆಯ ಮನೆಮನಗಳ ಅಧಿದೈವವೆನಿಸಿದರು. ಪುತ್ರರತ್ನ ಪಡೆದುಕೊಂಡರು, ಸಂಪದವ ಸಂಗಳಿಸಿಕೊಂಡರು, ಕಾಯಿಲೆ ಕಳೆದುಕೊಂಡರು, ಮೂಕರು ಮಾತಾಡುವ ಶಕ್ತಿಯನ್ನು ಪಡೆದರು. ಕುರುಡರು ಕಣ್ಣನ್ನು ಪಡೆದರು. ಬರವು ಬಯಲಾಯಿತು. ಬರಡುಗಳು ಹಯನಾದವು. ಕೊರಡುಗಳು ಕೊನರಿದವು. ಸಸ್ಯಸಂಪತ್ತು ಹಿರಿದೆನಿಸಿತು. ಮೋಡಗಳು ಮಳೆಗರೆದವು.

ಹೀಗಿರೆ ನಾವಳ್ಳಿಯ ತೋಟಯ್ಯನೆಂಬವನು ಗುರುಶಾಂತಸ್ವಾಮಿಗಳಿಗೆ ಸಾಷ್ಟಾಂಗವೆರಗಿ, ತಮ್ಮ ಸೇವೆಯಲ್ಲಿ ಮನಸ್ಸಿನ ಮಾಲಿನ್ಯ ಕಳೆದುಕೊಳ್ಳುವೆ. ಒಪ್ಪಿಗೆ ಕೊಡಬೇಕೆಂದು ಪ್ರಾರ್ಥಿಸಲು, ದಿವ್ಯ ದೃಷ್ಟಿಯಿಂದ ಅವನ ಭಕ್ತಿಭಾವವನ್ನು ಅರಿತು, ಯೋಗ್ಯಸೇವಕನಾಗಿರುವೆಯೆಂದು ಇರಿಸಿಕೊಂಡರು. ಗುರುಸೇವೆಯಿಂದ ಚಿರ ಸೌಖ್ಯ ಪಡೆದ ತೋಟಯ್ಯನು ಆವುದಕ್ಕೂ ಮನವೆಳಸದೆ ಸರ್ವರನ್ನೂ ಬೆರಗುಗೊಳಿಸಿದನು. ಗುರುಶಿಷ್ಯರಲ್ಲಿ ಸಾಮರಸ್ಯಭಾವ ತೀವಿತು. ಊಳಿಗಕ್ಕೆ ಬಂದವನು ಮಠದ ಶಿಷ್ಯರಲ್ಲಿ ಮುಖ್ಯನಾದನು. ತೋಟಯ್ಯನಿಂದ ಗುರುಗಳಿಗೆ ಶಿವಾರ್ಚನೆಯಲ್ಲಿ ಬಹಳ ಅನುಕೂಲವಾಯಿತು. ಯಾವ ಮಹಾತ್ಮನು, ತನ್ನ ಪಾದಕಚ್ಚಿ ಸತ್ತಿರುವ ಸರ್ಪಕ್ಕೆ ಪ್ರಾಣವಿತ್ತನೋ ಆ ತೊಂಟದಾರ್ಯನ ಚರಿತ್ರೆಯನ್ನು ಪಠಿಸುವ ಭಾಗ್ಯ ನಿರಂತರ ನಮಗಿರಲಿ.

ಎಂಟನೆಯ ಸಂಧಿ

ಶ್ರೀ ಗುರುಶಾಂತ ಸ್ವಾಮಿಗಳಲ್ಲಿ ಹೊಸಮಠದ ಚರಂತೆಪ್ಪ, ಗದ್ದಿಗಿಮಠದ ಪುಟ್ಟಪ್ಪ, ಮುರಿಗೆಪ್ಪನವರ ಮಗ ಹೇಮಗಿರಿಯಪ್ಪ, ಮೊದಲಾದವರ ಭಕ್ತಿಯು ದಿನೇ ದಿನೇ ಬೆಳೆಯ ಹತ್ತಿತು. ಪರಮಜಂಗಮನಾಗಿ, ಭಕ್ತೋದ್ಧಾರ ಮಾಡುವ ಪ್ರತ್ಯಕ್ಷ ಪರಶಿವನಾಗಿ, ಹರಿಹರದ ಸಿರಿಸಂಪತ್ತೇ ಆದ ಗುರುಶಾಂತ ಸ್ವಾಮಿಗಳ ಶಿವಯೋಗ ಮಹಿಮೆಯು ಸ್ವಲ್ಪಕಾಲದಲ್ಲಿಯೇ ಎಲ್ಲ ಕಡೆಗೂ ಹರಡಿತು. ಗದುಗಿನ ಜಗದ್ಗುರುಗಳಾದ ತೋಂಟದಾರ್ಯರು ಗುರುಶಾಂತಸ್ವಾಮಿಗಳ ಅಭ್ಯುದಯವನ್ನು ಅರಿತು ಆನಂದಭರಿತರಾದರು. ೧—೪

ಲೋಕಕಲ್ಯಾಣಕ್ಕಾಗಿ ಸಂಚಾರ ಕೈಕೊಂಡ ತೋಂಟದಾರ್ಯರು ಅಲ್ಲಲ್ಲಿ ಸಂಚರಿಸುತ್ತ ಶಿಲವಡಿಗೆ ದಯಮಾಡಿಸಿದರು. ಶಿಲವಡಿಯ ಮೂರ್ಖ ನಾಗರಿಕರು ಚಂಗಳವ್ವೆಯ ಉತ್ಸವನಿಮಿತ್ತ ಕಟ್ಟಿದ ಚಿನ್ನದಾಭರಣಗಳ ತೋರಣವನ್ನು ನೋಡಿ, ಈ

ತೋರಣವು ನಿಮ್ಮೂರ ಲಕ್ಷ್ಮಿಯನ್ನು ಹೊರಗೆ ಹಾಕಲಿಕ್ಕೆ ಕಾರಣವಾಗಿದೆ. ಬಡತನ ಕಷ್ಟ ಕಾರ್ಪಣ್ಯಗಳು ಮನೆ ಮನೆಗಳಲ್ಲಿ ಸೇರುವವೆಂದು ಭವಿಷ್ಯ ನುಡಿದರು. ಜನರೆಲ್ಲ ಭಯದಿಂದ ಜಗದ್ಗುರುಗಳಿಗೆ ವಂದಿಸಿ ಸಂಪತ್ತು ತೊಲಗದಂತೆ ಆಶೀರ್ವದಿಸಬೇಕೆಂದು ಬೇಡಿಕೊಂಡರು ಕೆಲದಿನಗಳ ನಂತರ ನಿಮ್ಮೂರಿಗೆ ಶಿವಯೋಗಿ ಪುಂಗವನೊಬ್ಬನು ದಯಮಾಡಿಸುವನು. ಹೋದ ಸಂಪತ್ತು ಆಗ ಮರಳಿ ಬರುವದು, ಚಿಂತೆಬಿಟ್ಟು ಆ ಯೋಗಿಯ ಆಗಮನವನ್ನು ಹಾರೈಸಿಕೊಂಡಿರಬೇಕೆಂದು ಜಗದ್ಗುರುಗಳು ಅಪ್ಪಣೆ ಕೊಡಿಸಿದರು. ಸದ್ಭಕ್ತರು ಸಂತೋಷದಿಂದ ವೈರಾಗ್ಯನಿಧಿಯಾದ ತೋಂಟದಾರ್ಯರ ಸೇವೆಮಾಡಿ, ಭೂರಿಕಾಣಿಕೆ ಸಲ್ಲಿಸಿ ಜಗದ್ಗುರುಗಳನ್ನು ಬೇರೊಂದೂರಿಗೆ ಬೀಳ್ಕೊಟ್ಟರು. ೫–೧೦.

ಇತ್ತ ಹರಿಹರದಲ್ಲಿದ್ದ ಗುರುಶಾಂತಸ್ವಾಮಿಗಳು ರಾಮದುರ್ಗದಲ್ಲಿರುವ ತಮ್ಮ ಗುರುಗಳಾದ ಶಿವಮೂರ್ತಿಸ್ವಾಮಿಗಳ ಗದ್ದುಗೆಯ ದರ್ಶನಾರ್ಥವಾಗಿ ತೋಟಯ್ಯನೊಡನೆ ಕಾಲ್ನಡಿಗೆಯಿಂದ ಹೊರಟರು. ದಾರಿಯಲ್ಲಿ ತಮಗೆ ಸಂಧಿಸಿದ ಊರಲ್ಲಿ ನಿತ್ಯ ಕ್ರಿಯೆಯನ್ನು ಪೂರೈಸಿ ರಾತ್ರಿಯಲ್ಲಿ ಅಲ್ಲಿ ಉಳಿಯುತ್ತ ರಾಮದುರ್ಗಕ್ಕೆ ಬಂದು ಗುರುಗಳ ಗದ್ದುಗೆಗೆ ಅಭಿಷೇಕ ಆರಾಧನೆ ಜರುಗಿಸಿದರು. ಅಲ್ಲಿ ಎರಡು ದಿನವಿದ್ದು ತಿರುಗಿ ಬರುವಾಗ ಶಿಲವಡಿಗೆ ದಯಮಾಡಿಸಿ ಭಕ್ತನೋರ್ವನ ಮನೆಯಲ್ಲಿ ವಾಸವಾಗಿದ್ದರು. ಶಾನುಭೋಗರ ಮಠದಲ್ಲಿ ಸಂಸ್ಕೃತ ಪಾಠಶಾಲೆ ಸ್ಥಾಪಿಸಿ ಬೆನಕಲ್ಲ ಗ್ರಾಮದ ಗುರುಮೂರ್ತಿಶಾಸ್ತ್ರಿಗಳನ್ನು ಅಧ್ಯಾಪಕರನ್ನಾಗಿ ನೇಮಿಸಿಕೊಂಡು, ಭಕ್ತೋದ್ಧಾರ ಕಾರ್ಯ ಕೈಕೊಂಡ ಶಿವಪೇಟೆಯ ಪಂಚಾಕ್ಷರ ಸ್ವಾಮಿಗಳಿಗೆ ಗುರುಶಾಂತಸ್ವಾಮಿಗಳು ಬಂದ ಸಂಗತಿ ತಿಳಿದು ಅವರಿದ್ದಲ್ಲಿಗೆ ಬರುವರು. ಪರಸ್ಪರ ವಂದನೆ, ಕುಶಲಪ್ರಶ್ನೆಯಾದ ನಂತರ ಪಂಚಾಕ್ಷರ ಸ್ವಾಮಿಗಳು ಭಕ್ತರೆಲ್ಲರನ್ನು ಬರಮಾಡಿಕೊಂಡು ನಿಮ್ಮ ಭಾಗ್ಯ ಲಕ್ಷ್ಮಿಯಂತೆ ಗುರುಶಾಂತ ಸ್ವಾಮಿಗಳು ಬಂದಿರುವರು. ಇವರನ್ನು ಪ್ರಾರ್ಥಿಸಿಕೊಂಡು ಸೂಸಂಗಿ ವಿರಕ್ತಮಠದಲ್ಲಿ ಇರಿಸಿಕೊಳ್ಳಿರಿ. ನಿಮ್ಮ ಪ್ರಾಂತ ಪವಿತ್ರವಾಗುವದೆಂದು ಆಜ್ಞೆಮಾಡಿದರು. ಭಕ್ತರೆಲ್ಲರು ಗುರುಶಾಂತ ಸ್ವಾಮಿಗಳಿಗೆ ವಂದಿಸಿ ಮಹನೀಯರೇ! ನಮ್ಮ ಮಠಕ್ಕೆ ಅಧಿಕಾರಿಗಳಿಲ್ಲ. ತಮ್ಮ ಪಾದಕ್ಕೆ ಇದನ್ನು ಒಪ್ಪಿಸುತ್ತೇವೆ. ಸ್ವೀಕರಿಸಿ ಜೀರ್ಣೋದ್ಧಾರ ಮಾಡಿ ಭಕ್ತರನ್ನು ಕಾಪಾಡಬೇಕೆಂದು ಬಿನ್ನವಿಸಿಕೊಂಡರು. ಗುರುಶಾಂತಸ್ವಾಮಿಗಳು ಕರುಣೆಯಿಂದ ಸಮ್ಮತಿಸುವರು. ಮಂಗಳವಾದ್ಯದೊಡನೆ ಭಕ್ತರು ಸ್ವಾಮಿಗಳನ್ನು ಸೂಸಂಗಿ ವಿರಕ್ತಮಠಕ್ಕೆ ಬರಮಾಡಿಕೊಂಡು ಪೀಠಾರೋಹಣ ಮಾಡಿಸಿ ಗಣಾರಾಧನೆ ಜರುಗಿಸಿ ಆಶೀರ್ವಾದ ಪಡೆದರು. ೧೧—೨೮.

ಆರು ಎಕರೆ ಹೊಲ, ಒಂದು ಹರವಿ, ಒಂದು ಮುಚ್ಚಳ ಮಠದ ಸಂಪತ್ತಾಗಿದ್ದವು- ಭೂತಗಳು ಇಲ್ಲಿ ವಾಸವಾಗಿವೆಯೆಂದು ಹೆದರಿ ಯಾರೂ ಮಠದಲ್ಲಿ ಇಳಿದು

ಕೊಳ್ಳುತ್ತಿರಲಿಲ್ಲ. ಮಠದ ಬಯಲಲ್ಲಿ ಹತ್ತಿಗಿರಣಿಯೊಂದು ಇತ್ತು. ಇಂತಿರುವ ಮಠದಲ್ಲಿ ಗುರುಶಾಂತ ಸ್ವಾಮಿಗಳು ತೋಟಯ್ಯನೊಡನೆ ವಾಸವಾಗಿದ್ದರು. ಇವರ ಹತ್ತರ ಹಾಸಿಗೆ ದುಪ್ಪಟಿ ಪ್ರಸಾದಬಟ್ಟಲ ತಾಲಿ ಹೊರ್ತಾಗಿ ಬೇರೆ ಏನಿಲ್ಲದಿದ್ದರೂ ಎಲ್ಲವುಳ್ಳವರಂತಿರುವ ಗುರುಗಳನ್ನು ಕಂಡು, ಭಕ್ತರು ಇಲ್ಲದುದನ್ನು ಸಲ್ಲಿಸುತ್ತಿರೆ ಯಾವ ಕೊರತೆಯೂ ಇಲ್ಲವೆನಿಸಿತು. ಮಹಿಮರು ನೆಲಸಿದಲ್ಲಿ ತಕ್ಕುದನ್ನು ಶಿವನು ಕೊಡದಿರುವನೇ? ಇಲ್ಲದುದಕ್ಕೆ ಹಾರೈಸದೆ, ಭಕ್ತರು ಸಲ್ಲಿಸಿದ್ದರಲ್ಲಿಯೇ ಸಂತುಷ್ಟರಾದ ಗುರುಶಾಂತ ಶಿವಯೋಗಿಗಳು ತಮ್ಮ ಚಿತ್ತವನ್ನು ಇಷ್ಟಲಿಂಗದಲ್ಲಿ ಇರಿಸಿದರು. ಲಿಂಗಾಂಗಸಮರಸ ಸುಖವನ್ನು ಅನುಭವಿಸುವ ಗುರುಶಾಂತೇಶ್ವರರ ಶಿವಯೋಗ ಪ್ರಭೆಯು ಹೆಚ್ಚಾಗಿ ಬೆಳೆದು, ದರ್ಶನಕ್ಕೆ ಬರುವ ಭಕ್ತರ ಮನದ ಮೈಲಿಗೆ ಕಳೆದು ಅಧಿಕ ಭಕ್ತಿಯನ್ನು ಬೆಳೆಸಿತು. ಯಾವನ ಪಾದಸೇವೆಯಿಂದ, ಶಾಪದಿಂದುಂಟಾದ ಗಂಧರ್ವ ದಂಪತಿಗಳ ಪಿಶಾಚರೂಪ ಹೋಯಿತೋ ಆ ಸಿದ್ಧಲಿಂಗನ ಪಾದಪದ್ಮವನ್ನು ಭಜಿಸುವಭಾಗ್ಯ ನಿರಂತರ ನಮಗಿರಲಿ ೨೯—೩೩

ಒಂಬತ್ತನೆಯ ಸಂಧಿ

ಸೂಸಂಗಿಮಠದ ಆವರಣದಲ್ಲಿ ಕುರಹಟ್ಟಿ ಪರ್ವತಗೌಡನು ಹಾಕಿದ ಹತ್ತಿಗಿರಣಿಯ ಕರ್ಕಶ ಶಬ್ದ ಗುರುಶಾಂತ ಸ್ವಾಮಿಗಳ ಶಿವಪೂಜೆಗೆ ತೊಂದರೆ ಮಾಡುತ್ತಿದ್ದರೂ ಊರವರು ಮೌನ ತಾಳಿದ್ದರು. ಗುರುವಿನಿಂದ ತಾನು ಪೂಜೆಗೊಳ್ಳುವುದಕ್ಕೆ ತೊಂದರೆಯಾದದ್ದನ್ನು ತಿಳಿದು ಶಿವನೇ ಗಿರಣಿ ನಡೆಯದಂತೆ ಮಾಡಲು, ಯಾಂತ್ರಿಕರು ಪರಿಪರಿಯಿಂದ ಸರಿಗೊಳಿಸಿದಾಗ್ಯೂ ಗಿರಣಿ ಚಲಿಸಲಿಲ್ಲ. ಗೌಡನು ಬೆರಗಾಗಿ ಸ್ವಾಮಿಗಳ ಸನ್ನಿಧಿಗೆ ಬಂದು ಗುರುಗಳೇ! ಒಕ್ಕಲಿಗರು ತಂದ ಹತ್ತಿಯು ರಾಶಿಯು ಬಯಲಲ್ಲಿ ಬಿದ್ದಿದೆ. ಅದನ್ನು ಅರಳೆಮಾಡಿ, ನಿಮ್ಮ ಲಿಂಗಪೂಜೆಗೆ ತೊಂದರೆಕೊಡುವ ಗಿರಣಿಯನ್ನು ಬೇರೆಡೆಗೆ ಹಾಕಿಸುವೆನು. ನಡೆಯುವಂತೆ ಕೃಪೆಮಾಡಬೇಕೆನ್ನಲು, ಹಾಗೇ ಆಗಲಿ. ಶಿವನು ಪೂರೈಸುವನು ಹೋಗೆಂದು ಸ್ವಾಮಿಗಳು ಹೇಳಿದರು. ಹತ್ತಿಯನ್ನು ಅರಳೆಮಾಡಿ, ದುರಾಶೆಯಿಂದ ಮತ್ತೆ ಗಿರಣಿಯನ್ನು ನಡೆಸಲು ಅದು ಬಂದಾಗುತ್ತದೆ. ಗೌಡನು ವಿಹ್ವಲನಾಗಿ ಓಡಿಬಂದು ಸ್ವಾಮಿಗಳಿಗೆ ನಮಿಸಿ ಕ್ಷಮೆ ಬೇಡಲು, ಗೌಡರೇ! ಶಿವಭಕ್ತರು ಆಶೆಯೇ ಭವಬಂಧನವೆಂದು ತಿಳಿವರು. ಆಶೆಬಿಟ್ಟು, ಶಿವನು ಕೊಟ್ಟದ್ದರಲ್ಲಿ ಸಂತುಷ್ಟಿ ಪಡೆಯುವ ವಿಮಲಮನ ನಿಮಗಿರಲೆಂದು ಸ್ವಾಮಿಗಳು ತಿಳಿಸುವರು. ಆಶೆಯನ್ನುಂಟುಮಾಡಿದ ಗಿರಣಿಯನ್ನು ಮಾರಿ, ಗೌಡನು ಸ್ವಾಮಿಗಳ ಸೇವೆಯಲ್ಲಿ ನೆಮ್ಮದಿ ಪಡೆದನು. ಅಂದಿನಿಂದ ಯಾವ ಕೊರತೆಯಿಲ್ಲದೆ ಗೌಡರ ಮನೆತನ ಇಂದಿಗೂ ಜಸವೆತ್ತು ಮೆರೆಯುವದು. ೧—೯

ಮೊದಲಿನ ಗುರುಗಳಾದ ಚೆನ್ನವೀರಸ್ವಾಮಿಗಳ ಹಾಗು ಎರಡನೆಯ ಗುರುಗಳಾದ ಗಡ್ಡದಸ್ವಾಮಿಗಳ ಗದ್ದುಗೆಗಳನ್ನೂ, ಮಠದೊಳಗಿನ ಇನ್ನಿತರ ಜೀರ್ಣ ಭಾಗಗಳನ್ನೂ ಸರಿಗೊಳಿಸಿದರು. ಭಕ್ತರೊಡಗೂಡಿ ಶ್ರಾವಣಮಾಸದಲ್ಲಿ ಪ್ರಸಿದ್ಧ ಕೀರ್ತನಕಾರರಾದ ದ್ಯಾಂಪುರ (ದೇವಪುರ)ದ ಬಸವಲಿಂಗ ಶಾಸ್ತ್ರಿಗಳಿಂದ ಪ್ರವಚನ ಹೇಳಿಸಿದರು ಸಂಸ್ಕೃತ ಕಲಿಯುವ ವಟುಗಳಿಗೋಸುಗ ಪಾಠಶಾಲೆ ಸ್ಥಾಪಿಸಿದರು. ಸಂದಿಗವಾಡದ ಚಂದ್ರಶೇಖರ ಶಾಸ್ತ್ರಿಗಳನ್ನು ಅಧ್ಯಾಪಕರನ್ನಾಗಿ ನೇಮಿಸಿದರು. ಇಪ್ಪತ್ತೈದು ವಟುಗಳು ಕೂಡಿದರು. ಇದನ್ನೆಲ್ಲ ನೋಡಿ ಶಲವಡಿಯ ಸದ್ಭಕ್ತರು ನಲಿದಾಡಿದರು. ಭಕ್ತಿಸಂಪನ್ನನೂ ವಿದ್ಯಾಪ್ರೇಮಿಯೂ ಆದ ಯರಗುಪ್ಪಿ ಅಡಿವೆಪ್ಪನು ಪಾಠಶಾಲೆಯ ಅಭಿವೃದ್ಧಿಗೋಸುಗ ಸೂಡಿ ಗ್ರಾಮದ ದಾನಶೂರನಾದ ಬಿದನೂರ ಸಿದ್ಧಪ್ಪನಿಂದ ಹನ್ನೆರಡು ಎಕರೆ ಭೂಮಿಯನ್ನು ದಾನವಾಗಿ ಬರೆಯಿಸಿ ಸ್ವಾಮಿಗಳಿಗೆ ಒಪ್ಪಿಸಿದನು. ಭಕ್ತರ ನೆರವಿನಿಂದ ಪಾಠಶಾಲೆ ಬೆಳೆಯುತ್ತದೆ. ಭಕ್ತರಲ್ಲಿ ಧಾರ್ಮಿಕ ಭಾವನೆ ಬೆಳೆಯುವ ಕಾರ್ಯಮಾಡುತ್ತ ಸ್ವಾಮಿಗಳು ಪ್ರತಿ ದಿನ ತತ್ವಬೋಧೆ ಮಾಡುವರು.

ಅಂಗಡಿಯ ಚಂಗಳಮ್ಮನೆಂಬ ವೃದ್ಧಭಕ್ತಳು ಸ್ವಾಮಿಗಳಿಗೆ ವಂದಿಸಿ, ನನ್ನಪ್ಪಾ ನಿನಗೆ ಸೊಗಸನ್ನುಂಟು ಮಾಡುವ ಪಿತೃಜನರು ಮಠದೊಳಗಿಲ್ಲ. ನಾನೇ ಮಠದಲ್ಲಿದ್ದು ಸೊಗಸಿನಿಂದ ಉಪಚರಿಸುವೆನೆಂದು ಬೇಡಿಕೊಳ್ಳಲು, ಅಮ್ಮಾ! ಚರಪದ ಹೊಂದಿದವರಿಗೆ ಪಿತೃಜನರ ಸಂಬಂಧವಿಲ್ಲ. ನೀನು ತಾಯಾಗಿ ಉಪಚರಿಸಿದರೆ ನಮಗೆ ಕೊರತೆಯೇನುಂಟು; ಮಠದಲ್ಲಿರೆಂದು ಸ್ವಾಮಿಗಳು ಹೇಳುವರು. ಚಂಗಳಮ್ಮನು ಪರಮಾನಂದ ಪರವಶಳಾಗಿ ಆಗಳೇ ಮಠಕ್ಕೆ ಬಂದು ಶಿವಯೋಗಿಯ ಸೇವಾ ಭಾಗ್ಯದಲ್ಲಿ ಮನೆಯನ್ನು ಮರೆತು, ಶಿಶುರೂಪ ಶಿವನನ್ನು ಸಲಹಿದ ಬಿಜ್ಜಮಹಾದೇವಿಯಂತೆ, ಶಿವಯೋಗಿ ಶಿಶುವನ್ನು ಅಕ್ಕರೆಯಿಂದ ಉಪಚರಿಸುತ್ತ ಸಂತಸಗಡಲಲ್ಲಿ ಈಸುತ್ತಿದ್ದಳು. ಸದ್ಗುಣಶೀಲೆಯಾದ ಚಂಗಳಮ್ಮನ ಮುಂದೆ ಸ್ವಾಮಿಗಳು ಬಾಲಲೀಲೆ ನಟಿಸುತ್ತ ಆನಂದ ಶರಧಿಯೊಳಗೆ ಆ ತಾಯಿಯನ್ನು ಮುಳುಗೇಳಿಸಿದರು. ಸೇವೆಮಾಡಿ ಪಾವನಳಾಗಿ ಚಂಗಳಮ್ಮ ಲಿಂಗೈಕ್ಯಳಾಗಲು ಸ್ವಾಮಿಗಳು ಅವಳ ಸಮಾಧಿಯನ್ನು ಮಠದ ಹೊಲದಲ್ಲಿ ಮಾಡಿಸಿದರು. ೧೦—೨೪

ಗುರುಶಾಂತ ಸ್ವಾಮಿಗಳು ಶಲವಡಿಯ ಭಕ್ತರೊಡಗೂಡಿ ಅಥಣಿಗೆ ಆಗಮಿಸಿ ಗಚ್ಚಿನಮಠದ ಪುಣ್ಯವೇ ಮೈದಳೆದಂತಿದ್ದ ಮುರುಘೇಂದ್ರ ಶಿವಯೋಗಿಗಳ ದರ್ಶನ ಮಾಡಿಕೊಂಡು ಸಾಷ್ಟಾಂಗವೆರಗುವರು. ಈ ಸ್ಥಾನಕ್ಕೆ ದಯಮಾಡಿಸಿ ದರ್ಶನವಿತ್ತು ನನ್ನನ್ನು ಧನ್ಯನನ್ನಾಗಿ ಮಾಡಿದಿರೆಂದು ಮುರುಘೇಂದ್ರ ಶಿವಯೋಗಿಗಳು ಕೈನೀಡಿ ಮೇಲೆತ್ತಿ, ಮಠದೊಳಗೆ ಬನ್ನಿರಿ ಶಿವಪೂಜೆ ಮಾಡಿರೆಂದು ಹೇಳಿದರು. ಶಿವ

ಸ್ವರೂಪರಾದ ತಮ್ಮ ದರ್ಶನವಾದ ಬಳಿಕ ಲಿಂಗಾರ್ಚನಾದಿಗಳು ತಮ್ಮ ಪಾದದಲ್ಲಿ ಅಡಗಿರುವವೆಂದು ಗುರುಶಾಂತ ಸ್ವಾಮಿಗಳು ನಿವೇದಿಸುವರು. ಒಂದೆರಡು ದಿನ ವಿದ್ದು ಭಕ್ತರಿಂದ ಗಣಾರಾಧನೆ ಮಾಡಿಸಿ ತಮ್ಮೂರಿಗೆ ಹೊರಟ ಗುರುಶಾಂತ ಸ್ವಾಮಿಗಳಿಗೆ ಶಿವಯೋಗಿಗಳು ನೂರೆಂಟರ ರುದ್ರಾಕ್ಷಿಮಾಲೆಯನ್ನು ಆಶೀರ್ವದಿಸಿ, ಮೇಲಿಂದ ಮೇಲೆ ದಯಮಾಡಿಸಿ ದರ್ಶನವೀಯಬೇಕೆಂದು ಬೀಳ್ಕೊಡುವರು. ಆ ಮಾಲೆ ಈಗಲೂ ಶಲವಡಿಯ ಮಠದಲ್ಲಿದೆ. ೨೫—೨೯

ಮತ್ತೊಮ್ಮೆ ಭಕ್ತೋತ್ತಮರೊಡನೆ ಗುರುಶಾಂತಸ್ವಾಮಿಗಳು ಸಂಗಮ ಕ್ಷೇತ್ರಕ್ಕೆ ದಯಮಾಡಿಸಿ, ಕೆಲ ದಿನ ಅಲ್ಲಿ ಲಿಂಗಪೂಜಾನಂದದಲ್ಲಿದ್ದು, ಗಣತೃಪ್ತಿ ಮಾಡಿಸಿ ಶಲವಡಿಗೆ ಬಂದರು. ಅಲ್ಲಿ ಭಕ್ತರಿಗೆ ಬೋಧಿಸುತ್ತ ಲಿಂಗಾಂಗ ಯೋಗ ಪರರಾಗಿದ್ದು, ಆಶ್ರಿತರಿಗೆ ಇಷ್ಟಾರ್ಥಕೊಡುವ ದೇವತರುವಾಗಿದ್ದರು. ಮತ್ತೊಮ್ಮೆ ಗುರುಶಾಂತ ಸ್ವಾಮಿಗಳು ಅರಭಾವಿಗೆ ಆಗಮಿಸಿ ಮಹಾಂತಶಿವಯೋಗಿಗಳ ದರ್ಶನಾಶೀರ್ವಾದ ಪಡೆದು ಬರುವರು. ಈ ರೀತಿ ಪೂಜ್ಯರ ನೆಲೆಗಳಿಗೆ ತೆರಳುತ್ತ ದರ್ಶನಾಶೀರ್ವಾದ ಪಡೆಯುವ ಗುರುಶಾಂತ ಸ್ವಾಮಿಗಳ ಭಕ್ತಿಯೇ ಭಕ್ತರಿಗೆ ಭಕ್ತಿಯನ್ನು ಕಲಿಸಿತು. ಯಾವ ಶಿವಯೋಗಿ ತನ್ನ ಮಹಿಮೆಯಿಂದ ನೀರಲ ಗಿಡದೊಳಗೆ ಅಕಾಲದಲ್ಲಿ ಹಣ್ಣುಗಳನ್ನು ಹುಟ್ಟಿಸಿ ತನ್ನ ಪಾದವನ್ನಾಶ್ರಯಿಸಿದ ಚರಮೂರ್ತಿಗಳಿಗಿತ್ತನೋ ಆ ಸಿದ್ಧಲಿಂಗನ ಪಾದಪದ್ಮ ನುತಿಸುವ ಆನಂದವು ನಮಗೆ ದೊರೆಯಲಿ.
೩೦—೩೫

ಹತ್ತನೆಯ ಸಂಧಿ

ಶಿವಸ್ವರೂಪರೂ ಜಂಗಮಪುಂಗವರೂ ಆದ ಗುರುಶಾಂತ ಶಿವಯೋಗಿಗಳು ಭಕ್ತರಿಗೊಲಿದು ನಿತ್ಯವೂ ಲಿಂಗಾಂಗಯೋಗದ ತತ್ವವನ್ನು ಮನಂಬುಗುನಂತೆ ಬೋಧಿಸುತ್ತಿದ್ದರು.

ಒಂದು ಶುಭದಿವಸ ಕೊಪ್ಪಳದಲ್ಲಿರುವ ಭಕ್ತಿಸಂಪನ್ನರಾದ ಅಗಡಿಯ ಶಾಂತಮ್ಮ ಸಂಗಪ್ಪರೆಂಬ ಸತಿಪತಿಗಳು ಪುತ್ರಾಪೇಕ್ಷೆಯಿಂದ ಶಲವಡಿಗೆ ಬರಲು, ಗುರುಶಾಂತ ಶಿವಯೋಗಿಗಳು ನಿಮಗೆ ಶಿವನು ಶಿಶುವನ್ನು ಕರುಣಿಸುವನೆಂದು ಹಣ್ಣುಗಳನ್ನು ಆಶೀರ್ವದಿಸುವರು. ಸತಿಪತಿಗಳು ಸಂತುಷ್ಟರಾಗಿ ತಮ್ಮೂರಿಗೆ ಬರಲು, ಕೆಲದಿನಗಳಲ್ಲಿ ಶಾಂತಮ್ಮನು ಗರ್ಭಧರಿಸಿ ಗಂಡುಮಗುವನ್ನು ಹಡೆಯುವಳು. ಶಿಶುವಿಗೆ ಗುರುಶಾಂತನೆಂದು ಹೆಸರಿಡುವರು. ದಂಪತಿಗಳು ಶಲವಡಿಗೆ ಬಂದು ಮಗನ ಜವಳ ತೆಗೆಸಿ ಗಣತೃಪ್ತಿಪಡಿಸಿ, ಹನ್ನೆರಡು ತೊಲೆಯ ಚಿನ್ನದ ಕರಡಿಗೆಯನ್ನು ಶಿವಯೋಗಿ

ಗಳಿಗೆ ಸಲ್ಲಿಸಿದರು. ಶಿವಯೋಗಿಗಳು ಅವರ ಭಕ್ತಿಭಾವಕ್ಕೆ ಮೆಚ್ಚಿ, ಶಿವನು ನಿಮಗೆ ನಿರಂತರ ಕಲ್ಯಾಣ ಮಾಡಲೆಂದು ಆಶೀರ್ವದಿಸಿ ಕಳುಹಲು, ಶಿವಯೋಗಿಗಳ ಧ್ಯಾನ ಮಾಡುತ್ತ ದಂಪತಿಗಳು ಕೊಪ್ಪಳಕ್ಕೆ ತೆರಳಿದರು. ೧—೯

ಬಹುದಿನಗಳಿಂದ ಗುರುಸೇವೆಯಲ್ಲಿದ್ದ ತೋಟಯ್ಯನಿಗೆ ದಾಂಪತ್ಯ ಧರ್ಮದ ಫಲವೆನಿಸಿದ ಸಂತಾನ ವಿಲ್ಲದ್ದಕ್ಕೆ ಕಳವಳವಾಗಿ, ಸದ್ಗುರುವೇ ! ನನಗೆ ಕುವರನನ್ನು ಕರುಣಿಸಬೇಕೆಂದು ಕೈಮುಗಿಯಲು, ಗುರುವರನು ನಸುನಕ್ಕು ನಿನಗೆ ಮೂರು ಹೆಣ್ಣುಗಳೇ ಹುಟ್ಟುವವು. ಶಿವನ ಇಚ್ಛೆಯೇ ಹಾಗಿದೆ. ಪಡೆದು ಸುಖಿಯಾಗೆಂದು ತಿಳಿಸುವರು. ತೋಟಯ್ಯನಿಗೆ ಕ್ರಮವಾಗಿ ಮೂರು ಹೆಣ್ಣುಮಕ್ಕಳೇ ಹುಟ್ಟಲು ಪುರದವರು ಆಶ್ಚರ್ಯಪಟ್ಟು ಮಹಾತ್ಮರ ಭವಿಷ್ಯ ಸುಳ್ಳಾಗದೆಂದು ಮನಗಂಡರು. ೧೦—೧೨

ನವಿಲುಗುಂದ ಪ್ರಸಿದ್ಧ ಜಂಪಣ್ಣಶೆಟ್ಟಿಯು ಸುಗುಣಿಯಾದ ಗಂಗಮ್ಮನೆಂಬ ಸತಿಯೊಡನೆ ಶಿಲವಡಿಗೆ ಬಂದು ಶಾಂತಿನಿಧಿಯೆನಿಸಿರ್ದ ಗುರುಶಾಂತಸ್ವಾಮಿಗಳಿಗೆ ಸಾಷ್ಟಾಂಗವೆರಗಿ, ಮಹಿಮರೇ ! ನಮ್ಮ ಮನೆತನ ಇಲ್ಲಿಯವರೆಗೆ ಪುತ್ರಸಂತಾನ ಪಡೆದಿಲ್ಲ; ಹರಸಬೇಕೆಂದು ಪ್ರಾರ್ಥಿಸಲು, ಶೆಟ್ಟರೇ ! ಚಿಂತಿಸಬೇಡಿರಿ. ಒಂದು ವರ್ಷದೊಳಗೆ ಶಿವನು ಕುವರನನ್ನು ಕರುಣಿಸುವನು. ಶಿವಧ್ಯಾನ ಮಾಡಬೇಕೆಂದು ಸ್ವಾಮಿಗಳು ಫಲಗಳನ್ನು ಆಶೀರ್ವದಿಸಲು ಗಂಗಮ್ಮನಿಗೆ ಆಗಳೇ ಪುತ್ರನನ್ನು ಪಡೆದಂತೆ ಸಂತೋಷವಾಯಿತು. ದಂಪತಿಗಳು ಸ್ವಾಮಿಗಳಿಗೆ ವಂದಿಸಿ ನಿಜಪುರಕ್ಕೆ ಬಂದರು. ಒಂದು ವರ್ಷ ತುಂಬುವುದರೊಳಗೆ ಗಂಗಾಂಬಿಕೆಯು ಪುಣ್ಯಮಯ ಗರ್ಭಾಂಬುಧಿಯಿಂದ ಸುತಚಂದ್ರನು ಉದಿಸಿದನು. ದಂಪತಿಗಳ ನೇತ್ರಕಮಲಗಳು ಸುಖಾಶ್ರುಮಧುವನ್ನು ತುಂಬಿಕೊಂಡು ವಿಕಸಿತವಾದವು. ಗುರುವಿನಿಂದ ಅರ್ಭಕನಿಗೆ ಲಿಂಗಕಟ್ಟಿಸಿ, ತೊಟ್ಟಿಲೊಳಿರಿಸುವ ಕಾರ್ಯನಡೆಸಿ, ಶಿವಭಕ್ತ ಸತಿಯರಿಂದ ಗುರುಶಾಂತನೆಂದು ಹೆಸರಿಡಿಸಿದರು. ಈ ರೀತಿ ವಂಶವಲ್ಲರಿಯು ಕುಸುಮಿತವಾಗಿ ಶೋಭಿಸುತ್ತಿರುವದನ್ನು ನೋಡುತ್ತಿರುವ ಗಂಗಾಂಬೆಯು ಈಗಲೂ ಗುರುಶಾಂತ ಸ್ವಾಮಿಗಳ ಗದ್ದುಗೆಯಲ್ಲಿ ಭಕ್ತಿಯನ್ನಿರಿಸಿ ನಿಶ್ಚಿಂತಳಾಗಿರುವಳು. ಎರಡುವರೆ ಸಾವಿರ ರೂಪಾಯಿಕೊಟ್ಟು ಜಯಪುರದ ಶಿಲ್ಪಿಗಳಿಂದ ಅಮೃತಶಿಲೆಯ ಗುರುಗಳ ಮೂರ್ತಿಮಾಡಿಸಿ ಅವರ ಗದ್ದುಗೆಯಲ್ಲಿ ಇರಿಸಿರುವಳು. ಪೂಜಿಸುವವರಿಗೆ ಕಲ್ಪವೃಕ್ಷವೆನಿಸಿದ ಈ ಭವ್ಯ ಶಿಲಾಮೂರ್ತಿಯನ್ನು ಕಂಡವರು ಗಂಗಮ್ಮನೇ ಧನ್ಯಳೆಂದು ಬಣ್ಣಿಸುವರು. ೧೩—೨೧

ಶಿಲವಡಿಯೊಳಿರುವ ಹೊಸಮಠದ ವೀರಮ್ಮನಿಗೆ ವೃದ್ಧಾಪ್ಯಕಾಲದಲ್ಲಿ ಬಡತನವಲ್ಲದೆ ತೊನ್ನರೋಗವಂಟಿ ಚಿಂತಾಕ್ರಾಂತಳಾದಳು. ಗುರುಪಾದಹೊಂದಿ, ಶಿವಯೋಗಿ

ವರ್ಯರೇ ! ದುಃಖಬೆಂಕಿಯೊಳು ಬೇಯಲಾರೆ. ನಿನ್ನಪಾದದಲ್ಲಿ ಅಡಗಿಸಿಕೊಳ್ಳೆಂದು ಪರಿತಪಿಸುವಳು. ಮುಪ್ಪಿನ ತಾಯಿಯನ್ನು ನೋಡಿ ಗುರುವರನ ಹೃದಯ ಕರಗಿ ತಾಯೆ, ಶಿವನ ಕೃಪೆಯಿಂದ ಹೇಯವಾದ ರುಜೆಯೊಡನೆ ಬಡತನವು ಬಯಲಾಗುವದು ಪ್ರತಿದಿನ ಮಠದ ಅಂಗಳ ಕಸಗೂಡಿಸುವ ಕಾಯಕ ಕೈಕೊಳ್ಳೆಂದು ತಿಳಿಸಿದರು. ನೆರೆನಂಬಿ ಕಸಗೂಡಿಸುತ್ತಿರಲು ಮೂರು ತಿಂಗಳಲ್ಲಿ ಮುದುಕಿಯ ರೋಗ ವಾಸಿಯಾಗಿ, ಸಂಸಾರದಲ್ಲಿ ಸಿರಿಬರುವ ಚಿಹ್ನ ತೋರಹತ್ತಿತು. ವೀರವ್ವನ ಕಾಯಕದ ಬಲದಿಂದ ಇಂದಿಗೂ ಹೊಸಮಠದವರು ಒಕ್ಕಲತನದಲ್ಲಿ ಮುಂದುವರಿದು, ಗುರುಸೇವೆ ಮಾಡಿಕೊಂಡು ಸುಖದಿಂದಿರುವರು. ೨೨—೨೭

ಮುಂಡರಗಿಯ ಲೀಲಾಮೂರ್ತಿಗಳಾದ ಅನ್ನದಾನ ಮಹಾಸ್ವಾಮಿಗಳು ಗುರುಶಾಂತಸ್ವಾಮಿಗಳ ದರ್ಶನಾಕಾಂಕ್ಷಿಗಳಾಗಿ, ತಾವು ಬರುವುದನ್ನು ಮೊದಲು ತಿಳಿಸದೆ ಶೆಲವಡಿಗೆ ಆಗಮಿಸಿ, ಗುರುಶಾಂತಪ್ಪ ಎಲ್ಲಿರುವನೆಂದು ಕೇಳಲು, ಸೇವಕನು ಶಿವಪೂಜಾ ಮಂದಿರದ ಕಡೆಗೆ ಬೆರಳು ಮಾಡುತ್ತಾನೆ. ಗುರುಶಾಂತಪ್ಪ! ಎಲ್ಲಿರುವೆ ಬಾಯೆಂದು ಹಾಡುತ್ತ ಬರುವ ಅನ್ನದಾನ ಸ್ವಾಮಿಗಳನ್ನು ಕಂಡಾಕ್ಷಣ, ಗುರುಶಾಂತ ಸ್ವಾಮಿಗಳು ತಮ್ಮ ಎಡಗೈಯಲ್ಲಿರುವ ಲಿಂಗ ಸಹಿತೆದ್ದು ಬಂದು ಸಾಷ್ಟಾಂಗವೆರಗಿ "ತಮ್ಮ ಪಾದವನ್ನು ಪೂಜಿಸುವ ಭಾಗ್ಯ ದೊರೆಯಿತೆಂದು ಹೇಳಿದರು." ಕೂಡಲೇ ಸ್ನಾನ ಶಿವಪೂಜೆ ಮಾಡಿಸಿ, ಭಕ್ತಿಗೀತೆಗಳ ಹಾಡುತ್ತ ಪಾದಪೂಜೆ ಮಾಡಿ ಪಾದೋದಕ ಪ್ರಸಾದ ಸ್ವೀಕರಿಸಿದರು. ಎರಡು ದಿನ ಭಕ್ತರೊಡಗೂಡಿ ಸೇವೆಮಾಡಿ, ಆಶೀರ್ವಾದ ಪಡೆದು ಬೀಳ್ಕೊಟ್ಟರು. ಗುರುಶಾಂತೇಶ್ವರನ ಜಂಗಮಭಕ್ತಿ ಇತರ ಸ್ವಾಮಿಗಳಿಲ್ಲರಿಗೆ ಸದಾ ಮಾರ್ಗದರ್ಶನವಾಗಿದೆಯೆಂದು ಊರವರು ಸ್ತುತಿಸಿದರು. ಗಂಡನು ಸತ್ತಿರುವದನ್ನು ತಿಳಿದು, ಬೆಂಕಿಗಾಹುತಿಯಾಗುವ ಹೆಂಡತಿಗೆ ಮುತ್ತೈದೆಯಾಗೆಂದು ಆಶೀರ್ವದಿಸಿ ಸತ್ತಗಂಡನ ಬದುಕಿಸಿದ ಸಿದ್ಧಲಿಂಗನ ನುತಿಸಿ ಬಾಗುವ ಭಾಗ್ಯ ನಮಗೆ ಸದಾ ಇರಲಿ. ೨೮—೩೬

ಹನ್ನೊಂದನೆಯ ಸಂಧಿ

ತಾವು ಸ್ವತಃ ಜಂಗಮರಾಗಿದ್ದರೂ ಭಕ್ತರಂತೆ ಜಂಗಮಸೇವೆಗೈಯುತ್ತ, ವೀರಶೈವ ಧರ್ಮದ ಭಕ್ತಿಮಾರ್ಗದ ಗುಟ್ಟನ್ನು ತಮ್ಮ ಆಚರಣೆಯಿಂದಲೇ ಶಿಷ್ಯವೃಂದಕ್ಕೆ ಬೋಧಿಸಿದ ಶ್ರೀ ಗುರುಶಾಂತೇಶ್ವರನ ಧ್ಯಾನವು ನಮ್ಮ ಹೃದಯದಲ್ಲಿ ನೆಲೆಗೊಳ್ಳಲಿ. ಹೊಸಹಳ್ಳಿ ಭಕ್ತರು ಬೂದಿಸ್ವಾಮಿ ಮಠದ ಸಿದ್ಧಲಿಂಗ ದೇಶಕನಿಗೆ ಗುರುಶಾಂತ ಸ್ವಾಮಿಗಳಿಂದ ಅಧಿಕಾರ ಕೊಡಿಸುವದನ್ನು ಗೊತ್ತುಮಾಡಿ, ಪೂಜ್ಯ

ಗುರುಶಾಂತ ಸ್ವಾಮಿಗಳನ್ನು ಸಂಭ್ರಮದಿಂದ ಕರೆದೊಯ್ದರು. ಆಗ ಚಿತ್ರದುರ್ಗದ ಜಯದೇವ ಜಗದ್ಗುರುಗಳ ನೇತೃತ್ವದಲ್ಲಿ ಸಿದ್ಧಲಿಂಗನಿಗೆ ಷಟ್‌ಸ್ಥಲ ಜ್ಞಾನಬೋಧೆ ಮಾಡಿ ಚರಪಟ್ಟಾಧಿಕಾರ ವಿತ್ತರು. ಮಠದೊಳಗೆ ಮಾಡಿದ ಪ್ರಸಾದವು ಬಂದಿರುವ ಜನಗಳಿಗೆ ಸಾಕಾಗದೆಂದು ಭಕ್ತರು ತಿಳಿದು ಗುರುಶಾಂತೇಶ್ವರಗೆ ನಿವೇದಿಸಲು, ತಮ್ಮ ಯೋಗದಂಡವನ್ನು ಪ್ರಸಾದ ರಾಶಿಯ ಮಧ್ಯದಲ್ಲಿ ನಟ್ಟು, ಎಡೆಮಾಡಿರಿ ಶಿವಪ್ರಸಾದ ಕೊರತೆಯಾಗದೆಂದು ತಿಳಿಸುವರು. ಪ್ರತ್ರಾವಳಿ ಕಡಿಮೆ ಬೀಳಲು, ಎದುರಿಗೆ ನಿಮ್ಮ ಮಡಿ ಬಟ್ಟೆಯನ್ನು ಹಾಸಿಕೊಂಡು ಅದರಲ್ಲಿ ಊಟ ಮಾಡಿರೆಂದು ಹೇಳುವರು. ಹತ್ತು ಸಾವಿರ ಜನರಿಗೆ ತೃಪ್ತಿಯಾಗುವದು. ನೀರಿನ ಕೊರತೆಯಾಗಲು ಗುರುಶಾಂತೇಶ್ವರರು ಮಠದ ಹಿಂದುಗಡೆಯ ಹಳ್ಳದಲ್ಲಿ ಒಂದುಕಡೆ ತಮ್ಮ ಪಾದವನ್ನಿಟ್ಟು ತಗ್ಗು ತೋಡಿಸಲು ಸೀನೀರು ಹೊರಚಿಮ್ಮಿ ಹೊನಲಾಗಿ ಹರಿಯುತ್ತದೆ. ಜಗದ್ಗುರುಗಳಿಂದ ಆಶೀರ್ವಾದ ಪಡೆದು, ಗುರುಶಾಂತೇಶ್ವರರು ನೂತನ ಚರಮೂರ್ತಿಗೂ, ಭಕ್ತರಿಗೂ ಆಶೀರ್ವದಿಸಿ ಶಿಲವಡಿಗೆ ಆಗಮಿಸುತ್ತಾರೆ. ೧—೯

ಒಮ್ಮೆ ಶಿಲವಡಿಯಲ್ಲಿ ಹರಣ ನೀಗುವ ಮಾರಿಕಾಬೇನೆ ಮನೆಮನೆಗೆ ಹಬ್ಬುತ್ತಿರಲು ಜನತತಿ ತಲ್ಲಣಿಸಿ, ಸ್ವಾಮಿಗಳಿಗೆ ಮೊರೆಯಿಡುತ್ತದೆ. ಇನ್ನು ಮುಂದೆ ಬೇನೆ ಯಾರಿಗೂ ಸೋಂಕುವದಿಲ್ಲ. ಶಿವನು ಕಾಪಾಡುವನೆಂದು ಸ್ವಾಮಿಗಳು ತಿಳಿಸಲು ಅಂದಿನಿಂದ ಬೇನೆ ಸುಳುವಿಲ್ಲದೆ ಮಾಯವಾಗುತ್ತದೆ. ಸ್ವಾಮಿಗಳ ದರ್ಶನಕ್ಕೆ ಅವರಾದಿಯ ಸಂಗನಬಸವ ಸ್ವಾಮಿಗಳು ಆಗಮಿಸಿದಾಗ, ಅವರ ಫಲಾಹಾರದ ಪದ್ಧತಿಯನ್ನು ಕಂಡು, ವೀರಶೈವರಿಗೆ ಫಲಾಹಾರದಿಂದ ಲಿಂಗಪ್ರಸಾದವಾಗುವದಿಲ್ಲ. ಆರು ಲಿಂಗಗಳಿಗೆ ಆರು ರುಚಿಗಳನ್ನು ಸಲ್ಲಿಸಬೇಕೆಂದು ಬೋಧಿಸಿ, ಅವರಿಗೆ ತಮ್ಮ ಮಠದಲ್ಲಿಯೇ ಶುಭದಿನದಲ್ಲಿ ಷಟ್‌ಸ್ಥಲ ಸದುಪದೇಶವೆಸಗಿ, ಪ್ರಸಾದಿಗಳನ್ನಾಗಿ ಮಾಡಿದರು. ಮೊದಲಿನಿಂದ ಅನ್ನದಕ್ಕದಿದ್ದ ಸಂಗನಬಸವಸ್ವಾಮಿಗಳಿಗೆ ಷಡ್ರುಚಿ ಪ್ರಸಾದ ಹಿತವಾಗಹತ್ತಲು ಗುರುಮಹಿಮೆಯನ್ನು ಕೊಂಡಾಡಿದರು. ಕೆಲದಿನಗಳ ನಂತರ ಸಂಗನಬಸವ ಸ್ವಾಮಿಗಳು ಗುರುಶಾಂತ ಸ್ವಾಮಿಗಳಿಗೆ ಬಿನ್ನಹ ಮಾಡಿ ಅವರಾದಿಗೆ ಬರಮಾಡಿಕೊಂಡು, ಉತ್ಸವ ಮಾಡಿಸಿ, ತಮ್ಮ ಉತ್ತರಾಧಿಕಾರಿಯಾದ ಶಿವಮೂರ್ತಿ ದೇಶಿಕರಿಗೆ ಅನುಗ್ರಹ ಕೊಡಿಸಿ ಗಣತೃಪ್ತಿ ಜರುಗಿಸಿದರು. ಗುರುಶಾಂತೇಶ್ವರರು ಸ್ವಾಮಿಗಳೀರ್ವರ ಬಯಕೆ ಪೂರೈಸಿ, ಆಶೀರ್ವದಿಸಿ ಶಿಲವಡಿಗೆ ದಯಮಾಡಿಸಿದರು.

೧೦—೧೮

ಮೂಲವ್ಯಾಧಿಯಿಂದ ಬಳಲುತ್ತಿರುವ ಶಿಲವಡಿಯ ದೊಡ್ಡಮನೆ ವೀರಪ್ಪನು ರೋಗಬಾಧೆ ಪರಿಹರಿಸಬೇಕೆಂದು ಗುರುಶಾಂತ ಸ್ವಾಮಿಗಳನ್ನು ಪ್ರಾರ್ಥಿಸಲು, ಶಿವ

ಕವಚ ಪಾರಾಯಣ ಮಾಡಿ ಪಾದೋದಕ ಪ್ರಸಾದಗಳನ್ನು ಸೇವಿಸಿದರೆ ಶೀಘ್ರವಾಗಿ ಗುಣವಾಗುವದೆಂದು ಗುರುಗಳು ತಿಳಿಸುತ್ತಾರೆ. ಹೇಳಿದಂತೆ ನಡೆಸಲು ವೀರಪ್ಪನ ರೋಗ ಕೆಲದಿನಗಳಲ್ಲಿ ವಾಸಿಯಾಗುತ್ತದೆ. ಈತನ ಮಗನಾದ ಶಾಂತಪ್ಪನಿಗೆ ವಿಷಮ ಜ್ವರವಂಟಿ ಕೊರಗಿಸುತ್ತಿರುವದನ್ನು ಕೇಳಿ, ಗುರುವರನು ತಾನೇ ಅವರ ಮನೆಗೆ ಆಗಮಿಸಿ ಭಸ್ಮಧರಿಸಿ, ಹಾಲುಕುಡಿಸಲು, ಗಳಿಗೆಯೊಂದರಲ್ಲಿ ಜ್ವರ ಇಳಿಯುತ್ತದೆ.

ಶಾನುಭೋಗರ ದೊಡ್ಡಮನೆ ಬಸವಪ್ಪನ ಮಗಳು ಪ್ರಸವವೇದನೆಯಿಂದ ಒಂಬತ್ತುದಿನ ನರಳುತ್ತಿರಲು, ಮನೆಯವರು ನೊಂದು ಅಬ್ಬಿಗೇರಿಯ ವೈದ್ಯಶ್ರೇಷ್ಠ ಶಂಕರಗೌಡರನ್ನು ಕರೆಯಿಸುತ್ತಾರೆ. ವೈದ್ಯರು ಪರೀಕ್ಷಿಸಿ ಹೊಟ್ಟೆಯಲ್ಲಿ ಶಿಶು ಸತ್ತಿದೆ. ಈ ತಾಯಿಯನ್ನು ಬದುಕಿಸಲು ಉಪಾಯವಿಲ್ಲವೆನ್ನುತ್ತಾರೆ. ಮನೆಯವರೆಲ್ಲ ದುಃಖಿಸುತ್ತ ಸಿದ್ಧಲಿಂಗಮ್ಮನಿಗೆ ಮರಣ ನಿಶ್ಚಿತ. ಗುರುದರ್ಶನ ಮಾಡಿಸಬೇಕೆಂದು ಸ್ವಾಮಿಗಳನ್ನು ಮನೆಗೆ ಕರೆತರುತ್ತಾರೆ. ಅಜ್ಜಾ ! ನನ್ನನ್ನು ಕೊಲ್ಲುವಿಯೋ ? ಕಾಯುವಿಯೋ ನೋಡೆಂದು ಸಿದ್ಧಲಿಂಗಮ್ಮ ಪಾದದಮೇಲೆ ಹಣೆಯಿಡಲು, ಸ್ವಾಮಿಗಳು ಅವಳ ಮಸ್ತಕದಲ್ಲಿ ಕರವಿಟ್ಟು ಮಗಳೇ ! ಚಿಂತಿಸಬೇಡ ಶಿವನು ಕಾಯುವನು. ಎಂದು ಸಮಾಧಾನ ಹೇಳಿ, ಶಾನುಭೋಗರೇ, ಟೊಂಗೆ ಹೋಗಲಿ ! ಬೊಡ್ಡೆ ಉಳಿಯಲಿ; ಬನ್ನಿರೆಂದು ಮಠಕ್ಕೆ ಕರೆತಂದು ಸ್ನಾನ ಶಿವಪೂಜೆ ತೀರಿಸಿ, ತೀರ್ಥಪ್ರಸಾದ ಕೊಟ್ಟು ಕಳಿಸುತ್ತಾರೆ. ಮರಣೋನ್ಮುಖಳಾದ ಮಗಳನ್ನು ಎಚ್ಚರಿಸಿ ಶಾನುಭೋಗರು ಅವಳಿಗೆ ಪಾದೋದಕ ಕುಡಿಸಿದಾಕ್ಷಣ ಸತ್ತಶಿಶು ಹೊರಬೀಳುತ್ತದೆ. ಪ್ರಸಾದದ ಎರಡು ತುತ್ತು ಉಂಡಾಕ್ಷಣ ಹೊಟ್ಟೆಯಲ್ಲಿ ಸುತ್ತಕೊಂಡ ಮಾಂಸ ಹೊರಬೀಳುತ್ತದೆ. ನಮ್ಮ ಮಗಳು ಸತ್ತು ಹುಟ್ಟಿದಳೆಂದು ಮನೆಯವರು ಹಿಗ್ಗುವಷ್ಟರಲ್ಲಿ. ಸಿದ್ಧಲಿಂಗಮ್ಮನಿಗೆ ತಂಪಾಗಿ ಬಾಯಿ ಸೊಟ್ಟಾಗಲು, ಸ್ವಾಮಿಗಳು ಮನೆಗೆ ಬಂದು ವಿಭೂತಿ ಧರಿಸಿ ನೆಟ್ಟಗೆ ಮಾಡುತ್ತಾರೆ

ಕೆಲದಿನಗಳಲ್ಲಿ ಶಕ್ತಿವಂತಳಾದ ಸಿದ್ಧಲಿಂಗಮ್ಮನೊಡನೆ ತಾಯಿತಂದೆಗಳು ಮಠಕ್ಕೆ ಬಂದು, ಮಂಗಳಾರತಿ ಬೆಳಗಿ, ಸ್ವಾಮಿಗಳ ಆಶೀರ್ವಾದ ಪಡೆದು ಹೋಗುತ್ತಾರೆ. ಈ ಸುದ್ದಿಯನ್ನು ಅಬ್ಬಿಗೇರಿ ವೈದ್ಯರಾದ ಶಂಕರಗೌಡರು ಕೇಳಿ, ಮಠಕ್ಕೆ ಬಂದು ಪಶ್ಚಾತ್ತಾಪದಿಂದ ಕರಜೋಡಿಸಿ, ಮಹಿಮರೇ ! ಸಿದ್ಧಲಿಂಗಮ್ಮನನ್ನು ಬದುಕಿಸುವ ಶಕ್ತಿ ತಮ್ಮಲ್ಲಿಲ್ಲವೆಂದು ಜನರ ಮುಂದೆ ನಿಂದಿಸಿ ದುರಾತ್ಮನಾದೆ. ಭವರೋಗ ವೈದ್ಯರಾದ ತಮಗೆ ಅಸಾಧ್ಯವಾವುದೂ ಇಲ್ಲವೆಂಬುದನ್ನು ತಿಳಿಯದಾದೆ. ಕ್ಷಮಿಸಿ ನನ್ನ ದುರಹಂಕಾರ ಕಳೆಯಬೇಕೆಂದು ಪ್ರಾರ್ಥಿಸಿದರು. ಶಿವನೇ ಸಿದ್ಧಲಿಂಗಮ್ಮನನ್ನು ಬದುಕಿಸಿದನು. ನನ್ನಲ್ಲೇನಿದೆ ? ನನಗೆ ನಿಂದಾಸ್ತುತಿಗಳು ಸಮಾನವಾಗಿವೆ.

ಇಂದಿನಿಂದ ನೀನು ನಿರಹಂಕಾರಿಯಾಗೆಂದು ಸ್ವಾಮಿಗಳು ಹೇಳುತ್ತಾರೆ. ಶಂಕರ ಗೌಡನು ದುರಹಂಕಾರ ಕಳಕೊಂಡು, ಭಕ್ತಿಭಾವ ತಾಳಿ, ಗಣತೃಪ್ತಿ ಮಾಡಿ ಆಶೀರ್ವಾದ ಪಡೆದು ಹೋಗುತ್ತಾನೆ.

ಶಾನುಭೋಗರ ಸಣ್ಣಮನೆ ವೀರಪ್ಪನು ಯಾವ ಕುತ್ತುಬಂದರೂ ಗುರುಶಾಂತ ಗುರುವು ಅದನ್ನು ಕತ್ತರಿಸುವನು ಎಂದು ನೆರೆ ನಂಬಿದ್ದನು. ಒಮ್ಮೆ ಅವನ ಮನೆಯವರೆಲ್ಲ ರೋಗದಿಂದ ಬಳಲುತ್ತಿರಲು ವೈದ್ಯರನ್ನು ಕರೆಯಿಸದೆ, ಗುರುದೇವನನ್ನು ಕರೆತಂದು ತೋರಿಸುತ್ತಾನೆ. ಗುರುವರನು ಎಲ್ಲರ ಹಣೆಯಲ್ಲಿ ಭಸ್ಮಧರಿಸಿ ತೀರ್ಥ ಕುಡಿಸಲು ೨ ದಿನಗಳಲ್ಲಿ ಎಲ್ಲರೂ ರೋಗಕಳೆದುಕೊಂಡು, ಸೊಗಸು ಪಡೆಯುತ್ತಾರೆ. ಭವರೋಗ ವೈದ್ಯನಿಗೆ ಸಾಮಾನ್ಯ ರುಜೆಗಳನ್ನು ಕಳೆಯುವದು ಅತಿ ಸುಲಭವೆಂದು ಪಂಡಿತರು ಹೊಗಳುತ್ತಾರೆ. ಯಾವ ಚರಚಕ್ರವರ್ತಿಯ ಶೇಷಪ್ರಸಾದವನ್ನು ಕಲ್ಲ ಬಸವನು ಉಲ್ಲಾಸದಿಂದ ಭುಂಜಿಸಿ ಧನ್ಯನೆನಿಸಿದನೋ, ಎಲ್ಲರನ್ನು ಪೊರೆಯುವ ಎರಡನೆಯ ಅಲ್ಲಮನಾಗಿರುವ ಆ ಸಿದ್ಧಲಿಂಗನ ಮೆಲ್ಲಡಿಗಳನ್ನು ಸ್ಮರಿಸುವ ಸುಖ ನಮ್ಮ ಜನ್ಮದೊಳಗಿರಲಿ. ೪೧—೪೫

ಹನ್ನೆರಡನೆಯ ಸಂಧಿ

ಗುರುಶಾಂತ ಶಿವಯೋಗಿಗಳು ಹರಿಹರಮಠಕ್ಕೆ ದಯಮಾಡಿಸಿ, ಭಕ್ತರಿಗೆ ಸದ್ಬೋಧೆ ನೀಡುತ್ತಿರಲು, ಸುತ್ತಲಿನ ಹಳ್ಳಿಯ ಜನಗಳು ಅವರ ಪಾದದರ್ಶನಕ್ಕಾಗಿ ಹೆಚ್ಚಾಗಿ ಬರಹತ್ತಿದರು. ಇತ್ತ ಶಿಲವಡಿಯಲ್ಲಿ ಗುರುಪಾದವನ್ನೇ ನಂಬಿದ್ದ ಸವದತ್ತಿ ರುದ್ರಪ್ಪನಿಗೆ ಪ್ಲೇಗರೋಗವಂಟಿ, ನಾಲ್ಕೈದು ಗಂಟಿದ್ದು ವ್ಯಥೆಪಡುವಾಗ, ಈತನಿಗೆ ಮರಣ ಸನ್ನಿಹಿತವಾಯಿತು. ಶಿವಯೋಗಿಗಳು ಆಗಮಿಸಿ ಕೃಪೆಗೈದರೆ ಬದುಕ ಬಹುದೆಂದು ವಿಚಾರಿಸಿ, ಜನರು ರುದ್ರಪ್ಪನ ಮಗನ ಹೆಸರಿನಿಂದ ತಾರು ಮಾಡುವರು. ತಂತಿ ಮುಟ್ಟಿದಾಕ್ಷಣ ಶಿವಯೋಗಿಗಳು ಹರಿಹರದಿಂದ ಹೊರಟರು. ಭಕ್ತರೇ ಘನವೆಂದು ನಂಬಿದ ಮಹಾತ್ಮರಿಗೆ ಇದು ಸಹಜವಲ್ಲವೆ? ಶಿಲವಡಿಗೆ ಆಗಮಿಸಿ ರುದ್ರಪ್ಪನ ಮನೆಗೆ ಬಂದು "ಶಿವನು ರೋಗವನ್ನು ಪರಿಹರಿಸುವನು. ಚಿಂತಿಸಲಾಗದು"ಎಂದು ಧೈರ್ಯಹೇಳಿ ಶಿವಯೋಗಿಗಳು ಮಠಕ್ಕೆ ಬಂದು ಶಿವಪೂಜೆ ತೀರಿಸಿ ತೀರ್ಥಪ್ರಸಾದ ಕಳಿಸಲು, ಅವುಗಳನ್ನು ಸೇವಿಸಿದ ರುದ್ರಪ್ಪನ ಗಡ್ಡೆಗಳು ಆ ರಾತ್ರಿಯೇ ಒಡೆದವು. ಒಂದೆರಡು ದಿನಗಳಲ್ಲಿಯೇ ರುದ್ರಪ್ಪನು ಮಠಕ್ಕೆ ಬಂದು, ಮಹಾತ್ಮರೇ! ತಮ್ಮ ಕೃಪೆಯಿಂದ ಪುನರುದ್ಭವಿಸಿದೆನೆಂದು ಹೊಗಳಿದನು. ೧—೯

ಪೋಲೀಸಗೌಡರ ವಿರೂಪಾಕ್ಷಪ್ಪನಿಗೆ ರೋಗವಂಟಿ,ಬೆಳೆಯುತ್ತ ಬಳಲಿಸುವದನ್ನು ಕಂಡು, ಕೆಲವು ಹಿರಿಯರು ಗುರುಪುಂಗವನು ವಿಭೂತಿ ಧರಿಸಿದರೆ ಗುಣವಾಗುವ

ದೆಂದು ಯೋಚಿಸಿ, ಮಠಕ್ಕೆ ಬಂದು ಗುರುವರನಿಗೆ ವಂದಿಸುವಾಗ, ನಿಮ್ಮ ಗೌಡನು ಶಿವೈಕ್ಯನಾದನೆಂದು ಶಿವಯೋಗಿಗಳು ತಿಳಿಸಿ ಸುಮ್ಮನಿರಲು, ಹಿರಿಯರು ಮನೆಗೆ ಬಂದು ಗೌಡನ ಮೃತದೇಹವನ್ನು ನೋಡಿ ಅಂತ್ಯವಿಧಿ ನೆರವೇರಿಸುತ್ತಾರೆ. ಬಳಿಕ ಗೌಡನ ಹೆಂಡತಿಯಾದ ವೀರಮ್ಮನು ದುಃಖಿಸುತ್ತ, ಎಳೆಮಗುವನ್ನು ಎತ್ತಿಕೊಂಡು ಮಠಕ್ಕೆ ಬಂದು ಗುರುಗಳಿಗೆ ವಂದಿಸಿ, ಮನೆತನದ ಕಷ್ಟಗಳನ್ನು ತೋಡಿಕೊಂಡಾಗ ತಾಯೇ! ದುಃಖಿಸಬೇಡ, ಶಿವನು ಕಾಯದಿರುವನೇ? ನಿನ್ನ ಮಗನು ಆಯುರಾರೋಗ್ಯ ಪಡೆದು ಮನೆತನಕ್ಕೆ ಕೀರ್ತಿ ತರುವನೆಂದು ಆಶೀರ್ವದಿಸಲು, ವೀರಮ್ಮನಿಗೆ ಸಮಾಧಾನವಾಗುತ್ತದೆ. ೧೦—೧೫

ಶಾನುಭೋಗರ ನಡುಮನೆ ವೀರಪ್ಪನ ತಾಯಿಯಾದ ಲಿಂಗಮ್ಮನು ಬಹುದಿನಗಳಿಂದ ರೋಗಪೀಡಿತಳಾಗಿದ್ದಳು. ಸ್ವಾಮಿಗಳ ಪ್ರಸಾದ ತಂದುಕೊಟ್ಟರೆ ಗುಣವಾಗಬಹುದೆಂದು, ರುದ್ರಪ್ಪನು ಸನ್ನಿಧಿಗೆ ಬಂದು ವಂದಿಸುವಾಗ, ನಿಮ್ಮ ತಾಯಿ ಶಿವನ ಮಗಳಾದಳೆಂದು ಸ್ವಾಮಿಗಳು ತಿಳಿಸುವರು. ಸಖೇದಾಶ್ಚರ್ಯಗಳೊಡನೆ ರುದ್ರಪ್ಪನು ಮನೆಗೆ ಬಂದು ನೋಡುವಷ್ಟರಲ್ಲಿ ಲಿಂಗಮ್ಮನು ಲಿಂಗೈಕ್ಯಳಾಗಿರಲು, ಸಮಾಧಿಕಾರ್ಯ ಮುಗಿಸುವರು. ಹಸಬಿಯವರ ಶ್ರೀಶೈಲಪ್ಪನಿಗೆ ರೋಗದಿಂದ ಬಾಯಿ ಬಂದಾಗಲು ಬಸವಲಿಂಗಪ್ಪನು ಮಠಕ್ಕೆ ಬಂದು ವಂದಿಸಿ, ದುಃಸ್ಥಿತಿಯನ್ನರುಹಿ, ಗುಣಪಡಿಸಬೇಕೆಂದು ಬೇಡಿಕೊಳ್ಳಲು, ರೋಗಿಯು ಐದು ದಿನಕ್ಕೆ ಶಿವಾಧೀನನಾಗುವನು. ಸುಮ್ಮನೆ ಮನೆಗೆ ಹೋಗಿರೆಂದು ಸ್ವಾಮಿಗಳು ತಿಳಿಸಿದರು.

೧೬—೨೦

ಮಣಕವಾಡದ ಭಕ್ತರೈತಂದು ಗುರುಶಾಂತೇಶನಿಗೆ ಸಾಷ್ಟಾಂಗವೆರಗಿ, ನಮ್ಮೂರ ಅನ್ನದಾನಿಮಠದ ದೇಶಿಕನಾದ ಬಸವರಾಜನಿಗೆ ಚರಾಧಿಕಾರ ತಮ್ಮ ಹಸ್ತದಿಂದ ನೆರವೇರಿಸಬೇಕೆಂದು ಬೇಡಿಕೊಂಡರು. ಗುರುಶಾಂತೇಶನು ಮಣಕವಾಡಕ್ಕೆ ದಯಮಾಡಿಸಿ ಸಕಲ ಭಕ್ತಮಾಹೇಶ್ವರರ ಸಮಕ್ಷಮ ಸಂಭ್ರಮದಿಂದ ಬಸವರಾಜನಿಗೆ ಚರಪಟ್ಟಾಧಿಕಾರ ನೀಡಿದರು. ನೂತನ ಸ್ವಾಮಿಗಳಲ್ಲಿ ಭಕ್ತಿವಿಶ್ವಾಸವಿಟ್ಟು ನಡೆದುಕೊಳ್ಳಿರಿ ನಿಮ್ಮ ಗ್ರಾಮದ ಸಿರಿ ಹೆಚ್ಚುವದಲ್ಲದೆ ಅನ್ನದಾನಿ ಸ್ವಾಮಿಗಳ ಕೃಪೆ ಯಾಗುವದೆಂದು ಆ ಊರವರಿಗೆ ತಿಳಿಸಿ, ಶಿಲವಡಿಗೆ ದಯಮಾಡಿಸಿದರು.

ನಂದಿವೇರಿ ಮತ್ತು ಕಪ್ಪತಗುಡ್ಡ ಮಠಗಳ ದೇಶಿಕನಾದ ಶಂಕರದೇವನಿಗೆ ಜಂಗಮಪಟ್ಟ ಕೊಡಬೇಕೆಂದು ಸದ್ಭಕ್ತರು ಶಿಲವಡಿಗೆ ಬಂದು ಗುರುಶಾಂತೇಶನಿಗೆ ಬಿನ್ನವಿಸಿಕೊಂಡರು. ಸಂಭ್ರಮದೊಡನೆ ನಂದಿವೇರಿ ಕಪ್ಪತ ಗುಡ್ಡದ ಮಠಕ್ಕೆ ಕರೆದುಕೊಂಡು ಬಂದರು. ಚಿತ್ರದುರ್ಗ ಜಯದೇವ ಜಗದ್ಗುರುಗಳ ನೇತೃತ್ವದಲ್ಲಿ ಶಂಕರದೇಶಿಕನಿಗೆ ಚಿದುಪದೇಶವಿತ್ತು ಚರಪಟ್ಟಾಧಿಕಾರ ಕೊಟ್ಟು ಗುರುಶಾಂತೇಶನು

ಜಗದ್ಗುರುಗಳಿಂದ ಆಶೀರ್ವಾದ ಪಡೆದು, ಹೊಸ ಸ್ವಾಮಿಗಳಿಗೂ ಸದ್ಭಕ್ತರಿಗೂ ಆಶೀರ್ವದಿಸಿ ಶಿಲವಡಿಗೆ ದಯಮಾಡಿಸಿದರು. ಯಾವ ಮಹಾತ್ಮನು ಭಸಿತವನ್ನು ಸ್ಫಟಿಕಲಿಂಗವನ್ನಾಗಿ ಮಾಡಿ, ವೈಷ್ಣವನಿಗೆ ಕೊಟ್ಟು ಅವನನ್ನು ಶಿವಭಕ್ತನನ್ನಾಗಿ ಮಾಡಿದನೋ ಆ ಸಿದ್ಧಲಿಂಗನ ಪಾದಧೂಳಿ ನಮಗೆ ಭಸಿತವಾಗಿರಲಿ.

ಹದಿಮೂರನೆಯ ಸಂಧಿ

ಒಂದು ದಿನ ಸಾಯಂಕಾಲದಲ್ಲಿ ಗುರುಶಾಂತ ಶಿವಯೋಗಿಗಳು ನಿಜಭಕ್ತರಿಗೆ ಲಿಂಗಾಂಗಸಮರಸದ ಅನುಭವವನ್ನು ಸೊಗಸಾಗಿ ಬೋಧಿಸುತ್ತಿರಲು ಶ್ರೋತೃಗಳು ಆನಂದಸಾಗರದಲ್ಲಿ ಈಸಾಡುತ್ತಿದ್ದರು. ಕುಮುದಬಾಂಧವನು ಪಶ್ಚಿಮಾದ್ರಿಯನ್ನು ಏರುತ್ತಿರಲು, ಸಂಜೆಗೆಂಪು ಕಾಲನೆಂಬ ನೀಲಕಂಠನು ಕುಣಿಯಲುಟ್ಟ ಪಿಂಜರಬಣ್ಣದ ವಸನಕಾಂತೆಯೆಂಬಂತೆ ರಂಜಿಸಿತು. ಕುವಲಯಾಪ್ತನಲ್ಲಿ (ಚಂದ್ರನಲ್ಲಿ) ವಿರೋಧತಾಳಿ ಕುಲವಯಕ್ಕೆ ನೋವುಕೊಡುವ ತೀಕ್ಷ್ಣಕಿರಣಗಳನ್ನು ಪಡೆದ ಕಾರಣ, ತನಗೆ ಕವಿದ ದುಷ್ಕೀರ್ತಿಯನ್ನು ಸಹಿಸದೆ ಸೂರ್ಯನು ನೀರಿನಲ್ಲಿ ಬಿದ್ದನೆಂಬಂತೆ ಪಶ್ಚಿಮ ಸಮುದ್ರದೊಳು ಮುಳುಗಿದನು. ವೈರಿ ಮಡಿದರೆ ನಗೆಯುಬಾರದಿರುವದೇ ? ಆಗಳೇ ಕುವಲಯಕ್ಕೆ ಸಂತಸದ ಕಿರುನಗೆ ಮೂಡಿತು. ಸೂರ್ಯನು ಗತಿಸಲು, ಸೂರ್ಯನ ವೈರಿಯಾದ ತಮವೆಂಬ ರಾಕ್ಷಸನು ಆ ಕುವಲಯವನ್ನೇ ಆಕ್ರಮಿಸಿದನು. ತನ್ನ ಪತಿಯಾದ ಚಂದ್ರನು ಆಗಮಿಸುವನೆಂಬ ಆನಂದದಿಂದ ರಾತ್ರ್ಯಂಗನೆ ಉಟ್ಟಿರುವ ಕತ್ತಲೆಯೆಂಬ ಕಪ್ಪು ಸೀರೆಯಲ್ಲಿ ಬೆಳ್ಳಿಯ ಜರತಾರದಿಂದ ಸೃಜಿಸಿದ ಹೊಸಬಗೆಯ ಹೂವುಗಳೆಂಬಂತೆ ಆಕಾಶದಲ್ಲಿ ತಾರೆಗಳು ಮೂಡಿದವು. ರಜನಿಕಾಂತೆ ಅರಳಿದ ಕುಮುದಗಳೆಂಬ ನೇತ್ರಗಳಿಂದ ನೋಡುವ ಸಂತಸದ ಸಮಯದಲ್ಲಿ ಆಗಮಿಸಿದ ಚಂದ್ರನು ನಿಜಸತಿಯಾದ ನಿಶೆಯನ್ನು ಕರದಿಂದ ಪಿಡಿದು, ಚಂದ್ರಿಕೆಯೆಂಬ ಪರಮಾನಂದ ಶರಧಿಯೊಳು ನೂಕಿದನು. ೧—೭

ಆ ಕಾಲದಲ್ಲಿ ಗುಳೇದಗುಡ್ಡದ ಭಕ್ತರು ಬಂದು ಗುರುಶಾಂತ ಶಿವಯೋಗಿಗಳ ಪಾದಪದ್ಮಗಳಿಗೆ ವಂದಿಸಿ, ಮಹನೀಯರೇ ! ನಮ್ಮೂರ ಮುರುಘಾಮಠದ ನೀಲಕಂಠ ದೇಶಿಕನಿಗೆ ಚರಪಟ್ಟಾಧಿಕಾರವನ್ನು ತಮ್ಮ ಪವಿತ್ರ ಹಸ್ತದಿಂದ ಕೊಡಿಸಬೇಕೆಂದು ಬಯಸಿ ಬಂದಿರುವೆವು. ದಯವಿಟ್ಟು ಸಮ್ಮತಿಸಬೇಕೆಂದು ಬೇಡಿಕೊಳ್ಳುವರು. ಒಪ್ಪಿ ಶಿವಯೋಗಿಗಳು ಭಕ್ತರನ್ನು ಸತ್ಕರಿಸಿ ಮರುದಿನ ಹೊರಟು ಗುಳೇದಗುಡ್ಡಕ್ಕೆ ಆಗಮಿಸಲು, ನಾಗರಿಕರು ಉತ್ಸವದೊಡನೆ ಕರೆದೊಯ್ದು, ಸಿಂಗರಿಸಿದ ಮಠದಲ್ಲಿ ಬಿಡದಿಮಾಡಿಸಿ, ನವಿಲುಗುಂದ ಗವಿಮಠದ ಬಸವಲಿಂಗದೇಶಿಕರ ಹಿರಿಯತನದಲ್ಲಿ

ಕಾರ್ಯ ನಡೆಸಿದರು. ತೂರ್ಯಸ್ವನ ಮೊಳಗುತ್ತಿರಲು ಆಗಮಜ್ಞರು ನೀಲಕಂಠ ದೇಶಿಕನಿಗೆ ಮಂಗಲ ಸ್ನಾನ ಮಾಡಿಸಿ ಶಿವಯೋಗಿಗಳಿಗೆ ಸಾಷ್ಟಾಂಗವೆರಗಿಸಿ ಸಮ್ಮುಖವಾಗಿ ಕುಳ್ಳಿರಿಸಿದರು. ವಿಧಿಪ್ರಕಾರ ಜಂಗಮಸಂಸ್ಕಾರ ಮಾಡಿಸಿ ಶಿವಯೋಗಿಗಳು ದೇಶಿಕನಿಗೆ ಚಿದುಪದೇಶವಿತ್ತು ಚರಪಟ್ಟಗಟ್ಟಿದರು. ಗಣತೃಪ್ತಿಯಾದ ಬಳಿಕ ನವಚರಪತಿಯ ಪಲ್ಲಕ್ಕಿಯುತ್ಸವ ನೆರವೇರಿಸಿ, ಪಿಠಾರೋಹಣ ಮಾಡಿಸಿ, ಭಕ್ತರು ಕಾಣಿಕೆ ಸಲ್ಲಿಸಿ ಕಾರ್ಯಸಮಾಪ್ತಿಗೊಳಿಸಿದರು. ಶಿವಯೋಗಿಗಳು ಎಲ್ಲರನ್ನು ಆಶೀರ್ವದಿಸಿ ಬೀಳ್ಕೊಂಡು ಶಿಲವಡಿಗೆ ದಯಮಾಡಿಸಿದರು. ೮—೧೬

ನವಿಲುಗುಂದ ಪ್ರಾಂತದ ಪ್ರಮುಖ ಭಕ್ತಮಾಹೇಶ್ವರರು ಸಭೆಸೇರಿ, ವಿದ್ಯಾವಿನಯಸಂಪನ್ನರಾಗಿ ಪ್ರೇರ್ಮೆಪಡೆದ ಬಸವಲಿಂಗ ದೇಶಿಕರಿಗೆ ಶಿಲವಡಿಯ ಗುರುಶಾಂತ ಶಿವಯೋಗಿಗಳಿಂದ ಚರಪಟ್ಟಾಧಿಕಾರ ಕೊಡಿಸುವ ಶುಭದಿನದ ನಿಶ್ಚಯ ಮಾಡಿದರು. ಹಿರಿಯಭಕ್ತರು ಶಿಲವಡಿಗೆ ಬಂದು ಶಿವಯೋಗಿಗಳಿಗೆ ಸಾಷ್ಟಾಂಗವೆರಗಿ ಬಿನ್ನವಿಸಿಕೊಳ್ಳುವರು. ಮಹಾತ್ಮರು ಒಪ್ಪಿ ಸದ್ಭಕ್ತರಿಗೆ ಯಥೋಚಿತ ಸತ್ಕಾರಮಾಡಿಸಿ ಮರುದಿನ ನವಿಲುಗುಂದಕ್ಕೆ ಆಗಮಿಸಲು, ಉತ್ಸವದೊಡನೆ ಕರೆದೊಯ್ದು ಗವಿಮಠದಲ್ಲಿ ಬಿಡದಿ ಮಾಡಿಸಿ, ಪುರಜನರು ಆಶೀರ್ವಾದ ಪಡೆದು ಧನ್ಯರಾದರು. ಮಠವನ್ನು ಶೃಂಗರಿಸಿದಂತೆ ಪ್ರತಿಮನೆಗಳನ್ನೂ ಬೀದಿಗಳನ್ನೂ ಶೃಂಗರಿಸಿದ್ದರು. ಮಹೋತ್ಸವಕ್ಕೆ ನಾಡಿನ ಭಕ್ತಜಂಗಮರೂ ಪಂಡಿತರೂ ಕವಿಗಳೂ ಗಾಯಕರೂ ಗಮಕಿಗಳೂ ಶಿವಯೋಗಮಂದಿರದ ಸಾಧಕರೂ ಆಗಮಿಸಿದ್ದರು. ೧೭—೨೨

ಮಂಟಪದೊಳಗೆ ಶೋಭಿಸುವ ಪೀಠದಲ್ಲಿ ಗುರುಶಾಂತ ಶಿವಯೋಗಿಗಳನ್ನು ಮುಹೂರ್ತಮಾಡಿಸಿ, ಮಂತ್ರಜ್ಞರು ಬಸವಲಿಂಗ ದೇಶಿಕನಿಗೆ ಮಂಗಲಸ್ನಾನಮಾಡಿಸಿ, ಶಿವಯೋಗಿಗಳ ಪಾದಪಂಕಜಗಳಿಗೆ ಸಾಷ್ಟಾಂಗವೆರಗಿಸಿ, ಅವರ ಮುಂದೆ ಕೂಡ್ರಿಸಿದರು. ಶಿವಯೋಗಿಗಳು ದೇಶಿಕನ ಮೇಲೆ ಕೃಪಾದೃಷ್ಟಿ ಬೀರಿ, ಜ್ಞಾನೋಪದೇಶವಿತ್ತು, ಚರಪಟ್ಟ ಕಟ್ಟಿದರು. ಬಳಿಕ ನೂತನ ಚರಪತಿಯನ್ನು ಅಡ್ಡಪಲ್ಲಕ್ಕಿಯಲ್ಲಿ ಮಹೂರ್ತಮಾಡಿಸಿ ವಿಜೃಂಭಣೆಯೊಡನೆ ಉತ್ಸವ ಹೊರಡಿಸಿದಾಗ ಮಂತ್ರಘೋಷದೊಡನೆ ಶುಭವಾದ್ಯಗಳು ಮೊಳಗಿದವು. ಇಕ್ಕೆಲಗಳಲ್ಲಿ ಜನರು ನೆರೆದು ನೋಡುತ್ತಿದ್ದರು. ಪಂಡಿತರ ಭಾಷಣಗಳೂ ಗಾಯಕರ ಸಂಗೀತ ಸಭೆಯೂ ಸಭಿಕರಿಗೆ ಕರ್ಣಾನಂದ ವುಂಟುಮಾಡಿದವು. ಬಳಿಕ ಬಸವಲಿಂಗ ಚರವರೇಣ್ಯನು ಗುರುಶಾಂತ ಶಿವಯೋಗಿಗಳ ಆಶೀರ್ವಾದ ಬಲದಿಂದ, ದೇಶಮಧ್ಯದಲ್ಲಿರುವ ಸದ್ಭಕ್ತರ ಉದ್ಧಾರಗೈಯುವದೇ ಶಿವಪೂಜೆಯೆಂಬ ದೃಢವಿಶ್ವಾಸ ನನ್ನಲ್ಲಿದೆ. ಈ ವ್ರತವನ್ನು ಕಾಯ್ದುಕೊಳ್ಳುವದೇ ಜಂಗಮನ ಕಾಯಕವೆಂದು ನಂಬಿ ನಡೆಯುತ್ತೇನೆಂಬ ಸಂದೇಶನನ್ನು ಹೃದಯತುಂಬಿ ಹೇಳಲು, ಅದನ್ನು ಕೇಳಿ ಸಭಿಕರು, ನೇತ್ರಗಳಲ್ಲಿ ಆನಂದಾಶ್ರು ತುಂಬಿ, ಕರತಾಡನ

ಗೈದರು. ಗುರುಕಾಣಿಕೆ ಸಲ್ಲಿಸಿ ವಿಬುಧರಿಗೆ ಬಹುಮಾನ ಕೊಟ್ಟು ಅತಿಥಿಗಳಿಗೆ ಭೋಜನಮಾಡಿಸಿ ಸದ್ಭಕ್ತರು ಸಮಾರಂಭ ಸಮಾಪ್ತಿಗೊಳಿಸಿದರು. ೨೩–೩೧.

ಬಸವಲಿಂಗ ಸ್ವಾಮಿಗಳು ಗುರುಶಾಂತೇಶನ ಕೃಪೆ ಪಡೆದು, ಸಮಾಜದ ಕಾರ್ಯಗಳಲ್ಲಿ ತೊಡಗಿ, ಮಹತ್ಕಾರ್ಯ ಮಾಡುವದನ್ನು ನೋಡಿ ಭಕ್ತವೃಂದವು ಅಪ್ಪಣೆ ಪಾಲಿಸಲಿಕ್ಕೆ ಸಿದ್ಧವಾಯಿತು. ಬಸವಲಿಂಗ ಸ್ವಾಮಿಗಳು ಬಾಗಲಕೋಟೆಯ ವಿದ್ಯಾವರ್ಧಕ ಸಂಘಕ್ಕೆ ಅಧ್ಯಕ್ಷರಾಗಿ, ಬಸವೇಶ್ವರ ಮಾಧ್ಯಮಿಕ ಶಾಲೆಯೊಂದನ್ನು ಮತ್ತೆ ಸ್ಥಾಪಿಸಿದರು. ನವಿಲುಗುಂದದಲ್ಲಿ ವಿದ್ಯಾದಾನ ಸಮಿತಿ ಶಾಲೆಯನ್ನು ಸ್ಥಾಪಿಸಿದರು. ಶಿವಯೋಗ ಮಂದಿರದ ಉಪಾಧ್ಯಕ್ಷ ಪದವಿಯನ್ನು ಪಡೆದರು. ಅಖಿಲ ಭಾರತ ವೀರಶೈವ ಮಹಾಸಭೆಯ ಹದಿನೇಳನೆಯ ಸಮ್ಮೇಳನದ ಸ್ವಾಗತಾಧ್ಯಕ್ಷರಾಗಿ ವೀರಶೈವರಿಗೆ ಪೂಜ್ಯರೆನಿಸಿದರು. ಮಠದಲ್ಲಿ ಪ್ರತಿವರ್ಷ ಶಿವಾನುಭವ ಅಧಿವೇಶನ ನೆಸಗುತ್ತ ಸರ್ವಧರ್ಮದ ಪಂಡಿತರನ್ನು ಕರೆಯಿಸಿ ಭಾಷಣ ಮಾಡಿಸುವರು. ಒಕ್ಕಲಿಗರೇ ಮೊದಲಾದವರ ಏಳ್ಗೆಯನ್ನು ಕುರಿತು ಭಾಷಣ ಮಾಡಿಸಿ, ವಿದ್ಯಾವಂತರಿಗೆ ಯೋಗ್ಯತೆಯ ಪ್ರಶಸ್ತಿಯೊಡನೆ ಧನವಸನಾದಿಗಳನ್ನು ಆಶೀರ್ವದಿಸಿ ಸ್ತುತ್ಯರೆನಿಸಿದರು. ಉತ್ತಮ ಆಚರಣೆಯಿಂದ ಗುರುಜಂಗಮರಿಗೆ ಆದರ್ಶರೆನಿಸಿದರು. ಹಿರಿಯ ವಕ್ತಾರರೂ, ಸಾಹಿತಿಗಳೂ ಆಗಿ ಶೋಭಿಸುವರು. ತೋಂಟದ ಸಿದ್ಧಲಿಂಗೇಶನಲ್ಲಿ ನಿಷ್ಠೆಯಿಟ್ಟು ಪ್ರತಿವರ್ಷ ರಥೋತ್ಸವವನ್ನು ಜರುಗಿಸಿ, ಘನವಾದ ಗುರುಭಕ್ತಿವಂತರೆನಿಸಿದರು. ಇವರ ಸೇವಾವ್ರತವು ತನ್ನ ಭವರೋಗಕ್ಕೆ ಔಷಧವೆಂದು ನೆರೆನಂಬಿದ ಸೊಲಬಯ್ಯನೆಂಬಾತನು ಸ್ವಾಮಿಗಳ ಕೃಪೆಗೆ ಪಾತ್ರನಾಗಿ ಗವಿಮಠದ ನೆಲೆಯಲ್ಲಿ ಸತಿಸುತರೊಡನೆ ಸಂತಸದಿಂದ ನೆಲಸಿರುವನು. ತರುಣಿಯೋರ್ವಳು ಕೆರೆಯೊಳಗೆ ಗಾಳಿಯಿಂದ ದೂರಹೋದ ಕೊಡವನ್ನು ಯಾವ ಮಹಾತ್ಮನ ಆಣೆಯಿಟ್ಟು ಸಮೀಪಕ್ಕೆ ಬರಿಸಿದಳೋ ಆ ಸಿದ್ಧಲಿಂಗನ ಚರಣಸ್ಮರಣೆ ನಮಗೆ ರಕ್ಷಾಮಣಿಯೆನಿಸಲಿ.

೩೨—೪೨

ಹದಿನಾಲ್ಕನೆಯ ಸಂಧಿ

ಶಿರೋಳದ ಚನ್ನಪ್ಪನಿಗೆ ವಿಷಮಜ್ವರ ಬಂದು ಹದಿನೈದು ದಿನಗಳವರೆಗೆ ಹಾಸಿಗೆ ಹಿಡಿಸಿ, ಅನ್ನನೀರುಗಳ ಬಯಕೆ ಬಿಡಿಸಿ ಕಾಡಹತ್ತಿತು. ಅವನ ಬಂಧುಗಳು ಮಠಕ್ಕೆ ಬಂದು ಒಂದುಳಿಯದಂತೆ ಶಿವಯೋಗಿಗಳಿಗೆ ತಿಳಿಸುವರು. ಶಿವಯೋಗಿಗಳು ರೋಗಿಯನ್ನು ಕರೆಯಿಸಿ ಒಂದು ದಿನ ಮಠದಲ್ಲಿರಿಸಿಕೊಂಡು ತೀರ್ಥಪ್ರಸಾದ ಕೊಡಲು, ಜ್ವರ ಬಿಟ್ಟು ಹೋಗುವದು. ಮಹಿಮರೇ! ನಾನು ಈ ಬೇನೆಯಲ್ಲಿ ಮಡಿದಿದ್ದರೆ ಲೇಸಾಗಿತ್ತು. ಮಕ್ಕಳಿಲ್ಲದೆ ಬಾಳುವುದರಲ್ಲಿ ಪ್ರಯೋಜನವೇನೆಂದು ಚನ್ನಪ್ಪನು

ನೊಂದು ಸಾಡಿಯಲು, ಈಗೊಂದು ಹೋಗಿದೆ, ಮುಂದೆ ಮೂರು ಮಕ್ಕಳು ಹುಟ್ಟು ವರು,ಹೋಗೆಂದು ಶಿವಯೋಗಿಗಳು ಆಶೀರ್ವದಿಸುವರು. ಆ ಮೇರೆಗೆ ಚನ್ನಪ್ಪನು ಶಿವ ಯೋಗಿಗಳ ಕೃಪೆಯಿಂದ ಮೂವರು ಮಕ್ಕಳನ್ನು ಪಡೆದು ಆನಂದವಾಗಿದ್ದನು. ೧—೫

ಶರೀಫ ಹುಸೇನಸಾಬನು ಗುರುಸನ್ನಿಧಿಗೆ ತನ್ನ ಹೆಂಡತಿಯನ್ನು ಕರೆದುಕೊಂಡು ಬಂದು ತಪಸ್ವಿಗಳೇ! ಇವಳಿಗೆ ಭೂತವು ಬಡಿದಿದೆ. ಮಂತ್ರ ತಂತ್ರಗಳಿಗೆ ಬಿಡ ಲೊಲ್ಲದು. ಕಡೆಗೆ ತಮ್ಮ ಪಾದಕ್ಕೆ ತಂದಿರುವೆ, ಬಿಡಿಸಬೇಕೆಂದು ದೈನ್ಯಬಡಲು, ತಪ ಸ್ವಿಗಳು ಆ ಹೆಣ್ಣುಮಗಳನ್ನು ಕರೆದು, ಹಿರಿಯರು ದೇವರಿದ್ದಾನೆಂದು ಹೇಳುವ ದಿಲ್ಲವೆ? ಅದನ್ನು ನಂಬಿ ಹೋಗು. ಇಲ್ಲವಾದರೆ ನಿನಗೆ ತಕ್ಕ ಶಿಕ್ಷೆಯಾಗುವ ದೆಂದು ಬೆತ್ತವನ್ನು ಮೈಮೇಲೆ ಎಳೆದಾಕ್ಷಣ, ಭೂತವು ಬೆದರಿ ಕಾಡುವದಿಲ್ಲೆಂದು ತಪಸ್ವಿಗಳಿಗೆ ಅಡ್ಡಬಿದ್ದು ಹೊರಟು ಹೋಯಿತು. ಹೆಣ್ಣುಮಗಳು ಹುಷಾರಿಯಾಗಿ ಮಾತನಾಡಲು, ಸಾಬನು ಸತಿಯೊಡನೆ ಶಿವಯೋಗಿಗಳಿಗೆ ಸಾಷ್ಟಾಂಗವೆರಗಿ ಸಂತೋ ಷದಿಂದ ಮನೆಗೆ ಬಂದನು. ಮತ್ತೆ ಸಾಬನು ಮಠಕ್ಕೆ ಬಂದು ತಪಸ್ವಿಗಳೇ! ಮಳೆಯು ತಡೆದಿದೆ. ಬರವು ಬರಬಹುದೆಂದು ಜನಗಳು ಭೀತಿಗೊಂಡಿದ್ದಾರೆಂದು ತಿಳಿಸಲು, ಬರುವ ಸೋಮವಾರದಿಂದ ದೊಡ್ಡಮಳೆಯಾಗುವದೆಂದು ತಪಸ್ವಿಗಳು ತಿಳಿಸುವರು. ಅದರಂತೆ ಮಳೆ ಸುರಿಯಲು ಊರವರಿಗೆ ಸಂತೋಷವಾಗಿ, ಮಠಕ್ಕೆ ಬಂದು ಮಂಗಲ ಮಾಡಿ ಕಾಯೊಡೆದು ಮಹಾತ್ಮರನ್ನು ಕೊಂಡಾಡಿದರು. ೬—೧೧

ಶೆಲವಡಿಯಲ್ಲಿರುವ ಲಾಂಡೆಯ ನರಸಪ್ಪನೆಂಬವನು ಸುಂದರಾಂಬೆಯೆಂಬ ಸತಿಯೊಡನೆ ಸುಖದಿಂದ ಸಂಸಾರ ಸಾಗಿಸುತ್ತಿದ್ದನು. ದಂಪತಿಗಳು ಗುರುಪಾದ ದಲ್ಲಿ ಭಕ್ತಿಯಿಟ್ಟು ನಡೆದುಕೊಳ್ಳುತ್ತ, ಪುತ್ರನೊಬ್ಬನನ್ನು ಪಡೆದು ಏಕನಾಥನೆಂದು ಹೆಸರಿಟ್ಟು ಸಲಹುತ್ತಿದ್ದರು. ವಿವೇಕಿಯಾದ ಹತ್ತುವರ್ಷದ ಆ ಮಗನಿಗೆ ಜ್ವರ ಬಂದು ಬದುಕುವದು ಕಠಿಣವೆನಿಸಿತು. ಊರವರು ವೈದ್ಯರಿಗೆ ತೋರಿಸೆನ್ನಲು, ಗುರು ಗಳ ಆಶೀರ್ವಾದದಿಂದ ಹುಟ್ಟಿದ್ದಾನೆ. ಗುರುಗಳು ಕಾಯಲಿ ಇಲ್ಲವೆ ಕೊಲ್ಲಲಿ. ಔಷಧವು ಬೇನೆಯನ್ನು ಕಳೆಯದೆಂದು ಹೇಳಿ, ತಾಯಿತಂದೆಗಳು ಮಠಕ್ಕೆಹೋಗಿ ಗುರು ಗಳ ಪಾದೋದಕವನ್ನು ತಂದು ಮಗನ ಮೈಯ್ಗೆಲ್ಲಾ ಲೇಪಿಸಿದರು. ಭಯಂಕರ ವಾದ ಬೇನೆಯು ಎರಡೇ ದಿನಗಳಲ್ಲಿ ವಾಸಿಯಾಯಿತು. ನಂಬಿದವರಿಗೆ ಕೇಡಿಲ್ಲೆಂದು ಜನಗಳ ಕೊಂಡಾಡಿದರು. ಕೆಲವು ದಿನಗಳ ಮೇಲೆ ನರಸಪ್ಪನಿಗೆ ಆ ಊರನ್ನೇ ಬಿಡಿಸುವ ಗಂಡಾಂತರ ಬಂದೊದಗಲು, ಗುರುಸನ್ನಿಧಿಗೆ ಬಂದು ತನ್ನ ದುಃಸ್ಥಿತಿ ಯನ್ನು ತಿಳಿಸುವನು. ಎಲ್ಲಿಗೂ ಹೋಗಬೇಡ, ಊರಲ್ಲಿಯೇ ಇರು ಎಂದು ಗುರು ಗಳು ಅಪ್ಪಣೆ ಮಾಡಿದರು. ಕಷ್ಟಗಳು ದೂರಾಗಿ ನರಸಪ್ಪನ ಮನೆಯವರೆಲ್ಲರು ಇಂದಿಗೂ ಸುಖದಿಂದಿರುವರು. ೧೨—೧೬

ಶಿಲವಡಿಯ ನಾಗಠಾಣದ ಶಿವರುದ್ರಪ್ಪನಿಗೆ ಒಂದುವರೆ ತಿಂಗಳಿಂದ ರೋಗವು ಕಾಡುತ್ತಿರಲು, ಆವನು ಸಾಯುವನೆಂದು ಜನರು ಮಾತಾಡಹತ್ತಿದರು. ಅದನ್ನು ಕೇಳಿ ಆವನ ಹೆಂಡತಿಯಾದ ಲಿಂಗಮ್ಮನು ಶಿವಯೋಗಿಗಳಿಗೆ ವಂದಿಸಿ, ರೋಗಕ್ಕೆ ತುತ್ತಾಗಿರುವ ನನ್ನ ಗಂಡನ ಬಾಯೊಳಗೆ ಗುಟುಕು ನೀರು ಸಹ ಇಳಿಯುವದಿಲ್ಲ. ನನ್ನ ಕೈಬಿಟ್ಟು ಹೋಗುವನು ಪಾಲಿಸಬೇಕೆಂದು ಕಣ್ಣೀರಕೋಡಿ ಹರಿಸುತ್ತ ಕೇಳಿಕೊಂಡಳು; ತಾಯೇ! ನಿನ್ನ ಪತಿಗೆ ಕೇಡಿಲ್ಲ. ದುಃಖಿಸಬೇಡೆಂದು ಅನುಕಂಪಿತರಾದ ಶಿವಯೋಗಿಗಳು ಪ್ರಸಾದ ಕೊಟ್ಟು, ಅದನ್ನು ಸೇವಿಸಿದರೆ ರೋಗವು ವಾಸಿಯಾಗುವದೆಂದು ಹೇಳಿ ಕಳಿಸುವರು. ಹೇಳಿದಂತೆ ಗಂಡನಿಗೆ ಗುಣವಾಗಲು, ಲಿಂಗಮ್ಮನು ಗುರುಪಾದದಲ್ಲಿ ನಿರಂತರ ನಿಷ್ಠೆಯಿಟ್ಟಳು. ಅವಳ ಮನೆಯವರು ಇಂದಿಗೂ ಮಠದ ಸೇವೆಯನ್ನು ಮಾಡುತ್ತಿರುವರು. ೧೮--೨೨

ನೀರಲಗಿಯವರೆಂಬ ಪ್ರಸಿದ್ಧ ಗಾಣಿಗರ ಸಂಕಪ್ಪನ ಮಗನಾದ ಫಕ್ಕೀರಪ್ಪನಿಗೆ ಪಾರ್ಶ್ವವಾಯು ರೋಗವಂಟಿ ಕಡುಕಾಟಕೊಡಲು, ಹುಬ್ಬಳ್ಳಿಗೆ ಕರೆತಂದು ಪ್ರಸಿದ್ಧ ವೈದ್ಯನಿಗೆ ತೋರಿಸುವರು. ಈ ರೋಗವನ್ನು ಕಳೆಯುವ ಮದ್ದು ಸದ್ಯಕ್ಕೆ ನಮ್ಮಲ್ಲಿ ಸಿಗುವದಿಲ್ಲ. ನಿಮ್ಮಲ್ಲಿಗೆ ತಿರುಗಿ ಕರೆದುಕೊಂಡು ಹೋಗಿರೆಂದು ವೈದ್ಯರು ತಿಳಿಸಲು, ಉಪಾಯಗಾಣದೆ ದುಃಖಿಸುತ್ತ ಮನೆಗೆ ಕರೆತಂದು, ಕೊನೆಗೆ ಸಂಕಪ್ಪನು ಶಿವಯೋಗಿಗಳಿಗೆ ಮಗನ ದುಃಸ್ಥಿತಿಯನ್ನು ತಿಳಿಸಿ ತೀರ್ಥಪ್ರಸಾದ ಪಡಕೊಂಡು ಬಂದು, ಭಕ್ತಿಯಿಂದ ಸ್ವಿಕರಿಸೆಂದು ಮಗನಿಗೆ ಕೊಡುವನು. ಕ್ರಮೇಣ ರೋಗವು ಕಡಿಮೆಯಾಗುತ್ತ ಹೋಗಲು, ಶಿವಯೋಗಿಗಳ ಮಹಿಮೆಗೆ ಮನೆಯವರು ಆಶ್ಚರ್ಯಪಟ್ಟರು. ಯಾವ ಮಹಾತ್ಮನ ಮುಂದೆ ಮೂಗುತಿಯ ಕದ್ದವಳು ಆಕಾಶಕ್ಕೆ ಕೈಯೆತ್ತಿ ಕದ್ದಿಲ್ಲವೆನ್ನಲು, ಆ ಕೈಯು ಆಗಸದಲ್ಲಿ ಬಾಗದೆ ಬಂಧಿತವಾಯಿತೋ ಆ ಸಿದ್ಧಲಿಂಗ ಶಿವಯೋಗೀಶ್ವರನನ್ನು ಭಕ್ತಿಯಿಂದ ನೆನೆಯುವ ಒಮ್ಮನ ಸತತ ನಮಗಿರಲಿ. ೧೮—೩೧

ಹದಿನೈದನೆಯ ಸಂಧಿ

ಗುರುಶಾಂತ ಶಿವಯೋಗಿಗಳು ಭಕ್ತರೊಡನೆ ಮುರುಗೋಡದ ಮಹಾಂತ ಶಿವಯೋಗಿಗಳ ಪಾದದರ್ಶನ ಪಡೆಯುವದಕ್ಕೆ ಹೊರಟಿರಲು, ಅದನ್ನು ಕೇಳಿ ಬೈಲಹೊಂಗಲದ ಭಕ್ತರು ಮಹನೀಯರ ಶಿವಪೂಜೆ ನಮ್ಮೂರಲ್ಲಾದರೆ ಧನ್ಯರಾಗುವೆವೆಂದು ಅವರ ಬರವನ್ನು ಕಾಯುತ್ತಿದ್ದು, ಬಿನ್ನವಿಸುತ್ತಾರೆ. ಭಕ್ತಾಧೀನರಾದ ಗುರುಶಾಂತೇಶ್ವರರು ಒಪ್ಪಲು, ಕರೆದೊಯ್ದು ಸಂಸ್ಕೃತ ಪಾಠಶಾಲೆಯಲ್ಲಿ ಬಿಡದಿ ಮಾಡಿಸಿ, ಶಿವಪೂಜೆಗೆ ತಿಪ್ಪೆಯಮಠದಲ್ಲಿ ವ್ಯವಸ್ಥೆ ಮಾಡುತ್ತಾರೆ. ಶಲವಡಿಯ ಭಕ್ತರು, ಮಠದಲ್ಲಿ ಶಿವಾನು

ಭವ ಪ್ರವಚನವಾದನಂತರ, ಪಾಠಶಾಲೆಯ ಮರಿಗಳಲ್ಲಿ ಒಬ್ಬನನ್ನು ತಮ್ಮೂರ ಮಠಕ್ಕೆ ಆರಿಸಿಕೊಳ್ಳಬೇಕೆಂದು ಶಿವಯೋಗಿಗಳನ್ನು ಬಿನ್ನೈಸಿಕೊಂಡರು. ಶಿವಯೋಗಿಗಳು ಚಂದ್ರಶೇಖರ ಶಾಸ್ತ್ರಿಗಳನ್ನು ಕರೆದು, ನಿಮ್ಮಲ್ಲಿ ಓದುವವರಲ್ಲಿ ನಮ್ಮ ಮಠದ ಅಧಿಕಾರಿಯಾಗಲಿಕ್ಕೆ ಯಾವನು ಯೋಗ್ಯನಿರುವನೆಂದು ಕೇಳುವರು. ಶಾಸ್ತ್ರಿಗಳು ಮಹಾನುಭಾವರೇ ! ರುದ್ರಾಪುರ ಚರಂತಿಮಠದ ಸುಶೀಲರಾದ ರಾಚಾರ್ಯ ನೀಲಾಂಬಿಕೆಯರ ಸುಪುತ್ರನಾದ ಬಸವರಾಜನು ಈಗಾಗಲೇ ನಿಜಮಠದ ಚರಪತಿಯೆಂದು ನಿಯಾಮಕನಾಗಿ ನಮ್ಮಲ್ಲಿ ಓದುತ್ತಿರುವನು. ಈತನಲ್ಲಿ ಗುರುಸೇವಾಭಾವ, ವಿದ್ಯಾಪ್ರೀತಿ, ವಿನಯಾದಿ ಸದ್ಗುಣಗಳು ಶೋಭಿಸುವವು. ಆ ದಂಪತಿಗಳಿಗೆ ಈತನಲ್ಲದೆ ಬೇರೆ ಮಕ್ಕಳಿರುವರು. ಇವನನ್ನು ನಾವು ಮಗನಂತೆ ಪ್ರೀತಿಸುವೆವೆಂದು ಬಸವರಾಜನನ್ನು ಕರೆದು ತೋರಿಸಿದರು. ಸಂಸ್ಕೃತ ಕಾವ್ಯತೀರ್ಥ, ಕನ್ನಡಜಾಣ ಅಭ್ಯಾಸ ಮಾಡುತ್ತಾನೆ. ಲಿಂಗಪೂಜಾ ಪ್ರೇಮಿಯಾಗಿದ್ದಾನೆ. ತಮ್ಮ ಮಠಕ್ಕೆ ಮರಿಯಾಗುವ ಯೋಗ್ಯತೆ ಪಡೆದಿರುವನೆಂದು ಪಾದಕ್ಕೆರಗಿಸಲು, ಗುರುಶಾಂತೇಶ್ವರರು ಪ್ರೀತಿಯಿಂದ ನಿರೀಕ್ಷಿಸಿ, ಯೋಗ್ಯನಿರುವನೆಂದು ಭಕ್ತರಿಗೆ ತಿಳಿಸಿ, ಬಸವರಾಜ ಮುಂತಾದ ಮರಿಗಳನ್ನೂ ಚಂದ್ರಶೇಖರ ಶಾಸ್ತ್ರಿಗಳನ್ನೂ ಸಂಗಡ ಕರಕೊಂಡು ಮುರುಗೋಡಕ್ಕೆ ಪಯಣ ಬೆಳಸಿದರು.೧—೧೪

ಮುರುಗೋಡ ಭಕ್ತರು ಉತ್ಸವದಿಂದ ಗುರುಶಾಂತೇಶ್ವರರನ್ನು ಮಠಕ್ಕೆ ಕರೆದೊಯ್ಯಲು, ಮಹಾತ್ಮರೀರ್ವರು ಪರಸ್ಪರ ವಂದನೆ ಸಲ್ಲಿಸಿ ಭಕ್ತಿಭಾವ ತಾಳಿರುವದನ್ನು ಕಂಡು, ಜನಗಳು ವಿಸ್ಮಯಪಟ್ಟು ಆವರೀರ್ವರ ಚರಣಾರವಿಂದಗಳಿಗೆ ವಂದಿಸುವರು. ಬಳಿಕ ಶಿಲವಡಿಯ ಮಹಾತ್ಮರು ಮುರುಗೋಡದಮಹಾತ್ಮರಿಗೆ ಬೆಳ್ಳಿಹಾವುಗೆಗಳನ್ನು ಸಮರ್ಪಿಸಲು, ಮಹಾಂತಶಿವಯೋಗಿಗಳು ಅವುಗಳನ್ನು ತಮ್ಮ ತಲೆಯ ಮೇಲಿಟ್ಟುಕೊಂಡು ನಾನಿಂದು ನಿರ್ಮಲನಾದೆ. ಮಹಾತ್ಮರು ಕೃಪೆಮಾಡಿಕೊಟ್ಟ ಪಾದುಕೆಗಳನ್ನು ಮೆಟ್ಟಬಹುದೇ ? ಇವು ನನ್ನನ್ನು ಉದ್ಧರಿಸಲು ಬಂದಿವೆ. ನಿಷ್ಠೆಯಿಂದ ನಿರಂತರ ಪೂಜಿಸುವೆನೆಂದು ಹೇಳುತ್ತಾರೆ. ಜಂಗಮನು ಹರಸಿದ ವಸ್ತುಗಳು ಅನುಪಮವೆಂದರಿದ ಚರಪುಂಗವನ ಪೂಜ್ಯಭಾವಕ್ಕೆ ಪುರಜನರು ಆಶ್ಚರ್ಯಪಟ್ಟರು. ೧೫—೧೯.

ಮಹಿಮರೀರ್ವರು ಲಿಂಗಾನಂದದೊಡನೆ ದಿನವೆರಡು ಕಳೆದ ಬಳಿಕ, ಗುರುಶಾಂತೇಶ್ವರನು ರುದ್ರಾಪುರದಿಂದ ಲಿಂಗವ್ವ ರಾಚಯ್ಯರನ್ನು ಮಹಾಂತೇಶನ ಸನ್ನಿಧಿಗೆ ಕರೆಯಿಸಿ, ನಿಮ್ಮ ಮಗನಾದ ಬಸವರಾಜನನ್ನು ನಮ್ಮ ಮಠಕ್ಕೆ ಕೊಡಬೇಕೆಂದು ದಂಪತಿಗಳನ್ನು ಕೇಳಿದರು. ದಂಪತಿಗಳು ಸ್ವಸಂತೋಷದಿಂದ ಸಮ್ಮತಿಸಲು ಅವರಿಗೆ ಉಡುಗರೆಯನ್ನು ಆಶೀರ್ವದಿಸಿ, ಮಹಾಂತೇಶನಿಂದ ಬಸವರಾಜನಿಗೆ ಆಶೀವಾದ

ಕೊಡಿಸಿದರು. ಗುರುಶಾಂತೇಶನು ಶಿಲವಡಿಗೆ ಹೊರಡಲಿಕ್ಕೆ ಅಪ್ಪಣೆ ಕೇಳಲು, ಮಹಾಂತೇಶನು ಉಣ್ಣೆಯ ಶಾಲೊಂದು, ಬಸವ ಮುದ್ರೆಯ ಚಿನ್ನದುಂಗರವೊಂದು, ಕರಕಮಲವೊಂದು, ಮಂಚವೊಂದು ಸಮರ್ಪಿಸಿದರು. ಗುರುಶಾಂತೇಶನು ಬಸವ ರಾಜ ಸಹಿತ ಭಕ್ತರೊಡನೆ ಶಿಲವಡಿಗೆ ಆಗಮಿಸಿ, ದುರದುಂಡೀಶನು ಹರಸಿಕೊಟ್ಟ ವಸ್ತುಗಳಲ್ಲಿ ಪೂಜ್ಯಭಾವತಾಳಿ, ಮಂಚವನ್ನು ಮರೆದಾದರೂ ಏರದಿರುವುದನ್ನು ಕಂಡು, ಭಕ್ತರು ವಿಸ್ಮಯಪಟ್ಟರು. ಇಂದಿಗೂ ಶಿಲವಡಿಯ ಮಠದಲ್ಲಿ ಆ ಮಂಚ ಪೂಜೆಗೊ ಳ್ಳುತ್ತಿದೆ. ಮುರುಗೋಡದ ಮಠದಲ್ಲಿ ಆ ಹಾವುಗೆಗಳು ಪೂಜೆಗೊಳ್ಳುತ್ತಿವೆ. ೨೦-೨೭

ಗುರುಶಾಂತೇಶನು ಬಸವರಾಜ ಮರಿದೇವರನ್ನು ಕರೆದುಕೊಂಡು ಹರಿಹರದ ಮಠಕ್ಕೆ ಆಗಮಿಸಿ, ಚಿತ್ರದುರ್ಗದ ಜಗದ್ಗುರುಗಳನ್ನು ಬರಮಾಡಿಕೊಂಡು, ಅವರ ಹಸ್ತದಿಂದ ಬಸವರಾಜನಿಗೆ ಕಪನಿಯನ್ನು ತೊಡಿಸಿ, ಹರಿಹರ ಮತ್ತು ಶಿಲವಡಿ ಮಠಗಳಿಗೆ ಮರಿದೇವನೆಂದು ದೈವದ ಸಮಕ್ಷಮ ನಿರ್ಧರಿಸಿದರು. ಬಳಿಕ ಗುರು ಶಾಂತೇಶನು ಶಿಲವಡಿಗೆ ದಯಮಾಡಿಸಿ, ಹಲವೆಡೆಯ ಚರಮೂರ್ತಿಗಳನ್ನು ಕರೆಯಿ ಸಿಕೊಂಡು ಬಸವರಾಜದೇವನಿಗೆ ಅನುಗ್ರಹಿಸಿ ಪ್ರಸಾದಿಯನ್ನಾಗಿ ಮಾಡಿದನಲ್ಲದೆ ಭಕ್ತಿಸಂಪನ್ನನಾದ ಚಂದ್ರಶೇಖರ ಶಾಸ್ತ್ರಿಗೆ ಅನುಗ್ರಹಿಸಿ ಪ್ರಸಾದಿಯನ್ನಾಗಿ ಮಾಡಿ ಗಣಾರಾಧನೆ ಮಾಡಿದರು. ಹೊಳಲಗುಂದದಲ್ಲಿ ಮಾಯಾದೇವಿಯು ಶಕ್ತಿದೇವತೆ ಗಳೊಡನೆ ಯಾವ ಮಹಿಮನನ್ನು ಭಕ್ತಿಯಿಂದ ಪೂಜಿಸಿದಳೋ ಆ ಸಿದ್ಧಲಿಂಗನ ಪಾವನಾಂಘ್ರಿಯನ್ನು ಪೂಜಿಸುವ ಸದ್ಬುದ್ಧಿ ನಿರಂತರ ನಮಗಿರಲಿ. ೨೮—೩೩

ಹದಿನಾರನೆಯ ಸಂಧಿ

ಬಸವರಾಜ ದೇವನು ಮಾತಾಪಿತೃಗಳನ್ನು ಮರೆತು ತನುಮನಧನಗಳಿಂದ ಗುರುಸೇವೆ ಮಾಡುವದನ್ನು ಕಂಡು, ನಮ್ಮೂರ ಪುಣ್ಯಕ್ಕೆ ಈ ಮರಿದೇವನು ದೊರೆತ ನೆಂದು ಶಿಲವಡಿಯವರು ಹಿಗ್ಗಿದರು. ಮರಿದೇವನು ನಸುಕಿನಲ್ಲೆದ್ದು ಮುಖ ತೊಳೆ ದುಕೊಂಡು ಪೂಜಾ ಮಂದಿರ ಕಸಗೂಡಿಸಿ, ಶಿವಪೂಜಾ ಸಾಮಗ್ರಿಗಳನ್ನು ಬೆಳಗಿ, ಬಟ್ಟೆಗಳನ್ನು ಮಡಿಮಾಡಿ, ಪತ್ರಿಪುಷ್ಪ ತಿರಿದು ತಂದು ಗುರುಗಳಿಗೆ ಸಂತೋಷವ ನ್ನುಂಟು ಮಾಡುತ್ತಿದ್ದನು. ಒಕ್ಕಲಿಗರಿಗೆ ಆನಂದಸುಧೆಯನ್ನು ವರ್ಷಿಸುತ್ತ ಮಳೆ ಗಾಲವು ಪ್ರಾಪ್ತವಾಗಲು, ನವಿಲುಗಳಿಗೆ ಹರ್ಷವಾಯಿತು, ಅಂಚೆಗಳಿಗೆ ದುಃಖ ವಾಯಿತು. ಜಡದ ಉತ್ಕರ್ಷವು ಸುಖ ದುಃಖದಾಯಕವೆನ್ನುವದು ಹುಸಿಯೇ? ದೇವೇಂದ್ರನಿಗೆ ಬಿಳಿಯಾನೆ ಇರುವದಲ್ಲದೆ ಕರಿಯಾನೆಗಳೂ ಇರುವವು. ಅವು ದೇವ ಗಂಗೆಯ ನೀರು ಕುಡಿದು, ಬೃಂಹಿತವೆಸಗಿ ಸಾಲುಗೊಂಡು ಸುರಪಥದಲ್ಲಿ ನಿಂತಿರುವ

ವೆಂಬಂತೆ, ಗುಡುಗುತ್ತ ನೀಲವರ್ಣದ ಮೋಡಗಳು ಆಕಾಶದಲ್ಲಿ ತೋರಿದವು. ಮೋಡಗಳು ಧಾರಾಕಾರ ವೃಷ್ಟಿಗರೆಯಲು, ಗಿರಿಕಂದರಗಳೂ, ಹಳ್ಳಕೊಳ್ಳಗಳೂ, ಕೆರೆತೊರೆಗಳೂ ತುಂಬಿಹರಿದು ಭೂತಲವೆಲ್ಲ ಜಲಮಯವಾಯಿತು. ಬಿರುಮಳೆಯ ಹೊಡೆತಕ್ಕೆ ಗಿಡಗಳಲ್ಲಿರುವ ಹಕ್ಕಿಯ ಮರಿಗಳು ಗೂಡುಸಹಿತವಾಗಿ ಹರಿಯುವ ನೀರೊಳಗೆ ಬೀಳಲು, ಗುರುವರನು ನೋಡಿ ಮರುಗುತ್ತ ಅವುಗಳನ್ನು ಹಿಡಿತರಿಸಿ ಸಲಹಿದ್ದು ಜನಗಳಿಗೆ ಆಚ್ಚರಿಯನ್ನುಂಟು ಮಾಡಿತು. ಇಂತಲ್ಲದೆ ಮಠದಲ್ಲಿರುವ ಹಸಿದ ಹಸುಗಳಿಗೂ, ಬೆಕ್ಕುಗಳಿಗೂ ಮರುಕದಿಂದ ಗುರುವರನು ತಾನೇ ಆಹಾರ ಕೊಡುವನು. ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ಶಿವಶರಣರ ದಯವೇ, ಧರ್ಮದ ಮೂಲವೆಂಬ ತತ್ವವೇ ಮೈವೆತ್ತು, ಭೂಮಿಯಲ್ಲಿ ಗುರುಶಾಂತ ಸ್ವಾಮಿಯಾಗಿ ಸರ್ವರನ್ನು ರಕ್ಷಿಸುವನೆಂದು ಜನಗಳು ಹೊಗಳಿದರೂ ಸ್ವಲ್ಪೂ ಹಿಗ್ಗದಿರುವನು. ೧—೧೧

ಶಿವಯೋಗಿಗಳು ಹರಗುರುಚರಮೂರ್ತಿಗಳನ್ನೂ, ಸದ್ಭಕ್ತರನ್ನೂ ಕೂಡಿಕೊಂಡು ಉಳವಿಕ್ಷೇತ್ರಕ್ಕೆ ಹೋಗಲಪೇಕ್ಷಿಸಿ, ನವಿಲುಗುಂದಕ್ಕೆ ದಯಮಾಡಿಸಿ, ಬಸವಲಿಂಗ ಸ್ವಾಮಿಗಳಿಗೆ ದರ್ಶನವಿತ್ತು, ಉಳವಿಕ್ಷೇತ್ರಕ್ಕೆ ನೀವೂ ಬರಬೇಕೆಂದರು. ಪೂಜ್ಯರೇ, ದಯಾಘನ ಮೂರ್ತಿಗಳೇ! ಗುಳೇದಗುಡ್ಡದ ನೀಲಕಂಠ ಸ್ವಾಮಿಗಳು ಜ್ವರಬಾಧೆಯಿಂದ ಬಳಲುತ್ತಿರುವರು. ಬಿಟ್ಟು ಹೇಗೆ ಬರಲೆಂದು ಹೇಳುವಾಗ, ನೀಲಕಂಠ ಸ್ವಾಮಿಗಳು ನೆರಳುತ್ತ ಬಂದು ಅಜ್ಜಯ್ಯನೇ! ಕೃಪೆಮಾಡಿ ರಕ್ಷಿಸೆಂದು ವಂದಿಸುವರು. ಶಿವಯೋಗಿಗಳು ಲಿಂಗಾರ್ಚನೆ ಪೂರೈಸಿ ನೀಲಕಂಠ ಸ್ವಾಮಿಗಳಿಗೆ ಭಸ್ಮ ಧರಿಸಿ ಪಾದೋದಕವೀಯಲು ಕೆಲವು ನಿಮಿಷಗಳಲ್ಲಿ ಜ್ವರವಿಳಿಯಿತು. ಶಿವಯೋಗಿಗಳು ಎಲ್ಲರೊಡನೆ ಉಳವಿಕ್ಷೇತ್ರಕ್ಕೆ ದಯಮಾಡಿಸಿ, ಗಣಾರಾಧನೆ ಮಾಡಿ, ಚಿತ್ರದುರ್ಗದ ಜಯದೇವ ಜಗದ್ಗುರುಗಳಿಗೆ ಮತ್ತು ಹರಗುರುಚರಮೂರ್ತಿಗಳಿಗೆ ಕಾಣಿಕೆ ಸಲ್ಲಿಸಿ, ಹರಕೆ ಪಡೆದು ಶೆಲವಡಿಗೆ ಬರುವರು. ಶಿವಯೋಗಿಗಳು ಮಠದ ಆವರಣದೊಳಗೆ ನೂರೆಂಟು ಬಿಲ್ವ ಸಸಿಗಳನ್ನು ಹಚ್ಚಿ ಹದಿನಾರು ಮಂಟಪ ರಚಿಸಿ, ಗುರುಜಂಗಮರ ಪಾದ ಪೂಜೆ ಮಾಡಿಸಿ, ಧನವಸನಾದಿಗಳನ್ನು ಸಮರ್ಪಿಸಿ ಭೂರಿ ಗಣಾರಾಧನೆ ಜರುಗಿಸಲು ಅವರ ಭಕ್ತಿಭಾವಕ್ಕೆ ಪಂಡಿತರು ಪೊಗಳಿದರು. ೧೨—೨೦

ಶಿವಯೋಗಿಗಳು ಒಂದುದಿನ ಶಾನುಭೋಗರ ವೀರಪ್ಪನನ್ನು ಕರೆಯಿಸಿ, ಇನ್ನು ಮೂರು ತಿಂಗಳಿಗೆ ಲಿಂಗೈಕ್ಯರಾಗುವೆವು. ಶಿವನ ಅಪ್ಪಣೆಯಾಗಿದೆ. ಮಠದ ವ್ಯವಸ್ಥೆಯನ್ನು ಮೊದಲಿನಂತೆ ಮುಂದಾದರೂ ನೋಡಿಕೊಳ್ಳುವದು ನಿನ್ನ ಹೊಣೆಯಾಗಿದೆಯೆಂದು ತಿಳಿಸಿದರು ಅಪ್ಪಗಳೇ! ತಾವು ಈ ರೀತಿ ಅಪ್ಪಣೆಕೊಡಿಸಬಾರದು. ನಮ್ಮಗಳ ರಕ್ಷಣೆಗೋಸುಗ ಇಹದಲ್ಲಿ ಇನ್ನೂ ಕೆಲದಿನ ಇರಬೇಕೆಂದು ವೀರಪ್ಪನು

ಬೇಡಿಕೊಳ್ಳುವಾಗ, ಬಸವರಾಜದೇವನು ದುಃಖಿಸಹತ್ತಿದನು. ದುಃಖಿಸುವದು ಉಚಿತವಲ್ಲ. ಮರಣವೇ ಮಹಾನವಮಿಯೆಂದು ಬಸವೇಶ್ವರನು ಹೇಳಿದ ವಚನಾರ್ಥವನ್ನು ಅರಿತು, ಮರಣಭಯವನ್ನು ತೊರೆದು, ಶಿವನಲ್ಲಿ ಐಕ್ಯವಾಗಬೇಕೆಂದು ಶಿವಯೋಗಿಗಳು ಅವರನ್ನು ಸಂತೈಸಿ, ಲಿಂಗಾರ್ಚನೆಗೆ ತೆರಳಿದರು. ದುಃಖವನ್ನೆಂತೋ ಸಹಿಸಿಕೊಂಡು ವೀರಪ್ಪನು ಮನೆಗೆ ಹೋದನು. ಮರಿದೇವನು ಗುರುಸೇವೆಯಲ್ಲಿ ತೊಡಗಿದನು. ಯಾವ ಶಿವಯೋಗೀಶ್ವರನಿಗೆ, ಸಂಚರಿಸುವಾಗ ಮಾರ್ಗದಲ್ಲಿ ಹರಿಯುವ ನಾಗಿಣೀನದಿಯು ಇಬ್ಭಾಗವಾಗಿ, ಪಾದಚಾರಿಯಾಗಿ ಹೋಗಲಿರುವ ಶಿವಯೋಗಿಗೆ ದಾರಿಕೊಟ್ಟಿತೋ ಆ ಸಿದ್ಧಲಿಂಗನನ್ನು ಭಕ್ತಿಯಿಂದ ನೆನೆಯುವ ಒಮ್ಮನ ನಮ್ಮಲ್ಲಿ ಅನವರತವಿರಲಿ. ೨೧—೨೯

ಹದಿನೇಳನೆಯ ಸಂಧಿ

ಲಿಂಗೈಕ್ಯರಾಗುವೆವೆಂದು ಹೇಳಿದ ಗುರುಗಳ ಭವಿಷ್ಯ ಸುಳ್ಳಾಗದೆಂದು ದರ್ಶನಕ್ಕೆ ಬಂದ ಚಂದ್ರಶೇಖರ ಶಾಸ್ತ್ರಿಗಳು ತಿಳಿದು, ಪೂಜ್ಯರೇ! ಮಠದ ಹಿಂದಿರುವ ಬಿಲ್ವವನದಲ್ಲಿ ತಮ್ಮ ಸಮಾಧಿ ಮಾಡಿದರೆ ಶೋಭಿಸುವದು; ಎನ್ನಲು ಶಾಸ್ತ್ರಿಗಳೇ, ಮಠವು ಮುಂದಕ್ಕೆ ಬರಬೇಕಲ್ಲದೆ ಹಿಂದಕ್ಕೆ ಹೋಗಬಾರದೆಂದು ಗುರುಗಳು ತಿಳಿಸುವರು. ಕೆಲದಿನ ಗತಿಸಿದ ಬಳಿಕ ಶಿವಯೋಗಿಗಳು ಹಲವೆಡೆಯ ಸ್ವಾಮಿಗಳನ್ನು ಕರೆಯಿಸಿ ಸಮಾಧಿ ಮಾಡುವ ಸ್ಥಳವನ್ನು ಸೂಚಿಸಲು,ಬಸವರಾಜದೇವರ ಮುಖ ಕಳೆಗುಂದುವದನ್ನು ಕಂಡು ಸ್ವಾಮಿಗಳೆಲ್ಲರು ಕಣ್ಣೀರಿಡುತ್ತಾರೆ. ವಿರತಿಧನರಾದ ನಿಮಗೆ ಅಶ್ರು ಬರುವದು ಅಚ್ಚರಿಯಾಗಿದೆ. ಪರಶಿವನಲ್ಲಿ ಅಡಗುವ ಸಮಯವೆಂದರೆ ಮುಕ್ತಿಕಾಂತೆಯ ಕರಪಿಡಿಯುವ ಮಂಗಳಮುಹೂರ್ತವೆಂದು ತಿಳಿದು ಶರಣರು ಹಿಗ್ಗುವರು. ಎಂದು ಶಿವಯೋಗಿಗಳು ಅವರನ್ನು ಸಂತೈಸಿ ಕಳಿಸಿದ ಬಳಿಕ, ಬಸವರಾಜದೇವನನ್ನು ಹತ್ತಿರ ಕರೆದು ಮನಃಶಾಂತಿಗೋಸುಗ ವೀರಶೈವ ಧರ್ಮ ತತ್ವವನ್ನು ಬೋಧಿಸುವರು. ೧—೭

ಶಿಷ್ಯಶಿಖಾಮಣಿಯೇ, ಶ್ರದ್ಧೆಯಿಂದ ಕೇಳು. ವೀರಶೈವರಿಗೆ ಅಷ್ಟಾವರಣವೇ ಅಂಗವಾಗಿದೆ. ಪಂಚಾಚಾರವೇ ಪ್ರಾಣವಾಗಿದೆ. ಷಟ್‌ಸ್ಥಲವೇ ಆತ್ಮವಾಗಿದೆ. ಈ ಮೂರರ ಇರವನ್ನು ತಿಳಿದರೆ ವೀರಶೈವ ಮತದ ನಿಲವು ತಿಳಿಯುವದು. ಸಾಮಾಜಿಕ ಕೃತಿಗಳು ಅಷ್ಟಾವರಣದಿಂದ ಕೂಡಿಕೊಂಡಿವೆ. ಪಂಚಾಚಾರಗಳು ನೀತಿಯನ್ನುಂಟು ಮಾಡುತ್ತವೆ. ಷಟ್‌ಸ್ಥಲಗಳು ಮತಸಿದ್ಧಾಂತವನ್ನು ಪ್ರಚುರ ಪಡಿಸುತ್ತವೆ. ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ, ಮಂತ

ಗಳೆಂಬ ಅಷ್ಟಾವರಣಗಳು ಪ್ರತಿದಿನ ಗೈಯುವ ಆಚರಣೆಗೆ ಮುಖ್ಯವೆನಿಸಿವೆ. ಗುರು ಲಿಂಗ-ಜಂಗಮರು ನಮಗೆ ಉಪಾಸ್ಯರಾಗಿದ್ದಾರೆ. ಇವರ ಉಪಾಸನೆಗೆ ವಿಭೂತಿ ರುದ್ರಾಕ್ಷಿ ಮಂತ್ರಗಳು ಸಾಧನವಾಗಿವೆ. ಪಾದೋದಕ ಪ್ರಸಾದಗಳು ಉಪಾಸನೆಯ ಫಲಗಳಾಗಿವೆ. ಗುರುಹರಚರರೂಪವಾದ ಮೂರು ಲಿಂಗಗಳನ್ನು ಸದ್ಭಕ್ತಿಯಿಂದ ಪೂಜಿಸಬೇಕಲ್ಲದೆ, ನಾಡದೈವಗಳ ಪೂಜೆಯನ್ನು ಮಾಡಕೂಡದೆಂಬ ನಿಯಮದಿಂದ ನಮ್ಮ ಸಮಾಜ ಧರ್ಮ ಕೂಡಿಕೊಂಡಿದೆ ಶಿವನ ಸತ್ಸ್ವರೂಪರೇ ಗುರು-ಲಿಂಗ-ಜಂಗಮರು. ಶಿವನ ತೇಜವೇ ಭಸ್ಮವು. ಶಿವನ ಜ್ಞಾನನೇತ್ರವೇ ರುದ್ರಾಕ್ಷಿಯು. ಶಿವನ ನಾಮವೇ ಮಂತ್ರ. ಶಿವನ ದಯಾರಸವೇ ತೀರ್ಥ. ಶಿವನ ಪ್ರಸನ್ನತೆಯೇ ಪ್ರಸಾದವೆಂದು ನಿಷ್ಠೆಯಿಂದ ನಡೆದರೆ ಶಿವನ ಸದ್ರೂಪ ನಮ್ಮಲ್ಲಿ ನೆಲಿಸುವದು. ಈ ಧರ್ಮತತ್ವಜ್ಞಾನವನ್ನು ಮನನಮಾಡಿಕೊಂಡು ನಿನ್ನನ್ನಾಶ್ರಯಿಸಿದವರಿಗೆ ಬೋಧಿಸು.

ಶಿಷ್ಯೋತ್ತಮನೇ ! ಇನ್ನು ನೀತಿಯನ್ನು ಪ್ರತಿಪಾದಿಸುವ ಪಂಚಾಚಾರ ಗಳನ್ನು ಕೇಳು. ಧರ್ಮಾಚರಣೆ ನೀತಿಬಾಹಿರವಾದರೆ ಫಲಕೊಡದು. ನೀತಿಯೇ ಧರ್ಮಕ್ಕೆ ನೆಲಗಟ್ಟು. ಮತಬಾಹಿರರಾದರೂ ನೀತಿಬಾಹಿರರಾಗಬಾರದೆಂದು ಶಿವ ಶರಣರು ಹೇಳುವರು. ಅಂಗಗುಣಗಳನ್ನು ಹಿಂಗಿ ತಮ್ಮಲ್ಲಿ ಲಿಂಗಗುಣಗಳನ್ನು ಅಳವಡಿಸಿಕೊಳ್ಳುವದೇ ಲಿಂಗಾಚಾರವು. ಲಿಂಗವಂತರು ಸದಾ ತಮ್ಮ ಅಂಗದಲ್ಲಿ ಧರಿಸಿದ ಇಷ್ಟಲಿಂಗದ ಸಂಗವನ್ನು ಬಿಡದೆ ಆಚರಿಸಬೇಕು. ಲಿಂಗಗುಣಗಳನ್ನು ಪಡೆದೆಶಿವ ಲಿಂಗವಂತರು ಮೆಚ್ಚುವಂತೆ ನಡೆದು, ಕಾಯಕವೇ ಲಿಂಗಪೂಜೆಯೆಂದು ಮಾಡಿ, ಆ ಮುಖವಾಗಿ ಗಳಿಸಿದ್ದನ್ನು ಗುರು-ಲಿಂಗ-ಜಂಗಮರಿಗೆ ಸಮರ್ಪಿಸಿ, ಅವರಿತ್ತ ಪ್ರಸಾದವನ್ನು ಸಂತೋಷದಿಂದ ಭೋಗಿಸುವದೇ ಸದಾಚಾರವೆನಿಸು ವದು. ತನ್ನೊಳಗಲ್ಲದೆ, ಶಿವಭಕ್ತರಲ್ಲಿಯೂ ಪರಶಿವನ ರೂಪವನ್ನು ಕಂಡು, ಅವ ರಲ್ಲಿ ಗೌರವಪಿಟ್ಟು ನಡೆದುಕೊಳ್ಳುವದೇ ಶಿವಾಚಾರವೆನಿಸುವದು ಲಿಂಗವ್ರತಕ್ಕೆ ಭಂಗಬಂದರೆ ಅದನ್ನು ಹೊಡೆದೋಡಿಸುವದೇ ಗಣಾಚಾರವು ಈ ಗಣಾಚಾರ ವನ್ನು ಪಡೆಯದಿದ್ದರೆ ತಮ್ಮ ಧರ್ಮದಲ್ಲಿ ಇಷ್ಟಾರ್ಥ ಸಿದ್ಧಿಯನ್ನು ಪಡೆಯರೆಂದು ಬಲ್ಲವರು ಹೇಳುವರು. ಇಂತಿರುವ ನಾಲ್ಕು ಆಚರಣೆಗಳನ್ನು ಪಡೆದವರು ನಿರ ಹಂಭಾವದಿಂದ ಸಮಾಜಸೇವೆ ಮಾಡುತ್ತ, ಶಾಂತಿ ಸಮತಾದಿಗಳನ್ನು ಪಡೆಯು ವದೇ ಭೃತ್ಯಾಚಾರವೆನಿಸುವದು. ೮—೨೨

ಶಿಷ್ಯೋತ್ತಮನೇ ! ಮತಸಿದ್ಧಾಂತಕ್ಕೆ ಭವ್ಯಭವನವಾದ ಷಟ್‌ಸ್ಥಲ ತತ್ವವನ್ನು ಲಕ್ಷನಿಟ್ಟು ಕೇಳು. ಶಿವನು ವಿಶ್ವದ ಜನನಾದಿಗಳಿಗೆ ಆಶ್ರಯನೆನಿಸಿ ಬೆಳಗುವದರಿಂದ ಸ್ಥಲವೆನಿಸಿದನು. ಸ್ಥಲನಾಮಕ ಶಿವನೇ ಪೂಜ್ಯಪೂಜಕ ಲೀಲೆಗೆಳಸಿ, ಲಿಂಗಾಂಗ ವೆಂದು ದ್ವಿವಿಧಸ್ವರೂಪವನ್ನು ಹೊಂದಿದ್ದಾನೆ. ಲಿಂಗನೇ ಪೂಜ್ಯನು, ಅಂಗನೇ ಪೂಜ

ಕನು. ಶಿವನ ಶಕ್ತಿಯು ಶಿವನಂತೆ ದ್ವಿವಿಧರೂಪಗೊಂಡು, ಲಿಂಗದೊಳಗೆ ಕಳೆಯೆಂಬ ಹೆಸರಿನಿಂದ, ಅಂಗದೊಳಗೆ ಭಕ್ತಿಯೆಂಬ ಹೆಸರಿನಿಂದ ಇರುವದು. ಆದ್ದರಿಂದ ವೀರಶೈವ ಮತವು ಶಕ್ತಿವಿಶಿಷ್ಟವೆಂದು ಪಂಡಿತರಿಗೆಲ್ಲ ಚನ್ನಾಗಿ ಗೊತ್ತಿದೆ. ಅಂಗನಲ್ಲಿ ರುವ ಭಕ್ತಿಶಕ್ತಿಯು ಲಿಂಗದ ಉಪಾಸನೆಯಿಂದ ವಿಕಾಸ ಪಡೆಯುವದೇ ಮುಕ್ತಿಯ ಸ್ಥಿತಿಯು. ಇದರಿಂಗಿತವರಿತು ಆಚರಿಸುವದೇ ಷಟ್‌ಸ್ಥಲಸಿದ್ಧಾಂತದ ತಿರುಳಾಗಿದೆ. ಅಂಗನು ತನ್ನ ತನುಕರಣಗಳಲ್ಲಿ ಲಿಂಗವನ್ನಿರಿಸಿಕೊಂಡು ಪೂಜಾದಿಕೃತ್ಯವನ್ನೆಸಗು ವದಕ್ಕೆ ಲಿಂಗವು ಭೇದವಾದಂತೆ, ಪೂಜಿಸುವದಕ್ಕಾಗಿ ಅಂಗನೂ ಭೇದಹೊಂದು ವನು. ಇದೇ ಷಟ್‌ಸ್ಥಲದ ವಿವಿಧತೆಗೆ ಕಾರಣವಾಗಿದೆ. ಲಿಂಗನು ಅಂಗನ ಮೂರು ಶರೀರಗಳಲ್ಲಿ ಇಷ್ಟ, ಪ್ರಾಣ, ಭಾವಗಳೆಂಬ ಹೆಸರಿನಿಂದ ಪೂಜೆಗೊಳ್ಳುವನು. ಅಂಗನು ತ್ಯಾಗಿ ಭೋಗಿ ಯೋಗಿಯೆಂಬ ಹೆಸರಿನಿಂದ ಪೂಜಿಸುವನು ಬಹಿರಿಂದ್ರಿಯಗಳೈದು, ಮನವೊಂದು, ಈ ಆರು ಕರಣಗಳಲ್ಲಿ ಪೂಜೆಗೊಳ್ಳುವದಕ್ಕಾಗಿ ಲಿಂಗವು ಕ್ರಮವಾಗಿ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಚರಲಿಂಗ, ಪ್ರಸಾದಲಿಂಗ, ಮಹಾಲಿಂಗ ನಾಮುಗಳಿಂದ ಶೋಭಿಸುವದು. ಅವುಗಳನ್ನು ಪೂಜಿಸುವ ಇಚ್ಛೆಯಿಂದ ಅಂಗನು ಅನುಕ್ರಮವಾಗಿ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ನಾಮುಗ ಳನ್ನು ಪಡೆದನು. ಇದೇ ಷಟ್‌ಸ್ಥಲದ ಲಿಂಗಾಂಗಗಳ ಆರು ಭೇದವೆನಿಸುವದು. ಮೊದಲು ಭಾವಲಿಂಗ, ಪ್ರಾಣಲಿಂಗ ಇಷ್ಟಲಿಂಗಗಳಲ್ಲಿ ಸತ್, ಚಿತ್, ಆನಂದ ರೂಪ ವಾದ ಕಲೆಯು ಮತ್ತೆ ಆಚಾರಾದಿ ಲಿಂಗಗಳಲ್ಲಿ ನಿವೃತ್ತ್ಯಾದಿ ಷಡ್ವಿಧರೂಪ ತಳೆದು ಶೋಭಿಸುವದು. ವಿಚಾರಿಸಿದರೆ ಅಂಗಗತ ಭಕ್ತಿಶಕ್ತಿಯು ಸ್ಥೂಲ ಸೂಕ್ಷ್ಮ ಕಾರಣ ಶರೀರಗಳಲ್ಲಿ ಸತ್ಕ್ರಿಯಾ ಸಮ್ಯಗ್‌ಜ್ಞಾನ ಪರಮಾನುಭವ ರೂಪಗಳಿಂದ ನೆಲಿಸಿರು ವದು. ಭಕ್ತಿಯು ಶ್ರದ್ಧೆ, ನಿಷ್ಠೆ, ಅವಧಾನ, ಅನುಭವ, ಆನಂದ, ಸಮರಸ ನಾಮು ದಿಂದ ಭಕ್ತ, ಮಾಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಸ್ಥಲಗಳಲ್ಲಿ ಬೆಳಗು ವದು. ಅನುಪಾನದೊಳು ವಿಕಾಸಗೊಳ್ಳುತ್ತ ಸಮರಸಗೈಯ್ಯುವದೇ ಷಟ್‌ಸ್ಥಲ ಮಾರ್ಗದಲ್ಲಿ ಮುಕ್ತಿಸ್ಥಿತಿ ಎನಿಸುವದು. ಇದನ್ನೆಲ್ಲ ನೀನು ಚನ್ನಾಗಿ ತಿಳಿದು ಮಠ ದಲ್ಲಿ ಭಕ್ತರಿಗೆ ಉಪದೇಶ ಮಾಡುತ್ತ ಸುಖಿಯಾಗಿರೆಂದು ಬೋಧಿಸಲು, ಬಸವರಾಜ ದೇವನು ತಥಾಸ್ತುಯೆಂದು ಗುರುಗಳಿಗೆ ಸಾಷ್ಟಾಂಗವೆರಗಿದನು. ೨೩—೩೪

ಕೆಲ ದಿನಗಳ ನಂತರ ಶಿವರಾತ್ರಿ ಬರಲು ಶಿವಯೋಗಿಗಳು ಆನಂದದಿಂದ ಲಿಂಗಾರ್ಚನೆ ಮಾಡಿ ಗಣಾರಾಧನೆ ಮಾಡಿಸಿದರು. ಮೂರನೆಯ ದಿನದ ಉದಯದಲ್ಲಿ ಲಿಂಗಾರ್ಚನೆ ತೀರಿಸಿ ಪೀಠದಲ್ಲಿ ಮುಹೂರ್ತಮಾಡಿ ಶಿವಯೋಗಿಗಳು ಭಕ್ತರಿಗೆ ಬೋಧಿಸುತ್ತಿರುವಾಗ ಬಸವರಾಜದೇವನು ಬಂದು, ಮಧ್ಯಾಹ್ನದ ಶಿವಪೂಜೆಗೆ ಸಿದ್ಧತೆ ಯಾಗಿದೆಯೆಂದು ತಿಳಿಸಲು, ಬಸವರಾಜನೇ, ಕೈಹಿಡಿದೆಬ್ಬಿಸು. ಅದೇಕೋ ಹೃದಯ

ದಲ್ಲಿ ನಸುನೋವು ಉಂಟಾಗಿದೆಯೆಂದು ಹೇಳುತ್ತ ಮೂರ್ಛೆ ಹೋಗುತ್ತಾರೆ. ಬಸವರಾಜನು ಗುರುಗಳ ಬಗಲಲ್ಲಿ ಕೈಹಾಕಿ ಎತ್ತಿಕೂಡ್ರಿಸಿ ಅಂಗಾಲುಗಳಿಗೆ ಬಿಸಿ ಬೂದಿ ತಿಕ್ಕಲು, ಗುರುಗಳು ಕಣ್ದೆರೆದು, ಹೊರಗೆ ಹೋಗುವೆನೆಂದು ಎರಡು ಸಲ ಉಚ್ಚರಿಸುತ್ತಾರೆ. ಬಹಿಃಕ್ರಿಯೆಗೆ ಹೋಗಬಹುದೆಂದು ಬಗೆದು, ಬಸವರಾಜದೇವನು ತಾವಿನ್ನು ಹೊರಗೆ ಹೋಗಬಾರದು. ಎಲ್ಲಾ ಸೇವೆಗೆ ನಾನು ಸಿದ್ಧನಿರುವೆನೆಂದು ಹೇಳಲು, ಗುರುಗಳು ಬಸವರಾಜದೇವನಿಗೆ ಆಶೀರ್ವದಿಸಿ ಶಾಲಿವಾಹನ ಶಕೆ ೧೮೫೩ ಫಾಲ್ಗುಣ ಶುದ್ಧ ಬಿದಗಿ ದಿವಸ ನೆರೆದ ಭಕ್ತರಿಗೆ ಆಶೀರ್ವದಿಸಿ, ಶಿವಧ್ಯಾನ ಮಾಡುತ್ತ ಲಿಂಗೈಕ್ಯರಾಗುತ್ತಾರೆ. ಬಸವರಾಜದೇವರು ಶೋಕಾಕ್ರಾಂತರಾಗಿರಲು ಊರ ಹಿರಿಕಿರಿಯರೆಲ್ಲರೂ ಮಠಕ್ಕೋಡಿ ಬಂದು, ಗುರುದರ್ಶನ ಇನ್ನಿಲ್ಲವಾಯ್ತೆಂದು ದುಃಖಿಸಿದರು. ೩೫—೪೩

ಪ್ರಮುಖರು ಎಲ್ಲ ಕಡೆಗೆ ತಂತಿ ಕಳಿಸಲು, ಶಿವಯೋಗ ಮಂದಿರದಲ್ಲಿದ್ದ ನವಿಲುಗುಂದ ಬಸವಲಿಂಗ ಮಹಾಸ್ವಾಮಿಗಳು ಚಿಂತಿಸಿ, ಗುಳೇದಗುಡ್ಡದ ನೀಲಕಂಠ ಸ್ವಾಮಿಗಳನ್ನು ಕುರವತ್ತಿಯ ಮಹಾದೇವ ಸ್ವಾಮಿಗಳನ್ನು ಕೂಡಿಕೊಂಡು ಬರುವರು. ಗದಗ ಹೊಸಹಳ್ಳಿ ಮೊದಲಾದ ಸ್ವಾಮಿಗಳು ಬರುವರು. ಬಸವಲಿಂಗ ಮಹಾಸ್ವಾಮಿಗಳು ಗುರುಚರರೊಡನೆ ವಿಧ್ಯುಕ್ತವಾಗಿ ಸಮಾಧಿ ಕ್ರಿಯೆಗಳನ್ನು ತೀರಿಸಿದರು. ಗದ್ದುಗೆಗೆ ಹನ್ನೊಂದು ದಿವಸ ರುದ್ರಾಭಿಷೇಕ, ಗಣಾರಾಧನೆ ಮಾಡುತ್ತ ಕೊನೆಯ ದಿವಸ ತೆಂಗೊಡೆದ ನೀರು ಮಡುವಾಯಿತು. ಧೂಪಧೂಮ ನಾಲ್ಕುಸಿಟ್ಟಿಗೆ ಹಬ್ಬಿತು. ಕರ್ಪುರದೀಪ ಬಿಡದೆ ಬೆಳಗಿತು. ಬಿಲ್ವಪತ್ರೆ ಗದ್ದುಗೆಯನ್ನು ಮುಚ್ಚಿತು. ಬಸವರಾಜದೇವರು ಭಕ್ತರೊಡಗೂಡಿ ಪ್ರತಿವರ್ಷ ಗುರುಗಳ ಲಿಂಗೈಕ್ಯ ದಿನಾಚರಣೆಯನ್ನು ಉತ್ಸಾಹದಿಂದ ಜರುಗಿಸುವರು. ಶಾಲಿವಾಹನ ಶಕೆ ೧೮೭೬ನೆಯ ಸಂವತ್ಸರದಿಂದ ಗುರುಗಳ ರಥೋತ್ಸವವನ್ನು ಭಕ್ತರು ಸಂತಸದಿಂದ ಜರುಗಿಸುತ್ತಿರುವರು. ಯಾವ ಕೃಪಾಳು ಬೋಳಬಸವೇಶನಿಗೆ ಷಟ್‌ಸ್ಥಲ ತತ್ವವನ್ನುಪದೇಶಿಸಿ, ತನ್ನ ಜಂಗಮಾಧಿಕಾರವನ್ನು ಅವರಿಗೆ ಕೊಟ್ಟನೋ ಆ ಸಿದ್ಧಲಿಂಗನಿಗೆ ಆಳಾಗಿ ಬಾಳುವ ಸುಖಜೀವನ ನಿರಂತರ ನಮ್ಮದಾಗಿರಲಿ. ೪೪—೫೩

ಹದಿನೆಂಟನೆಯ ಸಂಧಿ

ಬಸವರಾಜ ದೇಶಿಕನು ಗುರುಗಳ ಗದ್ದುಗೆ ಕಟ್ಟಿಸಿ, ನವಿಲುಗುಂದ ಬಸವಲಿಂಗ ಮಹಾಸ್ವಾಮಿಗಳ ಸನ್ನಿಧಿಯಲ್ಲಿ ಶಿಲವಡಿ ಮತ್ತು ಹರಿಹರ ಭಕ್ತರನ್ನು ಕೂಡಿಸಿ, ಗದ್ದುಗೆಯ ಮೇಲೆ ಕಟ್ಟಡ ಮಾಡಿಸಬೇಕೆಂದು ತಿಳಿಸಿದರು. ಕಟ್ಟಡದ ಅಡಿಗಲ್ಲನ್ನು

ಬಸವಜಯಂತಿಯು ದಿವಸ ಧಾರವಾಡ ಮೃತ್ಯುಂಜಯ ಶಿವಯೋಗಿಗಳ ಹಸ್ತದಿಂದ ಇಡಿಸಬೇಕೆಂದು ಚಂದ್ರಶೇಖರ ಶಾಸ್ತ್ರಿಗಳು ಹೇಳುತ್ತಾರೆ. ಇದಕ್ಕೆಲ್ಲರೂ ಒಪ್ಪಿ ಮಂಗಲಮಾಡಿ ಮಠದ ಸತ್ಕಾರ್ಯದಲ್ಲಿ ತೊಡಗಿದರು. ವಸಂತಮಾಸ ಪ್ರಾಪ್ತವಾಗಿ ಎಲ್ಲರಿಗೆ ಆನಂದವನ್ನುಂಟುಮಾಡುವದು. ಸಂಧ್ಯಾಕಾಲದಲ್ಲಿ ಬಯಲೊಳಗೆ ತಿರುಗಾಡುವ ಯುವತೀಯುವಕರಿಗೆ ನಲವೊಂದಿಸುವದಕ್ಕೆ ಮಧುಮಿತ್ರನಾದ ಮಂದಾನಿಲನು ಸುಳಿಯತೊಡಗಿದನು. ಆ ಸಮಯದಲ್ಲಿ ಗಿಳಿಗಳಿಗೆ ತನಿವಣ್ಣನ್ನು, ಕೋಗಿಲೆಗಳಿಗೆ ಚಿಗುರೆಲೆಗಳನ್ನು, ಭೃಂಗಗಳಿಗೆ ಪುಷ್ಪರಸವನ್ನು ಉಣಬಡಿಸುವದಕ್ಕೋಸುಗ ನೇಮಿನಿಂದ ವನಲಕ್ಷ್ಮಿ ಗೈಸಿದ ತೊಳಪ ಭೋಜನಶಾಲೆಗಳೆಂಬಂತೆ ಮಾವಿನಮರಗಳು ಫಲಪಲ್ಲವ ಪುಷ್ಪಗಳಿಂದ ಕಂಗೊಳಿಸುತ್ತಿದ್ದವು. ಉದಯಕಾಲದಲ್ಲಿ ಭಕ್ತರು ಉಲ್ಲಸಿತರಾಗಿ, ಮಲ್ಲಿಗೆ ಸಂಪಿಗೆ ಮೊದಲಾದ ಹೊಸ ಕುಸುಮಗಳನ್ನು ತಂದು, ಎಲ್ಲ ಬಯಕೆಗಳನ್ನು ಕರುಣಿಸುವ ಗುರುವರನ ಸಮಾಧಿಗೆ ಧರಿಸುತ್ತಿದ್ದರು. ೧—೯

ಬಸವಜಯಂತಿಯು ಬರುವ ಎರಡು ದಿನ ಮೊದಲು, ನಾಡಿನ ಸದ್ಭಕ್ತರೂ, ಧಾರವಾಡ ಮೃತ್ಯುಂಜಯ ಶಿವಯೋಗಿಗಳೂ ನವಿಲುಗುಂದ ಬಸವಲಿಂಗ ಮಹಾಸ್ವಾಮಿಗಳೂ ಮುರುಗೋಡ, ಗುಳೇದಗುಡ್ಡ, ಗದಗ, ಹೊಸಹಳ್ಳಿ, ಸವದತ್ತಿ, ಕಿತ್ತೂರ, ಯಕ್ಕುಂಡಿ, ಬೈಲಹೊಂಗಲ, ಮುನವಳ್ಳಿ, ನಂದಿವೇರಿ ಮೊದಲಾದ ಊರುಗಳ ಸ್ವಾಮಿಗಳೂ, ಪಂಡಿತರೂ, ಕವಿಗಳೂ, ಕಲಾವಿದರೂ, ಆಗಮಿಸಿದರು. ಬಸವರಾಜ ದೇಶಿಕನ ಬಿನ್ನಹದಂತೆ ದಯಮಾಡಿಸಿದ ಚಿತ್ರದುರ್ಗದ ಜಯದೇವ ಜಗದ್ಗುರುಗಳನ್ನು ಸರ್ವರೂ ಸೇರಿ ಮಹೋತ್ಸವದೊಡನೆ ಬಿಜಯಂಗೈಸಿಕೊಳ್ಳುವರು. ಬಸವಜಯಂತಿಯ ದಿವಸ ವಾದ್ಯಗಳು ಮೊಳಗುತ್ತಿರಲು ಜಗದ್ಗುರುಗಳ ಅಪ್ಪಣೆ ಪಡೆದು ಮೃತ್ಯುಂಜಯ ಶಿವಯೋಗಿಗಳು ಅಡಿಗಲ್ಲನ್ನು ಇಡಲು, ಜಯಘೋಷವು ಎಂಟು ದಿಕ್ಕುಗಳಲ್ಲಿ ಪಸರಿಸಿತು ಜಗದ್ಗುರುಗಳ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಸಮಾಜದ ಉನ್ನತಿಗೆ ಹೇತುವಾದ ಬಸವೇಶ್ವರನ ಭಕ್ತಿತತ್ವಗಳನ್ನೂ ಮಹತ್ಕಾರ್ಯಗಳನ್ನೂ ಕುರಿತು ಪಂಡಿತರು ಭಾಷಣ ಮಾಡಿದನಂತರ ಅಧ್ಯಕ್ಷರ ಸಮಾರೋಪ ಆಶೀರ್ವಚನದೊಡನೆ ಸಭೆ ಮುಗಿಯಿತು. ನಾಡಿನ ಸದ್ಭಕ್ತರು ತಮ್ಮ ತಮ್ಮೂರಿಗೆ ಹೊರಡುವಾಗ ಶಲವಡಿಯ ಭಕ್ತರು ಜಗದ್ಗುರುಗಳ ಸನ್ನಿಧಿಯಲ್ಲಿ ಎಲ್ಲ ಜನಗಳ ಸಮಕ್ಷಮ ಬಸವರಾಜ ದೇಶಿಕನಿಗೆ ಚರಪಟ್ಟಾಧಿಕಾರ ಮಾಡಿಸುವ ಶುಭ ದಿನವನ್ನು ಗೊತ್ತುಮಾಡಿ, ಜಂಗಮ ಭಕ್ತಿಯಿಂದ ಕಂಗೊಳಿಸುವ ಮೃತ್ಯುಂಜಯ ಶಿವಯೋಗಿಗಳಿಗೆ ಪೂರ್ವಸಿದ್ಧತೆಗಾಗಿ ಒಂದು ತಿಂಗಳ ಮುಂಚಿತ ದಯಮಾಡಿಸಬೇಕೆಂದು ಬಿನ್ನವಿಸಿಕೊಂಡರು. ೧೦—೨೨

ಶ್ರೀ ಮೃತ್ಯುಂಜಯಪ್ಪಗಳು ಒಂದು ತಿಂಗಳು ಮಠದಲ್ಲಿ ನೆಲಸಿದರು. ಇವರ ಅಪ್ಪಣೆಯಂತೆ ಶಿಲವಡಿಯ ಭಕ್ತರು ಸರ್ವವಸ್ತುಗಳನ್ನು ಸಂಗ್ರಹಿಸುತ್ತ ಮಠವನ್ನೂ, ಮನೆಗಳನ್ನೂ, ಬೀದಿಗಳನ್ನೂ ಸಿಂಗರಿಸಿದರು. ಶುಭದಿನ ಬರಲು ಪಟ್ಟಾಧಿಕಾರಕ್ಕೋಸುಗ ಎಲ್ಲ ಕಡೆಯ ಜನಗಳು ಬರುವರು. ಮಂಟಪದ ಮಧ್ಯಪೀಠದಲ್ಲಿ ನವಿಲುಗುಂದ ಬಸವಲಿಂಗ ಮಹಾಸ್ವಾಮಿಗಳು ವಿರಾಜಮಾನರಾಗಿದ್ದರು. ಮಂಗಳವಾದ್ಯ ಮೊಳಗುತ್ತಿರೆ ಆಗಮಜ್ಞರು ಬಸವರಾಜ ದೇಶಿಕನಿಗೆ ಮಂಗಳಸ್ನಾನ ಮಾಡಿಸಿ ಬಸವಲಿಂಗ ಮಹಾಸ್ವಾಮಿಗಳಿಗೆ ಸಾಷ್ಟಾಂಗವೆರಗಿಸಿ, ಸಮ್ಮುಖವಾಗಿ ಕುಳ್ಳಿರಿಸಿ, ಸಾಂಗವಾಗಿ ಸಂಸ್ಕಾರ ಮಾಡಿದರು ಬಸವಲಿಂಗ ಮಹಾಸ್ವಾಮಿಗಳು ಬಸವರಾಜ ದೇಶಿಕನಿಗೆ ಚಿದುಪದೇಶ ಮಾಡಿ, ಶಲವಡಿ ಮತ್ತು ಹರಿಹರ ಮಠಗಳ ಒಡೆತನದ ಪಟ್ಟಗಟ್ಟಿದರು. ನೂತನ ಸ್ವಾಮಿಯನ್ನು ಪಲ್ಲಕ್ಕಿಯಲ್ಲಿ ಮುಹೂರ್ತಮಾಡಿಸಿ, ಪುರಬೀದಿಗಳಲ್ಲಿ ಸಂಭ್ರಮದಿಂದ ಉತ್ಸವ ಮಾಡಿ ಮಠದಲ್ಲಿ ನಿರ್ಮಿಸಿದ ಶೂನ್ಯಪೀಠದಲ್ಲಿ ಕುಳ್ಳಿರಿಸಿ, ಕಾಣಿಕೆ ಸಲ್ಲಿಸಿ, ಭಕ್ತರು ಹರಗುರು ಚರಮೂರ್ತಿಗಳಿಗೆ ಉಡುಗರೆ ಸಮರ್ಪಿಸಿ ಸತ್ಕರಿಸಿದರು. "ಗುರುಗಳು ಬೋಧಿಸುವ ಭಕ್ತಿಸರಣಿಯನ್ನು ರಕ್ಷಿಸುವದಕ್ಕೋಸ್ಕರ, ಎಲ್ಲ ಕಡೆಗೆ ಸಂಚರಿಸುತ್ತ, ಭಕ್ತರ ಭಕ್ತಿಯನ್ನು ಪರೀಕ್ಷಿಸುವದೇ ಜಂಗಮರ ಕಾಯಕವು. ಈ ಕಾರ್ಯಗೈಯುವ ಶಕ್ತಿಯನ್ನು ಗುರು ಶಾಂತೇಶನು ನನಗೆ ಕೊಡಲೆಂದು ಬೇಡುವೆನಲ್ಲದೆ ಮತ್ತೊಂದು ಬೇಡೆನು" ಎಂದು ಬಸವರಾಜ ಸ್ವಾಮಿಗಳು ಸಭಿಕರಿಗೆ ಹೇಳಲು ಅವರು ಸಂತುಷ್ಟರಾಗುವರು. ಬಸವರಾಜ ಸ್ವಾಮಿಗಳು ಭಕ್ತರೊಡಗೂಡಿ ಚರವೃಂದವನ್ನೂ, ಭಕ್ತಬಳಗವನ್ನೂ ಸತ್ಕರಿಸಿ ಕಳಿಸಿಕೊಡುವರು. ೨೩--೩೩

ಬಸವರಾಜ ಸ್ವಾಮಿಗಳು ಕಟ್ಟಡಕಾರ್ಯಕ್ಕೆ ತೊಡಗಲು, ಸವದತ್ತಿ ರುದ್ರಪ್ಪ, ಈಶ್ವರಪ್ಪ, ಹಸಬಿ ಚಂಬಣ್ಣ, ಎರಗುಪ್ಪಿ ಬಸಪ್ಪ, ಹುರಕಡ್ಲಿ ರುದ್ರಪ್ಪ, ಗಡಾದ ಚನ್ನಪ್ಪ, ಸೊರಬದ ದಿಂಡಪ್ಪ, ಕುಲಕರ್ಣಿ ದೊಡ್ಡಮನೆ ವೀರಪ್ಪ, ಸಣ್ಣಮನೆ ವೀರಪ್ಪ, ಮೊದಲಾದ ಕುಲಕರಣಿಯವರ ಮನೆತನದವರು, ಪೋಲೀಸ ಪಾಟೀಲ ಶಂಕರಗೌಡ, ತೆಗ್ಗಿನಮನೆ ವೈದ್ಯ. ಹೊಸಮಠದ ವೈದ್ಯ, ಷಡಕ್ಷರಯ್ಯಗಳು ಇವರೇ ಮೊದಲಾದ ಶಿಲವಡಿಯ ಭಕ್ತರಲ್ಲದೆ, ಕುರಹಟ್ಟಿ, ಕನ್ನೂರ. ನಾವಳ್ಳಿ, ನಾಯಕನೂರ ಮೊದಲಾದ ಊರುಗಳ ಭಕ್ತರು ವಿಶ್ವಾಸದಿಂದ ಮಠದ ಸೇವೆ ಮಾಡುತ್ತ, ಬಸವರಾಜ ಸಾಮಿಗಳೊಡಗೂಡಿ ಎಂಟು ವರ್ಷಗಳಲ್ಲಿ ಎಂಬತ್ತು ಸಾವಿರ ರೂಪಾಯಿಗಳನ್ನು ಜನತೆಯಿಂದ ಸಂಗ್ರಹಿಸಿ, ನಿರಹಂಭಾವದಿಂದ ಶ್ರೀ ಸ್ವಾಮಿಯೇ ಕಟ್ಟಿಸಿದನೆಂದು, ಶ್ರೇಷ್ಠ ಶಿಲೆಗಳಿಂದ ಗದ್ದುಗೆಯ ಮೇಲೆ ಮನೋಹರ ಮಂಟಪ ಕಟ್ಟಿಸಿದರು.

೩೪—೩೯

ಭವನದ ಶಿಖರದ ಮೇಲೆ ಕಲಶವನ್ನು ಚಿತ್ರದುರ್ಗದ ಜಯದೇವ ಜಗದ್ಗುರುಗಳ ಅಮೃತಹಸ್ತದಿಂದ ಇರಿಸಬೇಕೆಂದು ಜನರು ನಿರ್ಣಯಿಸಿ, ಪೂರ್ವಸಿದ್ಧತೆ ಮಾಡಿಕೊಂಡರು. ಹರಗುರು ಚರಮೂರ್ತಿಗಳನ್ನೂ ಸದ್ಭಕ್ತರನ್ನೂ ಬರಮಾಡಿಕೊಂಡರು. ಸ್ನೇಹರಸದಿಂದ ತಮ್ಮ ಸರ್ವರ ಇಚ್ಛಿತಾರ್ಥವನ್ನೀಯುವವನೂ, ಹೃದಯವನ್ನು ತೋಯಿಸಿದ ಮಿತ್ರವರ್ಯ ಗುರುಶಾಂತೇಶನ ಮಂದಿರಕ್ಕೆ ಕಲಶವಿಡಲು ಜಯದೇವ ಜಗದ್ಗುರುಗಳು ಜಯವಿಭವ ಜಗದ್ಗುರುಗಳೊಡನೆ ದಯಮಾಡಿಸಿದರು. ಜನಗಳು ಉತ್ಸವದೊಡನೆ ಸ್ವಾಗತಿಸಿ, ಮಠಕ್ಕೆ ಬಿಜಯಂಗೈಸಿಕೊಂಡು, ಸಾಷ್ಟಾಂಗವೆರಗಿ ಆಶೀರ್ವಾದ ಪಡೆದು ಸಂತುಷ್ಟರಾದರು. ನೂತನ ಶಿಲಾಮಂಟಪದೊಳಗೆ ಜಗದ್ಗುರುಗಳ ಸನ್ನಿಧಿಯಲ್ಲಿ ಕಲಶಕ್ಕೆ ಅಭಿಷೇಕಮಾಡಿ, ಪೂಜಿಸಿ, ಕುಸುಮಮಾಲೆಗಳಿಂದ ಭಕ್ತರು ಅಲಂಕರಿಸುವರು. ಮನೋಹರವಾದ ಶಿಖರದಲ್ಲಿ ಜಯದೇವ ಜಗದ್ಗುರುಗಳು ತಮ್ಮ ಅಮೃತಕರದಿಂದ ಕಲಶವನ್ನು ಸಂಸ್ಥಾಪಿಸಿದರು. ಭಕ್ತವೃಂದದ ಜಯಘೋಷದೊಡನೆ ವಾದ್ಯರವವು ದಿಶೆಗಳನ್ನಾವರಿಸಿತು.

೪೦—೪೬

ಬಳಿಕ ಭಕ್ತರು ಜಯವಿಭವ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವ ಜರುಗಿಸಬೇಕೆಂದು ಪಲ್ಲಕ್ಕಿಯನ್ನು ಅಲಂಕರಿಸಿದರು. ವಾದ್ಯಗಳು ಮೊಳಗುತ್ತಿರಲು, ವೇದಪಠನೆ ಹಾಗು ಬಿರುದಾವಳಿಗಳ ಘೋಷಣೆಯೊಡನೆ ಜನಸ್ತೋಮದಿಂದ ಸುತ್ತುವರಿಯಲ್ಪಟ್ಟ ಮಹೋತ್ಸವು ಮುಖ್ಯ ಬೀದಿಗೆ ಬಂದಿತು. ಹಣೆಯಲ್ಲಿ ವಿಭೂತಿ, ಕೊರಳಲ್ಲಿ ರುದ್ರಾಕ್ಷಿಮಾಲೆ, ದೇಹದಲ್ಲಿ ಕಾವಿವಸ್ತ್ರವನ್ನು ಧರಿಸಿ ಶಿವತೇಜದಿಂದ ಶೋಭಿಸುವ ಜಯವಿಭವ ಜಗದ್ಗುರುಗಳು ಹಸನ್ಮುಖರಾಗಿ ಪಲ್ಲಕ್ಕಿಯಲ್ಲಿ ಕಂಗೊಳಿಸುತ್ತಿದ್ದರು. ಇಕ್ಕೆಲಗಳಲ್ಲಿ ಕಿಕ್ಕಿರಿದು ನೆರೆದು ನೋಡುವ ಜನಗಳ ಹೃದಯದಲ್ಲಿ ಭಕ್ತಿರಸತುಂಬಿ ಹೊರಹೊಮ್ಮುತ್ತಿದ್ದಿತು. ಈತ ಪ್ರತ್ಯಕ್ಷ ಶಿವನೆಂದು ಕೈಮುಗಿಯುವರು. ಮಹೋತ್ಸವ ಮರಳಿ ಮಠಕ್ಕೆ ಬರಲು ಜಯವಿಭವ ಜಗದ್ಗುರುಗಳು, ಜಯದೇವ ಜಗದ್ಗುರುಗಳಿಗೆ ವಂದಿಸುತ್ತ ಸಂತೋಷಸಾಗರವನ್ನು ಹೆಚ್ಚಿಸುವ ಶಶಿಯಾಗಿ ಬೆಳಗಿದರು. ಉಭಯ ಜಗದ್ಗುರುಗಳ ಪಾದಪದ್ಮಗಳಿಗೆ ಮಂಗಲಮಾಡಿ ಆಶೀರ್ವಾದ ಪಡೆದು ಭಕ್ತರು ಕಲಶಪ್ರತಿಷ್ಠೆಯ ಕಾರ್ಯವನ್ನು ಸಮಾಪ್ತಿಗೊಳಿಸಿ ಜಗದ್ಗುರುಗಳನ್ನೂ ಹರಗುರುಚರಮೂರ್ತಿಗಳನ್ನೂ ಬೀಳ್ಕೊಟ್ಟರು, ಯಾವ ಮಹಾತ್ಮನು ಧರೆಯ ಜೀವಿಗಳಿಗೆ ಲೇಸನೇ ಬಯಸುವ ಭಾವದಿಂದ ಮಾರ್ಜಾಲ ಮರಿಗಳಿಗೆ ಅಸುವಿತ್ತನೋ ಆ ಸಿದ್ಧಲಿಂಗನ ಭೂತದಯೆ ನಮ್ಮಲ್ಲಿ ಶೀವಿರಲಿ.

೪೭—೫೫

ಹತ್ತೊಂಬತ್ತನೆಯ ಸಂಧಿ

ಬಸವರಾಜ ಸ್ವಾಮಿಗಳು ಭಕ್ತರನ್ನು ರಕ್ಷಿಸುವ ಭಾರಹೊತ್ತು ನಿರ್ವ್ಯಸನಿಗಳಾಗಿ ರಾಜಿಸುವರು. ಗುರುಶಾಂತ ಶಿವಯೋಗಿಗಳ ಗದ್ದುಗೆಯ ನೆಲಗಟ್ಟನ್ನು ಮಾಡುವೆನೆಂದು ಬಡಿಗರ ಸೊಲಬಣ್ಣನೆಂಬವನು ಮುಂಗಡ ಹಣಬಳಿಸಿ, ಕೆಲಸ ನಡೆಸದೆ ವಂಚಿಸಿದ ಪಾಪದಿಂದ ಸತ್ತುಹೋದನು. ಅವನ ಮಗನಾದ ದೇವೇಂದ್ರಪ್ಪನೂ ಕೂಡ ಮುಂಗಡ ಹಣಬಳಿಸಿ ಮೋಸಮಾಡಿದ ದ್ರೋಹದಿಂದ ಸಾಯುವನು. ಆ ಮೇಲೆ ಭಕ್ತರು ರೋಣದ ಹುಲುಗಪ್ಪನೆಂಬ ಒಡ್ಡನನ್ನು ಕರೆಯಿಸಿ ಕೆಲಸಕ್ಕೆ ನೇಮಿಸಲು, ಆ ದುಷ್ಟನು ಕಟ್ಟುವನಂತೆ ನಟಿಸಿ ಬಹಳ ಹಣವನ್ನು ಸೆಳಕೊಂಡು ರೋಣಕ್ಕೆ ಹೋಗಿ ಸೇರಲು, ಪಾಪಿಯಾದವನ ಪ್ರಾಣವನ್ನು ಯಮನು ಸೆಳಕೊಂಡನು. ಮತ್ತೆ ನವಿಲುಗುಂದದ ಬಂದಪ್ಪನೆಂಬ ಒಡ್ಡನನ್ನು ಕೆಲಸಕ್ಕೆ ನೇಮಿಸಿದರು. ಅವನು ಕೂಲಿಗೆ ಹೆಚ್ಚಾಗಿ ಹಣವನ್ನು ಸೆಳೆಯುತ್ತ, ತೊಂದರೆ ಕೊಡುತ್ತ, ಕಟ್ಟಡವನ್ನು ಸತತ ಕಟ್ಟದೆ ವೈಗಳ್ಯನಾಗಿದ್ದು, ಒಮ್ಮೆ ಕಲ್ಲೊಡೆಯುವ ಮಳೆಗಳನ್ನು ತರುವದಕ್ಕೆ ಹುಬ್ಬಳ್ಳಿಗೆ ಹೋಗಿ ಮರಳಿ ಬರುವಾಗ ತುಂಬಿ ಹರಿಯುವ ಬೆಣ್ಣಿಹಳ್ಳದಲ್ಲಿ ಮುಳುಗಿ ಮಡಿದನು. ದುಷ್ಕರ್ಮ ಬೆನ್ನಬಿಡದೆಂದು ಜನರು ಆಡಿಕೊಂಡರು. ಕೊನೆಗೆ ರೋಣದ ಬಡಿಗರ ಮೋನಪ್ಪನು ಕಟ್ಟಡವನ್ನು ಕಟ್ಟಿ ಮುಗಿಸಲು ದುಷ್ಟರಿಂದಾಗದ ಈ ಕೆಲಸ ಈ ಸಜ್ಜನನಿಂದ ಮುಗಿಯಿತೆಂದು ಜನರು ಕೊಂಡಾಡಿದರು. ೧—೧೦

ಹುಬ್ಬಳ್ಳಿನಗರದ ವಿರೂಪಾಕ್ಷನೆಂಬ ವೈದ್ಯನು ಶಲವಡಿಗೆ ಬಂದು ಬಸವರಾಜ ಸ್ವಾಮಿಗಳಿಗೆ ವಂದಿಸಿ ತನಗೆ ಮಕ್ಕಳಿಲ್ಲದ್ದನ್ನು ತಿಳಿಸಿದನು. ಶಿವಯೋಗಿಗಳ ಗದ್ದುಗೆಗೆ ಭಕ್ತಿಯಿಂದ ನಡೆದುಕೊಂಡರೆ ಮಕ್ಕಳಾಗುವವೆಂದು ಬಸವರಾಜ ಸ್ವಾಮಿಗಳು ತಿಳಿಸುವರು. ತಿಳಿಸಿದಂತೆ ಭಕ್ತಿಭಾವದಿಂದ ನಡೆದುಕೊಳ್ಳುತ್ತಿರಲು ವೈದ್ಯನಿಗೆ ಒಂದು ವರ್ಷ ತುಂಬುವಷ್ಟರಲ್ಲಿ ಮಗನು ಹುಟ್ಟುವನು. ವೈದ್ಯನು ಪತ್ನೀಪುತ್ರರೊಡನೆ ಶಲವಡಿಗೆ ಬಂದು ಗದ್ದುಗೆಯ ಮುಂದೆ ಮಗನ ಜವಳ ತೆಗೆಸಿ, ಗಣತೃಪ್ತಿ ಪಡಿಸಿ, ಇನ್ನೂರೈವತ್ತು ತೊಲೆ ಬೆಳ್ಳಿಯ ಮೂರ್ತಿಯನ್ನು ಸ್ವಾಮಿಗಳಿಗೆ ಸಲ್ಲಿಸಲು, ಭಕ್ತಿಭಾವಕ್ಕೆ ತಲೆದೂಗಿ ಭಕ್ತರು ಗದ್ದುಗೆಯಲ್ಲಿಟ್ಟು ನಡೆದುಕೊಂಡವರ ಬಯಕೆ ಬರಡಾಗದೆಂದು ಬಣ್ಣಿಸಿದರು. ೧೧—೧೬

ಕುರಹಟ್ಟಿ ಗ್ರಾಮದ ಕುರುಬರ ಗಂಗಮ್ಮನೆಂಬ ಮುದುಕಿಯು ಮಹಾರೋಗಪೀಡಿತಳಾಗಿ ರೋಗಕಳೆದು ಕೊಳ್ಳಲಿಕ್ಕೆ ಸರಿಯಾದ ಮದ್ದು ಸಿಗದಿರುವ ಕಾರಣ ಕಡುಚಿಂತೆಯಲ್ಲಿರುವಾಗ ಗ್ರಾಮದೋರ್ವನು ಶಿಲವಡಿಯ ಶಿವಯೋಗಿಗಳ ಸಮಾ

ಧಿಗೆ ನಡೆದುಕೊಂಡರೆ ರೋಗ ಹೋಗುವದೆಂದು ತಿಳಿಸುವನು. ಸಿಲ್ಲದೆ ಗಂಗವ್ವ ಗಳಗಳನೆ ಶಲವಡಿಗೆ ಬಂದು ಶಿವಯೋಗಿಗಳ ಗದ್ದುಗೆಗೆ ಅಡ್ಡಬಿದ್ದು ವೈಗೆ ಧೂಪಾರತಿಯ ಭಸ್ಮವನ್ನು ಬಳಿದುಕೊಂಡು ಸೇವೆ ಮಾಡುತ್ತಿರಲು ಕೆಲದಿನಗಳಲ್ಲಿ ರೋಗ ನಿಲ್ಲದೋಡುವದು. ಮುದುಕಿಗೆ ಸಂತೋಷವಾಗಿ ಉತ್ಸವಕ್ಕೆ ಉತ್ತಮ ಪಲ್ಲಕ್ಕಿಯನ್ನು ಮಾಡಿಸಿ ಕೊಡುವಳು.

ಶಿರಕೋಳದ ರುದ್ರಗೌಡನ ಧರ್ಮಪತ್ನಿಯಾದ ಬಸವವ್ವನು ಬಹು ದಿನಗಳಿಂದ ಕ್ಷಯರೋಗದಿಂದ ಬಳಲುತ್ತ ಬೇಸತ್ತು ಕೊನೆಗೆ ಗುರುಶಾಂತೇಶ್ವರನ ಗದ್ದುಗೆಗೆ ಬಂದು ಅಡ್ಡಬಿದ್ದು ಮಹಿಮನೇ ನನ್ನ ರೋಗವನ್ನು ಕಳೆಯೆಂದು ಕೈಮುಗಿದು ವೈಯಲ್ಲಿ ಭಸ್ಮವನ್ನು ಬಳಿದುಕೊಂಡು ಭಕ್ತಿಭಾವದಿಂದ ಬಲವಂದು ಪ್ರದಕ್ಷಿಣೆ ಮಾಡುವಳು. ಹೀಗೆ ದಿನಂಪ್ರತಿ ನಡೆದುಕೊಳ್ಳುವ ಬಸವವ್ವನ ಕ್ಷಯರೋಗ ಕೆಲ ದಿನಗಳಲ್ಲಿ ವಾಸಿಯಾಗಲು ಮನೆಯವರಿಗೆ ಸಂತೋಷವಾಗುವದು. ಹೆಂಡತಿಗೆ ಗುಣವಾಗಲು ರುದ್ರಗೌಡನು ಪಲ್ಲಕ್ಕಿಯ ಮೇಲೆ ಕಟ್ಟುವ ಬೆಳ್ಳಿಯ ಪಂಚಕಲಶವನ್ನು ಮಾಡಿಸಿ ಗದ್ದುಗೆಗೆ ಸಲ್ಲಿಸಿದನು. ೧೭—೨೪

ಅಮರಗೊಳ್ಳದ ಭರಮಗೌಡನು ಕುಷ್ಟರೋಗದಿಂದ ಪೀಡಿತನಾಗಿ ಗುರುಶಾಂತೇಶನ ಗದ್ದುಗೆಯ ಮಹಿಮೆಯನ್ನು ಕೇಳಿ ಶಲವಡಿಗೆ ಬಂದು ಸಮಾಧಿಗೆ ಸಾಷ್ಟಾಂಗವೆರಗಿ ದೇಹಕ್ಕೆ ಭಸ್ಮವನ್ನು ಹಚ್ಚಿಕೊಂಡು ಮಹಾತ್ಮನೇ ನಿನ್ನ ಮೊರೆಹೊಕ್ಕಿರುವೆ. ನನ್ನ ಬೇನೆಯನ್ನು ಕಳೆದು ಕಾಪಾಡೆಂದು ಯಾಚಿಸಿದನು. ಮಹಾತ್ಮನ ಮಹಿಮೆಯ ಬಲದಿಂದ ಭೀಕರರೋಗ ಹೊರಟು ಹೋಯಿತು. ಭರಮಗೌಡನು ಪುನರ್ಜನ್ಮ ಪಡೆದವನಂತೆ ಹಿಗ್ಗಿ ಸಮಾಧಿಯ ಮೇಲೆ ಗೋಪುರ ಕಟ್ಟಿಸಿ ಭೂರಿ ಗಣಾರಾಧನೆ ಮಾಡಿ ಬಸವರಾಜ ಸ್ವಾಮಿಗಳ ಆಶೀರ್ವಾದ ಪಡೆದನು. ಯಾವ ಮಹಾಗುರುವು ವಿರತರಿಗೆ ಶಿವಾನುಭವ ಬೋಧಿಸುವಾಗ ಭೀಕರದೆರಗುವ ಸಿಡಿಲಿನಿಂದ ಪೂಜೆಗೊಂಡನೋ ಆ ಸಿದ್ಧಲಿಂಗ ಪ್ರಭುವಿನ ಪಾದಗಳನ್ನು ಸ್ಮರಿಸುವ ಸೌಖ್ಯ ನಮಗಿರಲಿ. ೨೫–೩೧

ಇಪ್ಪತ್ತನೆಯ ಸಂಧಿ

ಗುರುಶಾಂತ ಶಿವಯೋಗಿಗಳು ಇದ್ದಕಾಲದಲ್ಲಿ ಭಕ್ತಿಯನ್ನಿಟ್ಟುಕೊಂಡಿದ್ದಂತೆ ಬಸವರಾಜ ಸ್ವಾಮಿಗಳು ಅವರ ಗದ್ದುಗೆಯಲ್ಲಿ ಭಕ್ತಿಯನ್ನಿರಿಸಿರುವರು. ಅದು ನಂಬಿದ ಭಕ್ತರನ್ನು ಉದ್ಧರಿಸುವದು. ಬೈಲಹೊಂಗಲದ ಸಾಲಿಮಠದ ದುಂಡಯ್ಯನವರ ಧರ್ಮಪತ್ನಿಯಾದ ಅಡಿವವ್ವನಿಗೆ ಮಲರೋಗವಾಗಿ ಕಂಡವೈದ್ಯರ ಕೈಯಿಂದ

ಮದ್ದು ತಕ್ಕೊಂಡರೂ ಕಡಿಮೆಯಾಗದೆ ಬೆಳೆಯುತ್ತ ಹೋಯಿತು. ಆಡಿವಮ್ಮ ಬಳಲಿ ಬೆಂಡಾಗಿ ಶಿಲವಡಿಯ ಗುರೂತ್ತಮನ ಸಮಾಧಿಯ ಮಹಿಮೆಯ್ನು ಕೇಳಿ ಬಂದು, ಗದ್ದುಗೆಯಲ್ಲಿ ನಂಬುಗೆಯಿಟ್ಟು ನಡೆದುಕೊಳ್ಳಹತ್ತಿದಳು. ಕೆಲವೇ ದಿನಗಳಲ್ಲಿ ಮಲರೋಗ ವಾಸಿಯಾಯಿತು. ಗುರುಪಾದದಲ್ಲಿ ಆಡಿದವುನ ನಿಷ್ಠೆಬಲಿದು ಪ್ರತಿವರ್ಷ ಗುರುಗಳ ಪುಣ್ಯತಿಥಿಗೆ ಆಗಮಿಸುತ್ತ ಮೃಷ್ಟಾನ್ನ ಮಾಡಿ ಗುರುಚರ ಭಕ್ತರಿಗೆ ತೃಪ್ತಿ ಪಡಿಸಿ ಗುರುಮಹಿಮೆಗಳನ್ನು ಕೊಂಡಾಡಿ, ಭಕ್ತಿಯ ಕ್ಷೀರಸಮುದ್ರದಲ್ಲಿ ಈಸಾಡಿ ತನ್ನಾತ್ಮಕ್ಕೆ ಶಾಂತಿಪಡೆದು ಹೋಗುತ್ತಿರುವಳು. ೧–೭

ಶಿಲವಡಿಯ ಸವದತ್ತಿ ಈಶ್ವರಪ್ಪನಿಗೆ ಪಾರ್ಶ್ವವಾಯು ರೋಗ ಬಂದು, ಎಡ ಗಣ್ಣು ಎತ್ತಿ ರೆಪ್ಪೆ ಬಡೆಯದೆ, ಬಾಯಿ ಸೊಟ್ಟು ಆಗಿ ದುಃಖಕ್ಕೀಡಾದ ಸಮಯದಲ್ಲಿ ನೋಡಲಿಕ್ಕೆಬಂದಿರುವ ಹುರಕಡ್ಲಿ ವಿರೂಪಾಕ್ಷಪ್ಪನು "ಈಶ್ವರಪ್ಪಾ! ಕೇಳು,ಬಹುರೋಗ ಕಳೆಯುವ ಮಹಾತ್ಮರ ಗದ್ದುಗೆ ನಮ್ಮೂರಲ್ಲಿಯೇ ಇದೆ. ನನಗೆ ಪಾರ್ಶ್ವವಾಯು ರೋಗ ವಾಗಿ ಅದೆಷ್ಟೋ ದುಃಖವನ್ನುಂಟು ಮಾಡಿತ್ತು ನಾನು ಯಾರಿಗೂ ತೋರಿಸದೆ ಗದ್ದು ಗೆಯ ಭಸ್ಮದಿಂದಲೇ ರೋಗವನ್ನು ಕಳಕೊಂಡೆನು. ನೀನಾದರೂ ಮದ್ದನ್ನು ಹುಡು ಕದೆ ಸಮಾಧಿಯ ಮೊರೆಹೋಗು " ಎಂದನು. ಈಶ್ವರಪ್ಪನು ಗದ್ದುಗೆಯ ಭಸ್ಮ ವನ್ನು ಭಕ್ತಿಯಿಂದ ಧರಿಸಿಕೊಂಡು, ಎನ್ನಪ್ಪನೇ ! ಈ ರೋಗವನ್ನು ಪರಿಹರಿಸೆಂದು ಪಾರ್ಥಿಲು ಕೆಲದಿನಗಳಲ್ಲಿ ರೋಗ ಹೋಗಿ ಬಾಯಿ ಕಣ್ಣುಗಳು ಮೊದಲಿನಂತಾದವು. ೮–೧೨

ನಾಗನೂರ ಕುರುಬರ ಮುದಕಪ್ಪನ ಮಗಳಾದ ಹನುಮವ್ವನೆಂಬವಳು ಗರ್ಭ ವತಿಯಾಗಿ ಸಂತೋಷದಿಂದಿರುತ್ತ, ಹಡೆಯುವ ಸಮಯದಲ್ಲಿ ಬೇನೆತಡೆದು, ಬಿಲ್ಲವಾ ಯುರೋಗ ಬಂದು, ನಾಲಿಗೆ ಕಡಿದುಕೊಳ್ಳುತ್ತ ಅಳಹತ್ತಿದಳು. ಮನೆಯವರಿಗೆ ಚಿಂತೆ ಘನವಾಗಿ ಜಾಣವೈದ್ಯನನ್ನು ತೀವ್ರವಾಗಿ ಕರೆತಂದು ತೋರಿಸಲು, ಪರೀಕ್ಷಿಸಿ ಈರೋಗ ಗುಣವಾಗುವದಿಲ್ಲ. ಇವಳು ಬದುಕುವಂತೆ ತೋರುವದಿಲ್ಲೆಂದು ವೈದ್ಯನು ಹೊರಟುಹೋದನು. ಭವರೋಗ ವೈದ್ಯನಾದ ಗುರುಶಾಂತೇಶನು ನನ್ನ ಕುವರಿ ಯನ್ನು ಕಾಯಲಿ, ಕೊಲ್ಲಲಿ, ಎಂದುಕೊಂಡು ಮುದಕಪ್ಪನು ಮಠಕ್ಕೆ ಬಂದು ಗದ್ದು ಗೆಗೆ ಅಡ್ಡಬಿದ್ದು ಭಸ್ಮತಂದು ರೋದಿಸುತ್ತಿರುವ ಮಗಳ ಮೈಗೆ ಪೂಸಲು ತಾಸೊಂದ ರಲ್ಲಿ ಎರಡು ಗಂಡು ಮಕ್ಕಳನ್ನು ಹಡೆದು ಎಲ್ಲರಿಗೆ ಸಂತೋಷವನ್ನುಂಟು ಮಾಡಿ ದಳು. ೧೩–೧೭

ಗುರುಶಾಂತೇಶ್ವರನ ಪಲ್ಲಕ್ಕಿಯುತ್ಸವಕ್ಕೆ ಕುರಹಟ್ಟಿಯ ಬಸನಗೌಡನು ಬೆಳ್ಳಿಯ ನೆಗಳದ ನೊಗವನ್ನೂ ಸಿಂಹದ ಮುಖವನ್ನೂ ಮಾಡಿಸಿಕೊಟ್ಟನು. ಶಿಲವಡಿಯ ಹಸಬಿ ಪರಮ್ಮ, ಹುರಕಡ್ಲಿ ವೀರಮ್ಮ ಮತ್ತು ಬಸವಣ್ಣೆಮ್ಮ, ಹೊಸಕೇರಿ ನಾಗಮ್ಮ

ಶಾನಭೋಗ ವೀರಬಸಮ್ಮ, ಹಲಗೇರಿ ಸಣ್ಣಮ್ಮ ಇವರೆಲ್ಲರೂ ಐದೈದು ಬೆಳ್ಳಿಯ ತೋರಗೊಂಡೆಗಳನ್ನು ಮಾಡಿಸಿ ಕೊಟ್ಟರು. ಹಲಗೇರಿಯ ನೆಲ್ಲೇರಿ ಸಣ್ಣಮ್ಮನ ಮಗಳಾದ ರುದ್ರಮ್ಮನು ರಾಜಗೊಂಡೆಯನ್ನೂ ಮಾಡಿಸಿಕೊಟ್ಟಳು. ಈ ರೀತಿ ಭಕ್ತಸಮೂಹವು ಉದಾರತೆಯಿಂದ ಗದ್ದುಗೆಗೆ ಕಾಣಿಕೆ ಕೊಡುವದು ಮುಗಿಯದಿರ್ಪುದು. ಗುರುಶಾಂತೇಶನ ಗದ್ದುಗೆಯ ಮಹಿಮೆಗಳು ಮುಗಿಯದಿರ್ಪುವು. ಜಗದ ಜೀವಿಗಳನ್ನು ರಕ್ಷಿಸುವ ಮಹಾತ್ಮರು ತಮ್ಮ ತನುವಿಟ್ಟರುವ ಗದ್ದುಗೆಯಲ್ಲಿ ನೆಲೆಸಿರುವರೆಂಬ ನುಡಿ ಸತ್ಯವಲ್ಲವೇ ! ಬಸವರಾಜ ಸ್ವಾಮಿಗಳಲ್ಲಿ ಭಕ್ತಿಯಿಟ್ಟು ಅಪ್ಪಣೆ ಪಾಲಿಸುತ್ತ ಆಶೀರ್ವಾದ ಪಡೆಯುತ್ತ ಸದ್ಭಕ್ತರು ತಪ್ಪದೆ ಗುರುಮಠಕ್ಕೆ ಬರುತ್ತಿರುವರು.

ಗುರುಶಾಂತ ಮೂರ್ತಿಗೆ ಮಂಗಳವು, ಪರಮ ಚರಿತೆಗೆ ಮಂಗಳವು, ಬಸವರಾಜ ಸ್ವಾಮಿಗೆ ಮಂಗಳವು, ಚರಪುಂಗವನ ಲೀಲೆಗಳಿಂದ ಕಂಗೊಳಿಸುವ ಈ ಸತ್ಪ್ರಬಂಧ ಕೇಳುವ ಸರ್ವರಿಗೆ ಮಂಗಳವು, ಬಳ್ಳಾರಿಯ ಪ್ರದೇಶದಲ್ಲಿರುವ ಸಚ್ಚಾರಿತ್ರವುಳ್ಳ ಲಿಂಗಾಂಗಿಗಳ ಬೀಡೆನಿಸಿದ ಏಳುಬೆಂಚಿಯೆಂಬ ಹಳ್ಳಿಯಲ್ಲಿ ಗುರುಮಠಾಧಿಪತಿಗಳೂ ಸದ್ಗುಣಭರಿತರೂ ಸತ್ಕೀರ್ತಿ ಸಂಪನ್ನರೂ ಆದ ನೀಲಾಂಬಿಕೆನಯನಾರ್ಯರೆಂಬ ದಂಪತಿಗಳಿರುವರು. ಇವರಿಗೆ ಗುರುಲಿಂಗ-ಜಂಗಮರ ಕೃಪೆ ಪಡೆದು ಸರಸ ಕವಿಯಾದ ನಾಗೇಶನೆಂಬ ಸತ್ಪುತ್ರನಿರುವನು. ಈತನು ಗುರುಶಾಂತ ಶಿವಯೋಗಿಗಳ ಈ ಚರಿತ್ರವನ್ನು ಭಕ್ತಿಯಿಂದ ವಿರಚಿಸಿದನು. ಶಾಲಿವಾಹನ ಶಕೆ ೧೮೮೦ ಮಾರ್ಗಶಿರ ಬಹುಳ ಪ್ರತಿಪದ ಬುಧವಾರ ಈ ಚರಿತೆ ಮುಗಿದುದು.

ಸತ್ಯಶುದ್ಧ ಕಾಯಕದಲ್ಲಿ ಭಕ್ತಿಯನ್ನು ವರ್ಧಿಸಿದವನೂ ಜಂಗಮ ಸಾರ್ವಭೌಮನೂ ಮೃತ್ಯುಹರನೂ ಆದ ಗುರುಸಿದ್ಧಲಿಂಗನ ಭೃತ್ಯರಾಗುವ ಭಾಗ್ಯವನ್ನು ನಮಗಿತ್ತು ರಕ್ಷಿಸಲೆಂದು ಆ ಮಹಾಪ್ರಭುವನ್ನು ಬೇಡುವೆನು. ಪವಿತ್ರವಾದ ಈ ಚರಿತ್ರೆಯನ್ನು ಹೇಳಿದವರಿಗೆ ಪಠಿಸಿದವರಿಗೆ ಗುರುಶಾಂತ ಶಿವಯೋಗೀಶ್ವರನು ಆಯುರಾರೋಗ್ಯ ಸಂಪದಗಳನ್ನು ಕರುಣಿಸುವನಲ್ಲದೆ ಗುರುಲಿಂಗಜಂಗಮರ ಅನುಗ್ರಹ ಕರುಣಿಸುವನು. ಇದು ಸತ್ಯವು.

ಕಾವ್ಯತೀರ್ಥ ಶ್ರೀ ನಿ. ಪ್ರ. ಮಲ್ಲಿಕಾರ್ಜುನ ಮಹಾಸ್ವಾಮಿಗಳು
ವಿರಕ್ತಮಠ ನಿಡಗುಂದಿ

ಒಪ್ಪೋಲೆ

ಪುಟ	ಪಂಕ್ತಿ	ತಪ್ಪು	ಒಪ್ಪು
೯	೮	ವೀಡೆನಿಪ	ವೀಡೆನಿಸಿ
೧೫	೯	ಸದ್ಬರ್ಮ	ಸದ್ಧರ್ಮ
೧೮	೬	ಲ್ಜಿಸ	ಲ್ಜಸ
೨೩	೨೩	ಶರರ	ಶ್ವರರ
೨೫	೬	ನೊರೆವೇ	ನೊರೆವೇಂ
೨೬	೧೮	ಲಾರ್ಯ	ಲಾರ್ಯಂ
೨೯	೩	ಸಲದ	ಸಿದರ
,,	೯	ದವ	ದವೆ
,,	೧೫	ವರೆಗೆ	ವರಿಗೆ
೩೧	೧೨	ಮೊಮ್ಮೆ	ನೊಮ್ಮೆ
,,	೧೪	ನಿಂದ್	ನಿಂದಂ
,,	೧೮	ಗಿರಿಸಿ	ಗಿಸಿ
೩೨	೨	ವೊ	ವೋ
,,	೪	ದಿಂದ	ದಿಂದಮೊ
,,	೫	ಮೊಡರ್ಚಿ	ಡರ್ಚಿ
,,	೧೩	ಮಠದದೈ	ಮಠದೈ
,,	೧೫	ಬಾರಾ	ಭಾರ
,,	೧೮	ಕರದ	ಕರೆದ
,,	೧೮	ಪ್ರೇಮಯ	ಪ್ರೇಮಮಯ
,,	೨೪	ತಾಯೆ	ತಾಯ್ಗೆ
೩೫	೨೧	ವೇಣೆಂದ	ಮೇಣಂದ
,,	೨೧	ಕೊಳ್ಪಿ	ಕೊಳ್ವಿ
೪೧	೨೨	ಡೊಲವಿಂ	ದೊಲವಿಂ
೪೩	೨	ದುರ್ನಘ	ದರ್ನಘ
,,	೧೨	ಷ್ಠ	ಶ್ರೇಷ್ಠ
೪೫	೮	ದಿತಿಥಿ	ದತಿಥಿ
೪೬	೧೦	ಜೆರೆ	ಚಿರ

ಪುಟ	ಪಂಕ್ತಿ	ತಪ್ಪು	ಒಪ್ಪು
೪೯	೧೨	ಶತ್ತಿ	ಶರತ್ತಿ
,,	೨೨	ಶಿಲಿ	ಶಿಲೆ
೫೦	೫	ಪರ	ವರ
೫೩	೧೩	ಸಮ್ಮದ	ಸಮ್ಮುದ
೫೯	೧೬	ವೆನಿಸುತೆ	ನೆನಿಸುತೆ
೬೦	೧೨	ಸೆಳೆದಾ	ನೆಳೆದಾ
೬೩	೧೪	ಶಾಂತ	ಕಾಂತ
೬೪	೨೨	ಉೀ	ಉ
೭೩	೧೮	ಸುವ್ಯಸ್ಥೆ	ಸುವ್ಯವಸ್ಥೆ
೭೪	೮	ನಿಜವಾದ	ನಿಜಪಾದ
,,	೧೯	ದಿನದಿನ	ದಿನದಿನದ
೮೬	೨೪	ತೆಗೆದು	ತಾಂತೆಗೆದು
೧೦೪	೫	ಗೆಳಿಟ್ಟು	ಗೆಯೊಳಿಟ್ಟು
,,	೨೪	ವೀರಮ್ಮನೊಂದಿದಳು	ವೀರಮ್ಮನೊಂದಿರುಳು
೧೦೮	೨	ಪರ	ವರ
,,	೫	ವೃತ	ವ್ರತ
೧೩೬	೧೧	ಕ್ರೋಳಿತ್ತ	ಕ್ರೋತ್ತ
೧೫೪	೨೪	ಸುಸುವ	ಸುವ
೧೭೦	೧೬	ಲೊಡಗಿದ	ತೊಡಗಿದ
೧೭೭	೧೪	ನುಪಾನ	ನುಪಾಸನ
೧೯೩	೧೨	ಕೃತಿಯತಳೆದಿರ್ದಂ	ಕೃತಿಯು ಬಳೆದಿರ್ದಂ
೧೯೫	೯	ಕೊತ್ಸವ	ಕೋತ್ಸವ
೨೦೬	೩	ಡೊಳಗೆ	ದೊಳಗೆ
೨೧೨	೩	ಮುದಕವ್ವ	ಮುದಕಪ್ಪ
೨೧೪	೧೨	ನಿಲಾಂಬಿಕಾ	ನೀಲಾಂಬಿಕಾ

ಶ್ರೀಗುರುಶಾಂತಶಿವಯೋಗೀಶ್ವರಃ ಪ್ರಸೀದತು

ಶ್ರೀಗುರು ಶಾಂತಶಿವಯೋಗೀಶ್ವರ ಚರಿತಂ

ಪೀಠಿಕಾಸಂಧಿ

ಭಾಮಿನೀ ಷಟ್ಪದಿ

ಶ್ರೀ ಮದನುಪಮಲಿಂಗ ಚಿತ್ಕಳೆ
ಭೂಮಿಯೋಳ್ ಗುರುಶಾಂತನಾಮ
ಸ್ವಾಮಿಯಾಗುದ್ಭವಿಸಿ ಪೊರೆದುದು ಭಕ್ತಸಂಕುಲಮಂ
ಆ ಮಹಿತ ಚರಮೂರ್ತಿಯಧಿಕ
ಪ್ರೇಮದಿಂದೆಮ್ಮಗಳ ಚೇತ
ಸ್ತಾಮರಸಪೀಠದೊಳು ಶೋಭಿಸುತಿರ್ಕೆ ತಾಂ ಸತತಂ ॥ ೧ ॥

ಆವ ಚಿದ್ಘನನಾತ್ಮಲೀಲಾ
ಭಾವದಿಂ ಲಿಂಗಾಂಗಯುಗಳದ
ಪಾವನಾಕೃತಿಯಾಂತು ಪೂಜ್ಯಂ ಪೂಜಕನುಮೆನಿಸಿ
ಕೋವಿದಸ್ತುತನಾಗಿ ಮೆರೆಯುವ
ನಾವಿಮಳತರ ಶಿವನ ಸತ್ಕರು
ಣಾವಲಂಬನವಿರ್ಕೆ ನನಗೆಂದಾತನಂ ನುತಿಪೇಂ || ೧ ||

ಲಿಂಗದೊಳ್ ಕಳೆಯಾಗಿ ಮತ್ತಿ
ನ್ನಂಗನೊಳ್ ಸದ್ಭಕ್ತಿಯಾಗಿ ತ
ದಂಗ ಭಾವವ ಕಳೆದು ಲಿಂಗದ ರೂಪಮಂ ಕೊಡುವಾ
ಮಂಗಳಾಕರಶಿವೆಯು ನಿರುಪಮ
ಜಂಗಮನ ಸಚ್ಚರಿತರಚನೆಯ
ಭಂಗಿಯಲ್ಲಿದರಲ್ಲಿ ಶಬ್ದದ ಶಕ್ತಿಯಾಗಿರಲಿ || ೨ ||

ಶಿವ ಶಿವೆಯರ ಪ್ರೇಮರಸದ
ಪ್ರವಿಮಳ ಪ್ರತಿಬಿಂಬವೆನಿಸಿದ
ಭುವನನುತಗಣಪತಿಯು ವಿಘ್ನನಿವಾರಕನು ಕೃಪೆಯಿಂ
ಶಿವಮಯನ ಗುರುಶಾಂತ ಚರಕುಲ
ಧವನ ಕಾವ್ಯದ ಕವನಕೆಡರಡ
ಸುವುದ ತಾಂ ಪರಿಹರಿಸಲೆಂದಾ ಮಹಿತನಂ ನೆನೆವೇಂ || ೩ ||

ಶಿವನ ಸದ್ರೂಪಮದು ಗುರು ಮೇಣ್
ಶಿವನ ಚಿದ್ರೂಪಮದು ಲಿಂಗವು
ಶಿವನ ಪರಮಾನಂದರೂಪಮೆ ಚರವದೆಂದರಿದು
ಶಿವಮಯದ ಮೂರ್ತಿತ್ರಯವನದ
ಸುವಿಮಳದ ಭಕ್ತಿಯೊಳುಪಾಸಿಸು
ವವರ ನಿರುಪಮವೀರಶೈವರ ನುತಿಸಿ ಸುಖಿಸುವೆವು || ೪ ||

ನಮಗೆ ನಿಜಹಸ್ತದೊಳು ಜನ್ಮವ
ನಮಿತಕೃಪೆಯಿಂದಿತ್ತು ಮತ್ತಿ
ನ್ನೆಮಗೆ ಕರದೋಳ್ ಲಿಂಗಮೂರ್ತಿಯನಿತ್ತು ಮಂತ್ರವನು
ಕ್ರಮದೊಳುಪದೇಶಿಸಿ ಪೊರೆದನಿರು
ಪಮನ ಗುರುಪುಂಗವನ ವರಪದ
ಕಮಲಯುಗಮಂ ನುತಿಪ ಭಾಗ್ಯಮದಿರ್ಕೆ ಸಂತತವು ॥ ೬ ॥

ಅಲಘುದೀಕ್ಷಾ ಕೃತಿಯೊಳೈಸಲೆ
ಮಲರಹಿತಮೆನಿಸಿರ್ದ ದೇಹದ
ನಿಲಯದೊಳ್ ಗುರು ನೆಲೆಗೊಳಿಸಿದಮಳೇಷ್ಟಲಿಂಗವನೇ
ನಲವಿನಿಂ ನೆನೆಯುವ ನಿರೀಕ್ಷಿಪ
ಪಲವಗೆಯೊಳರ್ಚಿಸುವ ಸೌಖ್ಯದ
ನೆಲೆಯೆನಿಸಿ ಬೆಳಗಲಿ ನಿರಂತರಮೆಮ್ಮ ಜನ್ಮವದು ॥ ೭ ॥

ಲಿಂಗಚಿತ್ಕಳೆವೈದಳೆದು ಸ
ನ್ಮಂಗಳದ ದರ್ಶನವನಿತ್ತು ಭ
ವಂಗಳಂ ಪರಿಹರಿಪಭಕ್ತಿಯ ನೆಮಗೆ ಕರುಣಿಸಲು
ತುಂಗಕೃಪೆಯಿಂ ಸಂಚರಿಸುವಾ
ಜಂಗಮೋತ್ತಮನಮಳಪದಪ
ದ್ಮಂಗಳೆಮ್ಮೆದೆಗೊಳದೊಳನವರತಂ ವಿರಾಜಿಸಲಿ ॥ ೮ ॥

ಶಿವನ ಚಿತ್ಪ್ರಭೆಯೆಂಬ ಪೆರ್ಮೆಯ
ತವೆಪಡೆದು ಬೆಳಗುವ ವಿಭೂತಿಯು
ಭವದುರಿತಮಂ ಕಳೆದು ಶಿವತೇಜವನೊದಗಿಸುವುದು
ಸುವಿದಿತಂ ತಾನೆಂದರಿಯುತಾ
ಪ್ರವಿಮಲದ ಭಸ್ಮವನು ಸಲೆ ಧರಿ
ಸುವ ಸುಮತಿ ನಮ್ಮಲ್ಲಿ ನೆಲೆಗೊಂಡಿರ್ಕೆ ಸಂತತವು ॥ ೯ ॥

ಶಿವ ಚಿದಕ್ಷಿಗಳಾಗಿ ಮೆರೆವಾ
ಸುವಿಮಳದರುದ್ರಾಕ್ಷಿಗಳ ಧರಿ
ಸುವುದರಿಂ ಸುಜ್ಞಾನದೃಷ್ಟಿಯು ಮೂಡಿ ನಮ್ಮಲ್ಲಿ
ಶಿವಸುಖವನೊದಗಿಸುವುದೆಂದರಿ
ಯುವ ಮಹಾಶ್ರದ್ಧೆಯದು ಸಂಭವಿ
ಸುವ ಸುಪುಣ್ಯಂ ಜೀವನದ ಪರ್ಯಂತವಿರುತಿರಲಿ ॥ ೧೦ ॥

ಮಂತ್ರರೂಪದೆ ಹೃದಯದಲ್ಲಿ ನಿ
ರಂತರಂ ನೆಲಸುವುದು ಲಿಂಗಂ
ತಂತ್ರಸಿದ್ಧಮಿದೆಂದರಿದು ನಾವನವರತವ್ಯೈದೆ
ಮಂತ್ರಮನರಾಗುತ್ತೆ ಜಗದ ಕು
ತಂತ್ರಗಳಿಗೆಡೆಗೊಡದೆ ಬಾಳುತ
ಯಂತ್ರವಾಹಕ ಶಿವನ ಕೃಪೆವಡೆದಿರುವುದೆಮಗಿರಲಿ ॥ ೧೧ ॥

ಶಿವನ ತನು ಮೂರಾಗಿ ಕಂಗೊಳಿ
ಸುವ ಮಹಾಗುರುಲಿಂಗ ಜಂಗಮ
ದವಿಲಸತ್ತೀರ್ಥಮದು ಚಿತ್ಸುಧೆಯೆಂದರಿಯುತೀಂಟೆ
ಭವರುಜೆಯಪರಿಹರಿಸಿಕೊಂಡು
ದ್ಭವಿಪ ಪರಮಾನಂದರಸದ
ರ್ಣವ ದೊಳೀಸಾಡುವ ಸುಭಾಗ್ಯಮದೆಮಗಿರಲಿ ನಿರುತಂ ॥ ೧೨ ॥

ಪರಮಗುರುಹರಚರರುಪಾಸನೆ
ಗಿರುವ ಫಲಮೇ ಸತ್ಪ್ರಸಾದವು
ದಿರುವುದೆಂದುರೆ ನಂಬುತದ ಪಡೆಯುವ ನಿಜಾಚರಣಂ
ನಿರುತಮೆಮ್ಮಲ್ಲಿರುವುದೊಂದೈ
ಸಿರಿಯು ಕರುಣಿಸಲೆಂದು ತತ್ಪರ
ತರಗುರೂತ್ತಮಲಿಂಗ ಜಂಗಮವರರ ನುತಿಸುವೆವು ॥ ೧೩ ॥

ನೀತಿಯೋ ನೆಲಗಟ್ಟ ಧರ್ಮ
ಖ್ಯಾತನಿಲಯಕ್ಕೆಂಬ ತತ್ವವ
ಸಾತಿಶಯ ಸತ್ಕ್ರಿಯೆಗಳಿಂ ಪ್ರತಿಪಾದಿಸುತ್ತಿರುವಾ
ಪೂತಪಂಚಾಚಾರಗಳ ಸಂ
ಪ್ರೀತಿಯಿಂದಾಚರಿಸಿ ಸುಗುಣ
ವ್ರಾತವಂ ಪಡೆವಳ್ತಿಯಂ ಕರುಣಿಸಲಿ ಗುರುಚರರು ॥ ೧೪ ॥

ಶಕ್ತಿಸಹಿತಶಿವಸ್ವರೂಪವ
ಭಕ್ತಿಸಹಿತಾಂಗನು ಪಡೆಯುವುದೆ
ಮುಕ್ತಿಯೆಂಬುದನೈದೆ ವಿವರಿಸುತಿರ್ಪ ಸೂಕ್ತಿಗಳಿಂ
ಯುಕ್ತವಾದುದೆ ಷಟ್‌ಸ್ಥಲದೆ ಸಂ
ವ್ಯಕ್ತಸಿದ್ಧಾಂತವಿದ ಪರಮಾ
ಸಕ್ತಿಯಿಂ ಕಲಿವೈಸಿರಿಯು ಸಮನಿಸಲಿ ಶಿವಕೃಪೆಯಿಂ ॥ ೧೫ ॥

ಸಾರತರಗುರು ಪಂಚಪೀಠಾ
ಧಾರಮೂರ್ತಿಗಳಾಗಿ ಕೃಪೆಯಿಂ
ವೀರಶೈವ ಪವಿತ್ರಮತದುದ್ಧಾರ ಕೃತಿಗೈದಾ
ಮಾರಹರ ಪರಮಾತ್ಮವಿಮಳಾ
ಕಾರಪಂಚಾಚಾರ್ಯರಂಘ್ರಿಸು
ವಾರಿಜಂಗಳಿಗೆರಗಿ ಬೇಡುವೆವವರನುಗ್ರಹವಾ ॥ ೧೬ ॥

ಮರೆಯೆ ಲಿಂಗವ ಗತಭವದೆ ಮೇಣ್
ಜರಿಯೆ ಜಂಗಮವುಂ ಸಿರಿಯೊಳೇ
ತೆರದ ಭವಪಾಶವಿದು ಸಮನಿಸಿತಯ್ಯ ಸಂಗಯ್ಯಾ
ಅರಿದೊಡಿದ ಭವದುಃಖಕೆನ್ನೊಳ್
ತೆರಪುಗೊಡುತಿರ್ದೆನೆ ನಿರುತ ಮೆಂ
ದೊರೆದ ಬಸವಂ ಕರುಣಿಸಲಿ ನಿಜಲಿಂಗ ನಿಷ್ಠೆಯನು ॥ ೧೭ ॥

ಚಾರುತರಕಲ್ಲ್ಯಾಣದೋಳ್ ವಿ
ಸ್ತಾರದನುಭವಮಂಟಪದೊಳುರೆ
ಸೇರಿ ಶರಣರು ಚರ್ಚಿಸಿದ ತತ್ವಗಳ ಸಾರವನು
ಭೂರಿಮುದದಿಂ ನಿರ್ಣಯಿಸುವಧಿ
ಕಾರಮಂ ಪಡೆದೆಸೆದ ಪರಮವಿ
ಚಾರಪರನಾ ಚೆನ್ನಬಸವನ ನೆನೆದು ಸುಖಿಸುವೆವು ॥ ೧೮ ॥

ಪುಣ್ಯಮಯ ಬಸವಣ್ಣನೆಸಗಿದ
ಶೂನ್ಯಪೀಠದೆ ಕುಳಿತು ಶರಣವ
ರೇಣ್ಯರಿಂದುರೆ ಪೂಜೆಗೊಂಡವರಿಚ್ಛಿತವನಿತ್ತು
ಧನ್ಯತಮರಂಗೈದು ಜನತಾ
ಮಾನ್ಯನಾದಲ್ಲ ಮನ ಪಾವನ
ಪನ್ನಳಿನದೋಳ್ ತುಂಬಿಯಾಗುವ ಭಾಗ್ಯವೆಮಗಿರಲಿ ॥ ೧೯ ॥

ಇತರಯೋಗಾಭ್ಯಾಸ ಕಷ್ಟ
ಸ್ಥಿತಿಯ ತಾಂ ಸಂತ್ಯಜಿಸಿ ಶರಣಾ
ಶ್ರಿತದ ಷಟ್‌ಸ್ಥಲಮಾರ್ಗದಾ ಲಿಂಗಾಂಗಯೋಗದೊಳು
ಅತಿಶಯದ ಶಿವಸುಖವ ಪಡೆದಾ
ನುತಚರಿತ್ರನ ಸಿದ್ಧರಾಮನ
ನುತಿಸಿ ಬೇಡುವೆವಾತನಾ ಶಿವಯೋಗಪಥದಿರವಾ ॥ ೨೦ ॥

ಸಾವದಿಲ್ಲದ ಕೇಡದಿಲ್ಲದ
ಭೂವಿನುತ ಶಿವಲಿಂಗಮಂಪತಿ
ದೇವನಾಗಿಸಿಕೊಂಡು ತಚ್ಚಿರಸಂಗಸುಖದಲ್ಲಿ
ಜೀವಭಾವವಕಳೆದು ಮುಕ್ತಿಯ
ದೇವಿಯೆನಿಸಿರ್ದಕ್ಕನಿಗೆ ಮಾ
ದೇವಿಗರ್ಪಿಸಿ ನುತಿಸುಮವ ಬೇಡುವೆವು ಪರಕೆಗಳಾ ॥ ೨೧ ॥

ಶಿವನ ಮರೆದೊಡೆ ಮನುಜದುಃಖವು
ಶಿವನನರಿದೊಡೆ ಶರಣಸೌಖ್ಯವು
ತವೆಸಮನಿಸುಗುಮೆಂಬ ತತ್ವವ ತಿಳಿದು ಜೀವನವಾ
ಶಿವಮಯಮನುರೆಮಾಡಿಕೊಂಡಾ
ಶಿವಶರಣರಡಿದೂಳಿಯೆಮ್ಮಯ
ಭವರುಜೆಯ ಪರಿಹರಿಪ ಭಸಿತಮದಾಗಿರಲಿ ನಿರುತಂ ॥ ೨೨ ॥

ಭೋಗಿ ಭೂಷಾಕಾರಮೂರ್ತಿಗ
ಳಾಗಿ ಭುವಿಯೊಳ್ ಜನಿಸಿ ಶಿವನಮ
ಳಾಗಮದ ಷಟ್‌ಸ್ಥಲದ ಭಕ್ತಿಯ ಮಾರ್ಗದೊಳ್ ಪಡೆವಾ
ಭೋಗಮೋಕ್ಷಸ್ಥಿತಿಯ ನೆಮಗನು
ರಾಗದಿಂ ವಿವರಿಸುವ ವಚನ
ಶ್ರೀ ಗೊಡೆಯರಾದಾಶರಣರಾಳಾಗಿ ಸುಖಿಸುವೆವು ॥ ೨೩ ॥

ಪಡೆದ ಶಿವಲಿಂಗದೊಳು ಮೋಕ್ಷಕೈ
ವಿಡಿದ ಪತಿಯೊಳ್ ಭೇದಭಾವ
ಕ್ಕೆಡೆಗೊಡದೆ ದಾಂಪತ್ಯಜೀವನದಲ್ಲಿ ಶಿವಸುಖವಾ
ಪಡೆದ ಶಿವಶರಣೆಯರ ಪಾದ
ಕ್ಕಡಿವಣೆಯನಾಗಿಸುತೆ ಹಣೆಯಂ
ಕೊಡಲಿನಲ್ಪರಕೆಗಳ ನೆಮಗೆಂದವರ ಬೇಡುವೆವು ॥ ೨೪ ॥

ತನುಗಳೆರಡಾದೊಡಮದೇಂಚೇ
ತನಮದೊಂದೆನಿಸಿರ್ದು ನಿಜಪಾ
ವನಪತಿಗಳೊಡಗೂಡಿ ಶಿವದಾಂಪತ್ಯ ಸೌಖ್ಯವನು
ಅನುಭವಿಸುತಂ ಭೂತಲಸ್ಥಿತ
ವನಿತೆಯರಿಗಾದರ್ಶರೆನಿಸಿದ
ಜನನಿಯರ ಶರಣೆಯರ ಸಿರಿಯಡಿಗೆರಗಿ ಬಾಳುವೆವು ॥ ೨೫ ॥

ಭಕ್ತಿರಸಮಯವಿಮಳಕವಿತಾ
ಶಕ್ತಿಯಿಂ ಚರಿತಗತ ಶಂಕರ
ಭಕ್ತರಂ ಪಾಠಕರ ಕಣ್ಣೆದಿರಲ್ಲಿ ನಿಲ್ಲಿಸುವಾ
ಯುಕ್ತಿಯಿಂ ಪಡೆದೆಸೆದ ದೋಷವಿ
ಮುಕ್ತರಾದ್ಯರ ಶಿವಕವೀಂದ್ರರ
ಸೂಕ್ತಿಸುಧೆಯಿಂ ಕುಡಿವ ಸಿರಿಯಿರಲೆನ್ನ ನಾಲಿಗೆಗೆ ॥ ೨೬ ॥

ಶಿವಸುಭಕ್ತಿರಸಾಮೃತವ ನಿಜ
ಕವನ ಪಾತ್ರೆಯೊಳಿರಿಸುತಿನ್ನದ
ಭುವಿಯವರಿಗೀಂಟಿಸುತೆ ಕಿವಿವಾಯಿಂದಮವರುಗಳಾ
ಭವರುಜೆಯ ಪರಿಹರಿಪವೈದ್ಯರೆ
ಶಿವಕವೀಶ್ವರರೆಂದು ನಂಬು
ತ್ತವರ ನೆನೆದಾಂ ಬೇಡುವೆನು ವಾಕ್ಶುದ್ಧಿಗೌಷಧವಾ ॥ ೨೭ ॥

ಆವ ಮಹಿಮನು ಬರೆದ ಶಿವಮಯ
ಜೀವಿಗಳ ಚರಿತೆಗಳನೋದುವ
ಜೀವಿಗಳು ಶಿವಭಕ್ತಿರಸ ಕಾಸಾರದೊಳು ಮಿಂದು
ಪಾವನತೆಯಿಂ ಪಡೆಯುತಿರ್ಪರೊ
ಆವಿಬುಧನುತ ಹರಿಹರನ ಕವಿ
ದೇವನಂಘ್ರಿಯ ನೆನೆದು ಬೇಡುವೆನಾತನಾಶಿಷವಾ ॥ ೨೮ ॥

ಕಲಿಸಿ ಸಂಸ್ಕೃತದಲ್ಲಿ ಶಾಸ್ತ್ರಂ
ಗಳ ನಿಪುಣತೆಯ ಪರಕೆಗೊಟ್ಟು
ಜ್ಜ್ವಲಚರಿತ್ರಂ ಕೊಂಗವಾಡದ ಹಿರಿಯ ಮಠದೊಡೆಯಂ
ಒಲವಿನಾಣ್ಮಂ ವೀರಭದ್ರಾ
ಮಲಗುರುವು ಕರುಣಿಸುಗೆ ಸನ್ಮಂ
ಗಳವನೀಕೃತಿರಚನೆಗೆಂದಾ ಬುಧಪತಿಯ ನುತಿಪೇಂ ॥ ೨೯ ॥

ಈ ತೆರದೆ ಮಹನೀಯರೆಲ್ಲರ
ಸಾತಿಶಯ ಭಕ್ತಿಯೊಳು ನುತಿಸಿ
ಖ್ಯಾತಮಾದೀ ಚರವರೇಣ್ಯ ಚರಿತ್ರರಚನೆಯನು
ಪ್ರೀತಿಯಿಂ ಮಾಳ್ಪುದಕದಾವಪು
ನೀತಜಂಗಮವರನ ಕರುಣೋ
ಪೇತದಾಶಿಷವಾದುದೆನಗೆಂಬುದ ವಿವರಿಸುವೆನಾಂ ॥ ೩೦ ॥

ನಾಡು ನುಡಿಗಳ ಸೇವೆಗಿದು ನೆಲೆ
ವೀಡೆನಿಪ ಕನ್ನಡದ ಸರಸತಿ
ಗಾಡುವಾ ಹೊಲವಾಗಿ ಬೆಳಗುವ ನವಿಲಗುಂದದೊಳು
ಬೀಡುಗೊಂಡಿರ್ದಖಿಳ ಭಕ್ತರು
ಮಾಡಿದುರುಪುಣ್ಯದ ನಿಲಯ ಮೆನೆ
ನಾಡೆ ಕಂಗೊಳಿಸುವುದು ಗವಿಮಠವಾ ಸುನಗರದೊಳು ॥ ೩೧ ॥

ಇದು ಮಹಾ ಶಿವಯೋಗ ಸೌಖ್ಯ
ಪ್ರದವು ಗುರುಚರ ಮೂರ್ತಿಪೂಜಾ
ಸದನವಿದು ಕವಿಗಮಕಿಗಾಯಕ ಬುಧಸದಾಶ್ರಯವು
ಇದು ಸುಭಕ್ತರ ಭಾಗ್ಯದೆಡೆಮೇ
ಣಿದು ಶಿವಾನುಭವಕ್ಕೆ ತವರಿ
ನ್ನಿದು ನಿಖಿಲವರ ಧರ್ಮದೇವತೆಗಳು ನಲಿವ ಬೀಡು ॥ ೩೨ ॥

ಎಂಬ ವಿಬುಧರ ವರ್ಣನೆಗೆತಾ
ವಿಂಬುಗೊಟ್ಟಾ ಗವಿಮಠದ ಕರು
ಣಾಂಬು ನಿಧಿಗಳು ಬಸವಲಿಂಗಸ್ವಾಮಿಗಳು ಸತತಂ
ನಂಬಿದವರಿಚ್ಛಿತವ ನೀಡುವ
ಸಾಂಬರೂಪದ ಜಂಗಮೋತ್ತಮ
ರೆಂಬ ಪೆರ್ಮೆಯನಾಂತು ಬೆಳಗುವರೆಮ್ಮ ಪುಣ್ಯದೊಳು ॥ ೩೩ ॥

ಆ ಮಹಾ ಸ್ವಾಮಿಗಳು ಗೈದ
ಪ್ರೇಮದಪ್ಪಣೆಯಂತೆ ಶಾಂತಿಯ
ಧಾಮವೆನಿಸಿದ ಗವಿಮಠಕ್ಕಾನೊಮ್ಮೆ ಸಲೆಪೋಗಿ
ಕಾಮವಿರಹಿತತದ್ಗುರೂತ್ತಮ
ರಾಮಹಿತಪಾದಕ್ಕೆರಗಿ ನಿ
ಸ್ಸೀಮ ಮಂಗಲ ದರ್ಶನಾಶಿಷಗಳ ಪಡೆಯೆ ಬಳಿಕ ॥ ೩೪ ॥

ಆಗೆ ಕುಶಲ ಪ್ರಶ್ನೆಗಳು ಮೇ
ಣಾಗೆ ತತ್ಕಾಲ ಪ್ರಸಾದದ
ಭೋಗವಾ ಬಳಿಕಾ ಮಹಾ ಶಿವಯೋಗಿ ಸನ್ನಿಧಿಗೆ
ಪೋಗಿ ತತ್ಪದಕೆರಗಿ ನಾಂ ಕುಳಿ
ತಾಗಳಾ ಬುಧವಿನುತ ಪೂಜ್ಯ
ಶ್ರೀಗಳಿಂತುಸುರಿದರು ಕಿರುನಗೆಗೊಂಡ ಮೊಗದಿಂದೆ ॥ ೩೫ ॥

ನನ್ನ ನಲ್ಮೆಯ ತನುಭವನೆನೀಂ
ಮುನ್ನಮಾ ನರುಗುಂದ ನಗರದ
ಚೆನ್ನಬಸವಸ್ವಾಮಿಗಳ ಚರಿತವನು ಬರೆದಂತೆ
ಇನ್ನು ಶಲವಡಿ ಪೊಳಲಮಠದಾ
ಸನ್ನುತರ ಗುರುಶಾಂತ ಚರವರ
ರುನ್ನತದ ಚಾರಿತ್ರಮಂ ಸೊಗಸಾಗೆ ರಚಿಸುವುದು ॥ ೩೬ ॥

ಬಿಡು ದುಗುಡಮಂ ನಿನ್ನ ಹೃದಯದ
ಗುಡಿಯೊಳಿನ್ನೆಡೆಯೂರ ತೋಂಟದ
ಮೃಡಮಯ ಶ್ರೀ ಸಿದ್ಧಲಿಂಗಸ್ವಾಮಿ ಮೂರ್ತಿಯನು
ಸಡಗರದೆ ನೆಲೆಗೊಳಿಸಿ ಜಾನಿಸಿ
ಕಡು ಮುದದೆ ಗುರುಚರಿತ ರಚನೆಗೆ
ತೊಡಗಲದು ಸದ್ಭಕ್ತಸೇವ್ಯಸುಕಾವ್ಯವೆನಿಸುವುದು ॥ ೩೭ ॥

ಎಂದು ತದ್ಗುರು ಮೂರ್ತಿ ತಾಂನನ
ಗಂದು ಕೃಪೆಯಿಂದಂ ಹರಸಿದಾ
ನಂದಮುಯದಾ ಹರಕೆವೂವನು ಧರಿಸಿ ತಲೆಯಲ್ಲಿ
ವಂದಿಸಲು ತತ್ಪಾದ ಪದ್ಮಕೆ
ಬಂದುದಭಿನವಶಕ್ತಿ ನನ್ನೊಳ
ಗಿಂದುಧರರೂಪನ ಚರೇಂದ್ರನ ಕೃತಿರಚನೆಗಿದಕೆ ॥ ೩೮ ॥

ವಿರಸಕರ್ಕಶಕವನಶಿಲೆಯೊಳ್
ವಿರಚಿಸಿದ ಮತ್ಕೃತಿತಟಾಕಮಿ
ದಿರುವುದಾದೊಡ ಮೆಲ್ಲರಿಗೆ ಸಂಸೇವ್ಯಮೆನಿಸಿಪರ್ಾ
ಪರಮಗುರು ಗುರುಶಾಂತಯೋಗೀ
ಶ್ವರ ಚರಿತ್ರಾಮೃತವು ತಾಂ ತುಂ
ಬಿರುವುದಿದರಲ್ಲೆಂಬ ನಂಬುಗೆ ತುಂಬಿರುವುದೆನ್ನೋಳ್ ॥ ೩೯ ॥

ಪರಮ ಪೂಜ್ಯನ ಶಲವಡಿಯ ಸ
ದ್ಗುರು ನಿರಂಜನ ಜಂಗಮೇಂದ್ರನ
ದುರಿತಹರ ಗುರುಶಾಂತ ಶಿವಯೋಗೀಶನೀ ಚರಿತಂ
ನಿರವಧಿಕ ಮಹಿಮಾನ್ವಿತಂ ಸ
ತ್ಪುರುಷವಿನುತಂ ದೋಷರಹಿತಂ
ಸರಸಜನಕರ್ಣಾಮೃತಂ ಶಿವಭಕ್ತಿರಸಕಲಿತಂ ॥ ೪೦ ॥

ಧರೆಯೊಳವತರಿಸುತ್ತೆ ಮೇಣ್ ಭಾ
ಸುರತರದ ವಾಣಿಜ್ಯಪುರಕೈ
ತರುತೆ ಸದ್ಗುರು ಚೆನ್ನಬಸವೇಶ್ವರನ ಮುಖದಿಂದೆ
ವರಚಿದುಪದೇಶವ ಪಡೆದು ತ
ಚ್ಚರಣ ಸೇವೆಯೊಳಿರ್ದು ಸುಖಿಸಿದ
ನಿರುಪಮ ಶ್ರೀ ಸಿದ್ಧಲಿಂಗಂ ರಕ್ಷಿಸುಗೆ ಸತತಂ ॥ ೪೧ ॥

ಪರಮಪಾವನ ಚರಿತವಿದನಾ
ದರದೆ ಕಥಿಸುವ ಪಠಿಸುವಾಲಿಸು
ವರಿಗೆ ತದ್ಗುರುಶಾಂತ ಶಿವಯೋಗೀಶ್ವರನು ಕೃಪೆಯಿಂ
ಚಿರತರಾಯುರರೋಗ ಭಾಗ್ಯವ
ಕರುಣಿಸುವನಲ್ಲದೆಯೆ ಗುರುಹರ
ಚರರನುಗ್ರಹವಾಗಿಸುವನನವರತವಿಂದು ನಿಜವು ॥ ೪೭ ॥

ಪೀಠಿಕಾಸಂಧಿ ಪದ್ಯಗಳು ೪೨ ಕ್ಕೆ ಮಂಗಳಂ

ಶ್ರೀ ಗುರುಶಾಂತಶಿವಯೋಗೀಶ್ವರಃ ಪ್ರಸೀದತು

ಮೊದಲನೆಯ ಸಂಧಿ

ಸೂಚನೆ– ಭಾರತದ ತೆಂಕಣದೊಳೊಪ್ಪುವ
ಸಾರತರ ಕರ್ನಾಟಕೋನ್ನತ
ಭೂರಮೆಯು ತಾನಿಂತು ಶೋಭಿಸಳಮಳ ಸಂಸ್ಕೃತಿಯಿಂ

ನಿರುಪಮನ ಚಿನ್ಮಯನ ಕರುಣಾ
ಕರನ ವರಲಿಂಗಾಂಗ ಸುಖಸಾ
ಗರನ ಶರಣಸಮೂಹಹೃದಯಾಂಭೋಜಭಾಸ್ಕರನಾ
ದುರಿತದೂರನ ನಿರ್ವಿಕಾರನ
ಪರತರನ ಗುರುಶಾಂತ ಜಂಗಮ
ವರನ ಚರಣಾಂಬುಜವ ನುತಿಸುವ ಭಾಗ್ಯವೆನಗಿರಲಿ ॥ ೧ ॥

ಘನತರಶ್ರದ್ಧೆಯೊಳು ತನ್ನನೆ
ಅನುದಿನದೊಳಾಶ್ರಯಿಸಿ ಜೀವಿಸು
ವೆನಿತೊ ಜೀವಾವಳಿಯನೈಸಲೆ ರಕ್ಷಿಸುತ್ತಿರುವಾ
ಅನಘವೃಣ್ಮಯಲಿಂಗವಿದುದಿಟ
ವೆನಿಸಿ ಕಂಗೊಳಿಸುವುದು ತಾಂ ಸಂ
ಜನಿತಗೋಲಾಕೃತಿಯೊಳೀ ವಿಸ್ತೃತಧರಾವಲಯಂ || ೨ ||

ಇಂತೆಸೆವ ಭೂತಲದ ಮಧ್ಯದ
ನಂತ ದೇಶದ ಜನರು ತಮ್ಮ
ಪ್ರಾಂತದೊಳ್ ಪರರಾಕ್ರಮಣ ಭಯನುಂ ನಿವಾರಿಸಲು
ಎಂತೊ ವಿಧ್ವಂಸಕರದಸ್ತ್ರಗ
ಳಂ ತಳುವದುರೆಗೈವ ಕೃತಿಯೊಳ್
ಸ್ವಾಂತವಿಟ್ಟರೆ ಜೀವನದ ಸುಖಶಾಂತಿಗಳ ತೊಸೆದು || ೩ ||

ಈ ವಿಧದ ಜನತತಿಗೆ ಶಾಂತಿಯು
ಜೀವನದ ಮಾರ್ಗವನು ಬೋಧಿಪ
ಪಾವನತರಾಧ್ಯಾತ್ಮ ತತ್ವಜ್ಞಾನವುಳ್ಳವರ
ಕೋವಿದರ ನೆಲೆಯೆಂಬ ಬೆಳ್ಗಸ
ದೀವಿರುವ ಭರತೋರ್ವಿಯೆಸೆವುದು
ಭೂವನಿತೆಯಾ ಕೊರಳ ಹಾರದ ಮಧ್ಯಮಣಿಯಾಗಿ || ೪ ||

ಪರಿಲಸಿತದೀಭಾರತಕ್ಕು
ತ್ತರ ದಿಶೆಯೊಳೊಪ್ಪುವ ಹಿಮಾದ್ರೀ
ಶ್ವರನು ಸರ್ವೇಶ್ವರನಿಗಾತ್ಮಜೆಯುಮೆಯ ಸಲೆಕೊಟ್ಟು
ಸುರಕುಲಸ್ತುತನಾಗುತುನ್ನತ
ತರನೆನಿಸಿ ಮೆರೆಯುವನು ತನ್ನೆ
ಳ್ತರದ ಜಸವದು ಪರ್ಬಿದಂತಿರೆ ಮುಸುಕಿರುವ ಮಂಜು || ೫ ||

ಬಿತ್ತರದ ತದ್ಭರತ ಭೂರಮೆ
ಗುತ್ತರದ ದಿಶೆಯಂ ತ್ಯಜಿಸುತಂ
ಸುತ್ತುವರಿದಂಭೋನಿಧಿಯು ತಾಂ ಮೂರು ದೆಸೆಗಳೊಳು
ಇತ್ತು ಜೀವನ ಸಂಪದವ ಜೇ
ಡುತ್ತಿರುವ ಮೇಘಾವಳಿಗೆ ಸಲೆ
ಪೆತ್ತ ಪರಮೋದಾರತೆಯೊಳೆಸೆಯುವುದು ಸಂತತವು ॥ ೬ ॥

ಇದು ಪುರಾತನದೇವಭಾಷೆಯು
ಸದನಮತ್ಯುನ್ನತದ ಸಂಸ್ಕೃತಿ
ಗಿದು ತವರು ಸದ್ಧರ್ಮ ದೇವತೆಗಿರುವ ಭೂಸ್ವರ್ಗಂ
ಇದು ಸುಭಕ್ತಿಜ್ಞಾನಸತ್ಕ
ರ್ಮದ ವಿಮರ್ಶನ ಕೇಂದ್ರಮೆಂದುರು
ಮುದದೆ ಭರತೋರ್ವಿಯನಿದನು ಬಣ್ಣಿಸುವರರಿದವರು ॥ ೭ ॥

ಜಾತಿಮತಭಾಷಾದಿಗಳೊಳು
ದ್ಭೂತ ಭೇದಮುದಿರ್ದೊಡಂ ಸಂ
ಜಾತ ಸಂಸ್ಕೃತಿಯೊಂದೆ ಭರತಾಂಬಿಕೆಯ ಪುತ್ರರೊಳು
ಪೂತತರ ಮೆನಿಸಿರ್ಪುದೆಂಬ
ಖ್ಯಾತಿಯಂ ತಳೆದೆಸೆವಳೆಮ್ಮಯ
ಮಾತೆ ಭಾರತ ಭೂರಮೆಯು ತಾಂ ವಿಶ್ವಮುಖ್ಯದೊಳು ॥ ೮ ॥

ಬಿತ್ತರದ ಗಂಗಾದಿ ನದಿಗಳೊ
ಳೆತ್ತರದ ವಿಂಧ್ಯಾದಿ ಗಿರಿಗಳೊಳು
ತ್ತಮೋತ್ತಮ ತೀರ್ಥಸತ್ ಕ್ಷೇತ್ರಂಗಳೋಳ್ ಮತ್ತಂ
ನುತ್ಯಕವಿ ಪಂಡಿತಕಲಾಮಯ
ವೃತ್ತಿಪರರೋಳ್ ದಾನಧರ್ಮಾ
ಯತ್ತ ಚಿತ್ತರೊಳ್ಮೆದೆ ತಳ್ತೆಸೆಯುವುದು ಭಾರತವು ॥ ೯ ॥

ಈ ತೆರದ ಭಾರತಧರಾ ಸ
ನ್ಮಾತೆಯುಳ್ಳಿಯ ಹೃದಯವೆಂಬ
ಖ್ಯಾತಿಯಿಂ ಕರ್ನಾಟಕವು ತದ್ದಕ್ಷಿಣಾಶೆಯೊಳು
ಪೂತಭಕ್ತಿಶ್ರೀಯ ಜನನನಿ
ಕೇತನಂ ಸದ್ಧರ್ಮಸುಗುಣ
ವ್ರಾತದಭಿನವಭವನವುಂ ತಾನೆನಿಸಿ ಮೆರೆಯುವುದು ॥ ೧೦ ॥

ದಾನಿಗಳ ಧನಿಕೋತ್ತಮರ ಸ
ನ್ಮಾನಿಗಳ ಧರ್ಮಾತ್ಮರಮಳ
ಜ್ಞಾನಿಗಳ ಸದ್ಭಕ್ತಿನಿಧಿಗಳ ಮೇಣ್ ಕಲಾವಿದರ
ಭೂನುತರ ಕವಿಪಂಡಿತರ ಪರ
ಮಾನುಭವಿಗಳ ವಿಮಳಜನ್ಮ
ಸ್ಥಾನ ಮೆನಿಸುತ್ತಿಸೆಯುವುದು ಕನ್ನಡಧರಾತಲವು ॥ ೧೧ ॥

ತುಂಗ ಭದ್ರಾದಿಪ್ರಸಿದ್ಧ ತ
ರಂಗಿಣಿಗಳ ಮುಖಕ್ಕೆ ಜಾಣಿಂ
ತುಂಗತರ ಕುಡ್ಯಗಳ ವಿರಚಿಸಿ ಸಂಗ್ರಹಿಸಿ ಜಲವಾ
ಹಿಂಗದೆಯೆ ತದ್ವಾರಿಯಿಂದೆ ಜ
ನಂಗಳುರು ಸಸ್ಯಾದಿಸಂಪದ
ಮಂ ಗಳಿಸಿ ಸುಖಿಸುವರು ಕರ್ನಾಟಕದ ವಸುಧೆಯೊಳು ॥ ೧೨ ॥

ಚಿನ್ನದೊಡಲಿನ ಗಣಿಗಳಿಂ ಕಾ
ರ್ಬೊನ್ನ ವೀಯುವ ಗಿರಿಗಳಿಂ ಮೇಣ್
ಮಾನ್ಯಗಂಧಾದ್ಯಖಿಳವಿಧತರುನಿನಹದಡವಿಗಳಿಂ
ಉನ್ನತದ ಹೊಲಗದ್ದೆಗಳ ಪಲ
ವಣ್ಣದಲರ್ಗಳ ತೋಟಗಳ ಚಯ
ದಿಂ ನಿರಂತರವೊಪ್ಪುವದು ಕರ್ನಾಟಕದ ಧರೆಯು ॥ ೧೩ ॥

ಪುರಗಳೋಳ್ ಪಳ್ಳಿಗಳೊಳಂ ವಿ
ಸ್ಫುರಿತ ದೀಪಗಳಲ್ಲದೆಯೆ ಮೇಣ್
ಪರಿಪರಿಯ ಸೌಕರ್ಯಗಳನೊದಗಿಸುವ ಶಕ್ತಿಯನು
ಧರಿಸಿರುವ ವಿದ್ಯುತ್ತ ಪುಟ್ಟಿಸು
ತಿರುವ ಜಲಪಾತಗಳು ಕನ್ನಡ
ಧರೆಯ ಬೆಳ್ಗಿ ಸದಂತೆಸೆಯುವವು ಹಲವು ನೆಲೆಗಳೊಳು ॥ ೧೪ ॥

ಮೃದುಮಧುರಸಾಹಿತ್ಯಸತ್ಕ್ಷೇ
ತ್ರದೊಳು ಸರಸಕವೀಂದ್ರರುರೆ ರಚಿ
ಸಿದ ಮಹಿತಕಾವ್ಯಗಳ ರಸಕಾಸಾರದೊಳ್ ಸತತಂ
ಮುದದೆ ವಿಹರಿಸುವಂಚೆವಿಂಡೆನಿ
ಸಿದಸಹೃದಯರ ನಿವಹಮುದುನೆಲ
ಸಿದುದು ರಸಿಕರ ಬೀಡೆನಿಸಿದಾ ನಾಡಿನಗಲದೊಳು ॥ ೧೫ ॥

ಶಿವಶರಣಕೃತವಚನವಾಙ್ಮಯ
ಸುವಿಮಳಕ್ಷೇತ್ರದೊಳು ಸಲೆ ಬೆಳ
ಗುವ ಶಿವಾಮಿತ ಭಕ್ತಿರಸತೀರ್ಥವನು ಕುಡಿಕುಡಿದು
ಭವದ ರುಜೆಯನು ಕಳೆದುಕೊಳ್ಳುತೆ
ಶಿವಸುಭಕ್ತಿಯ ಪಡೆಯುತಂ ಸುಖಿ
ಸುವರು ಕನ್ನಡಿಗರು ನಿರುತಮಾನಾಡ ಮಧ್ಯದೊಳು ॥ ೧೬ ॥

ಕನ್ನಡದ ಶಿಲ್ಪಿಗಳ ಕುಶಲತೆ
ಯುನ್ನತಿಯ ಸಲೆ ಬಿಂಬಿಸುವ ನ
ಲ್ಗನ್ನಡಿಗಳೆನಿಸಿರುವ ಗುಡಿ ಬಸದಿಗಳೆ ಮೊದಲಾದಾ
ಉನ್ನತದ ಕಟ್ಟಡಗಳೀಕ್ಷಿಪ
ನನ್ನಿ ನಲ್ಮೆಯೊಳಖಿಳ ದೇಶಗ
ಳಿಂ ನಿರುತಮಾನಾಡಿಗಾಗಮಿಸುವರು ಬಲ್ಲವರು ॥ ೧೭ ॥

ಪೆಸರನುಪೆ ಪಡೆದಿರ್ಪ ಕನ್ನಡ
ದಸವು ಸಂಗೀತದೊಳು ಭಕ್ತಿಯ
ರಸವುಯುದ ಗೀತೆಗಳ ಪಾಡುತ್ತಿರುವ ಗಾಯಕರಾ
ವಿಸರವುದು ವರಗಾನಸುಧೆಯನು
ರಸಿಕ ಜನತೆಗೆ ಕುಡಿಸುವುದು ನ
ಲ್ಜೆಸದೊಳೆಸೆಯುಂವ ಕನ್ನಡಕ್ಷಿತಿಯಂಲ್ಲಿ ಸಂತತವು || ೧೮ ||

ಎಳೆತನದೊಳೇ ಗುರುಕರುಣದಿಂ
ಸಲೆ ಪಡೆದ ಶಿವಲಿಂಗವುದು ಕೊರ
ಳೊಳು ಧರಿಸಿ ತಲ್ಲಿಂಗಪೂಜಾಧ್ಯಾನಗತಸುಖದಾ
ತಿಳಿಗೊಳದೊಳೀಸಾಡುತಂ ನಿ
ರ್ಮಲರೆನಿಸಿದಾ ವೀರಶೈವರ
ತೊಳಪ ನೆಲೆವೀಡೆನಿಸಿದಃದು ಕನ್ನಡದ ಜನಪದವು || ೧೯ ||

ಕೆಲರು ಶಿವನಂ ಸಕಲನೆಂದೊಡೆ
ಕೆಲರು ನಿಷ್ಕಲನೆಂದೊರೆಯುವರು
ತಿಳಿಯೆ ನಿಷ್ಕಲ ಸಕಲ ರೂಪದ್ವಯುವ ಲೀಲೆಯೊಳು
ತಳೆಯುವನು ಶಿವನೆಂಬುದನು ಷಟ್
ಸ್ಥಲದಪಥದೋಳ್ ತಿಳಿದು ನಡೆದು
ಜ್ಜ್ವಲಿತ ಶರಣರ ತವರೆನಿಸಿದುದು ಕನ್ನಡದ ನಾಡು || ೨೦ ||

ಒಡಲೆ ಧರಿಸಿರ್ದಿಷ್ಟಲಿಂಗದ
ಗುಡಿಯೆನಿಸುವುದರಿಂದೆ ನಿರುತಂ
ಪಡೆದು ಪಾವನ ಭಾವನೆಯು ಸೂತಕದ ಮಲಿನತೆಗೇ
ಎಡೆಗುಡದೆ ಶಿವನಾಗಿ ಶಿವನಂ
ಬಿಡದುಪಾಸಿಸುವಾ ವ್ರತವ ಸಲೆ
ಪಿಡಿದ ಭಕ್ತರ ಬೀಡು ಕನ್ನಡ ಪುಣ್ಯಭೂಮಿಯದು || ೨೧ ||

ಅಂತವಿಲ್ಲದ ನಾಮರೂಪಗ
ಳಾಂತನಾ ಭಗವಂತನದರಿಂ
ಸ್ವಾಂತಕೊಪ್ಪುವನಾಮ ರೂಪದೊಳಾತನಂ ಭಜಿಸಿ
ಶಾಂತಿಸುಖಗಳ ಪಡೆದು ಮಿಗೆ ನಿ
ಶ್ಚಿಂತರಾಗುವೆವೆಂದು ನಂಬಿದ
ಸಂತರಾ ಕನ್ನಡದ ತಾಯ್ನಾಡಿನೊಳು ನೆಲಸಿರ್ಪರ್ ॥ ೨೨ ॥

ಭಕ್ತರಾಗುವುದೊಂದೆ ಮುಖ್ಯವು
ಭಕ್ತಿ ಕಂಪಿತಶಿವನನುಗ್ರಹ
ಶಕ್ತಿಯಾ ಭಕ್ತರೊಳು ನೆಲಸುತ್ತವರಿಗನವರತಂ
ಭುಕ್ತಿ ಮುಕ್ತಿಗಳೀವುದೆಂಬ ಸ
ದುಕ್ತಿಯಂ ನೆರೆ ನಂಬಿನಡೆಯುವ
ಭಕ್ತಿಮಯ ಜೀವಿಗಳ ನೆಲೆ ಕನ್ನಡಿಗರಿಳೆ ನಿಸದಂ ॥ ೨೩ ॥

ಈ ತೆರೆದೆ ಕವಿಗಮಕಿ ಗಾಯಕ
ಸಾತಿಶಯಶಿಲ್ಪಜ್ಞ ವಿಬುಧ ಪು
ನೀತ ಶರಣ ಪ್ರಮುಖಮಹಿತರಿಗಿತ್ತು ಜನ್ಮವನು
ಖ್ಯಾತಳೆನಿಸಿದ ಕನ್ನಡದ ಭೂ
ಮಾತೆ ಭಾರತ ಧರ್ಮನಿಲಯ
ಜ್ಯೋತಿರೂಪಿಣಿಯಾಗಿ ಬೆಳಗುವಳೆಮ್ಮ ಪುಣ್ಯದೊಳು ॥ ೨೪ ॥

ಆವ ಮಹಿಮನು ತನ್ನ ಪರಗುರು
ದೇವನಾಶಿವಪೂಜೆಗಿರಿಸಿದ
ದೀವಿಗೆಯ ಪಣತಿಯೊಳಗೆಣ್ಣೆಯದಿಲ್ಲದಿರೆ ಕಂಡು
ಭಾವಜಾರಿಯ ನೆನೆದು ನೀರೆರೆ
ದಾವಿಮಳದೀಪವನುರಿಸಿದನೊ
ಪಾವನನು ತತ್ಸಿದ್ಧಲಿಂಗನು ರಕ್ಷಿಸುಗೆ ಸತತಂ ॥ ೨೫ ॥

ಪರಮಪಾವನ ಚರಿತವಿದನಾ
ದರದೆ ಪಠಿಸುವ ಕಥಿಸುವಾಲಿಸು
ವರಿಗೆ ತದ್ಗುರುಶಾಂತ ಶಿವಯೋಗೀಶ್ವರನು ಕೃಪೆಯಿಂ
ಚಿರತರಾಯುರರೋಗ ಭಾಗ್ಯವ
ಕರುಣಿಸುವನಲ್ಲದೆಯೆ ಗುರುಹರ
ಚರರನುಗ್ರಹವಾಗಿಸುವನನವರತವಿದು ನಿಜವು ॥ ೨೬॥

ಮೊದಲನೆಯ ಸಂಧಿ ಸಂಪೂರ್ಣಂ ಪದ್ಯಗಳು ೬೮ ಕ್ಕೆ ಮಂಗಳಂ

❊

ಶ್ರೀ ಗುರುಶಾಂತಶಿವಯೋಗೀಶ್ವರಃ ಪ್ರಸೀದತು

ಎರಡನೆಯ ಸಂಧಿ

ಸೂಚನೆ- ಅರಿವೊಡೀ ಚರಿತಾಧಿಪತಿ ವಿ
ಸ್ಫುರಿತಮಾದ ಚಿಕೇನ ಕೊಪ್ಪದ
ವರಮಠದೊಳುದ್ಭವಿಸಿದನು ಗುರುಶಾಂತ ನಾಮದೊಳು

ಭಕ್ತಜನಮಂದಾರನ ತುಳವಿ
ರಕ್ತಿಭಾವಾಧಾರನಖಿಳ ವಿ
ರಕ್ತನಿವಹೋದ್ಧಾರನನುಪಮ ಸುಗುಣಮಣಿಹಾರಂ
ತ್ಯಕ್ತಮದನ ವಿಕಾರನುಜ್ಜ್ವಲ
ಸೂಕ್ತಿಪರ ಗುರುಶಾಂತಗುರು ತಾಂ
ಭುಕ್ತಿಮುಕ್ತಿಪ್ರದನೆನಿಸಿ ರಕ್ಷಿಸಲಿ ಸಂತತವು ॥ ೧ ॥

ಭೂನುತದ ಕರ್ಣಾಟಕಾಂಬೆಯು
ಮಾನಸೋಲ್ಲಾಸಕರದವುಳ
ಸ್ಥಾನವೆನಿಸಿದ ಕೊಪ್ಪಳದ ಸತ್ಪ್ರಾಂತಮಧ್ಯದೊಳು
ಮಾನಧನಜನನಿವಹದಳ್ತಿಯು
ತಾಣಮಾಗಿರ್ದೆಸೆಯುತಿಪ್ಪ ಚಿ
ಕೇನ ಕೊಪ್ಪವೆನಿಪ್ಪ ಪೆಸರ ಗ್ರಾಮಮಿರುತಿರ್ಕುಂ ॥ ೨ ॥

ಸಾರತರದಾಗ್ರಾಮದೊಳ್ ವರ
ವೀರಶೈವಸುಧರ್ಮತತ್ವಾ
ಗಾರಮೆನೆ ಕಂಗೊಳಿಪ ಹಿರಿಯ ಮಠಕ್ಕೆ ವಿಭುವಾಗಿ
ಸೂರಜನನುತ ಚರಿತನವುಳಾ
ಕಾರನಾಶ್ರಿತ ಭಕ್ತನಿವಹೋ
ದ್ಧಾರಪರನೆನಿಸಿರ್ದನತಿ ಮುದದಿಂದೆ ಹಾಲಾರ್ಯಂ ॥ ೩ ॥

ಆತನೊಡಲುಸಿರಾಗಿ ಸುಗುಣ
ವ್ರಾತದೊಳ್ನೆಲೆಯಾಗಿ ಪರಮಪು
ನೀತಸತಿ ನೀಲಾಂಬಿಕೆಯು ಸದ್ಭಕ್ತಜನರುಗಳಾ
ಪ್ರೀತಿಪಾತ್ರತೆಯಾಂತವರ ಸ
ನ್ಮಾತೆಯೋ ದಿಟವೆಂಬ ವಿಮಳ
ಖ್ಯಾತಿಯಂ ಪಡೆದಿರ್ದಳೂರಿನಗಣ್ಯ ಪುಣ್ಯದೊಳು ॥ ೪ ॥

ಇಂತಿರುವ ನೀಲಮ್ಮನೆಂಬಾ
ಕಾಂತೆಯಿಂ ತಳ್ತಿರ್ದಕತದಿಂ
ಶಾಂತಿಮಯವಾಗಿರ್ದ ನಿಜದಾಂಪತ್ಯ ಧರ್ಮದೊಳು
ಕಂತುಹರ ಪೂಜಾದಿ ಕೃತ್ಯವ
ಸಂತತಂ ಸಲೆಗೈದು ಭಕ್ತ
ಸ್ವಾಂತಸರಸಿಜ ರವಿಯೆನಿಸಿ ಬೆಳಗಿದನು ಹಾಲಾರ್ಯಂ ॥ ೫ ॥

ವೀರಶೈವವಿಚಾರಯುತದಾ
ಚಾರದಿಂದಂ ಪರಮಲಿಂಗಾ
ಕಾರವಾಗಿಸಿಕೊಂಡು ತನುಕರಣಾದಿಗಳೊಳಾದಾ
ಚಾರುತರದಾಂಪತ್ಯ ಸೌಖ್ಯವೆ
ಸಾರ ಲಿಂಗಾಂಗೈಕ್ಯಸುಖದಾ
ಕಾರದಿಂ ಪರಿಣಮಿಸಿದುದು ತದ್ದಂಪತಿಗಳಲ್ಲಿ ॥ ೬ ॥

ಸರ್ವಕಾಲದೊಳವರು ತನ್ಮಯ
ಸರ್ವ ಭಕ್ತರ ಕಣ್ಮನಗಳಿಗೆ
ಪಾರ್ವತೀಪರಮೇಶ್ವರರೆ ತಾವಾಗಿ ತೋರುತ್ತೇ
ಸರ್ವರೊಪ್ಪುವ ಮಾಳ್ಕೆಯಿಂದಂ
ಸರ್ವಮಾನ್ಯದ ಮಠದ ಕೃತ್ಯವ
ನಿರ್ವಹಿಸಿ ಪರಿಪೂಜ್ಯರಾಗಿರುತಿರ್ದರೂರಲ್ಲಿ ॥ ೭ ॥

ತಮ್ಮ ಮಠಕೈತರುವ ಗುರುಚರ
ರಂಮನೋಮುದದಿಂದೆ ಸೇವಿಸು
ತೊಮ್ಮೆಯಾದೊಡಮಲಸತೆಗೆ ಬಗೆಗೊಡದೆ ಸಂತತವು
ಹಮ್ಮದಿಸಿತಿಲ್ಲದೆಯೆ ದಾಸೋ
ಹಂಮಹಾಭಾವದೊಳು ನಡೆಯುವ
ರೆಮ್ಮ ಗುರುದಂಪತಿಗಳೆಂದೂರವರು ಹಿಗ್ಗಿದರು ॥ ೮ ॥

ಪರಮಜಾಯಾಪತಿಗಳವರುರೆ
ಹರಿಸದಿಂದಂ ಹಂಪಸಾಗರ
ಪುರದೊಳಿರುವಾ ತೋಂಟದಾರ್ಯರ ಮಠಕೆ ಬಂದೊಮ್ಮೆ
ಚರವರೇಣ್ಯರ ತನ್ಮಠಾಧೀ
ಶ್ವರರ ಪದಪಂಕಜಕೆ ವಂದಿಸಿ
ಪರಕೆಗೊಂಡಿನ್ನವರ ಸೇವೆಯೊಳೊಂದೆರಡುದಿನವಾ ॥ ೯ ॥

ಕಳೆಯುತಂನಿಜ ಜನ್ಮಜಾಡ್ಯವ
ಕಳೆವ ತತ್ತೀರ್ಥಪ್ರಸಾದಸು
ಫಲನ ಭೋಗಿಸಿ ಬಳಿಕೆ ಪೊರಮಡುತಿರ್ಪ ಸಮಮಃಶೊಳು
ನಲವಿನಿಂದಾ ಸದ್ಗುರುವು ನಿ
ರ್ಮಲಗುಣೋಜ್ಜ್ವಲ ಪುತ್ರನೋರ್ವನು
ಸಲೆ ಸಮುದ್ಭವಿಸುವನು ನಿಮಗೆಂದಿತ್ತಸಾಶಿಷವಾ ॥ ೧೦ ॥

ಮೃಡಮಯನ ತದ್ಗುರುವರನ ಕೃಪೆ
ವಡೆದ ತಾದೃಶದಾಶಿಷವ ಸಲೆ
ಪಡೆದ ತದ್ದಂಪತಿಗಳಾಗಳೆ ವರಕುಮಾರನನು
ಪಡೆದ ಮಾಳ್ಕೆಯೊಳಧಿಕ ಮೋದದ
ಕಡಲೊಳೀಸಾಡುತ್ತವರು ಮೇಣ್
ಪ್ರೊಡಮಡುತ್ತಾ ಜಂಗಮನ ಸಿರಿಯಡಿಗಳಿಗೆ ಬಳಿಕಾ ॥ ೧೧ ॥

ಮುದದ ಮೂರ್ತಿಗಳಾಗಿ ತದ್ಗುರು
ಪದಪಯೋಜಧ್ಯಾನಮಧುವಂ
ಪೊದಪಿನಿಂದಿರದೀಂಟುತಿರ್ಪಭ್ರಮರಯುಗವಾಗಿ
ಸದಯಜಾಯಾಪತಿಗಳಾಗವಿ
ಸಿದರವರು ತಮ್ಮೊರ್ಗೆ ಕಣ್ಗಳಿ
ನುದುರಿದಾನಂದಾಶ್ರುಗಳು ನಿಜತನುವ ತೋಯಿಸಿರೆ ॥ ೧೨ ॥

ಬಳಿಕೆ ತದ್ಗುರು ದಂಪತಿಗಳು
ಜ್ಜ್ವಲಿತಲಿಂಗಾರ್ಚನೆಯನನುದಿನ
ದೊಳು ಪರಮ ಭಕ್ತಿಯೊಳು ವಿಧಿಯಿಂಗೈದು ಲಿಂಗದೊಳು
ಬೆಳಗುತಿರ್ಪಾಜಂಗಮಂದ ಚಿ
ತ್ಕಳೆಯನ್ನೈಸಲೆ ಜಾನಿಸುವ ಮಂ
ಗಳ ಸಮಯದೋಳ್ ಪ್ಯೆಮರೆದು ತಮ್ಮಗಳ ದಿಟ್ಟಿಯಂನು ॥ ೧೩ ॥

ಇಟ್ಟು ಕರಗತಲಿಂಗದೋಳ್ ಮೇ
ಣಿಟ್ಟು ಜಪಮಾಲಿಕೆಯ ಕರದ
ಲ್ಲಿಟ್ಟು ಮೆಲ್ಲನೆ ಜಪಿಸುವಾಮಂತ್ರವನು ನಾಲಗೆಯೋಳ್
ಇಟ್ಟು ಚಿತ್ತವ ಜಾನದೋಳ್ ಕಡು
ನಿಷ್ಠೆಯಿಂದಿರೆ ಶಿವಸುಖದೆ ಮಾ
ಡಿಟ್ಟ ಮೂರ್ತಿಗಳಂತವರು ಬೆಳಗಿದರದೇನೊರೆವೇ ‖ ೧೪ ‖

ಇಂತು ಲಿಂಗಾರ್ಚನ ಸುಸೌಖ್ಯವ
ನಾಂತಿರಲು ಕೆಲದಿನಕೆ ಗರ್ಭವ
ನಾಂತಳಾ ನೀಲಮ್ಮನಾಕೆಯ ಬಸಿರ ನಲ್ಗುಡಿಯು
ಶಾಂತಿಮಯಶಿಶುರೂಪಮಂ ತಾ
ನಾಂತಜಂಗಮಲಿಂಗವೊಳಗೊಂ
ಡಂತೆ ತೋರ್ದುದು ಪಾವನತೆಯಿಂ ಪತಿಯ ಕಣ್ಗಳಿಗೆ ‖ ೧೫ ‖

ಜಂಗಮದ ಚಿತ್ಕಳೆಯು ತದ್ವರ
ಮಂಗಳಾಂಗಿಯ ಪುಣ್ಯಗರ್ಭದ
ಮಂಗಳಾಲಯದಲ್ಲಿ ಬಳೆಯುತ್ತಿರಲು ದಿನ ದಿನಕೆ
ಲಿಂಗಮಯವಾಗಿರ್ದ ತನುಕರ
ಣಂಗಳೋಳ್ ಭಸಿತವನು ಧರಿಸಿದ
ಪಾಂಗಿನಿಂ ಕಂಗೊಳಿಸಿತಾಕೆಯ ಬಿಳುಪಡರಿದೊಡಲು ‖ ೧೬ ‖

ಬೇಸರವು ಮಾತುಗಳೊಳಲಸತೆ
ಭಾಸುರಾಂಬಕಗಳೊಳು ಮಾಂದ್ಯದ
ವಾಸವಡಿಯಿಡುವುದರೊಳಾ ಗರ್ಭಿಣಿಗೆ ಜನಿಸಿದೊಡಂ
ಕ್ಲೇಶಹರಲಿಂಗಾರ್ಚನೆಯುಗೈ
ದಾಶಿವನ ತೀರ್ಥಪ್ರಸಾದವ
ತೋಷದಿಂ ಪಡಕೊಳ್ಳುದೊಂದುತ್ಸುಕತೆ ಹಿರಿದಾಯ್ತು ‖ ೧೭ ‖

ಮಾಡಿ ಲಿಂಗಾರ್ಚನೆಯ ಕೈಗಳು
ನೋಡಿ ಲಿಂಗವನೈದೆ ಕಣ್ಗಳು
ಮಾಡಿ ಲಿಂಗದ ಸತ್ಕಥಾಶ್ರವಣವನು ಕರ್ಣಗಳು
ಪಾಡಿ ಲಿಂಗದ ಗೀತೆಗಳ ಬಾ
ಯ್ನೀಡಿ ಪತಿಪಾದಕ್ಕೆ ಪ್ಯೆಯದು
ನೋಡೆ ದಣಿವಂ ಪೊರ್ದವಾಗರ್ಭಿಣಿಗೆ ದಿನ ದಿನದೊಳ್ ॥ ೧೮ ॥

ಶಿವ ಷಡಕ್ಷರಮಂತ್ರಮಂ ಜಪಿ
ಸುವ ಬಯಕೆ ಪೇಣ್ ಶಿವಸುಲಿಂಗಕೆ
ತವೆ ಮುಡಿಸಿದಲರುಗಳ ತಲೆಯೊಳ್ ಮುಡಿಯುವಾ ಬಯಕೆ
ಶಿವನ ಪ್ಯೆಬೆಳಗೆನಿಸಿರುವ ಭಸಿ
ತವನು ಧರಿಸುವ ಬಯಕೆಯಲ್ಲದೆ
ಭುವಿಯವರ ಬಸುರಿನ ಬಯಕೆಯಾವಾತೆಗುದಯಿಸದು ॥ ೧೯ ॥

ಎಂದು ಬಣ್ಣಿಸೆ ಭಕ್ತವನಿತಾ
ವೃಂದಮಾನೀಲಮ್ಮನನು ಬಳಿ
ಕೊಂದಿದಷ್ಟಮಮಾಸದೊಳ್ ನಿಜ ಸತಿಯ ಗರ್ಭಕ್ಕೆ
ಒಂದಿದೊಲವಿಂ ಗೈಸಿದನು ವಿಧಿ
ಯಿಂದೆ ಲಿಂಗದ ಧಾರಣಮನೊಡ
ನೊಂದಿ ತನ್ನವರುಗಳ ತದ್ಗುರುಮೂರ್ತಿ ಹಾಲಾರ್ಯ ॥ ೨೦ ॥

ತುಂಬೆ ಗುರುದಂಪತಿಗಳಮಳಹೃ
ದಂಬುಜದ ಮಧುವಾಗಿ ಮುದವದು
ತುಂಬೆ ತದ್ಭಕ್ತರ್ಕಳೆದೆಗೊಳದಲ್ಲಿ ಭಕ್ತಿರಸಂ
ತುಂಬಿದವು ನವ ಮಾಸಗಳು ಜಗ
ದಂಬಿಕಾಧವ : ಪೂರ್ಣಕಳೆಯಿಂ
ತುಂಬಿರುವ ನೀಲಾಂಬಿಕಾಪುಣ್ಯಮಯಗರ್ಭಕ್ಕೆ ॥ ೨೧ ॥

ಪೆತ್ತಳಾಜಂಗಮುದ ಕಳೆ ವ್ಮೈ
ವೆತ್ತು ಬಂದ ಸುಪುತ್ರನನು ಸ
ರ್ವೋತ್ತಮದ ದಿನದಲ್ಲಿ ಗುರುಸತಿ ಮಗನ ಮೊಗಸಸಿಯು
ಪೆತ್ತ ಬೆಳಗರಳಿಸಿತು ತಾಯ್ತನ
ವೆತ್ತವಳ ಕಣ್ಣೈದಲೆಗಳನು
ಮತ್ತಮಾನಂದಾಂಬುಧಿಯು ಪೆರ್ಚುಗೆಯನೆಸಗಿದುದು ॥ ೨೩ ॥

ಸುತ್ತುಗಟ್ಟಿದ ಭಕ್ತವನಿತೆಯು
ರೆತ್ತಿಕೊಂಡಾಗುರುಶಿಶುವ ಹಣೆ
ಗೊತ್ತಿಕೊಳ್ಳುತೆ ಮೃದುಲತತ್ಪದತಲವ ತನ್ಮುಖವು
ಪೆತ್ತ ಶಿವತೇಜವದು ತಮ್ಮಯ
ಚಿತ್ತದೋಳ್ ಭಕ್ತಿಯನು ಪುಟ್ಟಿಸೆ
ಮತ್ತೆ ಮತ್ತೆವೆಯಿಕ್ಕದೀಕ್ಷಿಸಿ ಕೈಮುಗಿದರವರು ॥ ೨೪ ॥

ತೊಳತೊಳಗುವಾ ಹಂಪಸಾಗರ
ದೊಳಗಿರುವ ಗುರುತೋಂಟದಾರ್ಯರ
ವಿಲಸಿತದ ಮಠದ ಪ್ರಭುಗಳುರುಕರುಣದಂಬುಧಿಯಿಂ
ಸಲೆ ಜನಿಸಿತೀಬಾಲಶಶಿಯೊಂ
ದೊಲವಿನಿಂದೀಕ್ಷಿಸುವ ಜನಕಂ
ಗಿಳಿಯುವಾನಂದಾಶ್ರುಗಳ ಮಡುವಾಯ್ತು ಹಡವೆಡೆಯುಂ ॥ ೨೫ ॥

ಸಾರಗುರುದಂಪತಿಗಳಾಸುಕು
ಮಾರನೋಳ್ ಶಿವಸುಂದರತ್ವವು
ತೋರುತಿರಲದನೀಕ್ಷಿಸಿದ ಸದ್ಭಕ್ತಜನತತಿಯು
ಊರ ಬಹುಪುಣ್ಯದೊಳು ನಮ್ಮು
ದ್ಧಾರಮಂ ಗೈವುದುಕೆ ಜನಿಸಿದ
ಕಾರಣಿಕಸುತನೆಂದು ಹಿಗ್ಗಿತು ನೆರೆದು ಮಠದಲ್ಲಿ ॥ ೨೬ ॥

ನೆಲಕೆ ತಣ್ಪಡರಿದುದು ಮತ್ತಂ
ಜಲವು ಪರಿಶುದ್ಧತೆಯನಾಂತುದು
ತಳೆದುಕಂಪನು ಗಾಳಿ ಬೀಸಿತು ಬಾನು ವಿಮಳತೆಯಾ
ಗಳಿಸಿತಿಂತಾಪಂಚಭೂತಂ
ಗಳಿಗೆಸುಸ್ಥಿತಿಯೊದಗುತಿರ್ಪ್ಪೀ
ತಳದೊಳಾಕಾರಣಿಕ ಸುತನುದಯಿಸಿದ ಸಮಯದೊಳು ॥ ೨೬ ॥

ಎಂದು ಬಣ್ಣಿಸೆ ಬುಧಕುಲವು ನಿಜ
ನಂದನನ ವರಜಾತಕರ್ಮಾ
ನಂದಕರಮಹಿತೋತ್ಸವಮನತ್ಯಧಿಕಸಂಭ್ರಮದಿಂ
ತಂದೆತಾಯ್ಗಳು ಗೈದು ತಮ್ಮಯ
ಬಂಧುಜನರಿಂ ತಳ್ತು ನಲಿವಾ
ಕಂದಗಿಟ್ಟರು ಹಿಗ್ಗುತಂ ಗುರುಶಾಂತನಾಮವನು ॥ ೨೭ ॥

ಬಳಿಕೆ ನೀಲಾಂಬಿಕೆಯು ಭಕ್ತರ
ಲಲನೆಯರನೊಡಗೊಂಡು ಚೆಲುವಿನ
ನಿಳಯನಾದಾಮಗನ ಮಣಿದೊಟ್ಟಿಲೊಳು ಮಲಗಿಸುವಾ
ನಲವಿನುತ್ಸವವಾಗಿಸಿದಳ
ತ್ಯಲಘು ಸಂಭ್ರಮದಿಂದೆ ವಾದ್ಯಂ
ಗಳ ನಿನದವಾವರಿಸೆ ದಿಶೆಗಳನಾ ಸಮಯದಲ್ಲಿ ॥ ೨೮ ॥

ಜೋ ಮಗುವೆ ಸೊಗದಾಗರವೆ ಜೋ
ಜೋ ಮನೋಹರ ಮುಖಶಿಶುವೆ ಜೋ
ಜೋ ಮಹಿತ ಗುರುವಂಶಸುರಭೂರುಹಸುಮವೆ ಜೋ ಜೋ
ಜೋ ಮಹತ್ತರಗುಣನಿಧಿಯೆ ಜೋ
ಜೋ ಮಹಾ ಚಿಜ್ಜ್ಯೋತಿಯೇ ಜೋ
ಜೋ ಮಹಾತ್ಮತೆವೆತ್ತ ಕರುಣಾವನಧಿಯೇ ಜೋ ಜೋ ॥ ೨೯ ॥

ಎಂದು ಹಾಡುತೆ ಜೋಗಳವ ಮುದ
ದಿಂದೆ ತೂಗುತೆ ತೊಟ್ಟಿಲವನರ
ವಿಂದಮುಖಿಯರು ಮಲಗಿಸಲದವರುಗಳ ಸತ್ಕರಿಸಿ
ಒಂದಿದೊಲವಿಂ ಕಳುಹಿ ಬಳಿಕಾ
ತಂದೆ ತಾಯ್ಗಳು ಸಲಹುತಿರ್ದರು
ನಂದನನ ನಿಜವಂಶವನನಿಧಿಕುಮುದಬಾಂಧವನ ॥ ೩೦ ॥

ಆವ ಮಹಿಮಂ ತ್ರ್ಯಂಬಕೇಶ್ವರ
ಪಾವನಾಕರಲಿಂಗದಿಂದೆನ
ಗಾವಗಂ ಚರಸುಪ್ರಸಾದವ ತೃಪ್ತಿಕರವೆಂದು
ತೀವಿದಖಿಳರ ಮುಂದೆ ನುಡಿಸಿದ
ನೋ ವಿನುತಘನಚರಿತನಾದಾ
ದೇವದೇವಂ ಸಿದ್ಧಲಿಂಗಂ ರಕ್ಷಿಸಲಿ ನಿರುತಂ ॥ ೩೧ ॥

ಪರಮಪಾವನಚರಿತವಿದನಾ
ದರದೆ ಪಠಿಸುವ ಕಥಿಸುವಾಲಿಸು
ವರಿಗೆ ತದ್ಗುರುಶಾಂತಶಿವಯೋಗೀಶ್ವರನು ಕೃಪೆಯಿಂ
ಚಿರತರಾಯುರರೋಗಭಾಗ್ಯವ
ಕರುಣಿಸುವನಲ್ಲದೆಯೆ ಗುರುಹರ
ಚರರನುಗ್ರಹವಾಗಿಸುವನನವರತವಿಂದು ನಿಜವು ॥ ೩೨ ॥

ಎರಡನೆಯ ಸಂಧಿ ಸಂಪೂರ್ಣಂ ಪದ್ಯಗಳು ೧೦೦ಕ್ಕೆ ಮಂಗಳಂ

ಶ್ರೀ ಗುರುಶಾಂತಶಿವಯೋಗೀಶ್ವರಃ ಪ್ರಸೀದತು

ಮೂರನೆಯ ಸಂಧಿ

ಸೂಚನೆ- ಸಂತರೆನಿಸಿದ ಪಿತೃಗಳಾಗುರು
ಶಾಂತನಂ ವರಹಂಪಸಾಗರ
ದಂತರಸ್ಥಿತಮಠದ ಗುರುವಿಗೆ ಸಲ್ಲಿಸಿದರೊಲವಿಂ

ಎಳೆತನದೊಳೇ ಲಿಂಗನಿಷ್ಠೆಯ
ಬಲಿಸಿಕೊಂಡದರಿಂದೆ ತಾಂಸಲೆ
ಗಳಸಿದಾಲಿಂಗಾಂಗಸಮರಸಸೌಖ್ಯಮಂ ಪಡೆದು
ನೆಲಸುತಂ ತನ್ನಾಶ್ರಿತರಿಗುರೆ
ತಿಳಿವುನಲ್ನಡೆಗಳನು ಬೋಧಿಸಿ
ಬೆಳಗಿದಾಗುರುಶಾಂತ ಮೂರ್ತಿಯ ನುತಿಸಿ ನಲಿಯುವೆನು ॥ ೧ ॥

ಉಜ್ಜಿ ಮಗನಿಗೆ ಮೈಯನೈಸಲೆ
ಮಜ್ಜನವನಾಗಿಸಿ ಸುಫಾಲದೊ
ಳುಜ್ಜ್ವಲಿತ ಭಸಿತವ ಧರಿಸಿ ಮೊಲೆಯುಂಣಿಸಿ ಹಾಸಿಗೆಯಿಂ
ಸಜ್ಜುಗೊಳಿಸಿದ ತೊಟ್ಟಿಲೊಳ್ ತಾಂ
ಬಿಜ್ಜಣಿಗೆಯಿಂ ಬೀಸಿ ಮಲಗಿಸು
ವುಜ್ಜುಗಂ ಹಿರಿದಾಯ್ತು ನೀಲಾಂಬಿಕೆಗೆ ದಿನದಿನದೊಳ್ ॥ ೨ ॥

ಸಮ್ಮುದದ ಕಡಲಲ್ಲಿ ಮುಳಿಗಿಸು
ತಂ ಮಗನು ನಿದ್ರಿಸಲು ತನ್ಮುಖ
ವಂ ಮನಂ ತಣಿವಂತಿರೆವೆಯಿಕ್ಕದೆ ನೀರೀಕ್ಷಿಸುವಾ
ಅಮ್ಮ ನೀಲಮ್ಮನಿಗೆ ತನುಜಂ
ಕೆಮ್ಮುವುದ ಬಿಕ್ಕುವುದನಳುವುದ
ಮೊಮ್ಮೆ ನೋಡಿದೊಡದನು ಸಹಿಸುವುದಸದಳಮದಾಯ್ತು ॥ ೩ ॥

ನಿದ್ದೆ ಮುಗಿಯುವವರೆಗೆ ಮನೆಯೊಳ
ಗಿದ್ದ ತೊಟ್ಟಿಲೊಳೊಲವಿನಿಂದ
ಮುದ್ದುಗುವರನ ಮಲಗಿಸಿದೊಡೇಂತನ್ಮಹಾಸುತನಾ
ಹೃದ್ಯರೂಪವನೆತ್ತಿಕೊಂಡನ
ವದ್ಯಚರಿತದ ಜನನಿ ತನ್ನಯ
ಶುದ್ಧನೇತ್ರದ ತೊಟ್ಟಿಲೊಳಗೊರಗಿರಿಸಿದಳನವರತಂ ॥ ೪ ॥

ಮಲಗಿ ತಾಯೆದೆವಾಸಿನೊಳ್ ಮೇಣ್
ಕುಳಿತು ತಾಂ ತೊಡೆಗದ್ದುಗೆಯೊಳಿ
ನ್ನೊಲವಿನಿಂ ತೂಗಾಡುತಾಕೆಯ ತೋಳತೊಟ್ಟಿಲೊಳು
ಬೆಳೆಯುತಿರ್ದನುಂ ಬಾಲಶಶಿಯುವೊ
ಲಲಘುಗುಣಿಗುರುಶಾಂತತನುಜನು
ಬಳೆಯಿಸುತೆ ತನ್ನಂ ನಿರೀಕ್ಷಿಸುವವರ ಕಡುನಲವಾ ॥ ೫ ॥

ಅರ್ಚಿಸುವ ಲಿಂಗದ ಕಳೆಯವೋಲ್
ಚರ್ಚಿಸುವ ತತ್ವಜ್ಞತೆಯ ವೊ
ಲುರ್ಚೆ ಮೋಹದ ಕವಚವೆಸೆವಾತ್ಮನ ಸುಶಕ್ತಿಯವೊಲ್
ಪೆರ್ಚುವಾಶಿವತೇಜದಿಂದ
ಮೊಡರ್ಚಿ ಗುರುಭಕ್ತಿಯನು ತಂದೆಯು
ನರ್ಚಿಸುವ ಭಕ್ತರ್ಕರೊಳ್ ವರ್ಧಿಸಿದನಾತನನುಜಂ ॥ ೬ ॥

ತರುಳನಸವಮಾನ್ಯಾತ್ಮನೆಂಬುದ
ನರಿದೊಡಂ ಲೌಕಿಕರು ತಮ್ಮಯ
ಕಿರುಗುವರರಂ ಸಿಂಗರಿಪ ಮಾಗಾಯಿ ಹರಳೆಲೆಯು
ಕಿರಿಯನಲ್ಗೆಜ್ಜೆಗಳು ಮೊದಲಾ
ಗಿರುವ ಬಾಲಾಭರಣಗಳಳೊಳಾ
ಪರಮಮಾತೆಯಲಂಕರಿಸಿದಳು ತನ್ನ ತನುಭವನಂ ॥ ೭ ॥

ಅರವಿನಾಣ್ಮನೆ ಬಾರ ಮಠದದೈ
ಸಿರಿಯೆ ಬಾ ಮತ್ಪುಣ್ಯನಿಧಿ ಬಾ
ಪರಮಮಂಗಳಮೂರ್ತಿ ಬಾರಾ ಮನೋಹರನೆ ಬಾರಾ
ತ್ವರಿತದಿಂ ಬಾ ಎಂದು ಕಣ್ಣಿಂ
ಸುರಿವ ಸುಖಜಲವೊರಿಸಿ ಕೊಳ್ಳುತೆ
ಕರದಳಾ ನೀಲಮ್ಮನಾತ್ಮ ಪ್ರೇಮಯಸುತನಾ ॥ ೮ ॥

ಮೆಲ್ಲುಲಿಯನೊಡರಿಸಲು ತನ್ನಯ
ಮೆಲ್ಲಡಿಯ ಕಿರುಗೆಜ್ಜೆಗಳು ನಗೆ
ಮಲ್ಲಿಗೆಯ ಸುರಿಸುತ್ತೆ ಕುಣಿಯುತೆ ಬಂದ ಬಾಲಕನು
ಉಲ್ಲಸಿತಮುಖಿಜನನಿಯಾತೊಡೆ
ಯಲ್ಲಿ ಕುಳಿತಿರಲಪ್ಪಿ ಮುದ್ದಿಸ
ಲಿಲ್ಲೆನಿಸಿತಾ ತಾಯೆ ಸುತಸುಖಸಮಸುಖಮುದಿಳೆಯೊಳ್ ॥ ೯

ತನಗೆ ಮೂರಬ್ದಗಳು ತುಂಬಿರೆ
ತನುಜನವನಾ ತಂದೆತಾಯ್ಗಳು
ಮನವಲರೆ ಲಿಂಗವನು ಪೂಜಿಸಿ ಜಾನಿಪುದಕಂಡು
ಸನಿಹದೊಳೆ ಕುಳ್ಳಿರ್ದು ತಾಂ ಕೊರ
ಳಿನಸುಲಿಂಗವ ಕರದೊಳಿರಿಸು
ತ್ತನಿಮಿಷೇಕ್ಷಣದಿಂ ನಿರೀಕ್ಷಿಸುತಿರ್ದನದನೊಲವಿಂ ॥ ೧೦ ॥

ಚಲಿಸದಕ್ಷಿಯೊಳಿಷ್ಟಲಿಂಗವ
ಸಲೆ ನಿರೀಕ್ಷಿಸುವಿವನಯೋಗವು
ಕಲಿತು ಕೊಳ್ವಂತಿರ್ಪುದೆಲ್ಲರಿಗೆಂದು ಮಿಗೆಹಿಗ್ಗಿ
ತಳೆವ ನಲವದು ತಮ್ಮ ಜಾನದ
ನಲವಿನಿಂ ಮಿಗಿಲೆಲಿಸತೊಡಗಿತು
ಮಲರಹಿತ ಪಿತೃಜನಕೆ ದಿನಗಳೆದಂತದೇನೊರೆವೆಂ ॥ ೧೧ ॥

ಮಂಗಳಾಕರ ತನುಜಲೀಲೆಯು
ಲಿಂಗಲೀಲೆಯದಾಗಿನೇತ್ರವು
ನಂಗಳಿಗೆ ಮುದವೀವ ಹಬ್ಬವೆ ಆಗಿ ಪರಿಣಮಿಸೇ
ತುಂಗಮಹಿಮೆಯೊಳಿವನು ಮುಂದೆ ಜ
ನಂಗಳಿಗೆ ಲಿಂಗಾಂಗಯೋಗದ
ಭಂಗಿಯನು ಬೋಧಿಸುವ ಗುರುವಾಗುವದು ನಿಜವೆಂದು ॥ ೧೨ ॥

ನಂಬಿರಲು ಪಡೆದವರು ಮೋಹ್ ಮಹಿ
ಮಾಂಬುನಿಧಿಯೆನಿಸುವ ಕುವರನಿಗೆ
ತುಂಬೆ ನಾಲ್ಕಬ್ದಗಳು ಮುಂದೈದನೆಯ ವರ್ಷದೊಳು
ತುಂಬಿದೊಲವಿಂ ವರ್ಣವಾರುಂ
ತುಂಬಿರುವ ಶಿವಮನುವ ನೋದಿಸು
ತಂಬರೆಯಿಸುತ್ತಕ್ಷರಾಭ್ಯಾಸದೊಳಿರಿಸೆ ಬಳಿಕೆ ॥ ೧೩ ॥

ಮಂಗಳಾಂಗದೊಳುಪ್ಪುವಾಶಿವ
ಲಿಂಗಮಂ ಸಂತತವು ಕದಲದ
ಕಂಗಳಿಂ ನೋಡುವನಗುವ ನಲಿದಾಡುವದುಬಿಟ್ಟು
ಸಂಗಡಿಗರೊಡಗೂಡದಿತರರ
ಸಂಗದೊಳಗಿರದಿರ್ಪ ತತ್ಸುತ
ಭಂಗಿಯಚ್ಚರಿಯಿಸುತ್ತುದವನೈದನೆಯ ವರ್ಷದೊಳೇ ॥ ೧೪ ॥

ಇಂತು ವಿಸ್ಮಯಕರದವರ್ತನ
ವಾಂತ ಸುತನೀಕನ್ನಡದಸು
ಪ್ರಾಂತದೆಲ್ಲಾ ಭಕ್ತರಿಗೆ ಲಿಂಗಾಂಗಿತತ್ವವನು
ಸಂತಸದೆ ಬೋಧಿಸುವ ಪೂಜ್ಯಮ
ಹಂತನಾಗುವನೆಂದರಿದು ಕಡು
ಸಂತಸದೆ ತತ್ಪಿತೃಗಳಾಲೋಚಿಸಿದರೀತೆರದೆ ॥ ೧೫ ॥

ಆವ ಮಹಿಮನ ಹರಕೆಯಿಂದೆಮ
ಗೀವಿಮಳ ತನುಜಾತನುದಿಸು
ತ್ತೀ ವಿಧದ ನಿಜಲಿಂಗಲೀಲೆಯನಾಂತನೆಳೆತನದೊಳ್
ಆ ವಿನುತ ಚರವರನ ಪದದಾ
ಜೀವ ಕರ್ಪಿಸೆಸುತನನೀತಗೆ
ಭೂವಲಯ ಗುರುವಾಗಿ ಮೆರೆವವಕಾಶವೊದಗುವದು ॥ ೧೬ ॥

ಎಂದು ನಿಶ್ಚಯಿಸುತ್ತೆ ಪೆರ್ಚಿದ
ನಂದನಪ್ರೇಮವನೆ ಶಿವಯೋ
ಗೀಂದುಪದ ಸತ್ಪ್ರೇಮವಾಗಿಸಿ ದಂಪತಿಗಳವರು
ಒಂದಿ ಭಕ್ತಿಯ ಹಂಪಸಾಗರ
ವೊಂದಿತದ್ಗುರು ತೋಂಟದಾರ್ಯರ
ಮುಂದಿರಿಸಿ ಮಗನಂ ತದಂಘ್ರಿದ್ವಯಕೆ ನಮಿಸಿದರು ॥೧೭॥

ಕಂದನೊಡಗೊಂಡೆಮ್ಮದರ್ಶನ
ಕೆಂದು ಹಾಲಪ್ಪಯ್ಯನವರೇ
ಬಂದಿರಾ ಸತಿಪತಿಗಳೆಂದಾ ಜಂಗಮೋತ್ತಮನು
ಮಂದಹಾಸದೆ ನುಡಿಸುತಂ ಬಾ
ಲೇಂದು ಧರಕಳೆಯಾಂತ ತದ್ವರ
ನಂದನನ ನಲಿದೆತ್ತಿ ತಮ್ಮಯ ತೊಡೆಯಮೇಲಿರಿಸಿ ॥ ೧೮ ॥

ಚೆಂದದಿಂದೀಕ್ಷಿಸುತೆ ತದ್ವರ
ನಂದನನ ವದನವನು ಗುರುಕಳೆ
ಯೊಂದಿ ಬೆಳಗುವುದಿವನ ಮುಖವೀತನನು ಪಡೆವುದರಿಂ
ಒಂದಿದಿರಿ ಸಲೆ ಧನ್ಯತೆಯನೀ
ವೆಂದ ತದ್ಗುರುಮೂರ್ತಿಯಂಘ್ರಿಗೆ
ವಂದಿಸುತ ವೇಣೆಂದನಾ ಹಾಲಾರ್ಯನೀತೆರದಿಂ ॥ ೧೯ ॥

ಸ್ವಾಮಿ ನಿಮ್ಮಾಶಿಷದ ಬಲದಿಂ
ದೀ ಮಗನುಪುಟ್ಟಿದನೆಮಗೆ ನಿ
ಷ್ಕಾಮದಿಂಭವದೀಯ ಸನ್ನಿಧಿಗರ್ಪಿಸುವೆವಿವನಾ
ಪ್ರೇಮದಿಂ ಸಲಹುತ್ತೆ ಭಕ್ತ
ಸ್ತೋಮರಕ್ಷಕ ಗುರುವನಾಗಿಸು
ವಾ ಮಣಿಹವೇನಿಮ್ಮದೆಂದುರೆ ನಂಬಿದೆವು ನಾವು ॥ ೨೦ ॥

ನೀವು ಕೃಪೆಯಿಂ ಕೊಟ್ಟಸುತನನು
ನಾವು ನಿಮ್ಮಡಿಗರ್ಪಿಸುತ್ತಂ
ಜೀವನಕೆ ಧನ್ಯತೆಯನೊದಗಿಸಿ ಕೊಳ್ವೆವಿದಕೊಪ್ಪಿ
ಪಾವನರನಾಗಿಸುವುದೆಂದು ಮ
ಹಾವಿನಯದಿಂ ಬೇಡಿದನು ಸ
ದ್ಭಾವಯುತ ಹಾಲಾರ್ಯ ನಾತ್ಮಸತೀಸಹಿತನಾಗಿ ॥ ೨೧ ॥

ಪ್ರೇಮಪುತ್ರನನಿಂತು ಮಿಗೆ ಸಿ
ಷ್ಯಾಮ ಮನದಿಂದರ್ಪಿಸುವಗುಣ
ಧಾಮರಾದಾ ಸತಿಪತಿಗಳತಿ ಭಕ್ತಿಗು ರೆಮೆಚ್ಚಿ
ಸ್ವಾಮಿಗಳು ತಲೆದೂಗುತಂತಾ
ವಾಮಹಿತ ಗುರು ದಂಪತಿಗಳ ಮ
ಹಾ ಮುದದ ಯಾಚನೆಗೆಸಂಮತಿಯಿತ್ತರಾಬಳಿಕೆ ॥ ೨೨ ॥

ಮಕ್ಕಳಂತಿರೆ ತಿಳಿದು ಗುರುವರ
ರಕ್ಕರೆಯೊಳಾ ದಂಪತಿಗಳಿಗೆ
ತಕ್ಕ ಸತ್ಕಾರಾದಿಗಳನಾಗಿಸುತೆ ಮಠದಲ್ಲಿ
ಮಿಕ್ಕಿದೊಲವಾಂತುಭಯರಂ ಶುಭ
ದಿಕ್ಕೆಯಾದಾಶೀರ್ವಚನಗಳ
ಚೊಕ್ಕಸವನೇ ಕೊಟ್ಟು ಸಲೆಬೀಳ್ಕೊಟ್ಟರವರೂರ್ಗೆ ॥ ೨೩ ॥

ಗಟ್ಟಿಗೊಂಡೆದೆಯಿಂದ ಮುಂದಡಿ
ಯಿಟ್ಟು ನಿಜ ಜೀವೇಶ್ವರನ ಬೆ
ನ್ನಟ್ಟಿ ನೀಲಾಂಬಿಕೆಯು ತನುವದು ಮುಂದೆಗಮಿಸಿದೊಡಂ
ಕಟ್ಟು ವಡೆದುದು ಮಗನ ಮೋಹದ
ಗಟ್ಟಿ ಹಗ್ಗದೊಳವಳ ಮನವೇಂ
ಪುಟ್ಟಿಸರೆ ನಿರ್ಮಮರಿಗಂ ಮಮತೆಯುನು ತನುಭವರು ॥ ೨೪ ॥

ಎಂತೊ ಮಗನಂ ಬಿಟ್ಟು ಪೋದೊಡ
ಮಂತರಂಗದೊಳವನ ಸುಭಗತೆ
ಯಾಂತರೂಪವ ನಿಲಿಸಿಕೊಂಡಾ ಮಾತೆಗನವರತಂ
ಸಂತಸದೆಗೈವರ್ಚನೆಯ ಸಮ
ನಂತರದೆ ಲಿಂಗವನು ಜಾನಿಸ
ಲಂತರಾಯಮದಾದುದೆನಿತೆೋ ದಿನದೊಳೇನೊರೆವೇಂ ॥ ೨೫ ॥

ಇಲ್ಲಿರುವ ಪೋಲ್ ಹಂಪಸಾಗರ
ದಲ್ಲಿಯುಂ ತನುಭವನು ಗುರುಮಠ
ದಲ್ಲಿರುವನಿದಕೇಕೆ ಚಿಂತೆಯು ನೀನೆಳಸಿದಂದು
ನಿಲ್ಲದಂತಿರೆ ಪೋಗಿ ದಿನವೆರ
ಡಲ್ಲಿಮಗನೊಡನಿರ್ದು ಬರಬಹು
ದಲ್ಲವೇ ? ಎಂದಿನೆಯಳಂ ಸಂತೈಸೆ ಹಾಲಾರ್ಯಂ ॥ ೨೬ ॥

ಇತ್ತಲಾತೋಂಟದ ಚರಾಗ್ರಣಿ
ಪೆತ್ತವರ ಮಾಳ್ಕೆಯೊಳು ನಲವಂ
ಪೆತ್ತು ಗುರುಶಾಂತಾಖ್ಯಬಾಲನ ರಕ್ಷಣಾದಿಗಳ
ಕೃತ್ಯದೊಳ್ ಸದ್ಗುಣಿಯ ನೋರ್ವನ
ಭೃತ್ಯನಂ ನಿಯಮಿಸುತೆ ಸತತಂ
ತತ್ತನುಜನತಿಸುಖದೊಳಿರುವಂತೆಸಗಿದನು ಮಠದೊಳ್ ॥ ೨೭ ॥

ಗುರುವರರ ದರ್ಶನಕೆ ಮಠ ಕೈ
ತರುವಭಕ್ತರು ತತ್ಕುಮಾರನ
ವರಮುಖೇಂದುವ ಕಂಡರಳೆ ಕಣ್ಣ್ಗಳಿದಿಲೆಯು ಮುದದಾ
ಶರಧಿಯುದು ಮಿಗೆ ಪೆರ್ಚೆ ಬಂದಾ
ತರುಳನಡಿವಿಡಿದೆರಗಿ ಮೇಣವ
ನರದೆ ತಮ್ಮಯ ಹೆಗಲಿಗೇರಿಸಿಕೊಂಡು ಕುಣಿಯುವರು ॥ ೨೮ ॥

ಹಂಪಸಾಗರದವರ ಪುಣ್ಯದ
ಪೆಂಪು ಮೈದಳೆದಂತೆ ಕಾಣುವ
ಲಂಪಿನೀ ಮೂರ್ತಿಯನು ನೋಡುತ್ತೆಮ್ಮ ಕಣ್ಮನಗಳ್
ತಂಪನೊಂದುವವೆಂದು ಪೆಣ್ಗಳ
ಗುಂಪುಬಂದಾ ಕುವರನಡಿದಳಿ
ರಂಪಿಡಿದು ನಮಿಸುವುದೆ ಹಿರಿದೆನಿಸಿದುದು ದಿನದಿನದೊಳ್ ॥ ೨೯ ॥

ಆರನೆಯ ವರ್ಷದೊಳಿವುಟ್ಟ
ದೂರ ಬಿಟ್ಟಾ ತೋಂಟದಾರ್ಯರ
ಸಾರಮಠದೊಳ್ ತಚ್ಚರೇಂದ್ರರ ಕೃಪೆಯು ಕೊಳದಲ್ಲಿ
ಭೂರಿತರಮುದದಿಂದೆ ತಳ್ತು ವಿ
ಹಾರವೆಸಗುವ ಹಂಸನಾಗಿ ಕು
ಮಾರ ಗುರುಶಾಂತಂ ತೊಳಗಿದಂ ಕಣ್ಗೆ ಪುರದವರಾ ॥ ೩೦ ॥

ತೊರೆಯ ತಟದೋಳ್ ಧ್ಯಾನದಿಂ ವೈ
ಮರೆದ ಕಾಲದೆ ತನ್ನಡಿಯ ಪೊ
ರ್ದಿರುವ ದೊರೆಯೋರ್ವನ ಶಿರವ ತದ್ರಿಪು ಪರಿಯೆ ಬಂದು
ನೆರೆ ಮುಗಿಸಿ ಜಾನವನು ಕಣ್ದೆರೆ
ದರಿದು ನಡೆದುದ ವೃತಗೆ ಹರಣವ
ಕರುಣಿಸಿದ ಗುರುಸಿದ್ಧಲಿಂಗನು ಪೊರೆಯಲನವರತಂ ॥ ೩೧ ॥

ಪರಮಪಾವನ ಚರಿತ ವಿದನಾ
ದರದೆ ಪಠಿಸುವ ಕಥಿಸುವಾಲಿಸು
ವರಿಗೆ ತದ್ಗುರುಶಾಂತಶಿವಯೋಗೀಶ್ವರನು ಕೃಪೆಯಿಂ
ಚಿರತರಾಯುರರೋಗ ಭಾಗ್ಯವ
ಕರುಣಿಸುವ ನಲ್ಲದೆಯೆ ಗುರುಹರ
ಚರರನುಗ್ರಹವಾಗಿಸುವ ನನವರತವಿದುನಿಜವು ॥ ೩೨ ॥

ಮೂರನೆಯ ಸಂಧಿ ಸಂಪೂರ್ಣಂ ಪದಗಳು ೧೩೨ಕ್ಕೆ ಮಂಗಳಂ

ಶ್ರೀ ಗುರುಶಾಂತ ಶಿವಯೋಗೀಶ್ವರಃ ಪ್ರಸೀದತು

ನಾಲ್ಕನೆಯ ಸಂಧಿ

ಸೂಚನೆ— ಹಂಪಸಾಗರ ಮಠದೊಳಂ ಗುಣ
ಗುಂಫನದ ಗದುಗಿನ ಮಠದೊಳ ಮ
ಲಂಪಿನಿಂ ಗುರುಶಾಂತವಟು ವಿದ್ಯೆಯನು ಸಲೆಕಲಿತಂ ॥

ಪಡೆದ ಜೌವನದೊಳೆ ವಿಕಾರ
ಕ್ಕೆಡೆಗೊಡದೆ ವಿರತಿಯ ಸುಭಾಗ್ಯವ
ಪಡೆದು ಲಿಂಗೋಪಾಸನೆಯ ಸುಖದಲ್ಲಿರುತೆ ನಿರುತಂ
ವೃಡನ ಭಕ್ತರ ವಿಮಲಚಿತ್ತದ
ಗುಡಿಯೊಳೆಸೆಯುವ ಲಿಂಗವೆನಿಸಿದ
ವೃಡಮಯನ ಗುರುಶಾಂತಮೂರ್ತಿಯ ನುತಿಪ ಸಿರಿಯಿರಲಿ ॥ ೧ ॥

ತನ್ನ ಮಠವೊಳೆ ತೋಂಟದಪ್ರಭು
ಸನ್ನುತಗೆ ಗುರುಶಾಂತ ಶಿಷ್ಯಗೆ
ಕನ್ನಡವ ಕಲಿವಾ ವ್ಯವಸ್ಥೆಯನಾಗಿಸಿರೆ ನಲವಿಂ
ಅನ್ಯವಿಷಯಕ್ಕೆಳಸದೆಯೆ ವಿ
ದ್ಯೋನ್ನತಿಯ ಸಾಧಿಸುವ ಕೃತಿಯೋಳ್
ತನ್ನ ಚಿತ್ತವ ನಿರಿಸಿದನು ತದ್ವಿಮಳವಟು ಬಳಿಕೆ ॥ ೨ ॥

ಸಹಜವಾಗಿಯೆ ಶಿವಸುತೇಜವ
ವಹಿಸಿರುವ ಗುರುಶಾಂತ ಮೂರ್ತಿಗೆ
ಮಹಿತದೀಕ್ಷಾಸಂಸ್ಕೃತಿಯನೆಂಟನೆಯ ವರ್ಷದೊಳು
ಅಹಿಸುಕಂಕಣರೂಪತದ್ಗುರು
ಬಹುಲಸಂಭ್ರಮದಿಂದ ಮಾಡಿಸೆ
ಗುಹನೆ ಮುಖವೊಂದಾಂತೆಸೆವವೋಲ್ ತೋರ್ದನಾವಟುವು ॥ ೩ ॥

ಕನ್ನಡದ ವಾಙ್ಮಯದೊಳೊಪ್ಪುವ
ನನ್ನಿಯೆನಿಸಿದ ವಿಷಯವೆಲ್ಲವ
ಗಣ್ಯಗುಣ ಗುರುಶಾಂತವಟುಸಲೆತಿಳಿದು ಜಾಣ್ಮೆಯೊಳು
ಮಾನ್ಯನೆನಿಸಿರೆ ತನ್ಮುಖವನೇ
ಕನ್ನಡದ ವಾಗ್ದೇವಿ ಸತತಂ
ತನ್ನ ಕೂರ್ಮೆಯ ನೆಲೆವನೆಯನಾಗಿಸಿದಳೇನೊರೆವೇಂ ॥ ೪ ॥

ಕಲಿತ ವಿದ್ಯೆಗೆ ಪುಟ್ಟಿದನುಳಿನ
ಫಲವೆನಿಸಿದಾ ವಿನಯಗುಣದಿಂ
ತೊಳಗುವಾಗುರುಶಾಂತಮರಿ ನಿಜಮಠದೊಳನವರತಂ
ನಲವಿನಿಂದಿರುತಿರ್ಪ ಸದ್ಗುರು
ಗಳ ಚರಣಸೇವಾ ವ್ರತವ ತಾಂ
ತಳೆಯುುತದರಿಂ ಪಡೆದನಾತ್ಮೋನ್ನತಿಯ ಸಂಪದವಾ ॥ ೫ ॥

ಪ್ರತಿದಿನದೊಳುದಯಕ್ಕೆ ಮುನ್ನಂ
ಶಿತಿಗಲಸ್ಮರಣದೊಳಗೇಳು
ತ್ತ್ರಿತಿಮುದದೆಕೈಕಾಲ್ಮೊಗಗಳಂ ತೊಳೆದು ಸುಜಲದೊಳು
ನುತಗುರುವಿನಂಬರವ ಮಡಿಗೈ
ವತುಳಸುಮಪತ್ರೆಗಳ ತರುವು
ನ್ನತಶಿವಾರ್ಚನೆಗಿರ್ಪ ಘಂಟಾದಿಗಳನುಜ್ಜುವುದೇ ॥ ೬ ॥

ಮೊದಲೆನಿಪ ಕಜ್ಜಗಳಗೈಯುತೆ
ಮುದದೆ ವಿದ್ಯಾಭ್ಯಾಸವೆಸಗುತೆ
ಸದಯನಾಗುರುಶಾಂತಮರಿ ವಿಧ್ಯುಕ್ತಕಾಲದೊಳು
ಪೊದುಪುಮಿಗೆ ಮಜ್ಜನಶಿವಾರ್ಚಾ
ದಿಗಳನಾಗಿಸಿ ಗುರುವರಗೆ ತ
ದ್ಹೃದಯಕುಮುದವನರಳಿಸುವ ಶಿಷ್ಯೇಂದುವೆನಿಸಿದನು ॥ ೭ ॥

ಇಂತುಮಲ್ಲದೆ ಹಂಪಸಾಗರ
ದಂತಿಕದ ವರತುಂಗಭದ್ರೆಯ
ಶಾಂತಿಮಯ ತಟದಲ್ಲಿ ಶೋಭಿಪ ಬಿಲ್ವವನದಲ್ಲಿ
ಶಾಂತಶಿವಲಿಂಗದ ಸುಪೂಜಾ
ನಂತರದೆ ತದ್ಧ್ಯಾನವೆಸಗು
ತನಂತಸೌಖ್ಯವ ಪಡೆವ ಸಾಧಕನಾದನಾ ಮರಿಯು ॥ ೮ ॥

ಅಂದು ಬಂದ ವಸಂತಕಾಲವು
ತಂದುಕೊಟ್ಟುದು ಪಲವೆಡೆಯು ವನ
ವೃಂದಕೆಳೆದಳಿರಲರುಗಳಕಡು ಚೆಲುವಿನೈಸಿರಿಯಾ
ಒಂದಿಡೊಲವಿಂ ಪಿಕಗಳಿಂಚರ
ದಿಂದೆ ಸುಸ್ವಾಗತವ ಗೈದವು
ಬಂದ ಜನತಾನಂದಕರ ತನ್ಮಧುಮಹಾಶಯಗೆ ॥ ೯ ॥

ಸುರುಚಿರದ ತತ್ತುಂಗಭದ್ರೆಯ
ಪರಿಸರದೆ ಸಾಲ್ಗೊಂಡಿರುವ ಮಾ
ಮರಗಳಿಗೆ ಪರ್ಬಿರುವ ಕುಸುಮಿತಲತೆಯ ತಾಣಗಳು
ಸ್ಮರನು ತಾನಾನೆಲೆಗೆ ಬರುವರು
ಪರಿಕಿಸಲು ತತ್ಕಾಲದೋಳ್ ರಚಿ
ಸಿರುವ ಶರಪುಷ್ಪಪ್ರದರ್ಶನದೆಡೆಗಳೆನಿಸಿರಲು ॥ ೧೦ ॥

ಆಸಮಯದಪರಾಣ್ಣವೊಂದರೊ
ಳಾಸುನದಿಯ ತಟಕ್ಕೆ ಬರುತಂ
ತೋಷದಿಂ ಪದ್ಧತಿಯವೋಲ್ ಗುರುಶಾಂತಮರಿದೇವಂ
ದೋಷಹರಶಿವಯೋಗ ಸಿದ್ಧಿಯ
ನಾಶುಚಿತ್ವದ ತೀರದೋಳ್ ಪಡೆ
ವಾಶೆಯಿಂತಾನಾ ಹೊಳೆಯೊಳುರೆಮಿಂದು ಮಡಿಯುಟ್ಟು ॥ ೧೧ ॥

ಕಾಮಿಜನತೆಗೆ ನೋಡಲಿಟ್ಟಾ
ಕಾಮಶರಸುಮಗಳನೆ ನಿರ್ಜಿತ
ಕಾಮನಾ ಮರಿದೇವನಾತ್ಮ ಸ್ವಾಮಿಶಂಕರಗೆ
ಪ್ರೇಮದಿಂದರ್ಚಿಸಲು ತಿರಿಯುತೆ
ಕಾಮವಶವಾದಾವ ವಸ್ತುವ
ದೀಮಹಿಯೊಳಿಲ್ಲೆಂದು ಬೋಧಿಸುವಂತೆ ತೋರಿದನು ॥ ೧೨ ॥

ಇಂತು ಪಲವಗೆವೂವ ತಿರಿಯುತ
ನಂತರದೆ ಮೃದುಬಿಲ್ವಪತ್ರೆಯ
ಸಂತಸದೆ ತಾನೆತ್ತಿ ಬಿಲ್ವವನಾಂತರದೊಳೆಂದು
ಶಾಂತಿಮಯ ದೆಡೆಯಲ್ಲದಾವುದ
ಚಿಂತಿಸದೆ ಕುಳ್ಳಿರ್ದು ವಿಮಳ
ಸ್ವಾಂತದಿಂದಾಸ್ವಾಮಿ ಲಿಂಗಾರ್ಚನೆಗೆ ತೊಡಗಿದನು ॥ ೧೩ ॥

ಮನವೆಳಸಿದಾಸನದೆ ಕುಳ್ಳಿ
ರ್ದನಘಮಂತ್ರೋದಕದೆ ಲಿಂಗಾ
ರ್ಚನ ಸುಸಾಮಗ್ರಿಗಳ ಶುದ್ಧಿಯನೆಸಗಿ ವಿಧಿಯಿಂದೆ
ಘನವಿಭೂತಿ ಶಿವಾಕ್ಷಿಗಳೊಳೊ
ಮ್ಮನದೆ ತನುವನಲಂಕರಿಸಿ ಸಂ
ಜನಿತಶಿವರೂಪದೊಳು ಕರಗತಲಿಂಗಪೂಜೆಯನು ॥ ೧೪ ॥

ನಿಷ್ಠೆಯಿಂದಂ ಮುಗಿಸಿ ಲಿಂಗದೊ
ಳಿಟ್ಟು ಕದಲದ ದಿಟ್ಟಿಯಂ ಮೋಣ್
ಕೊಟ್ಟು ಮಂತ್ರದ ಜಪಕೆ ಜಿಹ್ವೆಯ ಜಾನಕೆದೆಗೊಟ್ಟು ॥
ಬಿಟ್ಟು ದೇಹಸ್ಮೃತಿಯ ಕುಳಿತುರೆ
ಪುಟ್ಟಿದಾ ಲಿಂಗಾಂಗಯೋಗ
ಶ್ರೇಷ್ಠಸುಖಶರಧಿಯೊಳು ಮುಳುಗಿರ್ದನು ತದರ್ಚಕನು ॥ ೧೫ ॥

ಅನಿತರೋಳ್ ತಟವೃಕ್ಷಖಗಕಲ
ನಿನದದಿಂದೆಚ್ಚರವನೊಂದಿದ
ಘನಮನದ ಗುರುಶಾಂತಮರಿಯಾ ಹೊತ್ತಿನರ್ಚನೆಯು
ದಿನದಿನದಪೂಜಾಕೃತಿಗೆ ಮಿಗಿ
ಲೆನಿಸಿದುದರಿಂದವಸರದೆ ಬಂ
ದನು ಮಠಕೆ ನಿಜಗುರುಪದದ ಶುಶ್ರೂಷೆಗೆಳಸುತ್ತೆ ॥ ೧೬ ॥

ಇಂತು ಮಂಗಳತುಂಗಭದ್ರೆಯ
ಶಾಂತಿಮಯ ತೀರದ ಸುಬಿಲ್ವವ
ನಾಂತರದೊಳೆಸಗುವ ಮಹತ್ತರ ಪೂಜೆಯಿಂದೊಗೆದಾ
ಅಂತವಿರಹಿತ ಲಿಂಗಸೌಖ್ಯವ
ನಾಂತು ನಲಿಯುತ್ತಿರ್ಪ ತದ್ಗುರು
ಶಾಂತಸಾಸ್ಥಿತಿಯರಿದು ತದ್ಗುರುವರನು ಬೆರಗಾದಂ ॥ ೧೭ ॥

ಏರುತಿರೆ ಹದಿನಾರು ವರ್ಷವ
ನೀರಿರುವ ಹರೆಯುವದು ತತ್ವ
ವಿಚಾರಪರ ಗುರುಶಾಂತಮೂರ್ತಿಗೆ ತತ್ಸಮಯದಲ್ಲಿ
ಏರಿದುದು ತದ್ವಿಮಳನೆದೆಗಾ
ವೀರವಿರತಿಯು ದೀಕ್ಷಿಸುತಿ
ನ್ನೂರಸರ್ವಸುಭಕ್ತರೆದೆಗಚ್ಚರಿಯುದೇರಿದುದು || ೧೮ ||

ಬಳಿಕೆ ಮಠದಪ್ಪಗಳು ತಮ್ಮಯ
ನಲವಿನಾತ್ಮಜನೆನಿಸಿದಾಗುಣ
ನಿಳಯನಿಗೆ ಗೀರ್ವಾಣಭಾಷಾಭ್ಯಾಸವಾಗಿಸಲು
ತೊಳಪ ಗದುಗಿನ ಮಠಕೆ ಕರೆತಂ
ದಲಘುಚರಿತಾನ್ವಿತ ಜಗದ್ಗುರು
ತಿಲಕಮೃತ್ಯುಂಜಯ ಮಹಾಸ್ವಾಮಿಗಳ ಸನ್ನಿಧಿಗೆ || ೧೯ ||

ಮಾಡಿ ಭಕ್ತಿಯ ವಂದನೆಯ ಮೇಣ್
ಮಾಡಿಸುತೆ ಮರಿದೇವನವನಿಂ
ಜೋಡಿಸಿದ ಕರದಿಂದೆ ಬಂದುದನೊರೆಯಲಾಬಳಿಕೆ
ನೋಡಿ ಸದ್ಗುರುಮೂರ್ತಿ ಶಿವಕಳೆ
ಗೂಡಿದವನಾನನ ಪಗಕೆಯ
ನೀಡಿದನು ಮಹನೀಯನಾಗುವೆ ಮುಂದೆನೀನೆಂದು || ೨೦ ||

ಹಿರಿಯ ಪೂಜ್ಯ ಶ್ರೀಗಳಿಂದೀ
ತೆರದ ನಲ್ವರಕೆಯದು ಬಂದುದ
ನರಿಯುತಿನ್ನಾ ಹಂಪಸಾಗರದಪ್ಪಗಳ ಮನವು
ಪರಮಸುಖಮಯಮಾಯ್ತು ನಾವೀ
ವರೆಗೆ ಮಠದಲ್ಲಿರಿಸಿಕೊಂಡೀ
ಮರಿಯ ಸಲಹಿದ ಕೃತಿಯು ಸಾರ್ಥಕವಾದುದೆಂದವರು || ೨೧ ||

ಹಿರಿಯ ಗುರುಗಳಿಗರಿಕೆಗೈದೊಂ
ದೆರಡು ದಿನವಲ್ಲಿದ್ದು ಸೇವಿಸಿ
ಪರಮ ಪೂಜ್ಯರ ಪಾದವರತೀರ್ಥಪ್ರಸಾದಗಳಾ
ನೆರೆಪಡೆಯುತವರಿಂದನುಜ್ಞೆಯ
ಪೊರಮಡುವ ಸಮಯದೊಳು ಸನಿಹಕೆ
ಕರೆದ ಮಠಿಗಂ ಹಂಪಸಾಗರದಪ್ಪನಿಂತೊರೆದಂ ॥ ೨೨ ॥

ಹಿರಿಯ ಗುರುಗಳ ಸೇವೆಯೊಳ್ ಮನ
ವಿರಿಸು ಬಂದತಿಥಿಗಳ ಸಲೆ ಸ
ತ್ಕರಿಸು ಭಕ್ತರ ಪೊರೆವ ಸದ್ವಿದ್ಯೆಯನು ನೆರೆಗಳಿಸು
ವಿರತಿಧನಮಂ ಪೆರ್ಚಿಸೀಪರಿ
ಯಿರುವ ಮಠಿಗಳು ಪೂಜ್ಯರೆನಿಸು
ತ್ತಿರಿಸುವರು ನಿಜಮಠದ ಶಿಖರಕೆ ಕೀರ್ತಿಕಲಶವನು ॥ ೨೩ ॥

ಇಂತೊರೆದ ಬಳಿಕಾಗುರೂತ್ತಮ
ನಾಂತಿರುವ ವೈರಾಗ್ಯಧೃತಿಯನ
ದೆಂತೊ ಸಡಿಲಿಸಿ ಬಿಟ್ಟ ನಿಜಸಚ್ಛಿಷ್ಯನಗಲಿಕೆಯು
ಅಂತರಂಗಕ್ಕಿತ್ತಳಲ ತಾ
ನೆಂತೊ ಸೈರಿಸಿ ಪೋದನಾ ಗುರು
ಶಾಂತನಕ್ಷಿಯೊಳಿಳಿವ ದುಃಖಾಶ್ರುಗಳ ನಿರುಕಿಸುತೆ ॥ ೨೪ ॥

ಬಳಿಕೆ ತನ್ಮಠದಲ್ಲಿಯೇ ಕಂ
ಗೊಳಿಪ ಸಂಸ್ಕೃತ ಪಾಠಶಾಲೆಯೊ
ಳೆಲಘು ವಿಬುಧರು ನೀಲಕಂಠಸನಾಖ್ಯ ಶಾಸ್ತ್ರಿಗಳು
ನಲವಿನಿಂದಧ್ಯಾಪಕತ್ವವ
ತಳೆದಿರಲು ಸಂಸ್ಕೃತವನವರಿಂ
ಕಲಿಯ ತೊಡಗಿದನೈದೆ ತದ್ಗುರು ಶಾಂತಮಠಿದೇವಂ ॥ ೨೫ ॥

ಆ ಮಠದ ಮರಿಯಾಗಿ ವಿದ್ಯಾ
ಪ್ರೇಮುದಂಬುಧಿಯಾಗಿ ಭಕ್ತ
ಸ್ತೋಮಸನ್ನುತ ನೆನಿಸಿ ಬೆಳಗುವ ಚೆನ್ನವೀರಾಖ್ಯಂ
ಸ್ವಾಮಿಕೃಪೆಯಿಂ ಕೆಲದಿನಕೆನಿ
ಸ್ಸೀಮಸಖನೆನಿಸಿದನು ವರಗುಣ
ಧಾಮನಿಗೆ ಗುರುಶಾಂತಮರಿದೇವನಿಗದೇನೊರೆವೇಂ ॥ ೨೬ ॥

ಅವರುಭಯರಾ ಕೆಳೆತನಂ ಮ
ತ್ತವರ ವರ್ತನಮವರ ಸದ್ಗುಣ
ವವರ ವಿದ್ಯಾಭ್ಯಾಸದಳ್ತಿಯು ಮಠದೊಡೆಯರಾದಾ
ಸುವಿಮಳಸ್ವಾಮಿಗಳ ಮೇಣ್ ಬರು
ವವರ ಸದ್ಭಕ್ತರ ಹೃದಯ ಮಂ
ತವೆಸೆಳೆದು ಮುದಶರಧಿಯೋಳ್ ಮುಳುಗಿಸುವವನವರತಂ ॥ ೨೭ ॥

ಹೃದಯವೊಂದೊಡಲೆರಡೆನಿಸಿದಾ
ಸದಯಸಖರೋದುವ ಸುವಿದ್ಯೆಯ
ಚದುರತನವಲ್ಲದೆಯೆ ತಮ್ಮ ಶ್ರೀ ಗುರೂತ್ತಮರಾ
ಪದಪಯೋಜದ ಸೇವೆಯಂ ಗೈ
ವುದರ ಜಾಣ್ಮೆಯ ಗಳಿಸಿಸಲೆ ಬೆಳ
ಗಿದರು ತನ್ಮಠಧರ್ಮದೇವಿಯ ಕಣ್ಗಳೆರಡೆನಿಸಿ ॥ ೨೮ ॥

ಮುಂದುವರಿದಿರೆ ಸಂಸ್ಕೃತದೊಳಭಿ
ನಂದನೀಯಂ ಚೆನ್ನವೀರಸ
ಖೇಂದುವದನೀಕ್ಷಿಸುತೆ ತದ್ಗುರು ಶಾಂತಮರಿದೇವಂ
ಒಂದಿ ಕಡುಸಂತಸವ ತಾನುಂ
ಮುಂದುವರಿದನು ನಿತ್ಯಸೌಖ್ಯವ
ನೊಂದಿಸುವ ಲಿಂಗಾಂಗಯೋಗದೊಳಾ ಮಹಾಮಠದೋಳ್ ॥ ೨೯ ॥

ತುಂಗತರಲಿಂಗಾಂಗಯೋಗದೆ
ಕಂಗೊಳಿಸು ತಿರ್ದಾವ ಮಹಿಮನು
ಭಂಗಿಸಿದನುತ್ತುಂಗಜೋಗಿಯ ಗರ್ವದೇಳ್ಗೆಯನು
ಲಿಂಗಸುಖಸಾಮ್ರಾಜ್ಯದಧಿಪನ
ನಂಗಹರನಾ ತೋಂಟದ ಶ್ರೀ
ಜಂಗಮೋತ್ತಮ ಸಿದ್ಧಲಿಂಗನು ಪಾಲಿಸುಗೆ ನಮ್ಮಂ ॥ ೩೦ ॥

ಪರಮಪಾವನ ಚರಿತವಿದನಾ
ದರದೆಪಠಿಸುವ ಕಥಿಸುವಾಲಿಸು
ವರಿಗೆ ತದ್ಗುರು ಶಾಂತಶಿವಯೋಗೀಶ್ವರನು ಕೃಪೆಯಿಂ
ಬೆರೆತರಾಯುರರೋಗ ಭಾಗ್ಯವ
ಕರುಣಿಸುವನಲ್ಲದೆಯೆ ಗುರುಹರ
ಚರರನುಗ್ರಹವಾಗಿಸುವನನವರತವಿದು ನಿಜವು ॥ ೩೧ ॥

ನಾಲ್ಕನೆಯ ಸಂಧಿ ಸಂಪೂರ್ಣಂ ಪದ್ಯಗಳು ೧೬೩ಕ್ಕೆ ಮಂಗಳಂ

ಶ್ರೀ ಗುರುಶಾಂತ ಶಿವಯೋಗೀಶ್ವರಃ ಪ್ರಸೀದತು

ಐದನೆಯ ಸಂಧಿ

ಸೂಚನೆ— ವಿನುತವಿದ್ಯಾಭ್ಯಾಸವನು ಗದು
ಗಿನ ಮಠದೊಳುರೆ ಮುಗಿಸಿ ತನ್ಮಠ
ದನಘಕೃತಿಯೋಳ್ ತೊಡಗಿದನು-
ಗುರುಶಾಂತಮರಿದೇವಂ ||

ನೆರೆದ ಹದಿನಾರನೆಯ ವರ್ಷದ
ಹರೆಯದೋಳ್ ಶಿವಯೋಗಶಕ್ತಿಯ
ನುರೆ ಪಡೆಯುತದರಿಂಗೆ ಜನರಿಷ್ಟಾರ್ಥಸಿದ್ಧಿಗಳಾ
ತರುವ ಮಹಿಮೆಯ ನಾಂತ ಸದ್ಗುರು
ವರನ ಗುರುಶಾಂತೇಶ್ವರನ ಪದ
ಸರಸಿಜದೊಳಾರಡಿಯೆನಿಸಿ ನಲಿಯುವುದು ನಮಗಿರಲಿ || ೧ ||

ಬಳಿಕೆ ಕಲಿತಸು ವಿದ್ಯೆಯಾತ್ಮರ
ಮಲವ ಕಳೆಯುವತೆರದೆಪಲವೆಡೆ
ಗಳ ಜಲದೆ ನೆಲಸಿರುವ ಮಾಲಿನ್ಯವನು ಕಳೆಯುತ್ತೆ
ನಲವು ಮಿಗೆ ಬಂದುದು ಶರತ್ತದು
ಮಳೆಯ ಕಾಲವು ಗತಿಸಿದುದರಿಂ
ಹೊಲಗಳೋಳ್ ಕೆಲಸಕ್ಕೆ ತೊಡಗಿದರೊಕ್ಕಲಿಗರೊಲಿದು || ೨ ||

ಮಾಡುತಂ ಹೊಲಗೆಲಸಗಳನುರೆ
ಪಾಡುತಂ ಜನಪದ ಸುಗೀತೆಯು
ನಾಡೆ ನಗೆವಾತಾಡುತಂ ಕೃಷಿಕಾಂಗನಾ ಜನವು
ನೋಡುತಂ ಬೆಳೆಯೈಸಿರಿಯುಮಿಗೆ
ಮಾಡಿದಾ ಕೃಷಿಕರ್ಮದಶ್ರಮ
ವೋಡೆ ಸಂತಸಗೊಳ್ಳುತಿರ್ದುದು ತತ್ಸಮಯದಲ್ಲಿ ॥ ೩ ॥

ಜೀವನವನರ್ಪಿಸಲು ಲೋಕದ
ಜೀವಿಗಳ ಜೀವನಕೆ ತಮ್ಮಯ
ಪಾವನಾಂಗಗಳೀ ತೆರದೆ ಮಿಗೆ ಧವಳಕೀರ್ತಿಯೊಳು
ತೀವಿರುವವೆಂಬಂತೆ ನಭದೊಳು
ತೀವಿರುವ ಮೇಘಗಳು ಬಿಳ್ಪಿಂ
ತೀವಿ ಸಲೆಕಂಗೊಳಿಸ ತೊಡಗಿದವಾ ಶ ತ್ತಿನೊಳು ॥ ೪ ॥

ಆ ಶರತ್ತಿನ ಸಮಯದೊಳ್ ಸುವಿ
ಲಾಸದಿಂ ಗುರುಶಾಂತದೇವನು
ತೋಷಮಯಸಖ ಚೆನ್ನವೀರಸ್ವಾಮಿಯೊಡಗೂಡಿ ।
ಬೀಸುತಿರೆ ತಂಗಾಳಿ ಪುಷ್ಪಸು
ವಾಸನೆಯ ನೆಲೆಯಲ್ಲಿ ವಿಹರಿಸು
ವಾಶೆಯಿಂದೈತಂದನೈಸಲೆ ಸಂಜೆಯೊಂದರೊಳು ॥ ೫ ॥

ಕಲಿವ ಪಾಠಗಳಿಂದೆತಮ್ಮೊಳು
ನೆಲಸಿದಾ ದಣಿವಾರುವನ್ನೆಗ
ಮೊಲವಿನಿಂ ತಿರುಗಾಡುತಾ ನೆಲೆಯಲ್ಲಿ ಬಳಿಕೊಂದು
ಶಿಲೆಯೊಳೈಸಲೆ ಕುಳಿತು ನಗೆನುಡಿ
ಗಳ ವಚಿಸಿ ಮಿಗೆ ನಕ್ಕ ಮೇಲಾ
ಕೆಳೆಯನಿಗೆ ಗುರುಶಾಂತಮೂರ್ತಿಯು ಪೇಳ್ದನೀ ತೆರದಿಂ ॥ ೬ ॥

ಗದುಗಿನೊಳ್ ನೀನಿದುವರೆಗಮೋ
ದಿದ ಸುಸಂಸ್ಕೃತ ವಿದ್ಯೆಯೊಳ್ ಕಡು
ಚದುರತನವಂ ಪಡೆದು ಬುಧನುತನಾಗಿ ನನ್ನೆದೆಗೆ
ಮುದವನಿತ್ತೈ ಮುಂದೆ ಬಹುಶಾ
ಸ್ತ್ರದೊಳು ಪರಪಾಂಡಿತ್ಯವನು ಪಡೆ
ವುದಕೆ ಪೋಗಲೆಬೇಕು ಕಾಶೀ ಕ್ಷೇತ್ರಕೊಲವಿಂದೆ ॥ ೭ ॥

ಪುಣ್ಯಮಯ-ದಾ ಕ್ಷೇತ್ರದೊಳ್ ಬುಧ
ಮಾನ್ಯಪಂಡಿತನಾಗಿ ಬಂದೀ
ಕನ್ನಡದ ಧರೆಯಲ್ಲಿ ಭಕ್ತರ ರಕ್ಷಿಸುವ ಕೃತಿಯೊಳ್
ಉನ್ನತದ ಗುರುವಾಗಿ ಮೆರೆಯುವ
ನಿನ್ನ ನೀಕ್ಷಿಸುತಿರ್ಪುದೆನ್ನಯ
ಕಣ್ಣ ಹಬ್ಬವದಾಗಿ ಪರಿಣಮಿಸಲಿ ಸಖೋತ್ತಮನೆ ॥ ೮ ॥

ಎಂದೊರೆದ ನಿಜಹೃದಯಪರಮಾ
ನಂದಕರ ತನ್ಮಿತ್ರ ವಚನವು
ತಂದುದಾಗಳೆ ಚೆನ್ನವೀರಾಕ್ಷಿಯೊಳು ಸುಖಜಳವಾ
ಅಂದು ಪುಲಕಿತಕರಗಳಿಂದಂ
ಮುಂದಿರುವ ಗುರುಶಾಂತ ಸಖನಂ
ಚೆಂದದಿಂ ಬಿಗಿದಪ್ಪಿ ಬಳಿಕೀತೆರದೆ ವಚಿಸಿದನು ॥ ೯ ॥

ನನ್ನಿನೇಹದ ನಿಲವ ಕಂಡೆನು
ನಿನ್ನೊಳೈಸಲೆ ಮಿತ್ರಪುಂಗವ
ನನ್ನದಾತ್ಮೋನ್ನತಿಯೆ ನಿನ್ನದದೆಂದು ತಿಳಿದಿರುವಾ
ಸನ್ನುತನೆ ನೀಯೊರೆದುದಂ ಗುರು
ಪನ್ನಳಿನ ಸನ್ನಿಧಿಯೊಳೊಲವಿಂ
ಬಿನ್ನಯಿಸಿಕೊಳಲಪ್ಪಣೆಯದೇನಾಗವುದೊ ನಮಗೆ ॥ ೧೦ ॥

ಇಂದುನೀಂ ಕೇಳೆನಲು ಸಮ್ಮತಿ
ಯೊಂದೆ ಸಖಗುರುಶಾಂತನನಿತರೊ
ಳಿಂದುವುದಯಿಸುತಿರುವುದೀಕ್ಷಿಸಿ ಚೆನ್ನವೀರಾರ್ಯಂ
ಚಂದಿರನು ಧರೆಯೊಳ್ ಕಲಾನಿಧಿ
ಯೆಂದು ಪೆರ್ಮೆಯ ಪಡೆದು ಜನತಾ
ನಂದಕರ ನೆನಿಸಿದನು ಕಲೆಗಳ ಸತ್ಫಲಮಿದಲ್ತೇಂ ॥ ೧೧ ॥

ಎನೆ ಮಹಾಮುದವೊಂದಿ ನೀನೀ
ಕ್ಷಣದೊಳೇ ಕವಿಯಾಗಿ ವಚಿಸಿದ
ಭಣಿತಿಯುಂ ಬುಧಜನಕೆ ಪರಮಾನಂದಕರಮಲ್ತೇಂ
ಎನುತೆ ನಗಲಾ ಮಿತ್ರನಾಗಳೆ
ಮನವರಳಿಸುತ್ತಿರ್ಪ ತಣ್ಪೆಳ
ಗಿನ ಶರಚ್ಚಂದ್ರಿಕೆಯು ಪಸರಿಸಿ ತಖಿಳ ದಿಶೆಗಳೊಳು ॥ ೧೨ ॥

ಉದಯಿಸಲು ಶಶಿಯುಕ್ಕಿ ಮೇಲ್ವರಿ
ದುದು ಸುಧಾಂಭೋನಿಧಿಯು ಮತ್ತಿ
ನ್ನದರ ಸೊದೆಯಿಂತೆರದೊಳವನಿಯನಾವರಿಸಿತೆನೆ ತಾಂ
ಚದುರ ಗೆಳೆಯನೆ ಜೊನ್ನವಿದುಪ
ರ್ಬಿದುದು ಕಣ್ಗಳಿಗೀಂಟುತಂಜನ
ರಿದರ ಸವಿಯಂ ಪಡೆದು ಸುಖಿಸುವರಲ್ತೆ ಭೂತಲದೋಳ್ ॥ ೧೩ ॥

ಎಂದೊರೆದ ಸರಸೋಕ್ತಿಯಿಂ ನಲ
ವೊಂದಿಸುತೆ ಗುರುಶಾಂತ ಸಖನಿಗೆ
ಬಂದು ಮಠಕಾ ಚೆನ್ನವೀರಂ ಗೆಳೆಯನೊಡಗೊಂಡು
ವಂದಿಸುತೆ ಗುರುಚರಣ ಯುಗ್ಮಕೆ
ಮುಂದೆ ನಿಲೆ ಗುರುಶಾಂತಮರಿಯಿಂ
ತೆಂದು ಬಿನ್ನೈಸಿದನುತಾಂ ಸ್ವಾಮಿಗಳ ಸನ್ನಿಧಿಗೆ ॥ ೧೪ ॥

ಬಳಿಕೆ ಮಠಕ್ಕೈತಂದು ಕೆಲದಿನ
ಗಳೆಯೆ ಮಿತ್ರನಗಲ್ಕೆಯಳಲನು
ಕಳೆದುಕೊಳ್ಳುತೆ ನಿಜಗುರುಗಳಂಘ್ರಿಯ ಸುಸೇವೆಯೊಳು
ತಳೆದು ಭಕ್ತಿಯನಿರುತೆ ಲೇಖನ
ಗಳ ಮುಖದೆ ತತ್ಸಖನ ಕುಶಲವ
ತಿಳಿದು ನಲಿಯುತ್ತಿರ್ದನಾ ಗುರುಶಾಂತಮರಿದೇವಂ || ೨೩ ||

ಪರಮವಾರಾಣಸಿಯ ಪಂಡಿತ
ವರರ ಸತ್ಪ್ರೇಮಾದರಗಳನು
ನೆರೆಗಳಿಸುತವರಿಂದೆ ಶಾಸ್ತ್ರಸುತತ್ವಸಾರವನು
ಅರಿದು ತನ್ನಭ್ಯಾಸವನು ನಿ
ರ್ಭರವುದದೆ ಮಾಡುತ್ತಲಿರ್ದಂ
ಸ್ಫುರಿತ ಮತಿಯುತ ಚೆನ್ನವೀರಸ್ವಾಮಿಯಾಸ್ಥಲದೊಳ್ || ೨೪ ||

ಇತ್ತ ತದ್ಗುರುಶಾಂತ ಮೂರ್ತಿಯು
ನುತ್ಯ ಚರಿತಪ್ರಾಪ್ತ ಕೀರ್ತಿಯು
ಮತ್ತೆ ವಿದ್ಯಾಭ್ಯಾಸದೊಳೆ ಕಾಲವನು ಕಳೆಯುದೆಯೇ
ಉತ್ತಮ ಶ್ರೀಗುರುಗಳಪ್ಪಣೆ
ಯಿತ್ತ ತೆರದಿಂ ಮಠದ ಕಜ್ಜವ
ಚಿತ್ತಗೊಟ್ಟುರೆ ಮಾಡತೊಡಗಿದನಧಿಕ ಮುದದಿಂದೆ || ೨೫ ||

ಕಲಿವ ಬಡವಿದ್ಯಾರ್ಥಿಗಳಿಗುರೆ
ನಲವಿನಿಂನೆರವಾಗುತವರಿ
ನ್ನೆಳಸಿದನ್ನಸುವಸ್ತ್ರ ಪುಸ್ತಕ ಮುಖ್ಯವಾದುದನು
ತಳುವದೊದಗಿಸಿಕೊಟ್ಟು ನಿಜಮಠ
ದೊಳಗಿರುವ ವರಪಾಠಶಾಲೆಗೆ
ಪಲವೆಡೆಗಳಿಂ ಬಾಲಕರು ಬರುವಂತೆ ಮಾಡಿದನು || ೨೬ ||

ಬಂದ ಸದ್ಗುರು ಜಂಗಮರ್ಕಳ
ವೃಂದದುರು ಪೂಜಾಪ್ರಸಾದದೊ
ಳೊಂದಿನಿತು ಕೊರತೆಯದು ಸಮನಿಸದಾ ವ್ಯವಸ್ಥೆಯನು
ಚಂದದಿಂ ಮಾಡಿಸುವ ಚತುರತೆ
ಯೊಂದೆ ತದ್ಗುರು ಚರರ ಪರಮಾ
ನಂದಶರನಿಧಿ ಚಂದ್ರನೆನಿಸಿದನಾ ಗುಣಾರ್ಣವನು ॥ ೧೭ ॥

ನಿರುಪಮಿತ ಗುರುಭಕ್ತಿಯಿಂದಂ
ಪರಮಪೂಜ್ಯರ ಗುರುವರರ ಸ
ಚ್ಚರಣ ದರ್ಶನ ಮಂಗಳಾಶೀರ್ವಾದಗಳ ಪಡೆದು
ತೆರಳಲಾಗಮಿಸುವ ಸುಭಕ್ತನಿ
ಕರದ ಸತ್ಕಾರವನು ಮಾಡಿಸು
ತಿರುವ ಜಾಣ್ಮೆಗೆ ತವರೆನಿಸಿದನು ತದ್ದಯಾನಿಧಿಯು ॥ ೧೮ ॥

ಗುರುವರರ ಲೀಲೆಗಳ ವರ್ಣಿಸು
ತಿರುವ ಸರಸಕವಿತ್ವಗಳ ಸಲೆ
ವಿರಚಿಸಿದ ಶಿವಕವಿಗಳಾಗಮಿಸುತಿರೆ ನಿಜಮಠಕೆ
ಉರುಮುದದೊಳವರಿಂದ ಕವನವ
ಪರಮಗುರು ಸನ್ನಿಧಿಯೊಳೋದಿಸು
ತೆರೆದುದವರಿಗೆ ಕೊಡಿಸುವುದು ಹಿರಿದಾದುದಾತನಿಗೆ ॥ ೧೯ ॥

ಪೂತಮಾದಾ ಮಠದೊಳುರೆ ವಿ
ಖ್ಯಾತರೆನಿಸಿದ ವಿಬುಧ ಜನರಿಂ
ಸಾತಿಶಯ ಧಾರ್ಮಿಕ ಸುಭಾಷಣಗಳನು ಮಾಡಿಸುವಾ
ಪ್ರೀತಿ ದಿನದಿನದಲ್ಲಿ ಪೆರ್ಚಿದು
ದಾಚತುರ ಗುರುಶಾಂತ ಮೂರ್ತಿಯೊ
ಳೀ ತೆರದ ತದ್ವರ್ತನೆಯು ನಲವಿತ್ತುದೆಲ್ಲರಿಗೆ ॥ ೨೦ ॥

ಪುಣ್ಯಕರದಿನಗಳೊಳು ಭಕ್ತರ
ಪುಣ್ಯ ಮೂರ್ತಿಗಳಾದ ಮಹಿಮರ
ಗಣ್ಯ ಲೀಲಾನ್ವಿತ ಪುರಾಣ ಪ್ರವಚನವ ಮಠದೊಳ್
ಮಾನ್ಯ ಪೌರಾಣಿಕರೊಳಾಗಿ ಸು
ತುನ್ನತದ ಶಿವಭಕ್ತಿಯಂ ಸಾ
ಮಾನ್ಯ ಜನರೊಳ ಮೊಗೆಯಿಸುಗುಮಾಮಹಿತ ಮರಿದೇವಂ ॥ ೩೧ ॥

ಕನ್ನಡಿಗರತಿ ಪುಣ್ಯದಿಂದು
ತ್ಪನ್ನವಾದಾ ಶರಣ ವಾಙ್ಮಯ
ದುನ್ನತದ ವಚನಗಳ ರಸಮಯಗಾಯನವ ಮಠದೋಳ್
ಮಾನ್ಯ ಗಾಯಕರಿಂದೆ ಮಾಡಿಸು
ತನ್ಯದುರ್ಲಭ ಸುಖವ ಪಡೆಯುವ
ಪುಣ್ಯವಂ ಶ್ರೋತೃಗಳಿಗೊಡರಿಸುತಿರ್ದನಾ ಸ್ವಾಮಿ ॥ ೩೨ ॥

ಶಿವನ ಮೇಣ್ ಶಿವನವರ ಲೀಲೆಯ
ಕವನ ಪಟದೋಳ್ ಚಿತ್ರಿಸಿದ ಶಿವ
ಕವಿಗಳುತ್ತಮ ಕಾವ್ಯಗಳ. ವಾಚನದೆ ಸಂಜನಿಪಾ
ಸವಿಯ ಸಭಿಕರಿಗುಣಿಸುತಿರ್ದರು
ನವಗಮಕಿಗಳು ಕಾವ್ಯರಸದನು
ಭವಿಯೆನಿಸಿದಾ ಸ್ವಾಮಿಯೇರ್ಪಡಿಸಿದ ಸುಸಮಯದೊಳು ॥ ೩೩ ॥

ಹಿರಿಮೆಗೆಡೆಯೆನಿಸಿರ್ದ ಗದುಗಿನ
ವರಜಗದ್ಗುರುಗಳ ಮಠದ ನಿ
ರ್ಭರ ಮುದದ ವಿಲಸದ್ರಥೋತ್ಸವ ಪುಣ್ಯ ದಿನಗಳೊಳು
ಜರುಗಿಸುವ ಕಜ್ಜಗಳೊಳೆಚ್ಚರ
ವಿರಿಸಿ ಪೂರೈಸುವ ಸುದಕ್ಷತೆ
ಯಿರುವುದಾ ಗುರುಶಾಂತ ದೇವರೊಳೆಂಬರರಿದವರು ॥ ೩೪ ॥

ಇಂತು ಬಹುಮುಖ ಕಾರ್ಯಗಳ ವರ
ಶಾಂತಿಯಿಂದಾಗಿಸುವ ತದ್ಗುರು
ಶಾಂತಮೂರ್ತಿಯು ಮಠದ ಕಾರ್ಯಾಧ್ಯಕ್ಷತೆಯ ವಹಿಸಿ
ಸಂತತಂ ನಿಜ ಗುರುಗಳಿಗೆ ಕಡು
ಸಂತಸವನೊದಗಿಸುತೆ ಭಕ್ತಜ
ನಾಂತರಂಗ ಧ್ಯೇಯ ಮೂರ್ತಿಯೆ ಆಗಿ ಬೆಳಗಿದನು ‖ ೩೫ ‖

ಉಳವಿಸು ಕ್ಷೇತ್ರದೊಳು ವೈಷ್ಣವ
ನಲಘುಪಂಡಿತನೋರ್ವನನು ತಾಂ
ಗೆಲಿಯೆ ವಾದದೊಳವನು ಕಿನಿಸಿಂಬಿಟ್ಟ ಭೂತವನು
ತಳುವದೋಡಿಸಿ ಶಿವಮಹತ್ವವ
ನೊಲವಿನಿಂ ಪ್ರಕಟಿಸಿದ ಚರಕುಲ
ತಿಲಕನಾದಾ ಸಿದ್ಧಲಿಂಗನು ರಕ್ಷಿಸಲಿ ಸತತಂ ‖ ೩೬ ‖

ಪರಮಪಾವನ ಚರಿತವಿದನಾ
ದರದೆ ಪಠಿಸುವ ಕಥಿಸುವಾಲಿಸು
ವರಿಗೆ ತದ್ಗುರು ಶಾಂತ ಶಿವಯೋಗೀಶ್ವರನು ಕೃಪೆಯಿಂ
ಚಿರತರಾಯುಃರರೋಗ ಭಾಗ್ಯವ
ಕರುಣಿಸುವನಲ್ಲದೆಯೆ ಗುರುಃಹರ
ಚರರನುಗ್ರಹವಾಗಿಸುವನನವರತವಿದು ನಿಜವು ‖ ೩೭ ‖

ಐದನೆಯ ಸಂಧಿ ಸಂಪೂರ್ಣಂ ಪದ್ಯಗಳು ೨೦೦ ಕ್ಕೆ ಮಂಗಳಂ

ಶ್ರೀ ಗುರುಶಾಂತ ಶಿವಯೋಗೀಶ್ವರಃ ಪ್ರಸೀದತು

ಆರನೆಯ ಸಂಧಿ

ಸೂಚನೆ— ಹರಿಹರದ ಮಠದಧಿಪತಿತ್ವವು
ದೊರೆದುದಾ ಗುರುಶಾಂತ ಮೂರ್ತಿಗೆ
ಸುರುಚಿರದ ದುರ್ಗದ ಜಗದ್ಗುರುಗಳ ಕೃಪಾಬಲದೇ ॥

ಪ್ರೇಮ ಮಿತ್ರನ ಚೆನ್ನವೀರ
ಸ್ವಾಮಿಯಾತ್ಮೋನ್ನತಿಯೆ ಮಿಗೆ ನಿ
ಷ್ಕಾಮಿಯೆನಿಸಿದ ತನ್ನದುನ್ನತಿಯೆಂದರಿದು ನಲಿದಾ
ಸ್ವಾಮಿ ಗುರುಶಾಂತೇಶ್ವರನ ಪದ
ತಾಮರಸನುಂ ನುತಿಸಿ ಸುಖಿವ
ಪ್ರೇಮದಿಂ ತಳ್ತಿರ್ಪ ಜೀವನಮೆಮಗಿರಲಿ ನಿರುತಂ ॥ ೧ ॥

ಅತ್ತ ಕಾಶೀ ಕ್ಷೇತ್ರದೋಳ್ ಜಸ
ವೆತ್ತ ಜಂಗಮವಾಡಿ ಮಠದೊಳ್
ಸ್ತುತ್ಯ ವಿಶ್ವಾರಾಧ್ಯ ಪೀಠ ಜಗದ್ಗುರುಗಳಾಗಿ
ನಿತ್ಯದೊಳ್ ಶೋಭಿಸುವ ಕರುಣಾ
ಯತ್ತ ರಾಜೇಶ್ವರಸಮಾಖ್ಯ ಗು
ರೂತ್ತಮರ ಸನ್ನಿಧಿಯೊಳಿರುತಂ ಚೆನ್ನವೀರ ಬುಧಂ ॥ ೨ ॥

ಮಾಡಿ ಶಾಸ್ತ್ರಗಳಧ್ಯಯನಮಂ
ನೋಡಿ ವೇದಾಗಮರಹಸ್ಯವ
ನೀಡಿ ಮತಿಯಂ ತತ್ವಶೋಧನೆಯಲ್ಲಿ ಬುಧ ಜನರಿಂ
ಕೂಡಿ ಮತಸಿದ್ಧಾಂತಗಳ ನಲಿ
ದಾಡಿ ಚರ್ಚಿಸುತಿರ್ಪುದೇ ದಿನ
ರೂಢಿಯಾದುದು ತನ್ಮಹಾಪಂಡಿತನಿಗೇನೊರೆವೇಂ ॥ ೩ ॥

ಆಗುಣಜ್ಞಂ ಪ್ರೇಮದಿಂದಾ
ಗಾಗಳೈಸಲೆ ತನ್ನ ದೇಶ
ಕ್ಕಾಗಮಿಸುವಾ ಸಮಯದೊಳ್ ನಿಲ್ದಾಣದೊಳ್ ಮೊದಲೇ
ಆಗಮಿಸಿ ಕಾಯ್ದಿರ್ದ ಸಖವರ
ನಾಗಿರುವ ಗುರುಶಾಂತ ಮೂರ್ತಿಯ
ರಾಗದಿಂ ಬಿಗಿದಪ್ಪುಗುಂ ತತ್ಸಖ್ಯಮೇಂ ಘನವೋ || ೪ ||

ಬಳಿಕೆ ಕಾಶೀಕ್ಷೇತ್ರ ವಿಷಯಂ
ಗಳನು ಸಲೆ ವಿವರಿಸುತೆ ಸಮ್ಮುದ
ಜಲಧಿಯೊಳಗೀಸಾಡಿಸುತೆ ಗುರುಶಾಂತ ಸಖವರನಾ
ನಲವಿನಿಂ ಮಠಕಾಗಮಿಸಿ ಗುರು
ಗಳ ಪದಾಂಬುಜಕೆರಗಿ ವಿನಯದೆ
ತಿಳಿಸುಗುಂ ತನ್ನ ಮಳವಿದ್ಯಾಭ್ಯಾಸದುನ್ನತಿಯಾ || ೫ ||

ತಿಳಿದು ಶಿಷ್ಯನ ವಿದ್ಯೆಯುನ್ನತಿ
ಯೊಲವಿನಿಂನಲ್ಪರಕೆಯಾ ಗುರು
ತಿಲಕನಿತ್ತಬಳಿಕ್ಕೆ ಮಾನ್ವಿಯವರ ಮನೆಗೆ ಬಂದು
ಸಲೆ ತನಗೆ ಹಡದವ್ವನೆನಿಸುತೆ
ಬೆಳಗುವಾ ರುದ್ರಾಂಬೆಯನು ನಿ
ರ್ಮಳ ಚರಿತ ದುಂಡಪ್ಪನರ್ಧಾಂಗಿಯನು ತಾಂ ಕಂಡು || ೬ ||

ಚೆನ್ನವೀರಸ್ವಾಮಿ ಭಕ್ತಿಸ
ಮುನ್ನತಿಯ ತಜ್ಜನನಿಯಿದಿರೊಳ್
ತನ್ನ ವಿದ್ಯಾಭ್ಯಾಸವೇ ಮೊದಲಾದುದನು ತಿಳಿಸೇ
ನನ್ನ ದೇವರೆ ಕಾಶಿಯೊಳ್ ಬುಧ
ಮಾನ್ಯನಾಗೆಂದೊರೆಯುತಾತನ
ಪನ್ನಳಿನಕೆರಗಿದಳು ಸುರಿಸುತೆ ಸುಖಜಲವ ಕಣ್ಣಿಂ || ೭ ||

ಸ್ನಾನ ಪೂಜಾದಿಗಳೊಳಾ ಸು
ಜ್ಞಾನ ಮೂರ್ತಿಯನುಪಚರಿಸಿ ಪರ
ಮಾನುರಾಗದೆ ಕಳುಹಿಸಲು ತಜ್ಜನನಿಯಾ ಬಳಿಕೆ
ತಾನು ಗುರುಶಾಂತಾಪ್ತಮಿತ್ರಾ
ಧೀನವಾಗಿಯೆ ಕೆಲದಿನಂಗಳ
ನೂನಮುದದಿಂ ಕಳೆದು ನಿಜಗುರುವೊಪ್ಪಿಗೆಯ ಪಡೆದು ॥ ೮ ॥

ಮತ್ತಮಭ್ಯಾಸಕ್ಕೆ ಕಾಶಿಗೆ
ಚಿತ್ತದೊಲವಿಂ ಚೆನ್ನವೀರಸ
ಖೋತ್ತಮಂ ಪೊರಮಡಲು ತದ್ಗುರಶಾಂತ ಮರಿದೇವಂ
ಮತ್ತೆ ಮೊದಲಂದದೊಳು ತನ್ಮಠ
ದುತ್ತಮದ ಬಹುವಿಧದ ಕೃತಿಗಳಿ
ಗಿತ್ತ ಸೆಳೆದಾ ಸ್ನೇಹಿತನ ಬೆಂಬಿಡದ ನಿಜಮನವಾ ॥ ೯ ॥

ತೊಳಪ ಕಾಶೀ ಕ್ಷೇತ್ರದೊಳ್ ಬುಧ
ತಿಲಕರಾಪಾಠ ಪ್ರವಚನದೆ
ಗಳಿಸುತೆಲ್ಲಾ ಶಾಸ್ತ್ರಗಳೊಳತ್ಯಧಿಕ ನಿಪುಣತೆಯಾ
ಗಳಿಸಿ ವಿರತಿಯ ಧನವ ಸದ್ಗುಣ
ನಿಳಯನಾಗಿ ಸುವರ್ತನೆಯೊಳುರೆ
ಬೆಳಗುತಿರ್ದನು ಚೆನ್ನವೀರ ಸುಧೀಮಣಿಯು ಬಳಿಕೆ ॥ ೧೦ ॥

ಆ ಮಹಾಕ್ಷೇತ್ರದೊಳು ನಡೆದು
ದ್ದಾಮ ಪಂಡಿತ ಸಭೆಗಳೋಳ್ ನಿ
ಸ್ಸೀಮ ಯುಕ್ತಿಯ ಶಾಸ್ತ್ರವಾದಗಳಲ್ಲಿ ಜಯಮಾಂತು
ಸ್ವಾಮಿಯಾತನು ಮಹಿತವಿಬುಧ
ಸ್ತೋಮದಿಂ ಜಯದೇವ ಬಿರುದಂ
ಪ್ರೇಮದಿಂ ಪಡೆದೊಪ್ಪಿದಂ ತತ್ಕೃತಿಭೆಯೇಂಘನವೋ ॥ ೧೧ ॥

ಇತ್ತ ಕರ್ಣಾಟಕದ ಭಕ್ತಿಯು
ಗೊತ್ತೆನಿಸಿದಾ ಚಿತ್ರದುರ್ಗದೊ
ಳತ್ಯಧಿಕ ಕೀರ್ತಿಯ ಬೃಹನ್ಮಠದ ಪ್ರಭುತ್ವವನು
ಪೆತ್ತು ಧರ್ಮೋದ್ಧಾರವೆಸೆಗುವ
ಕೃತ್ಯಕರ್ಹನೆನಿಪ್ಪ ಸುಗಣಾ
ಯುತ್ತವಿದ್ಯಾವಂತನೋರ್ವನ ವಟುವನಾರಿಸುವಾ ‖ ೧೨ ‖

ಘನಕೃತಿಗೆ ನಾಡಿನ ಸುಭಕ್ತರು
ಮನವನಿತ್ತಿರೆ ಸೊನ್ನಲಾಪುರ
ದನಘನೆನಿಸಿದ ವಾರದಾ ಮಲ್ಲಪ್ಪನಿನ್ನುಳಿದ
ವಿನುತ ಚರಿತರು ತಜ್ಜಗದ್ಗುರು
ವಿನ ಪದವಿಯೊಂದಲು ಸುವಿದ್ಯಾ
ವನಧಿ ಜಯದೇವನೊಳು ಯೋಗ್ಯತೆಯಿರ್ಪುದೆಂದರಿದು ‖ ೧೩ ‖

ಕರೆಯಿಸುತ್ತಂ ಕಾಶಿಯಿಂದಾ
ಸರಸವಿಬುಧನ ಬಳಿಕೆ ದುರ್ಗದ
ವರಮಠಕೆ ಕರೆದೊಯ್ಯೆ ಸರ್ವರು ನೆರೆದ ಸಭೆಯಲ್ಲಿ
ಪರಮ ಮುದದಿಂದಾರಿಸುವ ವಟು
ವರರೊಳಾ ಪಂಡಿತನಿಗೈಸಲೆ
ದೊರೆಯೆ ಬಹುಮತವೆಲ್ಲರೆದೆಯಾದುದು ಮುದಾನ್ವಿತವು ‖ ೧೪ ‖

ಇನ್ನೊರೆವೆನೇಂ ಚೆನ್ನವೀರ ಬು
ಧೋನ್ನ ತನಿಗಿಂತೊದಗೆ ದುರ್ಗದ
ಸನ್ನುತದ ಮಠದ ಪ್ರಭುತ್ವವು ತಾನೆ ತನ್ಮಠದಾ
ಮಾನ್ಯಗುರುವಾದಂತೆ ತಿಳಿದು
ತ್ಪನ್ನ ಸುಖದೊಳ್ ಮಗ್ನನಾದನು
ನನ್ನಿನಲ್ಗೆಳೆತನದ ಗುರುಶಾಂತಾರ್ಯನಲ್ಲಿರ್ದು ‖ ೧೫ ‖

ಬಳಿಕೆ ಶುಭದಿನದಲ್ಲಿ ಸಿಂಗರ
ದಳೆದು ಶೋಭಿಸುವಾ ಬೃಹನ್ಮಠ
ದೊಳಗೆ ತತ್ಪೀಠಾಧಿಕಾರ ಪ್ರದಮಹೋತ್ಸವದೊಳ್
ಮಲರಹಿತ ಜಯದೇವ ಮಿತ್ರನ
ನಲವೆ ತಾಂ ವೈದಳೆದು ತೋರುವ
ಚೆಲುವನಾಂತೊಪ್ಪಿರ್ದನಾ ಗುರುಶಾಂತ ಮರಿದೇವಂ || ೧೬ ||

ಮೇದಿನಿಗೆ ಪೊಸತೆಂಬ ಮಾಳ್ಕೆ ಯೊ
ಳಾದುದಾ ಜಯದೇವ ಬುಧನ ಶು
ಭೋದಯಾನ್ವಿತ ಶೂನ್ಯಪೀಠಾರೋಹಣೋತ್ಸವವು
ಆದುದತ್ಯಾನಂದವಖಿಳರಿ
ಗಾದುದುದಾ ಗುರುಶಾಂತ ನಾಮಕ
ಭೇದರಹಿತಸ್ನೇಹಮೂರ್ತಿಯು ಕಣ್ಣ ಹಬ್ಬವದು || ೧೭ ||

ಬಳಿಕೆ ಜಯದೇವರು ಜಗದ್ಗುರು
ತಿಲಕರಂತಿಕದಲ್ಲಿರುವ ನಿ
ರ್ಮಲಮನದ ಗುರುಶಾಂತದೇವನ ನೋಡಿ ನಲವಿನೊಳು
ಕೆಳೆಯರನ್ನನೆ, ಗದುಗಿನೋಳ್ ನೀ
ನಲಘುತರಸಖ್ಯ ಮಯವಾಣಿಯೊ
ಳೊಲಿದೊರೆದವೋಲ್ ಪರಮವಿದ್ಯಾಧನವ ಸಾಂಗಳಿಸೇ || ೧೮ ||

ದೊರೆದುದೀಪರಿ ಪೂಜ್ಯಪೀಠದ
ಗುರುಪದವಿಯಿದರಿಂದ ನೀನನ
ಪರತಮುಂಸ್ಮರಣೀಯನಲ್ಲವೆ ನನಗೆ ಮುಂದಿನ್ನು
ಇರುತನಿೂಮಠದಲ್ಲಿ ಕಾರ್ಯನಿ
ಕರದ ಭಾರವ ವಹಿಸುತಂ ಸಲೆ
ನೆರವ ನೀಡುವುದೆನಲು ಸತ್ಸಖನೊರೆದನೀ ತೆರದಿಂ || ೧೯ ||

ಇದುವರೆಗೆ ತಾವೆನಗೆ ಮತ್ತಾ
ಣದ ಕೆಳೆಯರಾಗಿರುತವಿಲ್ಲಿಂ
ದುದಿತಕರುಣಾಮಯದ ಗುರುಗಳೆ ಆಗಿರುವಕತದಿಂ
ಪೊದಪುಮಿಗೆ ಭವದಾಜ್ಞೆಯಂ ತ
ಪ್ಪದೆ ತಲೆಯೊಳಾಂತದನು ನಡಸುವೆ
ನಿದಕೆ ಸಂದೆಗವಿಲ್ಲವೆಂದೆರಗಿದನು ತತ್ಪದಕೆ ॥ ೨೦ ॥

ಅರಿದು ಗುರುಶಾಂತಾರ್ಯನಲ್ಲೀ
ಪರಿಯ ಬಂಧುರ ಸಖ್ಯಮಂ ಮೇಣ್
ಪರಮ ಗುರುಭಕ್ತಿಯನು ತಜ್ಜಯದೇವ ಚರವರನು
ನಿರುಪಮಾನಂದದೊಳುತಾಂ ಮೈ
ಮರೆಯುತಂ ಕ್ಷಣ ಮಾಗಳಾವಿ
ಸ್ಫುರಿತಗುಣನಿಗೆ ವಹಿಸಿದನು ನಿಜಮಠದ ಕೃತಿಧುರವಾ ॥ ೨೧ ॥

ಇಂತು ವಹಿಸಿದ ಬಳಿಕೆ ಕರುಣಾ
ಶಾಂತ ಜಯದೇವ ಪ್ರಭುವು ಮುದ
ವಾಂತು ನಿಜ ಸಂಸ್ಥಾನಪದ್ಧತಿಯಂತೆ ದೇಶಗಳಾ
ಅಂತರದೆ ಸಂಚರಿಸುತಂ ತ
ತ್ಪ್ರಾಂತಗಳ ಭಕ್ತರ್ಕಳಲ್ಲಿ ನಿ
ರಂತರಂ ಧರ್ಮದ ಸುಜಾಗ್ರತೆಯಾಗಿಸುತೆ ಮತ್ತಂ ॥ ೨೨ ॥

ವಿದ್ಯೆಯೊಳ್ ಹಿಂದುಳಿದ ಜನತೆಯ
ದಿದ್ದು ಫಲವಿಲ್ಲೆಂದರಿದು ಸ
ದ್ವಿದ್ಯೆಯಭಿವೃದ್ಧಿಯ ನೆಸಗಲಾ ಪೂಜ್ಯ ಚರಪತಿಯು
ಇದ್ದು ಬಡಬಾಲಕರು ಸತತಂ
ವಿದ್ಯೆಗಲಿಯಲ್ಕಶನವಸತಿಗ
ಳಿದ್ದ ವಿದ್ಯಾರ್ಥಿ ನಿಲಯಗಳ ನೆನಿತೊ ನಿರ್ಮಿಸಿದಂ ॥ ೨೩ ॥

ಬಡವರಿಗೆ ಸಂಸ್ಕೃತವ ಮೇಣ್ ಕ
ನ್ನಡವ ಮತ್ತಾಂಗ್ಲೇಯ ಭಾಷೆಯು
ಬಿಡದೆ ಕಲಿಯುವುದಕ್ಕೆ ವಿದ್ಯಾಭ್ಯಾಸ ವೇತನವಾ
ಕೊಡುವುದೇ ಮೊದಲಾದ ಕೃತಿಗಳ
ನುಡಿಯಲರಿದೆಂಬಂತೆ ಗೈದನು
ಮೃಡಮಯನು ಜಯದೇವವಿಭು ಸಂಚಾರಕಾಲದೊಳು ॥ ೨೪ ॥

ಇತ್ತ ಗುರುಶಾಂತಾರ್ಯನತಿಮುದ
ವೆತ್ತು ನುತ್ಯ ಬೃಹನ್ಮಠದ ಬಹು
ಕೃತ್ಯಗಳ ಕಡುಜಾಣ್ಮೆಯಿಂಗೈಯುತ್ತೆ ನೋಡುವರಾ
ಚಿತ್ತಕಾಲ್ಹಾದವನು ನೀಡುತೆ
ಬಿತ್ತರಿಸಿದನು ತನ್ನ ಗುರುವಿನೊ
ಳಿತ್ತ ಭಕ್ತಿಸ್ನೇಹಗಳ ನುತಿಪಾತ್ರನೆಂದಿನಿಸಿ ॥ ೨೫ ॥

ಪುಣ್ಯಮಯ ತನ್ಮಠದ ಮೊದಲಿನ
ಸನ್ನಿಧಿಯ ಚರಮೂರ್ತಿಗಳು ಸ
ನ್ಮಾನ್ಯ ಗುರುಶಾಂತಾರ್ಯನೆಸಗುವ ಕೃತಿಯ ಕುಶಲತೆಯಾ
ಮನ್ನಿಸುತ್ತಂ ಸೋದರ ಪ್ರೇ
ಮೋನ್ನತಿಯಸಿಡತೊಡಗಿದರು ಗುಣ
ರನ್ನ ನಾದಾತನೊಳು ದಿನಗಳೆದಂತಿರಾ ಬಳಿಕೆ ॥ ೨೬ ॥

ಪನ್ನೆರಡು ವರ್ಷಗಳ ವರೆಗಂ
ಮಾನ್ಯ ಮಠದಾ ಸುವ್ಯವಸ್ಥೆಯ
ನಿನ್ನಿರದು ನಸು ಕೊರತೆಯೆಂಬಂತೆಸಗಿ ನಿಜಮುದವಾ
ಉನ್ನತೋನ್ನತವಾಗಿಸಿರ್ದಾ
ಧನ್ಯ ತಮಂಗುರುಶಾಂತಮರಿಯಂ
ಸನ್ನಿಧಿಗೆ ಕಳಿದೆಂದನಾ ಜಯದೇವವಿಭುವೊಮ್ಮೆ ॥ ೨೭ ॥

ಸದಯಹೃದಯನೆ ನೀನು ಸಂಸ್ಥಾ
ನದ ಮಹತ್ಕೃತಿ ಭಾರವಂ ವಹಿ
ಸಿದ ದಿನದ ಮೊದಲಿನ್ನೆಗಂ ಗುರುಭಕ್ತಿಪರನಾಗಿ
ಇದು ಬೃಹನ್ಮಠ ಕಾರ್ಯ ಪದ್ಧತಿ
ಚದುರತನದಾದರ್ಶವೆಂದುರು
ಮುದದೆ ಬಣ್ಣಿಸುವಂತೆ ಮಾಡಿದ ಪೆರ್ಮೆ ನಿನಗಿರ್ಕೆಂ ॥ ೨೮ ॥

ಎಂದು ನುಡಿದು ಜಗದ್ಗುರುಗಳವ
ರಂದು ಗುರುಶಾಂತಾರ್ಯನನು ಕೃಪೆ
ಯಿಂದೆ ಮಠದ ಸುಮುಖ್ಯ ಚರಮೂರ್ತಿಯನೆಸಗಿ ಬಳಿಕೆ
ಸುಂದರದ ಹರಿಹರನಗರಿಯಾ
ನಂದಕರ ಮಠದಧಿ ಪತಿತ್ವವ
ನೊಂದಲಪ್ಪಣೆಯಿತ್ತದಕ್ಕೊಪ್ಪಿಸಿದರಾತನನು ॥ ೨೯ ॥

ಆದುದುರು ಶುಭದಿನದ ನಿರ್ಣಯ
ವಾದುದಾ ಹರಿಹರದ ಪೊಳಲ ಶು
ಭೋದಯವು ತತ್ಪುರದ ಭಕ್ತಸಮೂಹಕತಿಮುದವು
ಆದುದುರೆ ಸಿಂಗರದ ರಚನೆಯು
ವಾದುದಾ ಚರಪಾದಧೂಳಿಯೊ
ಳಾದ ಸುಪವಿತ್ರತೆಯನಾಂತ ವಿರಕ್ತಮಠದಲ್ಲಿ ॥ ೩೦ ॥

ಹಿಂದೆ ಮಠದ ಜಗದ್ಗುರುತ್ವವ
ನೊಂದಿ ಸರ್ವಸುಭಕ್ತಜನಕಭಿ
ವಂದ್ಯರೆನಿಸಿರ್ದಾ ಮಹಾಲಿಂಗಾಖ್ಯಚರವರರಾ
ಒಂದಿದನುಪಮಸದ್ಗುಣದ ತ
ನ್ಮಂದಿರುಂ ಶಿವಮೂರ್ತಿನಾಮವ
ನೊಂದಿದವರುಂ ಸ್ವಾಮಿಗಳು ಶಿವಯೋಗಪರರಾಗಿ ॥ ೩೧ ॥

ಭಾಸುರದ ಶಿವ ಪೇಟೆಯೊಳ್ ಮೇಣ್
ದೋಷವಿರಹಿತರಾವ:ದುರ್ಗದೊ
ಳೀಶ ಭಕ್ತಿಪ್ರದ ಮಠಗಳೆರಡರ ವಿಭುತ್ವವನು
ತೋಷದಿಂ ಪಡೆದಿರ್ದರವರಿಂ
ದಾಸುಚರಪಟ್ಟಾಧಿಕಾರವ
ನಾ ಸುಗುಣಿ ಗುರುಶಾಂತಮೂರ್ತಿಗೆ ಕೊಡಿಸುವುದಕಾಗಿ ॥ ೩೨ ॥

ಕರೆಯಿಸಿದರಾ ಸ್ವಾಮಿಗಳ ನಿ
ರ್ಭರ ಮುದದೆ ಜಯದೇವ ವಿಭುಗಳು
ನೆರೆದರಖಿಳಪ್ರಾಂತಗಳ ಭಕ್ತಾದಿಗಳು ಬಳಿಕೆ
ಬರೆ ಸುಮಂಗಲ ಸಮಯವದು ದಿ
ಗ್ಭರಿತವಾಗೆ ಸುವಾದ್ಯನಿನದವು
ಕರೆದುತಂದು ವಿಧಿಜ್ಞರಾ ಗುರುಶಾಂತಮೂರ್ತಿಯನು ॥ ೩೩ ॥

ಮಂಗಳದ ಮಜ್ಜನವನಾಗಿಸಿ
ಸಿಂಗರದ ಮಂಟಪದ ಮಧ್ಯದ
ತುಂಗಪೀಠದೊಳೆಸೆಯುವಾ ಶಿವಮೂರ್ತಿ ಗುರುವರರಾ
ಮಂಗಳಾಂಘ್ರಿಪಯೋಜಕೆರಗಿಸಿ
ಲಿಂಗಮಯ ತದ್ಗುರುವಿನಿದಿರೊಳ್
ಕಂಗೊಳಿಪ ಗುರುಶಾಂತ ಶಿಷ್ಯೋತ್ತಮನ ಕುಳ್ಳಿರಿಸಿ ॥ ೩೪ ॥

ಆಗುವಾ ಶುಭವಾದ್ಯರವದೊಡ
ನಾಗುತಿರೆ ಮಂತ್ರಗಳ ಪಠಣಗ
ಳಾಗೆ ಚರಸಂಸ್ಕಾರಗಳು ಸಕ್ರಮದೊಳಾ ಬಳಿಕೆ
ಶ್ರೀಗುರುವಿನಿಂಚಿದುಪದೇಶಮು
ದಾಗಿ ಜಂಗಮಪಟ್ಟ ಬಂಧನ
ವಾಗೆ ಶಿಷ್ಯನಿಗದು ನಲವನಾಗಿಸಿತು ಸರ್ವರಿಗೆ ॥ ೩೫ ॥

ಆ ಸಮಯದಲ್ಲಖಿಳಮೂರ್ತಿಗ
ಳಾಸುಶಿವಮೂರ್ತಿ ಪ್ರಭುಗಳಿಂ
ದೋಷಹರ ಚಿದ್ಬೋಧನಾನುಗ್ರಹವ ಪಡೆಯುತ್ತಂ
ಈಶರೂಪರ ತದ್ಗುರುಗಳಡಿ
ಯಾಶಿಷಂಗಳನೊಂದಿ ಷಟ್‌ಸ್ಥಲ
ಭಾಸುರ ಬ್ರಹ್ಮದ ಸುತೇಜದೆ ಬೆಳಗಿದರು ಬಳಿಕೆ ॥ ೩೬ ॥

ವಿಲಸಿತರು ಜಯದೇವ ಗುರುಕುಲ
ತಿಲಕರಾ ಗುರುಶಾಂತಚರಪತಿ
ಗೊಲಿದು ಹರಿಹರ ಪುರಮಠದ ಸರ್ವಾಧಿಕಾರವನು
ತಳುವದೊಪ್ಪಿಸಿ ಪರಸೆ ತತ್ಪದ
ನಳಿನಕೆರಗುವ ಸಮಯದೊಳ್ ಕ
ಣ್ಣೊಳು ಸುಖಾಶ್ರುಗಳಿಳಿದವಾ ನವಪಟ್ಟಭೂಷಿತಗೇ ॥ ೩೭ ॥

ಬೀದಿಗಳೊಳಲ್ಲಲ್ಲಿ ನಿರ್ಮಿತ
ವಾದ ಚಪ್ಪರಗಳು ತಳಿರ್ಗಳೊ
ಳಾದ ತೋರಣಗಳೊಳು ಬಾಳೆಯ ಕಂಬಗಳೊಳೆಸೆಯೇ
ಮೋದದಭಿನವ ಪಟ್ಟಶೋಭಿತ
ನಾದ ಗುರುಶಾಂತೇಶ್ವರನ ಸೊಗ
ಸಾದ ಕುಸುಮಾಲಂಕೃತಾಂದೋಳನದೆ ಕುಳ್ಳಿರಿಸಿ ॥ ೩೮ ॥

ಘನತರದ ತತ್ತಿರ್ಯಗಾಂದೋ
ಳನಸ ಮುತ್ಸವವೆಸಗ ತೊಡಗಿದ
ರನುಪಮಿತ ಭಕ್ತಿಯೊಳು ಪುರಸರಣಿಗಳೊಳೂರವರು
ಎನಿತೊ ಬಗೆಯ ಸುವಾದ್ಯಗಳ ಸವಿ
ದನಿಯು ತುಂಬಿರಲೆರಡು ಪಕ್ಕದೊ
ಳನಿಮಿಷೇಕ್ಷಣದಿಂ ನಿರೀಕ್ಷಿಸ ಜನತೆ ತುಂಬಿದುದು ॥ ೩೯ ॥

ಕೊರಳ ರುದ್ರಾಕ್ಷಿಯೊಳು ಹಣೆಯೊಳ್
ಸ್ಫುರಿಪ ಭಸಿತದೊಳಂ ತನುವಿನೊಳ್
ಧರಿಸಿರುವ ಕಾವಿಯು ಸುವಸ್ತ್ರದೊಳೆಸೆವ ತದ್ಗುರುವು
ಸುರುಚಿರದ ಪಾಲಿಕೆಯೊಳುರೆ ಕುಳ್ಳಿ
ತಿರುವುದಂ ಮಿಗೆ ನೋಡುವಾ ಭ
ಕ್ತರ ಹೃದಯದೊಳ್ ತುಂಬಿದುದು ತದ್ಗುರು ಸುಭಕ್ತಿರಸಂ ॥ ೪೦ ॥

ನಿಲ್ಲಿಸುತ್ತಲ್ಲಲ್ಲಿ ಪಾಲಿಕೆ
ಯಲ್ಲಿರುವ ಗುರುಪುಂಗವನ ಪದ
ಪಲ್ಲವಕ್ಕೆರಗುತ್ತ ತೆಂಗುಗಳೊಡೆಯುತಾರತಿಯಾ
ಉಲ್ಲಸಿತರಾಗೆಸಗಿ ತಚ್ಚರ
ವಲ್ಲಭನ ನಲ್ಪರಕೆಗಳ ಪಡೆ
ವಲ್ಲಿ ಮಿತಿಮೀರಿದರು ಭಕ್ತಸ್ತ್ರೀಜನರು ಪಥದೊಳ್ ॥ ೪೧ ॥

ಕನ್ನಡಿಗರೊಳ್ ಶೈವವೈಷ್ಣವ
ಭಿನ್ನಭಾವವ ಪರಿಹರಿಸುವ
ತ್ಯುನ್ನತಾದರ್ಶತೆಯನಾಂತಾ ಹರಿಹರೇಶ್ವರನಾ
ಸನ್ನಿಧಿಯ ಪಡೆದಿರ್ಪುದರಿನು
ತ್ಪನ್ನ ಪುಣ್ಯದ ನೆಲೆಯೆನಿಸಿ ಸ
ನ್ಮಾನ್ಯತೆಯನೊಂದಿದುದು ಹರಿಹರನಗರವಿದುವರೆಗಂ ॥ ೪೨ ॥

ಆ ಪರಿಯ ಪುಣ್ಯಕ್ಕೆ ಫಲವೆನೆ
ಪಾಪಹರಶಿವತೇಜವೊಂದಿ
ದೀರ್ಘಪರಮಗುರು ಲಭಿಸಿರುವಸಿಂದೀಪುರಕ್ಕೆಂದು
ಆಪವಿತ್ರಾಂದೋಳನದೊಳ್
ದಾರ್ಪುನೀತ ಸ್ವಾಮಿಯುಜ್ಜ್ವಲ
ರೂಪವನುಂ ಕಂಡೈದೆ ಬಣ್ಣಿಸ ತೊಡಗಿದರು ಬುಧರು ॥ ೪೩ ॥

ಇಂತು ಬಣ್ಣಿಸಿ ಬುಧರು ತದ್ಗುರು
ಶಾಂತನವಚರಮೂರ್ತಿಗಳ ಕಡು
ಸಂತಸದ ತತ್ಪಾಲಿಕೋತ್ಸವ ಪುರಬೀದಿಗಳೋಳ್
ಎಂತೊ ಸಂಭ್ರಮದಿಂದೆ ನಡೆದು ಶು
ಭಾಂತಮಾಗಿಯೆ ಬಂದುದಾಪುರ
ದಂತರದೊಳೊಪ್ಪುವ ವಿರಕ್ತಮಠಕ್ಕೆ ತಾಂ ಬಳಿಕೆ ॥ ೪೪ ॥

ಮೊದಲೆ ಮಠದೊಳ್ಗೈದ ಹರ್ಷ
ಪ್ರದನಿರಂಜನಪೀಠದೊಳ್ಸ್ಮಿತ
ವದನದಿಂ ಮಂಡಿಸಿದ ತಜ್ಜಯ ದೇವಗುರುವರರಾ
ಪದದಸನ್ನಿಧಿಯಲ್ಲಿ ಕುಳ್ಳಿರಿ
ಸಿದರು ಭಕ್ತರು ಪಾಲಿಕಾ ಪು
ಷ್ಪದೊಳಿರುವ ನವಚರಪತಿಯು ಕರೆದೊಯ್ಯುತಾ ಬಳಿಕೆ ॥ ೪೫ ॥

ಭಕ್ತಿಕಾಣಿಕೆಗಳನು ನೆರೆದಸು
ಭಕ್ತರರ್ಪಿಸಿ ಸನ್ನಿಧಿಗೆ ಗುರು
ಭಕ್ತಿರಸದೋಳ್ ಮಿಂದು ವಂದಿಸುತಿರ್ಪ ಕೃತಿ ಮುಗಿಯೇ
ರಕ್ತಿಯಿಂದಂ ತಜ್ಜಗದ್ಗುರು
ಮುಕ್ತಿದಾಂಘ್ರಿಗೆ ನಮಿಸುತಂ ಸುವಿ
ರಕ್ತ ಗುರುಶಾಂತೇಶನುಸುರಿದನಿಂತು ಸರ್ವರಿಗೇ ॥ ೪೬ ॥

ಪರಮಜಯದೇವ ಪ್ರಭುಗಳುರೆ
ಕರುಣಿಸಿದ ಮಠದೊಡೆತನವನಿದ
ಗುರುಪದದ ವರವೆಂದು ನಂಬುತ್ತಿದರ ಸತ್ಫಲವಾ
ನೆರೆಗಳಿಸಿನಾನದರ ಭೋಗವ
ಗುರುಸುಭಕ್ತರಿಗಿತ್ತು ನಲಿಯುವ
ಸಿರಿಬರಲಿ ನನಗೆಂದನಾ ವೈರಾಗ್ಯ ಭೂಷಣನು ॥ ೪೭ ॥

ನೆರೆದವರು ನವಗುರುಗಳಿತ್ತೀ
ತೆರದ ಸಂದೇಶವನು ಕೇಳುತೆ
ಹರಿಸದಿಂಕರತಾಡನವಗೈದಾ ಬೃಹನ್ಮಠದಾ
ಗುರುಸುಸನ್ನಿಧಿಗೆಸಗಿ ಮಂಗಳ
ಮರುತರದ ಪರಕೆಗಳ ಪಡೆಯುತೆ
ತೆರಳಲಿಂತು ಸಮಾಪ್ತಿಯಾಗೆ ತದುತ್ಸವದ ಸಭೆಯು ॥ ೪೮ ॥

ಆಗೆ ಮಧುರತರ ಪ್ರಸಾದದ
ಭೋಗವೆಲ್ಲರಿಗುತ್ಸವಕೆ ಬಿಡ
ದಾಗಮಿಸಿದುನ್ನತರ ಗುರುಚರಪಂಡಿತಾದಿಗಳಾ
ಪೂಗಕರ್ಪಿಸಿ ಧನವಸನಗಳ
ನಾಗಳವರಂಕಳುಹಿಸಿದರನು
ರಾಗದಿಂ ತದ್ಗುರುಪದಾಂಬುಜ ಭಕ್ತರಾಬಳಿಕೆ ॥ ೪೯ ॥

ಕೇಳು ಗುರುಶಾಂತಪ್ಪ ನಮ್ಮೊಳು
ಕೀಲಿಸಿದ ಗುರುಶಿಷ್ಯ ಭಾವಕೆ
ಮೇಲೆನಿಸುವುದು ನಮ್ಮ ಪೂರ್ವಸ್ನೇಹವನವರತಂ
ಪಾಲಿಸುವುದದನೀರ್ವರೆಂದು ಕೃ
ಪಾಳು ಜಯದೇವ ಪ್ರಭುಗಳುರೆ
ಪೇಳೆ ಕಿರುನಗೆ ಮಲ್ಲಿಗೆಯ ಚಲ್ಲುತ್ತೆ ಸಮ್ಮುಖದೋಳ್ ॥ ೫೦ ॥

ಲಾಲಿಸುತ್ತಾ ನುಡಿಯ ಮೈನವಿ
ರೇಳೆ ಕಣ್ಣಿಂ ಸುಖಮಯಾಶ್ರುವು
ಬೀಳೆ ತನಗಾವೇಳೆಯೋಳ್ ತನ್ನಾತ್ಮಚರಪತಿಯು
ಲೀಲೆಯಾಣ್ಮನೆ ನಿನ್ನ ಸತ್ಪ್ರೇ-
ಮಾಲವಾಲದೆ ಬೆಳವ ಸಸಿಯಿದ
ಪಾಲಿಸುವ ಹೊಣೆ ನಿನ್ನದೆಂದೆರಗಿದನು ತತ್ಪದಕೆ ॥ ೫೧ ॥

ಎರಗಿದಾ ಗುರುಶಾಂತ ಮಿತ್ರನ
ಶಿರವಹಿಡಿದಿರದೆತ್ತಿ ಬೆನ್ನೊಳ್
ಕರವನಾಡಿಸಿ ನಗೆನುಡಿಗಳಿಂದಿತ್ತು ಪರಕೆಯನು
ಹರಿಸಗಡಲೊಳು ಮುಳುಗಿಸುತ್ತಾ
ಚರಪತಿಯನಾಬಳಿಕೆ ಬೀಳ್ಗೊಡೆ
ನೆರೆದವರು ತೆರಳಿದನು ದುರ್ಗಕ್ಕಾ ಮಹಾಗುರುವು ॥ ೫೨ ॥

ಧರೆಯರಿಯೆ ಕಗ್ಗೆರೆಯ ಬಳಿಯ
ಲ್ಲಿರುವ ಪೂದೋಟದೊಳಗಾವಸು
ಚರಿತನುರು ಶಿವಯೋಗಸೌಖ್ಯ ಸಮಾಧಿಗತನಾಗಿ
ಇರುವ ಸಮಯದೆಸುತ್ತಲುಂ ಬೆಳೆ
ದಿರುವ ಹುತ್ತವ ಲಕ್ಷಿಸದೆ ವೈ
ಮರೆದನೋತತ್ಸಿದ್ಧ ಲಿಂಗನ ನುತಿಸಿ ಸುಖಿಸುವೆನು ॥ ೫೩ ॥

ಪರಮಪಾವನ ಚರಿತವಿದನಾ
ದರದೆ ಪಠಿಸುವ ಕಥಿಸುವಾಲಿಸು
ವರಿಗೆ ತದ್ಗುರುಶಾಂತ ಶಿವಯೋಗೀಶ್ವರನು ಕೃಪೆಯಿಂ
ಚಿರತರಾಯುರರೋಗ ಭಾಗ್ಯವ
ಕರುಣಿಸುವನಲ್ಲದೆಯೆ ಗುರುಹರ
ಚರರನುಗ್ರಹವಾಗಿಸುವ ನನವರತಮಿದು ನಿಜವು ॥ ೫೪ ॥

ಆರನೆಯ ಸಂಧಿ ಸಂಪೂರ್ಣಂ ಪದ್ಯಗಳು ೨೫೪ ಕ್ಕೆ ಮಂಗಳಂ

ಶ್ರೀ ಗುರುಶಾಂತ ಶಿವಯೋಗೀಶ್ವರಃ ಪ್ರಸೀದತು

ಏಳನೆಯ ಸಂಧಿ

ಸೂಚನೆ:— ಕಾಮಹರ ಗುರುಶಾಂತ ಪೂಜ್ಯ
ಸ್ವಾಮಿಗಳು ನಿಜಮಠದ ಕೃತಿಯಂ
ಪ್ರೇಮದಿಂ ಗೈದಿಂತು ಭಕ್ತೋದ್ಧಾರ ವೆಸಗಿದರು

ಹರಿಹರದ ಮಠದಧಿಪತಿತ್ವವ
ನೆರೆಪಡೆದು ನಾಡಖಿಳ ಭಕ್ತರ
ಪುರಕುಜದವೋಲಿರ್ದು ಧರ್ಮೋದ್ಧಾರ ಪರನಾಗಿ
ಮೆರೆವ ತದ್ಗುರುಶಾಂತಚರಶೇ
ಖರನು ನಿಜಪಾದಾಂಬುರುಹವಂ
ಸ್ಮರಿಸುವೊಂದ್ಯೆಸಿರಿಯ ಕರುಣಿಸಲೆಮಗೆ ಸತ್ಕೃಪೆಯಿಂ ॥ ೧ ॥

ಶುಭ ಚರಿತ ಗುರುಶಾಂತ ಜಂಗಮ
ವಿಭುವಿನೋಳ್ ನೆಲಸಿರ್ದ ವಿರತಿಯು
ವಿಭವವೇ ಮೊದಲಾದ ಮಹಿತಗುಣಂಗಳಂ ಕಂಡು
ಅಭಿಮತಾರ್ಥವ ನಮಗೆ ಕರುಣಿಸು
ವಭಿನವಾಲ್ಲಮನಾಗಿ ತಾಂ ಚಿ
ತ್ಪ್ರಭೆಯನಾಂತೀ ಗುರುವು ದಯಮಾಡಿಸಿದನೀ ಪುರಕೆ ॥ ೨ ॥

ಎಂದು ಹರಿಹರಪುರವ ಭಕ್ತರ
ವೃಂದವೈಸಲೆ ಪೊಗಳುತಿರೆ ಬುಧ
ವಂದ್ಯನಾದಾಸ್ವಾಮಿ ಕನ್ನಯ ಮಠದಧೀನತೆಯಾ
ಒಂದಿರುವ ತಾಣಗಳು ಜೀರ್ಣತೆ
ಯೊಂದಿರುವುದಂ ಕಂಡು ಯೋಚಿಸು
ತಂದು ತೊಡಗಿದವವುಗಳಂ ಸರಿಗೊಳಿಪಕಜ್ಜದೊಳು ॥ ೩ ॥

ಹರಿಹರದ ಸದ್ಭಕ್ತ ಜನರೋಳ್
ಪರಿಕಿಪೊಡೆ ಮುರಕಲ್ಲ ಸದ್ಗುಣ
ಭರಿತ ಮಹಲಿಂಗಪ್ಪ ಹಂಜಿಯ ಚೆನ್ನಬಸವಯ್ಯಂ
ವರ 'ಜಿ' ಗುರುಸಿದ್ಧಪ್ಪನುಂ ಸ
ಚ್ಚರಿತಯುತಯಜಮಾನತೆಯನಾಂ
ತಿರುವ ತಿಪ್ಪಣ್ಣಗಳ ಮುರಿಗಪ್ಪೆಂಬ ನೀತಿಜ್ಞಂ ॥ ೪ ॥

ಇವರೆ ಮೊದಲಾದವರು ತಚ್ಚರ
ಧವನೊಳತಿ ವಿಶ್ವಾಸವಿಟ್ಟಿರ
ಲವರ ನೆರವಂ ಪಡೆದು ಚೌಕೀ ಮಠವೆ ಮೊದಲಾದಾ
ಸುವಿಮಲಸ್ಥಳಗಳೊಳು ಮಿಗೆ ಜೀ
ರ್ಣವ ತಳೆದ ಭಾಗಗಳ ಸರಿಗೊಳಿ
ಸುವ ಕೃತಿಯ ತಾಂ ಮುಗಿಸುತಾ ಗುರುದೇವ ನಾ ಬಳಿಕೆ ॥ ೫ ॥

ಆ ಮಠದ ಪೂರ್ವದ ಮಹಾಶ್ರೀ
ಸ್ವಾಮಿಗಳಿಗೆಸಗಿರ್ದ ಗದ್ದುಗೆ
ಯಾ ಮಹತ್ವಸ್ಥಾನದೋಳ್ ಪೂಜಾದಿ ಸತ್ಕೃತಿಯಾ
ನೇಮಕೆಡರೇಂ ಬರದವೋಲ್ ಜಿತ
ಕಾಮ ತದ್ಗುರುಶಾಂತ ಪೂಜ್ಯ
ಸ್ವಾಮಿ ನಲವಿಂ ಸುವ್ಯಸ್ಥೆಯನಾಗಿಸುತೆ ಮತ್ತಂ ॥ ೬ ॥

ಖ್ಯಾತಿವೆತ್ತಾ ಮಠದ ಬಯಲಪು
ನೀತದೆಡೆಯೋಳ್ ನುತ್ಯರಾದಪು
ರಾತನರ ಸಂಸ್ಮಾರಕಕ್ಕರವತ್ತು ಮೂರಾದಾ
ಪೂತ ಬಿಲ್ವದ ಸಸಿಗಳಂ ಸಂ
ಪ್ರೀತಿಯಿಂ ತಾಂ ನಟ್ಟು ಭಕ್ತ
ವ್ರಾತಕುರುಮುದವಾಗಿಸಿದನಾ ಭಕ್ತಿಮಂದಿರನು ॥ ೭ ॥

ಇಂತು ಮಲ್ಲದೆ ಮಠಕೆ ಪದ್ಧತಿ
ಯಂತೆ ಬರುವಸುಭಕ್ತ ಗುರುಚರ
ರಂ ತಣಿಸಲವುಳ ಪ್ರಸಾದಾದಿಗಳ ಸಿದ್ಧತೆಯು
ಸಂತತಮುದಿರುವಂತೆ ತದ್ಗುರು
ಶಾಂತಪರಮಸ್ವಾಮಿಗಳು ಕಡು
ಸಂತಸದೆ ಸಲೆ ಸುವ್ಯವಸ್ಥೆಯ ನಾಗಿಸುತೆ ಮತ್ತಂ ॥ ೮ ॥

ದಿನದಿನದ ಸಂಧ್ಯಾ ಸಮಯದೊಳು
ಮನವಲರೆ ನಿಜವಾದ ದರ್ಶನ
ಕನಘ ಭಕ್ತರು ಬಂದು ವಂದಿಸಲವರ ಕುಳ್ಳಿರಿಸಿ
ಘನಮುದದೆ ಶಿವಭಕ್ತಿಪಥವ
ರ್ತನೆಯ ಬೋಧಿಸಿ ಪರಸಿ ಕಳಿಸುವ
ವಿನುತ ಪದ್ಧತಿಯಿಟ್ಟುಕೊಂಡನು ತತ್ಕೃಪಾನಿಧಿಯು ॥ ೯ ॥

ಈ ವಿಧದ ಜಂಗಮಸುಕಾಯಕ
ವಾವಗಂ ಬಿಡದೆಸಗುತಂ ತ
ತ್ಕೋವಿದಸ್ತುತಿಪಾತ್ರ ಗುರುಶಾಂತೇಶ್ವರನು ತನ್ನಾ
ಭಾವಜಾರಿ ಸಮರ್ಚನೆಯ ಸ
ದ್ಭಾವದಿಂ ಸಲೆ ಗೈದು ನಿಜಸ
ಜ್ಜೀವನವ ಶಿವಸುಖಮಯವ ಗೈವುದನು ಬಿಡದಿರ್ದಂ ॥ ೧೦ ॥

ದಿನದಿನ ನಿಜಲಿಂಗ ಸಮುಪಾ
ಸನೆಯೊಳಾ ಚರಮೂರ್ತಿಯುಮಳಿನ
ತನುವೆ ತಾನಾಚಾರ ಲಿಂಗಮದಾತ್ಮವೇ ಗುರುವು
ಘನದಸುವೆ ಶಿವಲಿಂಗಮಿಂದ್ರಿಯ
ಗಣವೆ ಚರಲಿಂಗಂ ತದರ್ಪಿತ
ವೆನಿಸುವಾ ವಿಷಯಂ ಪ್ರಸಾದ ಸಮಾಖ್ಯ ಲಿಂಗಂ ಮೇಣ್ ॥ ೧೧ ॥

ಆಗೆ ತದ್ವಿಮಳ ಪ್ರಸಾದದ
ಭೋಗದಿಂ ಸಂತೃಪ್ತಿ ಪರಮಶಿ
ವಾಗಮಂಗಳೊರೆವಾ ಮಹಾಲಿಂಗಮಡೆನಿಸೆ ತನ್ನೊಳ್
ಹೀಗೆ ಷಡ್ಲಿಂಗಮಯ ಪರಶಿವ
ಯೋಗಿಯಾಗಿ ವಿರಾಜಿಸಿದನಾ
ರಾಗರಹಿತಸ್ವಾಮಿ ಷಟ್‌ಸ್ಥಲ ಮಾರ್ಗಗತನಾಗಿ ॥ ೧೨ ॥

ಇಂತು ಷಟ್‌ಸ್ಥಲಯೋಗದೋಳ್ ಜಿತ
ಕಂತು ತಚ್ಚರಮೂರ್ತಿ ವಿಕಸನ
ವಾಂತಿರುವ ತನ್ನಾತ್ಮಶಕ್ತಿಯ ಮಹಿಮೆಯಿಂ ಸತತಂ
ಚಿಂತಿತಾರ್ಥಂಗಳನು ಕೊಡುವ ಮ
ಹಂತನಾದಂ ಪಾದಸನ್ನಿಧಿ
ಯಾಂತಖಿಳ ಭಕ್ತರ್ಗೆ ಕೆಲದಿನಗಳೊಳೆ ತತ್ಪುರದೋಳ್ ॥ ೧೩ ॥

ಬಳಿಕೆ ತನ್ಮಹಿಮೆಯ ಸುವಾರ್ತೆಯು
ಪೊಳಲೊಳಲ್ಲದೆ ಕನ್ನಡದ ನಾ
ಡೊಳಗೆ ಪಲವೆಡೆಯಲ್ಲಿ ಪರ್ಬಿರೆ ತಿಳಿಯುತದ ಬಂದು
ತಳೆದ ಭಕ್ತಿಯ ಜನತೆ ತಚ್ಚರ
ತಿಲಕನಮಳಿನದರ್ಶನಾಶಿಷ
ಗಳೊಳು ವಾಂಛಿತಫಲವ ಪಡೆವುದು ಬಳೆಯ ತೊಡಗಿದುದು ॥ ೧೪ ॥

ಮನದೆ ಜಾನಿಸಿ ಕೆಲವರಿಗೆ ಕ
ಣ್ಗೊನೆಯೊಳೀಕ್ಷಿಸಿ ಕೆಲವರಿಗೆ ಮೇಣ್
ಘನದಹಸ್ತಸ್ಪರ್ಶದಿಂ ಕೆಲವರಿಗೆ ಕೃಪೆವೆತ್ತಾ
ಅನಘವಚನದೆ ಕೆಲವರಿಗೆ ಸಂ
ಜನಿಯಿಸುತೆ ವಾಂಛಿತವ ಜನತೆಯ
ಮನೆಮನಗಳಧಿದೈವವೆನಿಸಿದನಾ ಮಹಾಗುರುವು ॥ ೧೫ ॥

ವರತನುಜರಂ ಪಡೆದುಕೊಂಡರು
ಸಿರಿಯನೈಸಲೆ ಗಳಿಸಿಕೊಂಡರು
ನೆರೆ ರುಜೆಯು ಪರಿಹರಿಸಿಕೊಂಡರು ಮೂಕರುಂ ಬಿಡದೇ
ಸರಸವಾಣಿಯೊಳೊಪ್ಪುತಿರ್ದರು
ಕುರುಡರವುಳಾಕ್ಷಿಗಳನಾಂತರು
ಹರಿಹರದ ತದ್ಗುರುವರನ ಪರಕೆಯೊಳು ಜನತೆಯೊಳು ॥ ೧೬ ॥

ಬರವು ಬರದಂತಾದುದಿನಿವಾ
ಲ್ಸರಿಸಿದವು ಬರಡುಗಳುಮೊಣಗಿದ
ತರುಲತಾಳಿಯುಂ ಚಿಗಿತು ಪೂಪಣ್ಗಳೊಳು ರಂಜಿಸಿತು
ಧರೆಯು ಸಸ್ಯದ ಸಂಪದವು ಮಿಗೆ
ಹಿರಿದೆನಿಸಿತಂಬುದಗಳುಂ ಮಳೆ
ಗರೆಯುತಿರ್ದವು ತದ್ಗುರುವು ಸಂಚರಿಸುವೆಡೆಗಳೊಳು ॥ ೧೭ ॥

ಇಂತು ಮಹಿಮಾಕ್ರಾಂತನಾದ ಮ
ಹಂತನಾ ಗುರುಶಾಂತಮೂರ್ತಿಯು
ಚಿಂತಿತಾರ್ಥವನೀವ ಚಿಂತಾಮಣಿಯೆನಿಸಿ ನಾಡೊಳ್
ಸಂತರಿಗೆ ಶಿವಕವಿಗಳಿಗೆ ಧೀ
ಮಂತರಿಗಮಿನ್ನುಳಿದವರಿಗಂ
ಸಂತತಂ ಹೃದ್ಧ್ಯೇಯಮೂರ್ತಿಯೆ ಆಗಿ ಬೆಳಗಿದನು ॥ ೧೮ ॥

ಬಳಿಕೆ ತದ್ಗುರು ಸೇವೆಯಿಂ ನಿ
ರ್ಮಳನೆನಿಸಬೇಕೆಂಬ ವಾಂಛೆಯು
ತಳೆದು ತಾಂ ನಾವಳ್ಳಿಯಾ ತೋಟಯ್ಯನೆಂಬುವನು
ವಿಲಸಿತದ ಹರಿಹರಕೆ ಬಂದು
ಜ್ವಲಿತ ಗುರುಶಾಂತೇಶ್ವರನ ಪದ
ಜಲರುಹಕ್ಕೆರೆ ನಮಿಸಿ ಕೈಮುಗಿದಿಂತು ಬೇಡಿದನು ॥ ೧೯ ॥

ಸ್ವಾಮಿ ನಿಮ್ಮಯ ಮಹಿಮೆ ಕನ್ನಡ
ಭೂಮಿಯೊಳ್ ಪೆರ್ಚಿರುವುದರಿದಾ
ನೀ ಮಠಕ್ಕಾಗಮಿಸಿ ಭವದಂಘ್ರಿಯನು ಪೊರ್ದಿದೆನು
ಕಾಮಹರನೇ ನಿನ್ನ ಘನಪದ
ತಾಮರಸ ಸೇವೆಯೊಳು ಮನಸಿನ
ತಾಮಸಪ ಕಳಕೊಳ್ವೆನಿದಕೊಪ್ಪಿಗೆಯ ನೀಡೆನಗೆ ॥ ೨೦ ॥

ಎಂದೊರೆದ ತೋಟಯ್ಯನೆದೆವನೆ
ಯೊಂದಿರುವ ಭಕ್ತಿಯನು ತಿಳಿಗ
ಣ್ಣಿಂದರಿದು ನೀಂ ಯೋಗ್ಯ ಸೇವಕನಾಗಿರುತೆ ಮಠದೊಳ್
ಮುಂದೆನಲ್ಲ ಸವೊಂದು ಶಿವಕೃಪೆ
ಯಿಂದೆನುತೆ ಸಲೆ ಪರಸಿ ತದ್ಯೋ
ಗೀಂದುವವನನು ಸೇವೆಗಿರಿಸಿದನಾ ದಿನದ ವೊದಲಿಂ ॥ ೨೧ ॥

ಗುರುಪದಾಂಬುಜ ಸೇವೆಯಿಂದೈ
ತರುವ ಚಿರಸೌಖ್ಯವನು ನೊದಲೇ
ನೆರೆ ತಳೆದು ತೋಟಯ್ಯನಾ ಗುರುಶಾಂತ ಗುರುವರನಾ
ಚರಣ ಶುಶ್ರೂಷೆಯನು ಗೈದಿ
ನ್ನೆರಗಿಸದೆ ಮನವಾವುದಕ್ಕಂ
ಬೆರಗುಗೊಳಿಸಿದನೂಳಿಗದ ಕಾಯಕದೊಳಖಿಳರನು ॥ ೨೨ ॥

ಸೇವಕನೊಳಾತನೊಳು ಶಿಷ್ಯಸು
ಭಾವವೊಡಮೂಡಿದಕತದೆ ತ
ದ್ಭಾವಜಾಹಿತ ಗುರುವಿನವುಳಾನುಗ್ರಹದೊಳವನು
ಪಾವನಾತ್ಮಕನೆನಿಸಲೈಸಲೆ
ತೀವಿದುದು ವರಸಾಮರಸ್ಯದ
ಭಾವವಾ ಗುರುಶಿಷ್ಯರೊಳ್ ಕೆಲದಿವಸಕೇ ನೊರೆವೇಂ ॥ ೨೩ ॥

ಊಳಿಗಕೆ ಬಂದವನು ಮಠ ಶಿ
ಷ್ಯಾಳಿಯೋಳ್ ಪ್ರಮುಖತೆಯ ಪಡೆದನು
ಶೀಲನೆನಿಸುತ್ತೊಪ್ಪಿದಾ ತೋಂಟಯ್ಯನಿಂ ಮಠದೋಳ್
ಶೂಲಿ ತೇಜದ ಗುರುಗೆ ನಿಯಮಿತ
ಕಾಲದಭವಾರ್ಚನೆಯ ಗೈವನು
ಕೂಲವದು ಹಿರಿದಾಯ್ತು ಮುಂದಿನ ಕಾಲದೊಳ್ ಸತತಂ ॥ ೨೪ ॥

ಆವ ಮಹಿಮಾಕರನು ತನ್ನಯ
ಪಾವನದ ಪಾದವನು ಕಡಿದಾ
ಪಾವು ಮಡಿದಿರೆ ಮತ್ತದಕ್ಕಸುವಿತ್ತನೋ ಕೃಪೆಯಿಂ
ಭಾವಜಾಹಿತನಾಗಿ ಚರಕುಲ
ದೇವನಾದಾ ತೋಂಟದಾರ್ಯನ
ಭೂವಿನುತಚರಿತೆಯನು ಪಠಿಸುವ ಪುಣ್ಯವೆಮಗಿರಲಿ ॥ ೨೫ ॥

ಪರಮ ಪಾವನ ಚರಿತವಿದನಾ
ದರದೆ ಪಠಿಸುವ ಕಥಿಸುವಾಲಿಸು
ವರಿಗೆ ತದ್ಗುರುಶಾಂತ ಶಿವಯೋಗೀಶ್ವರನು ಕೃಪೆಯಿಂ
ಚಿರತರಾಯುರರೋಗ ಭಾಗ್ಯವ
ಕರುಣಿಸುವನಲ್ಲದೆಯೆ ಗುರುಹರ
ಚರರನುಗ್ರಹವಾಗಿಸುವನನವರತವಿದು ನಿಜವು ॥ ೨೬ ॥

ಏಳನೆಯ ಸಂಧಿ ಸಂಪೂರ್ಣಂ ಪದ್ಯಗಳು ೨೮೦ ಕ್ಕೆ ಮಂಗಳಂ

ಶ್ರೀ ಗುರುಶಾಂತ ಶಿವಯೋಗೀಶ್ವರಃ ಪ್ರಸೀದತು

ಎಂಟನೆಯ ಸಂಧಿ

ಸೂಚನೆ— ಮಲರಹಿತ ಗುರುಶಾಂತ ಗುರು ಮೇಣ್
ಶಿಲವಡಿಯ ಸೂಸಂಗಿ ವೆಸರನು
ತಳೆದಿರುವ ಸುವಿರಕ್ತ ಮಠದೊಡೆತನದೊಳೊಪ್ಪಿದನು ‖

ಆವ ಗುರುವಿನ ಪೂಜ್ಯಪದರಾ
ಜೀವದಾಶ್ರಯವೊಂದಿ ಶಲವಡಿ
ಪಾವನ ಕ್ಷೇತ್ರಮದೆನಿಸಿ ಕಂಗೊಳಿಸಿದುದೊ ಸತತಂ
ಆ ವಿನುತ ಗುರುಶಾಂತ ಜಂಗಮ
ದೇವನೈಸಲೆ ರಾಜಿಸಲಿ ತಾ
ನಾವಗಂ ನಮ್ಮೆದೆಯ ಗದ್ದುಗೆಯಲ್ಲಿ ಕರುಣದೊಳು ‖ ೧ ‖

ಕಪ್ಪುಗೊರಲನೆ ಆದ ಗುರುಶಾಂ
ತಪ್ಪನೋಳ್ ಹೊಸಮಠದ ಸು-ಚರಂ
ತಪ್ಪನುಂ ಗದ್ದಿಗೆ ಮಠದ ಪುಟ್ಟಪ್ಪನಲ್ಲದೆಯೇ
ಒಪ್ಪುವಾ ಮುರಿಗೆಪ್ಪನಾತ್ಮಜ
ನಪ್ಪ ಸದ್ಗುಣಯುತನು ಹೇಮಗಿ
ರಪ್ಪ ಮೊದಲಾದವರ ಭಕ್ತಿಯು ಬಳೆಯೆ ದಿನದಿನದೋಳ್ ‖ ೨ ‖

ಪರಮಜಂಗಮನಾಗಿ ಭಕ್ತರ
ಪೊರೆವ ಪರಶಿವನಾಗಿ ಬುಧನುತ
ಚರಿತಸಂಗತನಾಗಿ ಹರಿಹರ ಪುರದ ಸಿರಿಯಾಗಿ
ಮೆರೆವ ತದ್ಗುರುಶಾಂತ ಮೂರ್ತಿಯ
ನಿರುಪಮದ ಶಿವಯೋಗ ಮಹಿಮೆಯು
ಧರೆಯೊಳೆಲ್ಲೆಡೆಗಳೊಳು ಪಸರಿಸಿತ ಚಿರಕಾಲದೊಳೇ ॥ ೩ ॥

ಸುರುಚಿರದ ಗದುಗಿನ ಜಗದ್ಗುರು
ವರರೆನಿಸಿ ಶೋಭಿಸುವ ತೋಂಟದ
ಹಿರಿಯ ಪೂಜ್ಯ ಸ್ವಾಮಿಗಳು ಗುರುಶಾಂತ ಚರವರನು
ಹರಿಹರದ ಮಠದೊಡೆತನವನಾಂ
ತುರು ಮಹಿಮೆಯೋಳ್ ಹಿರಿಯನೆನಿಸಿದ
ಪರಿಯನರಿದಾನಂದ ತುಂದಿಲರಾಗಿರುತೆ ಬಳಿಕೆ ॥ ೪ ॥

ಭಕ್ತರಕ್ಷಣ ಕಾಯಕದೊಳನು
ರಕ್ತರಾದಾ ತೋಂಟದಾರ್ಯರು
ಭಕ್ತಿಮಯ ಪರಿವಾರದೊಡನಲ್ಲಲ್ಲಿ ಸಂಚರಿಸಿ
ಭಕ್ತಜನ ಬಾಹುಳ್ಯದಿಂ ಸಂ
ಯುಕ್ತಮಾದಾ ಶಿಲವಡಿಗೆ ಬಹು
ರಕ್ತಿಯಿಂ ದಯಮಾಡಿಸಿದರೂರವರ ಪುಣ್ಯದೊಳು ॥ ೫ ॥

ಆ ಸಮಯದೋಳ್ ಚಂಗಳವ್ವೆಯ
ತೋಷಮಯದುತ್ಸವವನೂರ
ನಿವಾಸಿಗಳು ಗೈವುದಕೆ ಹೊನ್ನೊಡವೆಗಳ ತೋರಣವಾ
ಆ ಸುದೇವಿಯ ಮುಂದೆ ಕಟ್ಟಿರ
ಲೀಶರೂಪಸ್ವಾಮಿಗಳು ಜಿತ
ಪಾಶರದನೀಕ್ಷಿಸಿ ಭವಿಷ್ಯವ ನಿಂತು ಪೇಳಿದರು ॥ ೬ ॥

ಊರ ಮೂರ್ಖರು ಗೈದ ಚಿನ್ನದ
ತೋರಣವಿದೀ ದಿನದ ಮೊದಲಿಂ
ದೂರ ಲಕ್ಷ್ಮಿಯು ಹೊರ ಹೊರಡಿಸುವುದಕ್ಕೆ ನೆರವಾಯ್ತು ।
ಸೇರುವವು ಬಡತನದ ಕಷ್ಟಗ
ಳೂರ ಮನೆಗಳೊಳೆಂದೊರೆಯೆ ಭಯ
ವೇರಿದೆದೆಯಿಂದೆಲ್ಲರಾ ಸ್ವಾಮಿಗಳ ಪದಯುಗಕೆ ॥ ೭ ॥

ಎರಗಿ ಕೈಗಳ ಮುಗಿದು ಕರುಣಾ
ಕರನೆ ಚರಕುಲ ಸಾರ್ವಭೌಮನೆ
ಸಿರಿಯು ತೊಲಗದ ತೆರದೊಳಾಶೀರ್ವದಿಸಬೇಕೆಂದು
ಎರೆಯುತಿರಲೆದೆ ಕರಗೆ ತದ್ಗುರು
ವರಗೆ ತಾಂ ಕ್ಷಣಮಿರ್ದು ಮೌನದೊ
ಳೊರೆದನಾ ಬಳಿಕೀ ತೆರದೊಳಾ ತೋಂಟದ ಪ್ರಭುವು ॥ ೮ ॥

ಕೆಲವೆ ದಿನಗಳು ಕಳೆಯೆ ಬಳಿಕೀ
ನೆಲೆಗೆ ಶಿವಯೋಗೀಂದ್ರನೋರ್ವನು
ನಲವಿನಿಂದೈ ತರುವನಲ್ಲಿಂ ಮುಂದೆ ನಿಮ್ಮೂರೋಳ್ ।
ತೊಲಗಿದೈಸಿರಿ ಮರಳುತಿರ್ಪುದು
ಕಳವಳವನೊಂದದೆಯೆ ತದ್ಗುರು
ತಿಲಕನಾಗಮನವನೆ ಕಾದಿರವೇಳ್ಕುಮೆನೆ ಬಳಿಕೆ ॥ ೯ ॥

ಊರವರು ಭಕ್ತಿಯೊಳು ವಿರತಿಯು
ವೀರನೆನಿಸಿದ ತೋಂಟದಾರ್ಯನ
ಸಾರಚರಣಾಂಬುಜದ ಸೇವೆಯ ಗೈಯುತಾತನಿಗೆ
ಭೂರಿ ಮುದದಿಂದರ್ಪಿಸುತ್ತ ಮು
ದಾರತೆಯ ಕಾಣಿಕೆಯ ಬೇರೊಂ
ದೂರ ಪಯಣವನಾಗಿಸಿದರತ್ಯಧಿಕ ಸಂಭ್ರಮದೇ ॥ ೧೦ ॥

ಬಳಿಕೆ ಗದುಗಿನ ಗುರುವೊರೆದವೋಲ್
ತೊಳಪ ಗುರುಶಾಂತೇಶ್ವರನು ಗುರು
ಗಳ ಸಮಾಧಿಯುಂ ರಾಮದುರ್ಗದ ಮಠದೊಳಾದುದರಿಂ
ಎಳಸಿ ತದ್ದರ್ಶನಕೆ ತನ್ನೊಡ
ನಲಘುಗುಣಿ ತೋಟಯ್ಯನೊಡನುರೆ
ನಲವಿನಿಂ ಕಾಲ್ನಡಗೆಯೊಳೆ ತೆರಳುವುದ ನಿರ್ಣಯಿಸಿ ॥ ೧೧ ॥

ವೀರ ವಿರತನು ಲಿಂಗತತ್ವ ವಿ
ಚಾರ ಪರನಾಗುರುವು ತಾಂ ಪದ
ಚಾರಿಯಾಗಿಯೆ ತೆರಳುತಂ ತೋಟಯ್ಯನೊಡಗೂಡಿ
ದಾರಿಯೊಳಗಲ್ಲಲ್ಲಿಗೈತರು
ವೂರೊಳಿರುಳೊಂದಿರ್ದು ನಿತ್ಯಾ
ಚಾರವಂ ಪೂರೈಸುತಂ ತದ್ರಾಮದುರ್ಗಕ್ಕೆ ॥ ೧೨ ॥

ಬಂದು ತತ್ಪುರದಲ್ಲಿರುವ ನಲ
ವೊಂದಿಸುವ ಗುರುಮಠವ ಭಕ್ತಿಯೊ
ಳೊಂದಿ ಗುರುಗಳ ಪೂಜ್ಯ ಶಿವಮೂರ್ತಿಗಳ ಗದ್ದುಗೆಗೆ
ವಂದಿಸುತೆ ತೋಟಯ್ಯನೊಡನದ
ನೊಂದೆ ಮನದಿಂದೀಕ್ಷಿಸುತ್ತಾ
ನಂದವಶ ನೆನಿಸಿದನು ತದ್ಗುರು ಭಕ್ತಿಯನುಪಮವು ॥ ೧೩ ॥

ಗುರುಮಠದೊಳೊಂದೆರಡು ದಿನ ವಿ
ರ್ದುರು ಮುದದೆ ನಿಜಲಿಂಗ ಪೂಜಾ
ಪರನೆನಿಸಿ ಗಣತೃಪ್ತಿಯಾಗಿಸಿ ಪೊರಮಡುತ್ತಲ್ಲಿಂ
ಹರಿಹರಕ್ಕೈತರುವ ಕಾಲದೆ
ಬರುತೆ ಶಲವಡಿಗಲ್ಲಿರುವ ಸ
ಚ್ಚರಿತನೋರ್ವನ ಮನೆಯೊಳಾಗುರುವಿರ್ದನತಿ ಮುದದೆ ॥ ೧೪ ॥

ಶಲವಡಿಯೊಳೇ ಶಾನುಭೋಗರ
ವಿಲಸಿತದ ಮಠದಲ್ಲಿ ನೆಲಸುತೆ
ನಲವಿನಿಂ ಶಿವಪೇಟೆ ಪಂಚಾಕ್ಷರ ಚರೋತ್ತಮರು
ತಿಳಿವನೀಯುವ ಸಂಸ್ಕೃತವ ಸಲೆ
ಕಲಿವ ಬಾಲರ ಪಾಠಶಾಲೆಯು
ನೆಲೆಗೊಳಿಸುತಾ ಸ್ವಾಮಿಗಳು ತದ್ಭವ್ಯ ಮಠದಲ್ಲಿ ॥ ೧೫ ॥

ಬಳಿಕೆ ಬೆನಕಲ್ಲೂರವರ ನಿ
ರ್ಮಲ ಮನದ ಗುರುಮೂರ್ತಿಶಾಸ್ತ್ರಿಗ
ಳಲಘುಬುಧರಾ ಶಾಲೆಗಧ್ಯಾಪಕರನಾಗಿರಿಸಿ
ಶಲವಡಿಯ ಭಕ್ತರ ಸುಸೇವೆಯು
ತಳೆದಿರುವ ತತ್ಪೂಜ್ಯರಿಗೆ ತಾಂ
ತಿಳಿದುದಾ ಗುರುಶಾಂತ ವಿರತನು ಬಂದ ಸಂಗತಿಯು ॥ ೧೬ ॥

ಬಗೆಯಲರೆ ಗುರುಶಾಂತ ಸತ್ ಸ್ವಾ
ಮಿಗಳಿರುವ ಮನೆಯೊಂದಿ ತಾವಾ
ನಿಗಮನುತನಂ ಕಾಣಲುಭಯರೊಳಾಗೆ ನತಿಗಳು ಮೇಣ್
ಮುಗಿಯೆ ಕುಶಲ ಪ್ರಶ್ನೆಗಳು ನಗೆ
ಮೊಗದೊಳಾ ಪಂಚಾಕ್ಷರ ಸ್ವಾ
ಮಿಗಳು ತಮ್ಮೆಡೆಗಾಗಮಿಸುತಾಗಳೆ ಸುಮೋದದೊಳು ॥ ೧೭ ॥

ಕರೆಯಿಸುತ್ತೂರಖಿಳ ಭಕ್ತರ
ನೊರೆದರವರಿಗೆ ನಿಮ್ಮ ಪುಣ್ಯದ
ಸಿರಿಯೊಳಾ ಗುರುಶಾಂತ ಪೂಜ್ಯ ಸ್ವಾಮಿಗಳು ಬಂದು
ಹರಿಸದಿಂದಿಲ್ಲಿರುವರವರಡಿ
ಗೆರಗಿಯಾಚಿಸಿ ಶಲವಡಿಯೊಳಿ
ನ್ನಿರಿಸಿಕೊಂಡು ವಿರಕ್ತಮಠವರ್ಪಿಸಿರಿ ತತ್ಪದಕೆ ॥ ೧೮ ॥

ಆ ವಿರತನುರು ಮಹಿಮೆಯಿಂದಂ
ನೀವು ನಿಮ್ಮ ಪ್ರಾಂತಮುಂ ವರ
ಪಾವನತೆಯಂ ಪೊರ್ದುವುದು ದಿಟವೆಂದು ಕೃಪೆಪೆತ್ತಾ
ಭಾವನದೊಳಾ ಭಕ್ತರಂಜಿತ
ಭಾವಜಂ ತದ್ಗುರುವು ಕಳುಹಿಸೆ
ತೀವಿದೊಲವಿಂದೆಲ್ಲರವರತಿ ಜವದೊಳಾಗಮಿಸಿ || ೧೯ ||

ನುತಚರಿತ ಗುರುಶಾಂತ ವಿರತಿ
ವ್ರತನ ಪದಕೆಳೆಗೊರಗಿದೊಡಲಿಂ
ನತಿಗಳೆಸಗುತ್ತೆಲ್ಲರುಂ ಕೈಮುಗಿದು ಭಕ್ತಿಯೊಳು
ಸ್ತುತ ಮಹಿಮನೇ ನಮ್ಮ ಪೂರ್ವಾ
ರ್ಜಿತಸುಕೃತದಿಂದಿಲ್ಲಿಗಾಗಮಿ
ಸುತೆ ಭವದ್ದರ್ಶನದೆ ಧನ್ಯರನಾಗಿಸಿದೆಯಲ್ತೇಂ || ೨೦ ||

ಆರುಮಿಲ್ಲಧಿಕಾರಿಗಳು ನ
ಮ್ಮೂರ ಸೂಸಂಗಿಯು ಮಠಕ್ಕದ
ನೂರವರು ನಾವೆಲ್ಲರಿಂದು ಭವತ್ಪದಾಂಬುಜಕೆ
ಸಾರಭಕ್ತಿಯೊಳೊಪ್ಪಿಸುವೆವು ಕೃ
ಪಾರಸಾರ್ದ್ರಸುಚಿತ್ತದಿಂ ಸ್ವೀ
ಕಾರ ಮಾಡಲು ಸಮ್ಮತಿಯ ಬೇಡುವೆವು ನಿಮ್ಮಿಂದಾ || ೨೧ ||

ಭಕ್ತಯಾಚನೆಗೊಪ್ಪಿ ನಮ್ಮ ವಿ
ರಕ್ತಮಠದೊಡೆತನವನಾಂತಾ
ಸಕ್ತಿಯಿಂ ತನ್ಮಠದ ಜೀರ್ಣೋದ್ಧಾರಮಂ ಗೈದು
ಭಕ್ತರಂ ಕಾಪಾಡಬೇಕೆಂ
ಬುಕ್ತಿಯೊಡನೆಯೆ ಮತ್ತೆಮತ್ತಂ
ಮುಕ್ತಿಮಂದಿರ ತತ್ಪ್ರಭುವಿನಡಿವಿಡಿದು ನಮಿಸಿದರು || ೨೨ ||

ಮೂಡಿದುರು ಕರುಣದೊಳು ತದ್ಗುರು
ನೀಡಿದನು ಸಮ್ಮತಿಯು ನಾಗಳೆ
ಮಾಡುತಂ ಜಯಘೋಷಗಳ ನೆರೆದವರು ತತ್ಪದಕೆ
ನೀಡಿ ಮಸ್ತಕಮಂ ಮಣಿದು ಕೊಂ
ಡಾಡಿ ತದ್ಗತವರ ಕೃಪೆಯ ಕುಣಿ
ದಾಡಿದರು ತಮಗಾದ ಹಿಗ್ಗಿನ ಸುಗ್ಗಿಯೊಳು ಬಳಿಕೆ ॥ ೨೩ ॥

ಕರುಣೆಯೋ ವೈವೆತ್ತ ಮಾಳ್ಕೆಯೊ
ಳಿರುವ ತನ್ಮೂರ್ತಿಯನು ಮಂಗಳ
ಕರ ಸುವಾದ್ಯ ಧ್ವನಿಯೊಡನೆ ಸೂಸಂಗಿಮಾ ಮಠಕೆ
ಕರೆದು ತರುತಂ ಮೊದಲೆ ಸಿಂಗರಿ
ಸಿರುವ ಪೀಠದೆ ಕುಳ್ಳಿರಿಸಿ ತ
ಚ್ಚರಣಕಮಲಕ್ಕೆರಗಿದರು ಭಕ್ತರ್ಕಳೂರವರು ॥ ೨೪ ॥

ಬಳಿಕೆ ಶಿವಪೇಟೆಯ ಮಹಾಶ್ರೀ
ಗಳನು ಕರೆತಂದಾ ಮಹಿತಚರ
ತಿಲಕ ಗುರುಶಾಂತೇಶ್ವರನ ಪಕ್ಕದೊಳು ಕುಳ್ಳಿರಿಸಿ
ನಲವು ಮಿಗೆ ಮೇಣುಭಯ ಪೂಜ್ಯೋ
ಜ್ಜ್ವಲಿತ ಮೂರ್ತಿಗಳಡಿಗೆರಗಿ ನಿ
ರ್ಮಳ ಮನರು ತದ್ಭಕ್ತರೆಲ್ಲರು ತುಂಬಿದರು ಮಠದೋಳ್ ॥ ೨೫ ॥

ಆಸುಮಂಗಲ ಸಮಯದೋಳ್ ಜಿತ
ಪಾಶ ಪಂಚಾಕ್ಷರ ಚರೋತ್ತಮ
ರೀಶನಿಚ್ಛೆಯದಿಲ್ಲಿಗೀ ಸ್ವಾಮಿಗಳ ಕರೆತಂದು
ದೋಷವಿರಹಿತದೀ ಮಠಕ್ಕಮ
ಧೀಶರಂ ಮಾಡಿದುದು ನಿಮ್ಮ ಗ
ಳೀಶ ಭಕ್ತಿಯ ಸತ್ಫಲಂ ದಿಟವೆಂದೊರೆದು ಮತ್ತಂ ॥ ೨೬ ॥

ಆಸುಸಮುಕ್ಕುಚಿತ ನುಡಿಗಳ
ತೋಷದಿಂ ಕಥಿಸಿದ ಬಳಿಕ್ಕಂ
ಶ್ರೀ ಶಿವಾಕೃತಿಯಾಂತುಭಯ ಗುರುವರರ ಪಾದಕ್ಕೆ
ಭಾಸುರದ ಶುಭದಾರತಿಯನು
ಲ್ಲಾಸದಿಂ ಗೈದವರ ಮಂಗಲ
ದಾಶಿಷವ ಸಲೆ ಪಡೆವರೂರವರಧಿಕ ಭಕ್ತಿಯೊಳು ॥ ೨೭ ॥

ಆದುದಾ ಸೂಸಂಗಿ ಮಠದ ಶು
ಭೋದಯಾನ್ವಿತದೊಡೆತನವದಿ
ನ್ನಾದಯಾಘನನಾದ ಗುರುಶಾಂತ ಪ್ರಭುವಿಗಂದು
ಆದುದುರೆ ಗಣತೃಪ್ತಿ ಮಠದ
ಲ್ಲಾದ ಸುಮಧುರ ಭೋಜನದೆ ಮೇ
ಣಾದುದತಿ ಸಂತೋಷಪೂರ ಸಮಸ್ತ ಭಕ್ತರಿಗೆ ॥ ೨೮ ॥

ಹೊಲವಿರುವುದಾರೆಕರೆಯೇ ಮಠ
ದೊಳಗೆ ಮುಚ್ಚಳ ಹರವಿಯೆರಡಿ
ನ್ನುಳಿದಿರುವವಿದೆ ತನ್ಮಠದ ಸಿರಿಮುತ್ತಮಾ ಸ್ಥಲದೋಳ್
ನೆಲಸಿರುವ ಭೂತಗಳ ಭಯದಿಂ
ದಿಳಿದುಕೊಳ್ಳರದಾರು ಮಠರೋಳ್
ಬಳಿಯ ಬಯಲೋಳ್ ಹತ್ತಿ ಗಿರಣಿಯಿಂದಿರ್ಕುಮೋ ನೊರೆವೇಂ ॥ ೨೯ ॥

ಇಂತಿರುವ ಮಠದಲ್ಲಿ ತದ್ಗುರು
ಶಾಂತ ಶಿವಯೋಗೀಶ್ವರನು ನಿ
ಶ್ಚಿಂತೆಯಿಂ ತೋಟಯ್ಯನೊಡ ನಿರತೊಡಗಲಿನ್ನವರಾ
ಅಂತಿಕದೆ ಹಾಸಿಗೆಯು ದುಪ್ಪಟ
ಮುಂ ತದಮಳಿನ ಸು ಪ್ರಸಾದವ
ತೆಗೆದುಕೊಳ್ವುದಕೆ ಬಟ್ಟಲು ಕುಡಿವುದಕೆ ತಾಲಿ ॥ ೩೦ ॥

ಅಲ್ಲದೇ ನಿಲ್ಲದೊಡವೇಂ ತಾ
ನೆಲ್ಲವುಳ್ಳವನಂತೆ ವಿರತಿಯು
ವಲ್ಲಭನು ಗುರುವಿರುವುದೀಕ್ಷಿಸಿ ಭಕ್ತರಿಲ್ಲದುದಾ
ಸಲ್ಲಿಸುತ್ತಿರಲಾವ ಕೊರತೆಯು
ದಿಲ್ಲ ವೆನಿಸಿತು ಮಹಿತಮಹಿಮರ
ದಲ್ಲಿ ನೆಲಸುವರಲ್ಲಿ ತಕ್ಕುದನೀಯನೇಂ ಶಿವನು ॥ ೩೧ ॥

ಇಲ್ಲದುದ ನೆಳಸದೆಯೆ ಭಕ್ತರು
ಸಲ್ಲಿಸುವ ಭಕ್ತಿಯ ಪದಾರ್ಥಗ
ಳಲ್ಲಿಯೇ ಸಂತುಷ್ಟಿಯೊಂದಿದ ತನ್ಮಹಾಗುರುವು
ಸಲ್ಲಿಸಿದನಾತ್ಮೀಯ ಚಿತ್ತನ
ನುಲ್ಲಸಿತಕರ ಪೀಠಲಿಂಗ
ಕ್ಕಲ್ಲಿ ಜನಿಸುವ ಲಿಂಗಸುಖಕೆಣೆಯಾವುದಿಲ್ಲೆಂದು ॥ ೩೨ ॥

ದಿನದಿನದೆ ಲಿಂಗಾಂಗ ಸಮರಸ
ಘನಸುಖವನನು ಭವಿಸುವಾ ಚಿ
ದ್ಘನನ ಗುರುಶಾಂತೇಶ್ವರನ ಶಿವಯೋಗದ ಪ್ರಭೆಯು
ಘನತೆವೆತ್ತದು ಬಳೆದು ಗುರು
ರ್ಶನಕೆ ಮಠಕೈತರುವರೆಲ್ಲರ
ಮನದ ಮೈಲಿಗೆ ಕಳೆದು ಬಳೆಯಿಸಿ ತಧಿಕ ಭಕ್ತಿಯನು ॥ ೩೩ ॥

ಇಳೆಯೊಳಾವನ ಪಾದ ಸೇವೆಯು
ತಳೆದ ವರಗಂಧರ್ವದಂಪತಿ
ಗಳಿಗೆ ಪೋದುದೊ ಶಾಪಜನಿತ ಪಿಶಾಚರೂಪವದು
ಅಲಘು ಮಹಿಮೆಗಳಾಣ್ಮನೆನಿಸುತೆ
ಬೆಳಗಿದಾ ಗುರುಸಿದ್ಧಲಿಂಗನ
ವಿಲಸಿತಾಂಘ್ರಿಯ ಭಜಿಪ ಭಾಗ್ಯವು ನಮಗಿರಲಿ ಸತತಂ ॥ ೩೪ ॥

ಪರಮ ಪಾವನ ಚರಿತವಿದನಾ
ದರದೆ ಪಠಿಸುವ ಕಥಿಸುವಾಲಿಸು
ವರಿಗೆ ತದ್ಗುರುಶಾಂತ ಶಿವಯೋಗೀಶ್ವರನು ಕೃಪೆಯಿಂ
ಚಿರತರಾಯುಪರೋಗ ಭಾಗ್ಯವ
ಕರುಣಿಸುವುದಲ್ಲದೆಯೆ ಗುರುಹರ
ಚರರನುಗ್ರಹವಾಗಿಸುವನನವರ ತವಿದು ನಿಜವು ॥ ೩೫ ॥

ಎಂಟನೆಯ ಸಂಧಿ ಸಂಪೂರ್ಣಂ ಪದ್ಯಗಳು ೩೧೫ ಕ್ಕೆ ಮಂಗಳಂ

ಶ್ರೀ ಗುರುಶಾಂತ ಶಿವಯೋಗೀಶ್ವರಃ ಪ್ರಸೀದತು

೯ ನೆಯ ಸಂಧಿ

ಸೂಚನೆ— ಶಲವಡಿಯ ಮಠದಲ್ಲಿ ತದ್ಗುರು
ತಿಲಕ ಗುರುಶಾಂತೇಶ್ವರನು ತಾಂ
ನೆಲಿಸಿ ಮಾಡಿದ ವಿವಿಧ ಕಾರ್ಯದ ಪರಿಯದಿಂತಿರ್ಕುಂ ।

ಭೂತಗಳ ನೆಲೆಯೆನಿಸಿ ಭಕ್ತ
ವ್ರಾತವಲ್ಲಿಗೆ ಪೋಗದಂತುರೆ
ಭೀತಿಯೊದಗಿಸುತಿರ್ದ ಶಲವಡಿ ಮಠದೊಳಡಿಯಿಟ್ಟು
ಪೂತವಾಗಿಸುತದನು ಮೆರೆದ ಪು
ನೀತ ಗುರುಶಾಂತೇಶ್ವರನ ವಿ
ಖ್ಯಾತ ಚರಿತವನೋದಿ ಸುಖಿಸುವ ಪುಣ್ಯವೆಮಗಿರಲಿ ॥ ೧ ॥

ನೋಡುವೊಡೆ ಸೂಸಂಗಿ ಮಠದಾ
ಬೀಡಿನೊಳು ಕುರಹಟ್ಟಿ ಪರ್ವತ
ಗೌಡರಿರಿಸಿದ ಹತ್ತಿ ಗಿರಣಿಯ ಕರ್ಕಶದ ರವವು
ನಾಡೆ ತದ್ಗುರುಶಾಂತ ಚರಪತಿ
ಮಾಡುವಾ ಶಿವಪೂಜೆಗೆಡರನು
ಮಾಡುತಿರ್ದೊಡಮೂರವರು ಮೌನವನು ಧರಿಸಿರಲು ॥ ೨ ॥

ಗುರುವಿನಿಂ ತಾಂ ಪೂಜೆಗೊಳ್ಳು
ತ್ತಿರುವುದಕ್ಕೆಡರೀವುದೆಂಬುದ
ನರಿದ ಶಿವನೇ ಹತ್ತಿಗಿರಣಿಯು ನಡೆಯದಂತೆಸಗೇ
ಪರಿಪರಿಯೊಳಾ ಯಾಂತ್ರಿಕರು ಸಲೆ
ಸರಿಗೊಳಿಸಿಯುಂ ಗಿರಣಿ ಚಲಿಸದೆ
ಯಿರುವುದಂ ಕುರಹಟ್ಟಿ ಗೌಡರು ಕಂಡು ಬೆರಗಾಗಿ ॥ ೩ ॥

ಬಂದು ಗುರುಶಾಂತ ಪ್ರಭುವಿನಡಿ
ಯೊಂದಿ ಗೌಡರು ಗುರುವೆ, ಕೃಷಿಕರು
ತಂದ ಹತ್ತಿಯ ರಾಶಿ ಬಯಲೊಳು ಬಿದ್ದಿರುವುದದನು
ಇಂದಿನಿಂದರಳೆಯನು ಮಾಡಿಸಿ
ಮುಂದೆ ನಿಮ್ಮಯ ಲಿಂಗ ಪೂಜೆಗೆ
ತೊಂದರೆಯ ಕೊಡುತಿರ್ಪ ಗಿರಣಿಯು ಬೇರೆಡೆಯೊಳೊಯ್ದು ॥ ೪ ॥

ಇರಿಸುವೆವು ಗಿರಣಿಯದು ಚಲಿಸುವ
ಪರಿಯೊಳಾಶೀರ್ವದಿಸಬೇಕೆಂ
ದಿರಿಸಿ ನೆಲಕೊಡಲೆರಗೆ ತತ್ಪದಕಾಗಳಾ ಗುರುವು
ಕರುಣದಿಂ ನಿಮ್ಮಿಚ್ಛೆಯನು ತ
ತ್ಪರ ಶಿವನು ಪೂರೈಸುತಿರ್ಪನು
ತೆರಳಿರೆಂದುರೆ ಪರಸಲಾಗೌಡರು ನಲಿದು ಬಂದು ॥ ೫ ॥

ಚಲನಗೊಳಿಸಿದ ಗಿರಣಿ ಚಲಿಸಲು
ನಲವು ಮಿಗೆ ಕೊಂಡಾಡಿ ಗುರುವನು
ತಳುವದೆಲ್ಲಾ ಹತ್ತಿಯರಳೆಯಗೈದು ಪೂರೈಸಿ
ಬಳಿಕ ಮನದ ದುರಾಶೆಯಿಂದಂ
ಸಲೆ ನಡೆಯಿಸಲು ತೊಡಗೆ ಗಿರಣಿಯು
ಚಲನ ವಿರಹಿತವಾದುದದು ಮೊದಲಂತದೇನೊರೆವೇಂ ॥ ೬ ॥

ಗೌಡರುರುಭಯ ವಿಹ್ವಲತೆಯಿಂ
ದೋಡಿ ಬಂದಾ ಗುರುವಿನಂಘ್ರಿಗೆ
ಮಾಡಿ ಸಾಷ್ಟಾಂಗ ಪ್ರಣತಿಯಂ ಕೈಮುಗಿದು ನಿಂತು
ಮಾಡಿದಪರಾಧವನು ವಿವರಿಸಿ
ಬೇಡಲದರ ಕ್ಷಮೆಯು ನಗೆಯಿಂ
ನೋಡುತವರನು ತತ್ಕೃಪಾನಿಧಿ ಬೋಧಿಸಿದನಿಂತು ॥ ೭ ॥

ಶಿವನ ಭಕ್ತರು ತಿಳಿವರಾಶೆಯೆ
ಭವದ ಬಂಧನವೆಂದು ನೀವದ
ತವೆ ತೊಲಗಿಸುತ್ತಿಂದಿನಿಂ ಶಿವನೊಲಿದು ಕೊಟ್ಟುದರೋಳ್
ಅವಿರತಂ ಸಂತೃಪ್ತಿಯೊಂದುವ
ಷುವಿಮಲದ ಮನವಿರಲಿ ನಿಮಗೆಂ
ದವನಿನುತ ತದ್ಗುರುವು ಪರಕೆಯನಿತ್ತು ಕಳುಹಿದನು ॥ ೮ ॥

ಬಂದು ಪರಮಾನಂದದಿಂ ನಿಜ
ಮಂದಿರಕ್ಕಾ ಗೌಡರಾಶೆಯು
ತಂದ ಗಿರಣಿಯು ಮಾರಿ ಗುರುಪದ ಸೇವೆಯಲ್ಲಿರಲು
ಅಂದಿನಿಂದೇನೊಂದು ಕೊರತೆಯು
ನೊಂದದೆಯೆ ಗೌಡರದು ಮನೆತನ
ವಿಂದಿಗಂಜಸವೆತ್ತು ಮೆರೆವುದು ಗುರುಕೃಪಾ ಬಲದೇ ॥ ೯ ॥

ಆ ಮಠಕ್ಕುರೆ ಚೆನ್ನವೀರ
ಸ್ವಾಮಿಗಳು ತಾ ವಾದಿ ಗುರುಗಳು
ಕಾಮರಹಿತರು ಗಡ್ಡದಪ್ಪಗಳೆರಡನೆಯ ಗುರುಗಳ್
ಪ್ರೇಮನಿಧಿ ಗುರುಶಾಂತಯೋಗಿಲ
ಲಾಮ ನುರುಭಕ್ತಿಯ ತದುಭಯ
ಸ್ವಾಮಿಗಳ ಗದ್ದುಗೆಗಳೊಳ್ ಸಲೆ ವಹಿಸಿ ತಾಂ ಬಳಿಕೆ ॥ ೧೦ ॥

ಮೊದಲ ಗುರುಗಳ ಗದ್ದುಗೆಗಳ
ಲ್ಲದೆಯೆ ಮಠದೋಳ್ ಜೀರ್ಣತೆಯು ಪೊ
ರ್ದಿದ ವಿಭಾಗವ ಸರಿಗೊಳಿಸುತಂ ಶ್ರಾವಣದೊಳಲ್ಲಿ
ಮುದದೆ ವರಧರ್ಮಪ್ರವಚನವೆ
ಮೊದಲೆನಿಸಿದುರು ಕಾರ್ಯಗಳ ನಿಜ
ಪದ ಸಮಾಶ್ರಿತ ಭಕ್ತರೊಡನಾಗಿಸಲು ನಿರ್ಣಯಿಸಿ ॥ ೧೧ ॥

ಶಿವಕಥಾ ಕೀರ್ತನದ ನೈಪು
ಣ್ಯವ ಪಡೆದ ತದ್ದೇವಪುರಮಠ
ದವರೆನಿಸಿದಾ ಬಸವಲಿಂಗ ಸಮಾಖ್ಯ ಶಾಸ್ತ್ರಿಗಳಿಂ
ನವತರ ಪ್ರವಚನವ ಮಾಡಿಸಿ
ಸವೆಯದಾನಂದದೊಳು ತದ್ಗುರು
ತವೆ ಮುಗಿಸಿದಂ ಪ್ರಥಮವರ್ಷ ಶ್ರಾವಣದ ಕೃತಿಯಾ ॥ ೧೨ ॥

ಮತ್ತಮಾ ಮಠದಲ್ಲಿ ತದ್ಗುರು
ಸತ್ತಮನು ಸಂಸ್ಕೃತವ ಸಲೆ ಕಲಿ
ಸುತ್ತೆ ಬಡವಿದ್ಯಾರ್ಥಿಗಳಿಗೆಲ್ಲಾ ಸಹಾಯಗಳಾ
ಇತ್ತು ವಿದ್ಯಾವಂತರಂ ಗೈ
ಯುತ್ತಿರುವ ನಲ್ಗಜ್ಜದೋಳ್ ಮನ
ವಿತ್ತು ಕಾರ್ತಿಕದಾದಿಯೊಳ್ ಶಾಲೆಯನು ನೆಲೆಗೊಳಿಸಿ ॥ ೧೩ ॥

ಮೂಡಿದೊಲವಿಂದಾ ಸುಶಾಲೆಗೆ
ಮಾಡಲಧ್ಯಾಪಕರ ಸಂದಿಗ
ವಾಡ ದುರುಬುಧ ಚಂದ್ರಶೇಖರ ಶಾಸ್ತ್ರಿಗಳ ಬಳಿಕೆ
ಕೂಡಿದರು ವಿದ್ಯಾರ್ಥಿಗಳು ನಲಿ
ದಾಡುತಿಪ್ಪತ್ತೈದು ಜನರದ
ನೋಡಿ ಶಲವಡಿ ಭಕ್ತರುರೆಕುಣಿದಾಡಿದರು ನಲಿದು ॥ ೧೪ ॥

ಸ್ವಾಮಿ ಸೇವಾ ಕಾರ್ಯದೊಳ್ ನಿ
ಸ್ಸೀಮ ಭಕ್ತಿಯನುಳ್ಳ ವಿದ್ಯಾ
ಪ್ರೇಮಿಗಳು ಯರಗುಪ್ಪಿಯಾ ಅಡಿವಪ್ಪನೆಂಬವರು
ಆ ಮಹಿತ ಶಾಲಾಭಿವೃದ್ಧಿಗೆ
ಭೂಮಿಯಿರಬೇಕೆಂದು ಸೂಡಿ
ಗ್ರಾಮದಾ ಬಿದರೂರ ಸಿದ್ಧಪ್ಪಾಖ್ಯದಾನಿಗಳಿಂ ॥ ೧೫ ॥

ಹೊಲವ ಹನ್ನೆರಡೆಕರೆಯುಳ್ಳದ
ತಿಳಿವ ನೀಡುವ ಪಾಠ ಶಾಲೆಗೆ
ನಲವಿನಿಂ ಕೊಡಿಸುತ್ತೆ ಬರೆಯಿಸಿ ದಾನ ಪತ್ರವನು
ವಿಲಸಿತಶ್ರೀ ಸ್ವಾಮಿಗಳ ಪದ
ತಲಕೆ ಭಕ್ತಿಯೊಳರ್ಪಿಸಿದರದು
ಬಳೆಯ ತೊಡಗಿತು ಶಾಲೆಯೀ ಪರಿನೆರವುಗಳ ನೊಂದಿ ॥ ೧೬ ॥

ಇಂತು ಮಲ್ಲದೆ ಸರ್ವಜನರೊಳ್
ಸಂತತಂ ಧಾರ್ಮಿಕಸುಜೀವನ
ಚಿಂತನಂ ನೆಲೆಗೊಳ್ಳುವದಕೆ ನೆರವಾದ ಕೃತಿಗಳನು
ಸಂತಸದೊಳಾಗಿಸುತೆ ಸದ್ಗುರು
ಶಾಂತ ಮೂರ್ತಿಯು ದಿನದಿನದೆ ಬಿಡ
ದಂತೆ ಭಕ್ತರಿಗೆಸಗುತಿರ್ದನು ತತ್ವಬೋಧೆಯನು ॥ ೧೭ ॥

ಮಂಗಳದ ಶಲವಡಿಯೊಳಂಗಡಿ
ಚಂಗಳಮ್ಮನು ವೃದ್ಧ ಭಕ್ತಳು
ಲಿಂಗರೂಪದ ಗುರುವಿನಾ ಬೋಧೆಯನು ದಿನದಿನದೊಳ್
ಹಿಂಗದಂತಿರೆ ಕೇಳಿ ಮುದದ ತ
ರಂಗಿಣಿಯೊಳೀಸಾಡಿ ತನ್ಮಹಿ
ಮಂಗೆ ಸೊಗಮಪ್ಪಂತೆ ಸೇವೆಯನೆಸಗಬೇಕೆಂದು ॥ ೧೮ ॥

ಬಗೆದು ದಿನವೊಂದರೊಳು ಬಂದಾ
ನಗೆ ಮೊಗದ ಗುರುದೇವ ನುರುಪದ
ಯುಗಕೆ ವಂದಿಸಿ ಕೈಯ ಮುಗಿದೆನ್ನಪ್ಪನೇ ನಿನಗೆ
ಸೊಗವ ನೊದಗಿಸುತಿರ್ಪ ಪಿತೃಜನ
ರುಗಳೆ ಮಠದಲ್ಲಿಲ್ಲ ನಾನೇ
ಸೊಗಸಿನಿಂದುಪಚರಿಸೆನಿಲ್ಲಿಯೆ ಇದ್ದು ಸಂತತವು ॥ ೧೯ ॥

ಎಂದು ಬೇಡಿದ ಚಂಗಳವ್ವೆಗೆ
ಮಂದಹಾಸದೆ ಗುರುವು ಚರಪದ
ವೊಂದಿದವರಿಗೆ ಪಿತೃಜನರ ಸಂಬಂಧವಿರದವ್ವಾ
ಇಂದು ನೀಂ ತಾಯಾಗಿ ನಲವಿಂ
ಬಂದು ನನ್ನುಪಚರಿಸಲೆಳಸಿರೆ
ಮುಂದೆ ಬರುವುದೆ ? ಕೊರತೆಯಿರು ಮಠದಲ್ಲಿ ಮಜ್ಜನನಿ ॥ ೨೦ ॥

ಎಂದು ಕೊಡಲೊಪ್ಪಿಗೆಯ ಪರಮಾ
ನಂದ ಪರವಶಳಾಗಿ ಭಕ್ತಿಸು
ಮಂದಿರೆಯು ತಜ್ಜನನಿಯಾ ದಿನದಲ್ಲಿಯೇ ಮಠಕೆ
ಬಂದು ಸಲೆ ನೆಲಸುತ್ತೆ ತದ್ಯೋ
ಗೀಂದುವಿನ ಸೇವಾತಿ ಭಾಗ್ಯವ
ನೊಂದಿ ಮರೆದು ನಿಜಾಲಯಾದಿಗಳೆಲ್ಲವನು ಬಳಿಕೆ ॥ ೨೧ ॥

ಮಗನನಾಗಿಸಿಕೊಂಡ ಲಿಂಗವ
ಮಿಗಿಲೆನಿಸಿದಲ್ತಿಯೊಳು ಸಲಹಿದ
ಮುಗುದೆ ಬಿಜ್ಜವ್ವೆಯ ತೆರದೆ ಗುರುಶಾಂತ ಜಂಗಮವಾ
ಮಗನೊಳಿಟ್ಟಕ್ಕರೆಯೊಳೇ ಸಲೆ
ಬಗೆಯಲರೆ ತಾನುಪಚರಿಸುತಂ
ಸೊಗದ ಕಡಲೊಳಗೀಸುತಿರ್ದಳು ಚಂಗಳಾಂಬಿಕೆಯು ॥ ೨೨ ॥

ಲೀಲೆಯಾಣ್ಮನು ಗುರುವು ತನ್ನನು
ಪಾಲಿಸುವ ತಾಯ್ತನದ ಸದ್ಗುಣ
ಶೀಲವುಳ್ಳ ಚೆಂಗಳಮ್ಮನ ಮುಂದೆ ಸಮ್ಮುದದಾ
ಬಾಲಲೀಲೆಯ ನಟಿಸುತಂ ಮುಳಿ
ಗೇಳಿಸಿದನು ಪಲರ್ವೆಯಾ ಕರು
ಣಾಲಯ ಪ್ರಿಯ ಮಾತೆಯಂ ಸಂಪ್ರೀತಿ ಶರಧಿಯೊಳು ॥ ೨೩ ॥

ಜೀವನಾಂತದವರೆಗಮಾಚರ
ಸೇವೆಯೆಸಗಿ ಪವಿತ್ರವೆನಿಸಿದ
ಜೀವಮಂ ತದ್ವೃದ್ಧೆ ತತ್ಪದ ತಲದೊಳಡಗಿಸಲು
ಭೂವಿನುತಳಾಕೆಯ ಸಮಾಧಿಯ
ನಾವಿಮಳ ಮಠಕಿರ್ದ ಹೊಲದೊಳೆ
ಭಾವಜಾಹಿತ ಗುರುವು ಮಾಡಿಸಿದನು ಮಹಾಮುದದೇ ॥ ೨೪ ॥

ಬಳಿಕೆ ತದ್ಗುರುಶಾಂತ ಚರಪತಿ
ಶಲವಡಿಯ ಸದ್ಭಕ್ತರೊಡಗೊಂ
ಡೊಲವು ಮಿಗೆ ಕಾಲ್ನಡೆಗೆಯೊಳೆ ಬಂದಥಣಿಗಲ್ಲಿರುವಾ
ತೊಳಪಗಚ್ಚಿನ ಮಠದ ಪುಣ್ಯದ
ಫಲವೆ ಮೈದಳೆದಂದದಿಂ ಕಂ
ಗೊಳಿಪ ತನ್ಮುರಗೇಂದ್ರ ಶಿವಯೋಗಿಗಳ ದರ್ಶನವಾ ॥ ೨೫ ॥

ಮಾಡಿಕೊಂಡವರಡಿಗೆರಗುವುದ
ನೋಡಿದೊಡನೀ ನೆಲೆಗೆ ಮಿಗೆ ದಯ
ಮಾಡಿಸುತೆ ಕೃಪೆಯಿಂದೆ ದರ್ಶನವಿತ್ತು ಧನ್ಯತೆಯಾ
ನೀಡಿದಿರಿ ನನಗೆಂದೊರೆಯುತೊಡ
ಮೂಡಿದೊಲವಿಂ ತನ್ನ ಕೈಗಳ
ನೀಡಿ ಮೇಲಕ್ಕೆತ್ತುತಾ ಶಿವಯೋಗಿ ತದ್ಗುರುವಾ ॥ ೨೬ ॥

ತಡೆಯಿದೀಗಳೆ ಮಠದೊಳೈಸಲೆ
ನಡೆಯುಸಿರಿ ಶಿವಪೂಜೆಯೆನುತಿರೆ
ಪ್ಪೃಡಮಯರ ತ್ರಮ್ಮಗಳ ದರ್ಶನವಾದ ಬಳಿಕೆನಗೆ
ವ್ಪೃಡನ ಪೂಜಾದಿಗಳದೇಕಿ
ನ್ನಡಗಿರುವವವು ನಿಮ್ಮಗಳ ಸಿರಿ
ಯಡಿಯೊಳೆಂದನು ನಸು ನಗುತೆ ಗುರುಶಾಂತ ಚರಪತಿಯು ॥ ೨೭ ॥

ಬಳಿಕೆ ಶಿಲವಡಿ ಭಕ್ತರಿಂ ತ
ಳ್ತ್ರಲಘುಭಕ್ತಿಯೊಳಾ ಮಠದೊಳೈ
ಸಲೆ ಗಣಾರಾಧನೆಯನಾಗಿಸಿ ಬರುವ ಸಮಯದೊಳು
ತ್ರೊಳಗುವಷ್ಟೋತ್ತರ ಶತದ ನಿ
ರ್ವಳ ಶಿವಾಕ್ಷಿಯ ಮಾಲೆಯಾ ಗುರು
ತಿಲಕಗಾಶೀರ್ವದಿಸುತಾ ಮುರುಗೇಂದ್ರ ಯೋಗಿಗಳು ॥ ೨೮ ॥

ಶ್ರೀಗಳೇ, ನಿವ್ಮೊ ಮಠಕ್ಕಾ
ಗಾಗಳೈತಂದೆನಗೆ ದರ್ಶನ
ವಾಗಿಸಿರಿ ನೀವೆಂದು ಬೀಳ್ಕೊಡುವಾ ಮಹಾತ್ಮರಿಗೆ
ರಾಗದಿಂ ಮೇಣೆರಗಿ ತದ್ಗುರು
ವಾಗಮಿಸಿದನು ಶಲವಡಿಗೆ ತಾ
ನೀಗಳುಂ ತನ್ಮಾಲೆ ಕಂಗೊಳಿಸುವುದು ಮಠದಲ್ಲಿ ॥ ೨೯ ॥

ಮತ್ತಮಾಗುರುವೊಮ್ಮೆ ಶಿವಭ
ಕ್ತೋತ್ತಮರನೊಡಗೊಂಡು ನಲ್ಜ ಸ
ವೆತ್ತ ಸಂಗಮನಾಥನ ಮಳಕ್ಷೇತ್ರ ಕೈತಂದು
ನಿತ್ಯದೋಳ್ ನಿಜಲಿಂಗ ಪೂಜಾ
ಯತ್ತ ಮಾನಸನಾಗಿ ಕೆಲದಿನ
ವತ್ಯಧಿಕ ಶಿವ ಸುಖದೊಳಿರ್ದಾ ಸ್ಥಲದೊಳಾ ಬಳಿಕೆ ॥ ೩೦ ॥

ಆಗಿಸುತೆ ಗಣತೃಪ್ತಿಯಂ ಮೇ
ಣಾಗವಿಸಿ ಶಿಲವಡಿಗೆ ಭಕ್ತರಿ
ಗಾಗಿಸುತೆ ದಿನದಿನದ ಸದ್ಬೋಧೆಯೊಳು ಸಮ್ಮುದವಾ
ಶ್ರೀಗುರುವು ಲಿಂಗಾಂಗ ಪರತರ
ಯೋಗಪರನಾಗಿರ್ದನಾಶ್ರಿತ
ರಾಗಿರುವರಿಷ್ಟಾರ್ಥದಾಯಕ ದೇವತರುವಾಗಿ ॥ ೩೧ ॥

ಇಂತುಮಲ್ಲದೆಯೊರ್ಮೆ ತದ್ಗುರು
ಶಾಂತಗುರುವರ ಭಾವಿಮಠದ ಮ
ಹಾಂತ ಶಿವಯೋಗಿಗಳ ಸನ್ನಿಧಿಯೊಂದಿ ಭಕ್ತಿಯೊಳು
ಸಂತತಂ ಲಿಂಗಾಂಗಯೋಗಾ
ನಂತಸುಖದಿಂದಿರುವ ತತ್ಕರು
ಣಾಂತರಂಗರ ದರ್ಶನಾಶೀರ್ವಾದಗಳ ಪಡೆದು ॥ ೩೨ ॥

ಮರಳಿದನು ಮಠಕೀತೆರದೆ ತ
ತ್ಪರಮ ಪೂಜ್ಯರ ನೆಲೆಗೆ ತೆರಳು
ತ್ತಿರು ಮುದದೆ ತದ್ದರ್ಶನಾಶೀರ್ವಾದಗಳ ಪಡೆವಾ
ಪರಿಯನೀಕ್ಷಿಸುವವರ ತದ್ಗುರು
ವರನೊಳೊಪ್ಪುವ ಭಕ್ತಿಯೇ ನಿಜ
ಸರಣಿಯೋಳ್ ಕರೆದೊಯ್ದು ಭಕ್ತೋತ್ತಮರನಾಗಿಸಿತು ॥ ೩೩ ॥

ಸಾರ ಮಹಿಮೆಯೊಳಾವ ಯೋಗಿಯು
ನೇರಿಳೆಯ ತರುವಿನೊಳಕಾಲದೆ
ಭೂರಿ ಮುದದಿಂ ಪುಟ್ಟಸಿದ ಪಣ್ಗಳನು ತನ್ನಡಿಯಾ
ಸೇರಿರುವ ಜಂಗಮರಿಗಿತ್ತನೊ
ಸೂರಿನುತನಾ ಸಿದ್ಧಲಿಂಗನ
ಚಾರುಚರಣಾಂಬುಜವ ನುತಿಸುವ ಸೈಪು ಸಮನಿಸಲಿ ॥ ೩೪ ॥

ಪರಮ ಪಾವನ ಚರಿತವಿದ ನಾ
ದರದೆ ಪಠಿಸುವ ಕಥಿಸುವಾಲಿಸು
ವರಿಗೆ ತದ್ಗುರುಶಾಂತ ಶಿವಯೋಗೀಶ್ವರನು ಕೃಪೆಯಿಂ
ಚಿರತರಾಯುರರೋಗ ಭಾಗ್ಯವ
ಕರುಣಿಸುವುದಲ್ಲದೆಯೆ ಗುರುಹರ
ಚರರನುಗ್ರಹವಾಗಿಸುವನನವರತವಿದು ನಿಜವು ॥ ೩೫ ॥

೯ನೆಯ ಸಂಧಿ ಸಂಪೂರ್ಣಂ ಪದ್ಯಗಳು ೩೫ ಕ್ಕೆ ಮಂಗಳಂ

ಶ್ರೀ ಗುರುಶಾಂತ ಶಿವಯೋಗೀಶ್ವರಃ ಪ್ರಸೀದತು

ಹತ್ತನೆಯ ಸಂಧಿ

ಸೂಚನೆ— ನಿರುಪಮನು ಗುರುಶಾಂತ ಚರಕುಲ
ವರನು ನಿಜ ಚರಣಾಶ್ರಿತರ ಮನ
ದಿರವನರಿದವರಿಚ್ಛಿತವನೀ ತೆರದೆ ಕರುಣಿಸಿದಂ ॥

ಆವ ಮಹಿಮನ ಪೂಜ್ಯ ಪದರಾ
ಜೀವವಾಶ್ರಯಿಸಿರ್ದ ಭಕ್ತರ
ಜೀವಿತವು ವಾಂಛಿತಫಲವನುರೆ ಪಡೆದು ಬೆಳಗಿದುದೋ
ಆ ವಿನುತ ಗುರುಶಾಂತ ಜಂಗಮ
ದೇವನಂಘ್ರಿಯ ನುತಿಸಿ ಸುಖಿಸುವ
ಜೀವನವು ಸಮನಿಸಲಿ ತದ್ಗುರುವರನ ಕೃಪೆಯಿಂದೆ ॥ ೧ ॥

ಅಂಗಜಾಹಿತನಾಗಿ ಲಿಂಗಾ
ಲಿಂಗಿತಾಂಗದೊಳೆಸೆವ ಜಂಗಮ
ಪುಂಗವನು ಗುರುಶಾಂತ ಶಿವಯೋಗೀಶ್ವರನು ಮಠದೊಳ್
ಲಿಂಗಭಕ್ತರಿಗೊಲಿದು ತಲ್ಲಿಂ
ಗಾಂಗ ಯೋಗದ ತತ್ವಮಂ ಹೃದ
ಯಂಗಮದ ಭಂಗಿಯೊಳು ಬೋಧಿಸುತಿರಲು ದಿನದಿನದೊಳ್ ॥ ೨ ॥

ಕೊಪ್ಪಳದೊಳಿರುವಗಡಿಯಾ ಸಂ
ಗಪ್ಪನೆಂಬ ಸುಭಕ್ತನುನ್ನುತ
ಮಪ್ಪ ಭಕ್ತಿಯನಾಂತ ಸತಿ ಶಾಂತಮ್ಮನೊಡಗೂಡಿ
ಅಪ್ಪಗಳ ಪದದರ್ಶನದೆ ನಮ
ಗಿಪ್ಪ ಪುತ್ರಾಪೇಕ್ಷೆ ಸಫಲಮ
ದಪ್ಪುದೆಂದಾಗಮಿಸಿ ಶಿವಡಿಗೊಂದು ಶುಭ ದಿನದೋಳ್ || ೩ ||

ವಿಲಸಿತದ ಮಠದಲ್ಲಿ ಭಕ್ತಾ
ವಳಿಗೆ ಸಲೆಸದ್ಧರ್ಮ ಬೋಧೆಯ
ಸುಲಭ ಶೈಲಿಯೊಳೆಸಗುವಾ ಸ್ವಾಮಿಗಳ ಸಿರಿಯಡಿಗೆ
ನೆಲದೊಳೊಡಲಿಟ್ಟೆರಗಿ ಸತಿಯೊಡ
ನಲಘುತರ ತದ್ದರ್ಶನದ ಸುಖ
ಜಲಧಿಯೊಳಗೀಸಾಡಿದನು ತದ್ಧನಿಕನೇನೊರೆವೆಂ || ೪ ||

ಬಂದವರ ಮನದಿರವ ತಿಳಿಗ
ಣ್ಣಿಂದಮರಿದಾಸ್ವಾಮಿ ನಿಮ್ಮದೆ
ಯೊಂದಿದಿಷ್ಟವ ಶಿವನು ತಾಂ ಕರುಣಿಸುವನೆಂದೊರೆದು
ಮಂದಹಾಸದೆ ಪಣ್ಗಳಾಶಿಷ
ವಂದು ತದ್ದಂಪತಿಗಳಿಗೆ ಕೃಪೆ
ಯಿಂದೆ ಗೈದನು ಭಕ್ತಜನಮಂದಾರನಾ ಗುರುವು || ೫ ||

ಇಂತು ಪಡೆದ ಫಲಾಶಿಷದೆ ನಿಜ
ಸಂತತಿಯನಾಗಳೆ ಪಡೆದ ಕಡು
ಸಂತಸದೊಳಾ ಸತಿಪತಿಗಳಾ ಪರಮನಡಿಗೆರಗಿ
ಅಂತು ಮೇಣಪ್ಪಣೆಯ ತದ್ಗುರು
ಚಿಂತನದೊಳೇ ಮನವಿರಿಸಿ ನಿ
ಶ್ಚಿಂತೆಯಿಂ ತೆರಳಿದರು ತಮ್ಮಯ ಪೊಳಲಿಗಾ ಬಳಿಕೆ || ೬ ||

ಪುಟ್ಟಿದುರು ಕರುಣದೊಳು ತದ್ಗುರು
ಕೊಟ್ಟ ನಲ್ವರಕೆಯೊಳು ಕುವರನು
ಪುಟ್ಟಿದನು ಸಂಗಣ್ಣ ಶಾಂತಮ್ಮಗಳಿಗಾ ಸುತಗೆ
ಇಟ್ಟು ಸಲೆ ಗುರುಶಾಂತ ನಾಮವ
ದಿಟ್ಟಿಕದಲದೆ ನೋಡುತವನನು
ಪುಟ್ಟಿದಧಿಕಾನಂದ ಶರಧಿಯೊಳೀಸುತಿರ್ದವರು ॥ ೭ ॥

ಸುರುಚಿರದ ಶಿಲವಡಿಯ ಮಠಕ್ಕೈ
ತರುತೆ ಗುರು ಸನ್ನಿಧಿಯೊಳೇ ಕಡು
ಹರಿಸದಿಂ ಸುತಕೇಶಖಂಡನ ವಿಧಿಯ ಪೂರೈಸಿ
ನೆರೆ ಮುಗಿಸಿ ಗಣತೃಪ್ತಿಯಂ ಹ
ನ್ನೆರಡು ತೊಲೆಯೋಳ್ ಗೈದ ಚಿನ್ನದ
ಕರಡಿಗೆಯನರ್ಪಿಸಿದರಾ ಸ್ವಾಮಿಗಳ ಪಾದದೊಳು ॥ ೮ ॥

ಅವರ ಭಕ್ತಿಯ ಭಾವಕೊಲಿದಾ
ಸುವಿಮಳ ಸ್ವಾಮಿಗಳು ನಿಮ್ಮಗೆ
ಶಿವನು ಕಲ್ಯಾಣವನು ಮಾಡಲಿ ಸತತಮೆಂದೊರೆದು
ಶಿವಮಯಾಶಿಷವಿತ್ತು ಕಳುಹಿಸ
ಲವರ ನಾಮಸ್ಮರಣ ಸುಖದೊಳೆ
ತವೆ ತೆರಳ್ದರು ತಮ್ಮ ಪೊಳಲಿಗೆ ದಂಪತಿಗಳವರು ॥ ೯ ॥

ಬಳಿಕೆ ಬಹುದಿನದಿಂದ ತದ್ಗುರು
ತಿಲಕಸೇವಾವ್ರತದೆ ಬಹು ನಿ
ರ್ಮಳತೆಯಂ ಮಿಗೆ ಪಡೆದ ತೋಟಯ್ಯನು ಸದಿಚ್ಛೆಯೊಳು
ತಳೆದ ನಿಜದಾಂಪತ್ಯ ಧರ್ಮದ
ಫಲಮೆನಿಪ ಸಂತಾನವಿಲ್ಲದೆ
ಕಳವಳವನಾಂತೊಮ್ಮೆ ತಾಂ ಸ್ವಾಮಿಗಳ ಪದಕೆರಗಿ ॥ ೧೦ ॥

G. N. Nagaraj

ಪರಮಪೂಜ್ಯನೆ, ಪುತ್ರ ಭಿಕ್ಷೆಯು
ಕರುಣದಿಂದೆನಗೀಯ ಬೇಕಿದು
ವರೆಗೆ ಸಂತತಿಯಿಲ್ಲದಳಲಾಂತಿರುವೆನೆಂದೆರೆಯೇ
ಗುರುವು ಕಿರುನಗೆಗೊಂಡು ಮೂರುಂ
ಪರಿವಿಡಿಯೊಳುದಿಸುವವು ಪೆಣ್ಗಳು
ಪರಶಿವೇಚ್ಛೆಯದಿಂತಿರುವುದಿದನರಿದು ಸುಖಿಯಾಗು ॥ ೧೧ ॥

ಎಂದು ಪರಸಿದ ತೆರದೆ ಸದ್ಗುಣ
ಬಂಧುರಗೆ ತೋಟಯ್ಯಗೆ ಕ್ರಮ
ದಿಂದೆ ಮೂವರು ನಂದಿನಿಯರೇ ಜನಿಸಲದನರಿದು
ಒಂದಿದರು ವಿಸ್ಮಯವ ಪುರದವ
ರಿಂದುಧರವರರೂಪನಾಯೋ
ಗೀಂದುವೊರೆದ ಭವಿಷ್ಯವಾಣಿಗೆ ಪುಸಿಯದಿಲ್ಲೆಂದು ॥ ೧೨ ॥

ಬಳಿಕೆ ದಿನವೊಂದರೊಳು ಭಕ್ತಿಯ
ನೆಲೆಯೆನಿಸಿದಾ ನವಿಲುಗುಂದದ
ತಳೆದ ಪೆರ್ಮೆಯೊಳೊಪ್ಪುವಾ ಜಂಪಣ್ಣ ಸೆಟ್ಟಿಗಳು
ನಲವಿನಿಂ ಗಂಗಮ್ಮನೆಂಬು
ಜ್ಜ್ವಲಿತಗುಣಮಣಿ ಪತ್ನಿಯೊಡನಾ
ಶಿಲವಡಿಯ ಸೂಸಂಗಿ ನಿರ್ಮಲತರಮಠಕೆ ಬಂದು ॥ ೧೩ ॥

ಶಾಂತಿನಿಧಿಯೆನಿಸಿರ್ದ ತದ್ಗುರು
ಶಾಂತಜಂಗಮವರನ ವಿಮಲತೆ
ಯಾಂತ ಪದಪದ್ಮಕ್ಕೆ ಸಾಷ್ಟಾಂಗ ಪ್ರಣತಿಯೆಸಗಿ
ಆಂತ ಗುರುಭಕ್ತಿಯೊಳು ಪುತ್ರಸು
ಸಂತತಿಯನೇ ನಮ್ಮ ಮನೆತನ
ವಾಂತುದಿಲ್ಲಿದುವರೆಗಮದನುರೆ ಪರಸಬೇಕೆಂದು ॥ ೧೪ ॥

ಬೇಡುತಿರಲದಕಂಡು ಕರುಣದ
ಬೀಡೆನಿಸಿದಾ ಗುರುವು ಚಿಂತೆಯು
ಮಾಡಬೇಡಿರಿ ಸೆಟ್ಟರೇ, ನಿಮಗೊಂದು ವರ್ಷದೊಳೇ
ನೀಡುವನು ಶಿವನಮಳತನುಜನ
ಮಾಡಿರಾತನ ಜಾನವೆನುತಂ
ನೀಡಿದನು ಫಲದಾಶಿಷವ ನವರಿಗೆ ಮಹಾಕೃಪೆಯಿಂ ॥ ೧೫ ॥

ಸತಿಗೆ ಗಂಗಮ್ಮನಿಗೆ ತಚ್ಚರ
ಪತಿಯು ಪರಕೆಯು ಪುಟ್ಟಿಸಿರೆ ವರ
ಸುತನನಾಗಳೆ ಪಡೆದ ಪರಮಾನಂದವನು ಬಳಿಕೆ
ನತಿಯನರ್ಪಿಸುತಾ ಗುರುವಿನಡಿ
ಗತಿಮುದದೊಳೈತಂದರವರಾ
ನುತಚರಿತ್ರನ ಮಹಿಮೆಗಳ ಪೊಗಳುತ್ತೆ ನಿಜಪುರಕೆ ॥ ೧೬ ॥

ತುಂಬುತಿರೆ ವರ್ಷವದು ತದ್ಗಂ
ಗಾಂಬಿಕೆಯು ವರಪುಣ್ಯಮಯ ಗ
ರ್ಭಾಂಬುಧಿಯಿನುದ್ಭವಿಸೆ ಸುತ ಚಂದ್ರಮನು ಪಡೆದವರಾ
ಅಂಬಕೇಂದೀವರಗಳೈಸಲೆ
ತುಂಬಿಕೊಂಡು ಸುಖಾಶ್ರುಮಯಮಧು
ವಂ ಬಿಡದೆ ವಿಕಸನವನೊಂದಿದವಾಸಮಯದಲ್ಲಿ ॥ ೧೭ ॥

ಪುಟ್ಟಿದರ್ಭಕಗಮಳಗುರುವಿಂ
ಕಟ್ಟಿಸುತೆ ಲಿಂಗವನು ತತ್ಸುತ
ಗಿಟ್ಟು ಸಲೆ ಗುರುಶಾಂತನಾಮವ ಬಳಿಕೆ ಸಂಭ್ರಮದಿಂ
ತೊಟ್ಟಿಲೊಳಗೊರಗಿಸುವ ಕಜ್ಜವ
ಸೆಟ್ಟರಾ ಗಂಗಾಂಬಿಕೆಯು ನಿಜ
ಪಟ್ಟಣದ ಭಕ್ತಾಂಗನೆಯರಿಂತಳ್ತು ನಡಸಿದಳು ॥ ೧೮ ॥

ಹೀಗೆ ಕುಲವಲ್ಲರಿಯು ಪುಷ್ಪಿತ
ವಾಗಿ ಶೋಭಿಪುದೀಕ್ಷಿಸುವ ಸೊಗ
ದಾಗರವೆ ತಾನೆನಿಸಿದಾ ಗಂಗಾಂಬೆ ಭಕ್ತಿಯನು
ಈಗಳುಂ ಗುರುಶಾಂತ ಪೂಜ್ಯ
ಶ್ರೀಗಳಾಗದ್ದುಗೆಳಿಟ್ಟುರೆ
ನೀಗಿ ಚಿಂತೆಯನಿರುವಳಾ ಗುರುಕೃಪೆಯ ತಾಂ ಪಡೆದು ॥ ೧೯ ॥

ಸ್ಫುರಿಸುವಮೃತದ ಶಿಲೆಯೊಳಾ ಗುರು
ವರನ ಮಂಗಳ ಮೂರ್ತಿಯಾಗಿಸ
ಲೆರಡುವರೆಸಾವಿರದರೂಪ್ಯಗಳಿತ್ತು ಜಯಪುರದೋಳ್
ಇರುವ ಶಿಲ್ಪಿಗಳಿಂದೆ ಮಾಡಿಸಿ
ತರಿಸುತದನಿರ್ರಿಸಿದಳು ಮಠದೋಳ್
ವೇರೆಯುವಾತನ ಗದ್ದುಗೆಯೊಳಾತಾಯಿ ಭಕ್ತಿಯೊಳು ॥ ೨೦ ॥

ಪರಮತದ್ಭಕ್ತಳ ಸುಭಕ್ತಿಯ
ಕುರುಹೆನಿಸಿ ಪೂಜಿಸುವ ಭಕ್ತರ
ಸುರಮಹೀರುಹವಾಗಿ ಮೆರೆವಾ ಭವ್ಯ ಮೂರ್ತಿಯನು
ಪರಿಕಿಸುವ ಜನತತಿಯು ಬಣ್ಣಿಸು
ತಿರುವುದೀವಿಧಭಕ್ತಿಕಾರ್ಯವ
ವಿರಚಿಸಿದ ಗಂಗಮ್ಮನೇ ತಾಂ ಧನ್ಯತಮಳೆಂದು ॥ ೨೧ ॥

ಇಂತುಮಲ್ಲದೆ ಗುರುಮಹಿಮೆ ಮೇ
ಣೆಂತು ನಡೆದುದದೆಂಬುದೊರೆವೆನು
ಶಾಂತಿಗೆಡೆಯೆನಿಸಿರ್ದ ಶಿಲವಡಿಯಲ್ಲಿ ಬಡತನವಾ
ಅಂತುದಲ್ಲತೆ ತೊನ್ನ ರೋಗವ
ನಾಂತು ಮುದಿತನದಲ್ಲಿ ನಿರ್ಭರ
ಚಿಂತೆಯೊಂದಿದ ಹೊಸಮಠದ ವಿರಮ್ಮನೊಂದಿವಳು ॥೨೨॥

ಬಂದು ಗುರುಮಠಕಾ ವಿನುತಬುಧ
ವೃಂದಯೋಗೀಶ್ವರನ ಪಾದವ
ನೊಂದಿ ವಂದಿಸುತಪ್ಪಗಳೆ ಬಡತನದೊಡನೆ ರುಜೆಯು
ಬಂದು ದುಃಖದ ಬೆಂಕಿಯೋಳ್ ನಾಂ
ಬೆಂದು ಸಾಯುವ ಗತಿಯು ತಂದುದ
ದೆಂದು ನಿಮ್ಮಡಿಯೊಳಗೆ ನನ್ನಡಗಿಸುವುದುಸಿರೆಂದು ॥ ೨೩ ॥

ಕೈಯ ಮುಗಿದಾ ಮುಪ್ಪನಾಂತಾ
ತಾಯನೀಕ್ಷಿಸಿ ಕರಗಿದೆದೆಯಿಂ
ಕಾಯಜಾಹಿತಗುರುವು ತಾನಿಂತೊರೆದ ನಮ್ಮಯ್ಯಾ
ಹೇಯವಾದೀ ರುಜೆಯೊಡನೆ ತಾಂ
ಮಾಯವಾಗದೆ ಯಿರದು ಬಡತನ
ವಾಯತೀಂದ್ರಸ್ತುತ ಶಿವನ ಕೃಪೆಯಿಂದೆ ಮುಂದಿನ್ನು ॥ ೨೪ ॥

ದಿನ ದಿನದೆ ಭಕ್ತಿಯೊಳು ಮಠದಂ
ಗಣದ ರಜಮಂ ತೆಗೆವ ಕಾಯಕ
ವನು ಬಿಡದೆ ಮಾಡೆಂದ ತದ್ಗುರು ವಾಕ್ಯವನು ನಂಬಿ
ತನಗೆ ಬಂದಾ ರುಜೆಯು ಮೇಣ್ ಬಡ
ತನವ ಪರಿಹರಿಸುವುದು ತತ್ಕೃತಿ
ಯೆನುತದಂ ಪ್ರಾರಂಭಿಸಿದಳಾ ವೃದ್ಧಳಾದಿನದಿಂ ॥ ೨೫ ॥

ಮೂರು ತಿಂಗಳು ಕಳೆಯೆ ಮೈಯೊಳ್
ತೋರದೆಯೆ ತದ್ರುಜೆಯು ವಿಮಳಾ
ಕಾರವೊದಗಿದುದೇನೊರೆವೆನಾ ಮುದುಕಿಗಾಬಳಿಕೆ
ಜಾರಿ ಬಡತನದಳಲು ತತ್ಸಂ
ಸಾರದೊಳ್ ಸಿರಿಬರುವ ಚಿಹ್ನವು
ತೋರ ತೊಡಗಿದುದಾ ಮಹಾಮಹಿಮನ ಕೃಪಾಬಲದೆ ॥ ೨೬ ॥

ಕಲವಡಿಯ ಹೊಸಮಠದ ಜನರೊ
ಕ್ಕಲತನದೊಳಂ ಬೇರದೋಳ್ ನಿ
ರ್ಮಳಮನದ ಗುರುಸೇವೆಯೊಳಮುರೆ ಮುಂದುವರಿಯುತ್ತಿ
ತಳೆದ ಸೌಖ್ಯದೊಳೆಸೆವರಿಂದುಂ
ಒಲವಿನಿಂ ವೀರಮ್ಮನಾ ಮಠ
ದೊಳಗೆ ನಡಸಿದ ಕಾಯಕದ ಸತ್ಪುಣ್ಯ ಬಲದಿಂದೆ ॥ ೨೭ ॥

ಅರಿಯುತೀ ವಿಧ ಲೀಲೆಗಳನ
ಚ್ಚರಿಯನೊಂದಿದ ಭಕ್ತಜನರೈ
ತರುತೆ ತದ್ಗುರು ಶಾಂತ ಶಿವಯೋಗೀಶ್ವರನ ಪದವಾ
ಹರಿಸದಿಂ ಮರಿವೊಕ್ಕು ತಮ್ಮ
ಲ್ಲಿರುವ ಬಯಕೆಗೆ ಫಲವ ಪಡೆಯುವ
ಪರಿಯು ಹಿರಿದೆನಿಸಿದುದು ದಿನೆದಿನದಲ್ಲಿ ತನ್ಮಠದೋಳ್ ॥ ೨೮ ॥

ಬಳಿಕೆ ಮುಂಡರಗಿಯ ಸುವಿಸ್ಮಯ
ಕಲಿತ ಲೀಲಾ ಮೂರ್ತಿಗಳು ನಿ
ರ್ಮಲಮನರುಮಪ್ಪನ್ನದಾನಿಸ್ವಾಮಿಗಳದೊಮ್ಮೆ
ವಿಲಸಿತರ ಗುರುಶಾಂತ ಚರಕುಲ
ತಿಲಕರಮಳಿನ ದರ್ಶನಕೆ ತಾವೆ
ಳೆಸುತದ ತಿಳಿಸದೆಯೆ ಕಲವಡಿಪ್ಪೊಳಲಿಗಾಗಮಿಸಿ ॥ ೨೯ ॥

ನಿಲ್ಲದೆಯೆ ಮಠದೋಳ್ ಪ್ರವೇಶಿಸು
ತೆಲ್ಲಿ ಗುರುಶಾಂತಪ್ಪನಿರುವನು
ಸೊಲ್ಲಿಸೆನೆ ಸೇವಕನಿಗವನಾ ಸ್ವಾಮಿಗಳಿಗೆರಗಿ
ಇಲ್ಲಿ ಪೂಜಾಗೃಹದೊಳೆನಲವ
ರಲ್ಲಿಗೆಯೆ ತೆರಳುತ್ತ ಕರೆದರ
ದೆಲ್ಲಿರುವೆ ಬಾ ಬಳಿಗೆ ಗುರುಶಾಂತಪ್ಪನೇ ಎಂದು ॥ ೩೦ ॥

ಲಿಂಗಪೂಜೆಯೊಳಿದ್ದ ತಚ್ಚರ
ಪುಂಗವನು ತನ್ನಂ ಕರೆಯುವಾ
ಜಂಗಮಾಗ್ರೇಸರನಸು ಕಂಡಾಕ್ಷಣದೊಳಿದ್ದು
ಲಿಂಗಮಂ ನಿಜವಾಮಕರದೊಳು
ಹಿಂಗದಂತಿರೆ ಪಿಡಿದು ಬಂದಾ
ತ್ಮಾಂಗಮಂ ನೆಲಕೊರಗಿಸುತ್ತಂ ಪ್ರಣತಿಯಂಗೈದು || ೩೧ ||

ಅಪ್ಪಗಳೆ ತಮ್ಮಗಳ ಪಾದಗ
ಳಪ್ಪಿ ಪೂಜಿಸುವೊಂದು ಭಾಗ್ಯವ
ತಪ್ಪದೀ ಸಮಯದೊಳು ಕೊಡಲ್ಕೈತಂದಿರಾ ಎಂದು
ಕಪ್ಪು ಗೊರಲನ ದಿವ್ಯ ತೇಜದೊ
ಳೊಪ್ಪುವಾ ಸ್ವಾಮಿಗಳ ಚಿತ್ತ
ಕ್ಕೊಪ್ಪುವಂತೆ ಸ್ನಾನಪೂಜಾದಿಗಳ ವಾಗಿಸುತೆ || ೩೨ ||

ಪಾಡಿ ಭಕ್ತಿಯಗೀತೆಗಳ ಮುದ
ಗೂಡಿ ತಚ್ಚರಪಾದ ಪೂಜೆಯು
ಮಾಡಿ ತತ್ತೀರ್ಥ ಪ್ರಸಾದವ ಪಡೆದು ಸೊಗವಡೆದು
ಮಾಡಿ ಸೇವೆಯ ನಿಂತೆರಡು ದಿನ
ಕೂಡಿ ನಿಜಭಕ್ತರ್ಕಳಿಂ ತಾಂ
ಮಾಡಿ ಸಂಭ್ರಮದಿಂದೆ ತತ್ಪೂಜ್ಯರ ಸಮುತ್ಸವವಾ || ೩೩ ||

ಹರಕೆಗಳ ಸಲೆ ಪಡೆಯುತಾ ಮುಂ
ಡರಿಗಿಯ ಶ್ರೀಗಳನು ಬೀಳ್ಕೊಡ
ಲರಿಯುತೀಪರಿಗೈದ ಗುರುಶಾಂತೇಶನಲ್ಲಿರುವಾ
ಚರಸುಭಕ್ತಿಯನಾ ಗುರುವಿ
ನಾಚರಣೆಯಿತರ ಸ್ವಾಮಿಗಳಿಗನ
ವರತ ಮಾದರ್ಶಮದು ದಿಟಮೆನುತಿರ್ದರೂರವರು || ೩೪ ||

ಪತಿಯು ಮರಣವನರಿಯುತಂ ತಾಂ
ಚಿತೆಗೆ ಹರಣವನರ್ಪಿಸುವ ಪರ
ಸತಿಗೆ ನೀಂ ಮುತ್ತೈದೆಯಾಗೆಂದಾಶಿಷವನಿತ್ತು
ಮೃತಧವನ ಬದುಕಿಸಿದ ಮಹಿಮಾ
ನ್ವಿತನ ತದ್ಗುರು ಸಿದ್ಧಲಿಂಗನ
ನುತಿಸಿ ಬಾಳುವ ಭಾಗ್ಯವೆಮ್ಮಲ್ಲಿರಲಿ ಸಂತತವು ॥ ೩೫ ॥

ಪರಮ ಪಾವನಚರಿತವಿದನಾ
ದರದೆ ಪಠಿಸುವ ಕಥಿಸುವಾಲಿಸು
ವರಿಗೆ ತದ್ಗುರುಶಾಂತ ಶಿವಯೋಗೀಶ್ವರನು ಕೃಪೆಯಿಂ
ಚಿರತರಾಯುರರೋಗ ಭಾಗ್ಯವ
ಕರುಣಿಸುವುದಲ್ಲದೆಯೆ ಗುರುಹರ
ಚರರನುಗ್ರಹವಾಗಿಸುವನನವರತಮಿದು ನಿಜವು ॥ ೩೬ ॥

೧೦ನೆಯ ಸಂಧಿ ಸಂಪೂರ್ಣಂ ಪದ್ಯಗಳು ೩೬ ಕ್ಕೆ ಮಂಗಳಂ

ಶ್ರೀ ಗುರುಶಾಂತ ಶಿವಯೋಗೀಶ್ವರಃ ಪ್ರಸೀದತು

ಹನ್ನೊಂದನೆಯ ಸಂಧಿ

ಸೂಚನೆ— ಮತ್ತಮಾ ಗುರುಶಾಂತ ಪೂಜ್ಯ ಚ
ರೋತ್ತಮನು ಮುದದಿಂದೆ ಮಾಡಿದ
ಬಿತ್ತರದ ಲೀಲೆಗಳ ಕಥನಮದೀತೆರದೊಳಿರ್ಕುಂ ||

ಜಂಗಮನು ತಾನಾಗಿ ಭಕ್ತರ
ಭಂಗಿಯಿಂ ಚರಸೇವೆಗೈಯುತ
ಕಂಗೊಳಿಸಿ ವರವೀರಶೈವದ ಭಕ್ತಿಸತ್ಪಥದಾ
ಇಂಗಿತವ ನಡೆಯಿಂದ ಶಿಷ್ಯಜ
ನಂಗಳಿಗೆ ಬೋಧಿಸಿದ ತದ್ವಿಮ
ಳಾಂಗ ಗುರುಶಾಂತೇಶ್ವರನ ನೆನವಿರಲಿ ಹೃದಯದೊಳು || ೧ ||

ಭೂಮಹಿತ ಹೊಸಹಳ್ಳಿ ಬೂದಿ
ಸ್ವಾಮಿಗಳ ಮಠದೊಡೆತನವ ಸ
ತ್ಪ್ರೇಮದಿಂದಂ ಸಿದ್ಧಲಿಂಗ ಸ್ವಾಮಿಗೀವುದಕೆ
ಕಾಮಹರ ಗುರುಶಾಂತಪೂಜ್ಯ
ಸ್ವಾಮಿಗಳೆ ಹೊಸಹಳ್ಳಿ ಭಕ್ತ
ಸ್ತೋಮವಶಿ ಸಂಭ್ರಮದೆ ಕರೆತರಲಾಬಳಿಕೆ ಮಠದೊಳ್ || ೨ ||

ಸುರುಚಿರದ ದುರ್ಗದ ಜಗದ್ಗುರು
ವರರ ಜಯದೇವರ ಮಹಾಶುಭ
ಕರದ ನೇತೃತ್ವದೊಳೆ ತದ್ಗುರುಶಾಂತ ಚರಪತಿಯು
ಕರುಣದಿಂ ಷಟ್‌ಸ್ಥಲಗತಾವಳ
ತರಚಿದುಪದೇಶವನೆಸಗಿ ತ
ಚ್ಚರಸುಪಟ್ಟವ ಸಿದ್ಧಲಿಂಗಸ್ವಾಮಿಗಿತ್ತಂದು ॥ ೩ ॥

ಆ ಸುಮಠದೋಳ್ ಮಾಡಿಸಿರ್ದ ವಿ
ಶೇಷತರವಮಳ ಪ್ರಸಾದದ
ರಾಶಿಯುಂ ಬಂದಿರ್ದ ಜನತೆಗೆ ಕಡಮೆಯೆನಿಸುವುದಂ
ಈಶಭಕ್ತರು ತಿಳಿದು ಗುರುಶಾಂ
ತೇಶನಡಿಗೆರಗೊರೆಯಲದನುರು
ತೋಷದಿಂದಾ ಸ್ವಾಮಿಯೈತಂದಡಿಗೆಯಾಲಯಕೆ ॥ ೪ ॥

ಆಗಳಾಹಾರದ ನಡುವಿನಾ
ಭಾಗದೋಳ್ ಸಲೆನಟ್ಟು ತನ್ನಯ
ಯೋಗದಂಡವನೆಡೆಯಮಾಡಿರಿ ದುಗುಡಮಂ ಬಿಟ್ಟು
ಭೋಗಿಭೂಷಣನೀ ಪ್ರಸಾದ
ಕ್ಕಾಗದೆನಿತುಂ ಕೊರತೆಯೆಂದಾ
ಯೋಗಿವರ ಗುರುಶಾಂತ ಚರಪತಿಯಿತ್ತನಪ್ಪಣೆಯಾ ॥ ೫ ॥

ಕುಳಿತ ಜನರಿಗೆ ಕೊಡುವ ಪತ್ರಾ
ವಳಿಯ ಕೊರತೆಯುದಾಗಲೆಲೆಮ
ಕ್ಕಳೆ ಹುಡಿಯ ಬಟ್ಟೆಗಳ ಹಾಸುತ್ತದರೊಳೇ ನೀವು
ನಲವಿನಿಂ ಭುಂಜಿಸುವುದೆನೆ ಗುರು
ತಿಲಕನದರಂತುಂಡು ತಣಿವಂ
ತಳೆದುದರಿವೊಡೆ ದಶಸಹಸ್ರಾಧಿಕಜನಂ ಮಠದೋಳ್ ॥ ೬ ॥

ಇಂತುಮಲ್ಲದೆ ತತ್ಸಮಯದೋ
ಳಂತವಿಲ್ಲದೆ ಬಂದ ಜನತೆಗೆ
ಸಂತಸದೊಳೀಂಟುವ ಜಲಕೆ ಕೊರತೆಯದುಃ ಸಮನಿಸಿರೇ
ಆಂತು ಕೃಪೆಯಿಂ ಪೂಜ್ಯ ತದ್ಗುರು
ಶಾಂತದೇವಂ ಮಠದಹಿನ್ನೆಲೆ
ಯಾಂತಿರುವ ಹಳ್ಳದೊಳು ದಯಮಾಡಿಸುತದೊಂದೆಡೆಯೋಳ್ ॥ ೭ ॥

ಇಟ್ಟು ಪಾದವ ತಗ್ಗ ತೆಗೆಯಿಸೆ
ನೆಟ್ಟನವರೊಳು ಮಧುರವಾರಿಯು
ಪುಟ್ಟಿಧಾರಾಕಾರದಿಂ ಹೊರಚಿಮ್ಮಿ ಹೊನಲಾಗಿ
ಪುಟ್ಟಿಸಿದುದಚ್ಚರಿಯನೆಲ್ಲರು
ದಿಟ್ಟಿಕದಲದೆ ನೋಡುತದ ಬಗೆ
ಗೊಟ್ಟು ಪೊಗಳಿದರಾ ಮಹಾಶಿವಯೋಗಿಮಹಿಮೆಯನು ॥ ೮ ॥

ಇಂತು ಲೀಲೆಯನಾಗಿಸಿದ ಗುರು
ಶಾಂತಪರಮಸ್ವಾಮಿ ಪರಕೆಯ
ನಾಂತು ಜಯದೇವ ಪ್ರಭುಗಳಿಂ ನೂತ್ನ ಪಟ್ಟವನು
ಆಂತ ಚರಪತಿಗಂ ಸುಭಕ್ತರ
ಸಂತತಿಗಮಾಶಿಷವನೀಯುತೆ
ಶಾಂತೆರಳಿದನು ಶಲವಡಿಯ ಮಠಕಧಿಕ ಮೋದದೊಳು ॥ ೯ ॥

ಬಳಿಕೆ ಶಲವಡಿಯಲ್ಲಿ ಹಿರಣವೆ
ಸೆಳೆವ ಮಾರಿಕೆಯೆಂಬ ಬೇನೆಯು
ತಳುವದೆಯೆ ಮನೆ ಮನೆಗೆ ಹಬ್ಬುತ್ತಿರಲು ಜನತತಿಯು
ಕಳವಳವನಾಂತುದನು ಕಂಡಾ
ಪೊಳಲ ಭಕ್ತರು ಬಂದು ತದ್ಗುರು
ತಿಲಕನಡಿದಾವರೆಯ ಮರೆವೊಕ್ಕುಸುರೆ ತಮ್ಮಿರವಾ ॥ ೧೦ ॥

ಕಳವಳವಿದೇಕಿನ್ನು ಮುಂದೀ
ಪೊಳಲೊಳಾರನು ಸೋಂಕದಾರುಜೆ
ಸಲೆಪೊರೆಯುವನು ಶಿವನು ಸರ್ವರನೆಂದು ತದ್ಗುರುವು
ತಿಳಿಸಿದಾ ದಿನದಲ್ಲಿ ಬೇನೆಯು
ಸುಳಿವದಿಲ್ಲದೆ ಮಾಯವಾದುದ
ತಿಳಿದು ಪುರದವರೈದೆ ಪೊಗಳಿದರಾ ಚರೊತ್ತಮನಾ ॥ ೧೧ ॥

ಆ ದಯಾಘನ ಯೋಗಿಗಳ ವರ
ಪಾದದರ್ಶನಕೆಳಸುತಿನ್ನವ
ರಾದಿ ಸಂಗನ ಬಸವನಾಮು ಶ್ರೀಗಳೈ ತರಲು
ಮೋದದಿಂದವರಿಗೆ ಗುರುವು ಸ
ದ್ಬೋಧೆಯಂ ಮಾಡುತ್ತೆ ಮೇಣವ
ರಾದಿಯಿಂ ಫಲಗಳನೆ ಭುಂಜಿಪ ಪದ್ಧತಿಯನರಿದು ॥ ೧೨ ॥

ವೀರಶೈವರು ಕೇವಲ ಫಲಾ
ಹಾರಮಂ ಮಾಡಿದೊಡೆ ಧರಿಸಿದ
ಸಾರಲಿಂಗದ ಸುಪ್ರಸಾದಮದಾಗದದರಿಂದೇ
ಆರು ಲಿಂಗಕ್ಕಾರು ರುಚಿಗಳ
ನಾರತಂ ಸಲಿಸಲ್ಲಬೇಕು ವಿ
ಚಾರವಿದ ನೀವರಿಯಬೇಕವರಾದಿಯಪ್ಪಗಳೇ ॥ ೧೩ ॥

ಎಂದು ವಿವರಿಸಿ ಬಳಿಕೆ ಪರಮಾ
ನಂದದಿಂ ನಿಜ ಮಠದೆ ಶುಭದಿನ
ವೊಂದರೊಳ್ ಷಟ್‌ಸ್ಥಲ ಸದುಪದೇಶವನವರಿಗೆಸಗಿ
ಅಂದು ನಿರ್ಮಳ ಸುಪ್ರಸಾದಿಗ
ಳಂ ದಯದೆ ಮಾಡಿದರವರ ಪೂ
ರ್ಣೇಂದುಧರ ತೇಜೋನ್ವಿತರು ಗುರುಶಾಂತ ಗುರುವರರು ॥ ೧೪ ॥

ಮೊದಲಿನಿಂ ತಮಗನ್ನವೇ ದ
ಕ್ಕದೊಡವಾಗುರುವರರನುಗ್ರಹ
ವೊದಗಿದಾದಿನದಿಂದ ಷಡ್ರುಚಿಯುಕ್ತ ಭೋಜನವಾ
ಮುದದೆ ಭುಂಜಿಸತೊಡಗಿದಾ ಜಿತ
ಮದನ ಶಂಗನಬಸವಪೂಜ್ಯರು
ಹೃದಯದೋಳ್ ತದ್ಗುರು ಮಹಿಮೆಗಚ್ಚರಿಯನೊಂದಿದರು ‖ ೧೫ ‖

ಬಳಿಕೆ ಕೆಲದಿನಗಳೆದು ತದ್ಗುರು
ಗಳ ಪದಕ್ಕೆರೆ ಬಿನ್ನಹಂಗಳ
ಸಲಿಸಿ ತಮ್ಮವರಾದಿಗೈ ಸಲೆ ಕರೆದು ತಂದಲ್ಲಿ
ನಲವಿಸಿಂದೂರಲ್ಲಿ ಸಂಭ್ರಮ
ಕಲಿತದುತ್ಸವವಾಗಿಸುತ್ತಾ
ಮಲರಹಿತ ಚರಪುಂಗವರಿಗುಲ್ಲಸಿತ ಮಠದಲ್ಲಿ ‖ ೧೬ ‖

ಆಗಿಸುತ್ತೆ ಸುಸಂಭ್ರಮದೆ ಸೊಗ
ಸಾಗಿ ಗಣಸಂತೃಪ್ತಿಯಂ ಮೇ
ಣಾಗುರುಗಳಿಂ ಚಿದುಪದೇಶಾನುಗ್ರಹವನೊಲವಿಂ
ಆಗಿಸಿದರು ಸುಶಿಷ್ಯಪುಂಗವ
ನಾಗಿ ತಮ್ಮಧಿಕಾರವಹಿಸುವ
ನಾಗೆಸೆವ ಶಿವಮೂರ್ತಿಗವರಾದಿಯ ಮಠಾಧಿಪರು ‖ ೧೭ ‖

ಸಾರಚರಿತದೊಳೊಪ್ಪುವ ಫಲಾ
ಹಾರ ಪೂಜ್ಯ ಸ್ವಾಮಿಮಠದಧಿ
ಕಾರಿಗಳ ಬಯಕೆಗಳನಿಂತಾಗಿಸುತವರಿಗಿತ್ತು
ಕೋರಿದಾಶಿಷಗಳನು ಶಲವಡಿ
ಯೂರಿಗಾಗಮಿಸಿದರು ಪರಮೋ
ದಾರಭಾವಾನ್ವಿತರು ಗುರುಶಾಂತೇಶ್ವರರು ಮುದದೇ ‖ ೧೮ ‖

ಬಳಿಕೆ ಶಲವಡಿಯಲ್ಲಿ ಬಹುದಿನ
ಗಳೊಳು ಮೂಲವ್ಯಾಧಿಯಿಂ ಮಿಗೆ
ಬಳಲುತಿರುವಾ ದೊಡ್ಡಮನೆ ವೀರಪ್ಪನೈತಂದು
ಅಲಘು ಕರುಣಾನಿಧಿಯೆನಿಸಿ ಕಂ
ಗೊಳಿಪ ಗುರುಶಾಂತೇಶ್ವರನ ನಿ
ರ್ಮಳ ಪದಾಂಬುಜಕೈದೆ ವಂದಿಸಿ ಮುಗಿದು ಕೈಗಳನು ॥ ೧೯ ॥

ಒರೆದು ರೋಗದ ಬಾಧೆಯಂ ಪರಿ
ಹರಿಸಬೇಕದನೆಂದು ಬೇಡು
ತ್ತಿರುವ ಭಕ್ತಗೆ ಶಿವಕವಚಪಾರಾಯಣವ ಮಾಡಿ
ಗುರುಚರಣತೀರ್ಥ ಪ್ರಸಾದಗ
ಳುರು ಮುದದೆ ನೀಂ ಸ್ವೀಕರಿಸಲತಿ
ಭರದೊಳಮು ತಾಂ ದೂರವಾಗುವುದೆಂದು ತದ್ಗುರುವು ॥ ೨೦ ॥

ಪರಕೆಗೊಡಲದರಂತೆ ಗೈದಾ
ಪರಮಭಕ್ತಗೆ ಕೆಲದಿನದೊಳೇ
ಸರಿದು ಪೋದುದು ರುಜೆಯು ಬಳಿಕಾತನ ತನುಜನಾದ
ವರ ಸುಗುಣಿ ಶಾಂತಪ್ಪನಂ ಮಿಗೆ
ಕೊರಗಿಸುತ್ತಿರೆ ಬಂದ ವಿಷಮ
ಜ್ವರವದನು ತಿಳಿದಾ ಮಹಾಶಿವಯೋಗಿ ತದ್ಗೃಹಕೆ ॥ ೨೧ ॥

ಬಂದು ಕೃಪೆಯಿಂ ತನ್ನ ವರಕರ
ದಿಂದೆ ಭಸ್ಮವನವನ ತನುವಿನೊ
ಳಂದು ಲೇಪಿಸಿ ಹಾಲನೀಂಟಿಸುತಿನ್ನು ತಜ್ಜ್ವರವು
ಮುಂದೆ ಬರದೆಂದೊರೆದು ಪೋಗಲ
ದೊಂದೆ ಗಳಿಗೆಯೊಳಿಳಿದು ಪೋದುದ
ಮಂದತಾಪವನಿತ್ತು ಸಂಕಟಗೊಳಿಸುವಾಜ್ವರವು ॥ ೨೨ ॥

ಇಂತು ಭಕ್ತರ ಮೇಲೆ ಬಹುಕೃಪೆ
ಯಾಂತು ತದ್ಗೃಹಗಳಿಗೆ ತಾನೇ
ಸಂತಸದೆ ತೆರಳುತ್ತವರ ಸಂಕಟವ ಪರಿಹರಿಪಾ
ಶಾಂತಿಸದ್ಗೃಹನಾದ ವರಗುರು
ಶಾಂತ ಮೂರ್ತಿಯು ಪಡೆದುದೆಮ್ಮ ಭ
ವಾಂತರದ ಸೈಪೆಂದು ಬಣ್ಣಿಸುತಿರ್ದರೂರವರು ॥ ೨೩ ॥

ಬಳಿಕೆ ಶಿಲವಡಿ ಶಾನುಭೋಗರ
ತೊಳಸ ಮನೆತನದಲ್ಲಿ ಬಹು ನಿ
ರ್ಮಳ ನೆನಿಸಿದಾ ದೊಡ್ಡಮನೆ ಬಸವಪ್ಪನಾತ್ಮಜೆಯು
ತಳೆಯುತಂ ಪ್ರಸವಿಸುವ ಬೇನೆಯ
ಕಳೆಯುತೊಂಬತ್ತುಂ ದಿನಂಗಳ
ನಳಲುತಿರೆ ತದ್ಗೃಹದವರು ದುಃಖಾಗ್ನಿಯಿಂ ಬೆಂದು ॥ ೨೪ ॥

ಕರೆಯಿಸಲು ಬಹುಶೀಘ್ರದಿಂದಂ
ಪರಮವೈದ್ಯರೆನಿಪ್ಪ ಪೆರ್ಮೆಯ
ಧರಿಸಿದಬ್ಬೀಗೇರಿ ಶಂಕರಗೌಡರನು ಮನೆಗೆ
ನೆರೆಪರೀಕ್ಷಿಸುತವರು ಶಿಶುವದು
ಮರಣವಾಂತಿದೆ ಹೊಟ್ಟೆಯೊಳೆ ತಾ
ನರಿವೊಡಾವುದುಪಾಯವಿಲ್ಲೀ ಸುತೆಯು ಬದುಕಿಸಲು ॥ ೨೫ ॥

ಎಂದು ನುಡಿದಾಕ್ಷಣವೆ ಮನೆಯವ
ರೊಂದಿ ಬಹುದುಃಖವನು ತಮ್ಮಯ
ನಂದಿನಿಗೆ ತತ್ಸಿದ್ಧಲಿಂಗಮ್ಮನಿಗೆ ಮೃತಿ ದಿಟವು
ಎಂದು ತದ್ಗುರುಶಾಂತ ಶಿವಯೋ
ಗೀಂದುವಿನವರಪಾದದರ್ಶನ
ವಂದು ಮಾಡಿಸಲೆಳಸಿ ತನ್ಮರಣೋನ್ಮುಖಾತ್ಮಜೆಗೆ ॥ ೨೬ ॥

ಬಂದು ಮಠಕಾಗುರುವಿನಂಘ್ರಿಗೆ
ವಂದಿಸುತೆ ಮನೆಯುವರು ನಡೆದುದ
ನಂದು ವಿವರಿಸಿ ಕರೆದುಕೊಂಡೈತರಲು ನಿಜಗೃಹಕೆ
ಬಂದ ತಜ್ಜ್ವರಪತಿಯು ಕಂಡಾ
ನಂದಿನಿಯು ಕೇಳಜ್ಜನೇ ನೀಂ
ಕೊಂದು ಬಿಡುವೆಯೊ ಬದುಕಿಸುವೆಯೋ ನನ್ನನೆಂದಳುತೇ ॥ ೨೭ ॥

ಇಟ್ಟು ಹಣೆಯಂ ತತ್ಪದದೊಳಿರೆ
ಪುಟ್ಟಿಸಿದವರೊಳೊಗೆವ ಮಮತೆಯೆ
ಪುಟ್ಟಿ ತತ್ಕರುಣಾಳು ಗುರುವಿನೊಳಾ ಮಗಳ ಕಂಡು
ಇಟ್ಟು ತನ್ಮಸ್ತಕದೆ ಕರವನು
ಬಿಟ್ಟು ಚಿಂತೆಯನಿರು ಕುಮಾರಿಯೆ
ದಿಟ್ಟ ಮೂರುಳ್ಳವನು ಪೊರೆಯುವನೆಂದು ಸಂತೈಸಿ ॥ ೨೮ ॥

ಶಾನುಭೋಗರೆ, ಟೊಂಗೆ ಹೋಗಲಿ
ತಾನೆ ಬಡ್ಡೆಯದುಳಿಯಲಿದಕನು
ಮಾನವೇಕೆಂದಾಗುರುವು ಮಠಕವರ ಕರೆತಂದು
ಸ್ನಾನ ಪೂಜಾದಿಗಳ ತೀರಿಸಿ
ಭೂನುತದ ತೀರ್ಥಪ್ರಸಾದವ
ಮಾನನಿಧಿ ಬಸವಪ್ಪನವರಿಗೆ ಕೊಟ್ಟು ಕಳುಹಿಸಿದಂ ॥ ೨೯ ॥

ಪರಮ ಗುರುವುರುಕರುಣದಿಂದಂ
ಕರುಣಿಸಿದ ತೀರ್ಥ ಪ್ರಸಾದವ
ಹರಿಸದಿಂದಂ ಶಾನು ಭೋಗರು ತಂದು ಮನೆಯಲ್ಲಿ
ಮರಣ ಶಯ್ಯೆಯೊಳಿರ್ದು ದುಃಖದೆ
ಪರವಶತೆಯೊಂದಿರ್ದ ಸುತೆಗೆ
ಜ್ವರವನಾಗಿಸುತಾಕೆಗೀಂಟಿಸೆ ತತ್ಪದೋದಕವಾ ॥ ೩೦ ॥

ಸತ್ತ ಶಿಶು ಹೊರಬಂದುದಾಗಳೆ
ಮತ್ತೆ ವಿಮಳತರ ಪ್ರಸಾದದ
ತುತ್ತೆರಡನುಣೆ ಸಿದ್ಧಲಿಂಗಮ್ಮನು ತದುದರದೊಳು
ಸುತ್ತಿಕೊಂಡಾ ಮಾಸವೈತರೆ
ಸತ್ತು ಪುಟ್ಟಿದಳೆಮ್ಮ ಸುತೆ ಗುರು
ಸತ್ತಮನ ಕೃಪೆಯಿಂದೆನುತೆ ಹಿಗ್ಗಿದರು ಮನೆಯುವರು ॥ ೩೧ ॥

ಅನಿತರೊಳೆ ಮೇಣ್ ಸಿದ್ಧಲಿಂಗ
ಮ್ಮನಿಗೆ ವ್ಯೆಯೋಳ್ ತಂಪಡರಿ ಸಂ
ಜನಿತ ವಾತದೆ ಬಾಯಿ ಸೊಟ್ಟಾಗಿರಲು ಶಿವಯೋಗಿ
ಮನೆಗೆ ಬಂದು ವಿಭೂತಿಯಿಂ ಲೇ
ಪನವಗೈದದ ಕಳೆದುದೀಕ್ಷಿಸಿ
ಜನರಿಗಚ್ಚರಿಯಾದುದಿನ್ನೇನೊರೆವೆನಾಬಳಿಕೆ ॥ ೩೨ ॥

ಆವುದೌಷಧವಿಲ್ಲದೆಯೆ ಗುರು
ದೇವನಾ ತೀರ್ಥ ಪ್ರಸಾದದ
ಸೇವನೆಯೊಳೇ ಸಿದ್ಧಲಿಂಗಮ್ಮನಿಗೆ ಕೆಲದಿನಕೆ
ತೀವೆ ವ್ಯೆಯೋಳ್ ಶಕ್ತಿ ಮತ್ತಾ
ಪಾವನ ಸ್ವಾಮಿಗಳ ದರ್ಶನ
ಕಾವಿಮಳ ಸುತೆಯೊಡನೆ ಪಿತೃಜನರಾಗಮಿಸಿ ಮಠಕೆ ॥ ೩೩ ॥

ಎರಗಿ ತದ್ಗುರುಪಾದ ಪದ್ಮಕೆ
ಹರಿಸದಿಂ ತೆಂಗೊಡೆದು ಮಂಗಳ
ಕರದ ಕಪ್ಪುರದಾರತಿಯು ಸಲೆ ಮಾಡಿ ಪರಕೆಗಳಾ
ನೆರೆಪಡೆಯುವೀ ಭಕ್ತಿಯಿಂ ತ
ತ್ಪರತರನ ಮನಕೊಲವನಾಗಿಸಿ
ಮರಳಿದರು ಮನೆಗವರು ಕೊಂಡಾಡುತ್ತೆ ತತ್ಕೃಪೆಯಾ ॥ ೩೪ ॥

ಅರಿಯುತೀ ವಿಧದಿಂದ ತತ್ಪರ
ತರನ ಕೃಪೆಯಿಂ ಶಾನ ಭೋಗರ
ವರತನುಜೆ ಮರಣವನೆ ಗೆದ್ದುದನಚ್ಚರಿಯನೊಂದಿ
ಪರಮ ಮಹಿಮೆಯ ತಚ್ಚರೇಂದ್ರನ
ಜರಿದು ನುಡಿದುದಕಾಗಿ ತನ್ನನೆ
ಜರಿದುಕೊಳ್ಳುತ್ತಬ್ಬಿಗೇರಿಯ ವೈದ್ಯನುಂ ಮಠಕೆ ॥ ೩೫ ॥

ಓಡಿಬಂದಾ ಗರುವಿನಂಘ್ರಿಗೆ
ನೀಡಿ ನೆಲಕೊಡಲಂ ಪ್ರಣತಿಯಂ
ಮಾಡಿ ಪಶ್ಚಾತ್ತಾಪದಿಂದಂ ನಿಂದು ಕೈ ಮುಗಿದು
ಬೇಡಿದಿಷ್ಟವ ಭಕ್ತ ವೃಂದಕೆ
ನೀಡುತಿರುವಾ ಮಹಿಮನಂ ತಾಂ
ಬೇಡಿಕೊಂಡನು ಭಯಚಕಿತ ಮನದಿಂದಮಿೀ ತೆರದೆ ॥ ೩೬ ॥

ತನಗೆ ಕರವಶವಾಗದಿರ್ದಾ
ಘನರುಜೆಯೊಳಾ ಸಿದ್ಧಲಿಂಗ
ಮ್ಮನು ಮರಣ ಸನ್ನಿಹಿತಳಾಗಿರಲವಳ ಬದುಕಿಸುವಾ
ಘನತೆ ಗುರುಶಾಂತಪ್ಪನಲ್ಲಿರ
ದೆನುತೆ ಜನಗಳ ಮುಂದೆ ನಿಂದಿಸಿ
ದೆನು ಮಹಾದುರಿತಾತ್ಮನಾದೆನು ನಾನು ಮದ್ಗುರುವೇ ॥ ೩೭ ॥

ಪರಿಕಿಪೊಡೆ ಭವರೋಗ ವೈದ್ಯನಿ
ಗರಿದೆನಿಪುದಿರದೆಂಬುದರಿಯದೆ
ಮರುಳನಾನಿಂತೊರೆವ ತಪ್ಪಂ ಕ್ಷಮಿಸಿ ಕಾಪಾಡು
ದುರಿತಹರಭವದೀಯ ನಿರ್ಮಳ
ಚರಣಮಂ ಮರೆವೊಕ್ಕ ನನ್ನೊಳ
ಗಿರುವ ದುರಹಂಕೃತಿಯ ಕಳೆಯುವ ಪರಕೆಯನು ನೀಡು ॥ ೩೮ ॥

ಎಂದು ಬೇಡಿದ ವೈದ್ಯನಿಗೆ ಗುರು
ಮಂದಹಾಸವನೊಂದಿ ತದ್ಬಾ
ಲೇಂದುಧರನೇ ಸಿದ್ಧಲಿಂಗವ್ಮನಿಗೆ ಹರಣವನು
ತಂದು ಕೊಟ್ಟನು ನನ್ನೊಳೇನಿದೆ
ನಿಂದೆಯುಂ ನುತಿಯುಂ ಸಮಂ ನನ
ಗಿಂದಿನಿಂ ನಿರಹಂಕೃತಿಯನೊಂದೆಂದು ಕಥಿಸಿದನು ॥ ೩೯ ॥

ಬಳಿಕೆ ಶಂಕರಗೌಡನಾ ಮಠ
ದೊಳಗೆ ಗಣಸಂತೃಪ್ತಿಯಾಗಿಸಿ
ಕಳೆದುಕೊಂಡಾತ್ಮೀಯ ದುರಹಂಕೃತಿಯ ಭಕ್ತಿಯನು
ತಳೆದು ತದ್ಗುರುಪಾದಜಲರುಹ
ಗಳಿಗೆ ಸಾಷ್ಟಾಂಗ ಪ್ರಣತಿಗೈ
ದಲಘುಮುದದಾಶಿಷವ ಪಡೆದೊಂದಿದನು ತನ್ನೆಡೆಯಾ ॥ ೪೦ ॥

ಮತ್ತಮಿನ್ನಾ ಶಾನಭೋಗರ
ನುತ್ಯಮೆನಿಸಿದ ಮನೆತನದ ಸ
ದ್ವೃತ್ತನಾದಾ ಸಣ್ಣಮನೆ ವೀರಪ್ಪನನವರತಂ
ಕುತ್ತವಾವುದು ಬಂದೊಡದ ಸಲೆ
ಕತ್ತರಿಸುವನು ಬಿಡದೆತಾಂ ವೈ
ದ್ಯೋತ್ತಮನು ಗುರುಶಾಂತಗುರುವೆಂದೆಂಬ ನಂಬಿಕೆಯಾ ॥ ೪೧ ॥

ಒಂದಿತಾನಿರಲೊಮ್ಮೆ ಯಾತನ
ಮಂದಿರದವರು ರೋಗದಿಂದಳ
ಲೊಂದಿರಲು ಮತ್ತಾವ ವೈದ್ಯರ ಕರೆಯದೆಯೆ ಮಠಕೆ
ಬಂದು ತದ್ಗುರುದೇವನಂ ಕರೆ
ತಂದು ತೋರಿಸೆ ರೋಗಿಗಳ ಕೃಪೆ
ಯಿಂದೆ ತನ್ಮಹಿಮಾಕರನು ಸರ್ವರಿಗೆ ಹಣೆಯಲ್ಲಿ ॥ ೪೨ ॥

ಧರಿಸಿ ಭಸ್ಮವ ಕುಡಿಸೆ ತೀರ್ಥವ
ನೆರಡು ದಿನದೊಳೆ ರೋಗ ಬಾಧೆಯು
ಪರಿಹರಿಸಿಕೊಂಡೆಲ್ಲರುಂ ಸೊಗವಡೆದರೇನೊರೆವೇಂ
ಗುರುವರಗೆ ಭವರೋಗವೈದ್ಯಗೆ
ಧರಣಿಯೊಳ್ ಸಾಮಾನ್ಯ ರುಜೆಗಳ
ಹರಣಮತಿ ಲಘುವೆಂದು ಪೊಗಳಿದರಾತನಂ ಬುಧರು || ೪೩ ||

ಕಲ್ಲ ಬಸವನದಾವ ಜಂಗವು
ವಲ್ಲಭನ ಶೇಷ ಪ್ರಸಾದವು
ನುಲ್ಲಸಿತ ಮನದಿಂದ ಭುಂಜಿಸಿ ಧನ್ಯನೆನಸಿದನೋ
ಎಲ್ಲರಂ ಸಲೆ ಪೊರೆಯುವೆರಡನೆ
ಯಲ್ಲಮನ ತತ್ಸಿದ್ಧಲಿಂಗನ
ಮೆಲ್ಲಡಿಗಳಂ ಸ್ಮರಿಪ ಸುಖವಿರಲೆಮ್ಮ ಜನ್ಮದೊಳು || ೪೪ ||

ಪರಮ ಪಾವನ ಚರಿತವಿದನಾ
ದರದೆ ಪಠಿಸುವ ಕಥಿಸುವಾಲಿಸು
ವರಿಗೆ ತದ್ಗುರುಶಾಂತಶಿವಯೋಗೀಶ್ವರನು ಕೃಪೆಯಿಂ
ಚಿರತರಾಯುರರೋಗ ಭಾಗ್ಯವ
ಕರುಣಿಸುವುದಲ್ಲದೆಯೆ ಗುರುಹರ
ಚರರನುಗ್ರಹವಾಗಿಸುವನನವರತಮಿದು ನಿಜವು || ೪೫ ||

೧೧ನೆಯ ಸಂಧಿ ಸಂಪೂರ್ಣಂ ಪದ್ಯಗಳು ೪೩೧ ಕ್ಕೆ ಮಂಗಳಂ

ಶ್ರೀ ಗುರುಶಾಂತ ಶಿವಯೋಗೀಶ್ವರಃ ಪ್ರಸೀದತು

ಹನ್ನೆರಡನೆಯ ಸಂಧಿ

ಸೂಚನೆ— ಮತ್ತಮಾ ಗುರುಶಾಂತ ಜಂಗಮ
ಸತ್ತಮನ ಕೆಲತೆರದ ಕೃತಿಗಳ
ಬಿತ್ತರದ ಕಥನವಮದು ತಾನೀ ಬಗೆಯನಾಂತಿರ್ಕುಂ

ಭಸಿತವರತೀರ್ಥಪ್ರಸಾದಗ
ಳಸಮಕೃಪೆಯಿಂದಿತ್ತು ಭಕ್ತರ
ವಿಸರಕೊದಗಿದ ರೋಗಗಳ ಪರಿಹರಿಪ ಮಹಿಮೆಯೊಳು
ಎಸೆದ ಗುರುಶಾಂತೇಶ್ವರನ ಪದ
ಬಿಸರುಹಂಗಳು ನಮ್ಮ ಮಾನಸ
ಬಿಸರುಹಾಕರದಲ್ಲಿ ಶೋಭಿಸುತಿರ್ಲಿ ಸಂತತವು ॥ ೧ ॥

ಯೋಗಿ ಗುರುಶಾಂತಪ್ರಭುವು ತಾಂ
ಪೋಗಿ ಹರಿಹರ ಮಠಕೆ ನಿಶ್ಚಲ
ನಾಗಿ ಭಕ್ತರಿಗೆಸಗುತಿರೆ ಸದ್ಬೋಧೆಗಳನಲ್ಲಿ
ಆ ಗುರುವಿನಡಿದಳಿರ ದರ್ಶನ
ಕಾಗಿ ಸನಿಹದ ಹಳ್ಳಿಗಳ ಜನ
ರಾಗಮಿಸುವುದು ಹಿರಿದೆನಿಸುತಿರಲಿತ್ತ ಶಲವಡಿಯೋಳ್ ॥ ೨ ॥

ಶೆಲವಡಿಯ ಗುರುಮಠವೆ ಜನ್ಮ
ಸ್ಥಲನಿಲಯವೆಂದರಿದು ಭಕ್ತಿಯ
ತಳೆದು ಬಹುದಿನದಿಂದೆ ತದ್ಗುರುಸೇವೆಯಲ್ಲಿರ್ದು
ನಲವನಾಂತಿರುತಿರ್ದ ನಿನ್ನಾ
ಪೊಳಲೊಳೇ ಸವದತ್ತಿ ಮನೆತನ
ದೊಳು ಜನಿಸಿ ರುದ್ರಪ್ಪನೆಂಬ ಸುಭಕ್ತನಾತನಿಗೆ ॥ ೩ ॥

ಅಂಟಿಕೊಂಡಾ ಪ್ಲೇಗರೋಗದೆ
ಗಂಟು ನಾಲ್ಕೈದೆದ್ದು ಮರಣವ
ನುಂಟು ಮಾಡುವ ಭಯವನೊದಗಿಸಲಾಗಳೂರವರು
ಅಂಟಿಕೊಂಡುದು ಮೃತಿಯನೀಯುವ
ಕಂಟಕವಿದೀತನಿಗೆ ಬದುಕುವು
ದುಂಟೆ ತಾನೆಂದೊರೆಯತೊಡಗಿದರಾ ಸಮಯದಲ್ಲಿ ॥ ೪ ॥

ಅಸಮ ಮಹಿಮೆಯ ಗುರುವು ದಯಮಾ
ಡಿಸಿದರಿಲ್ಲಿಗೆ ತತ್ಕೃಪೆಯೊಳಿವ
ನಸುವುಳಿಯುವುದು ದಿಟಮಿದೆಂದಲ್ಲಿರ್ದ ಕೆಲಜನರು
ಉಸುರಲಾಗಳೆ ತನ್ವಿನುತ ಬುಧ
ವಿಸರನಿಗೆ ತಂತಿಯನು ಸಲೆ ಕಳು
ಹಿಸಿದರಾ ರುದ್ರಪ್ಪನಾತ್ಮಜನೀಶ್ವರನಹೆಸರಿಂ ॥ ೫ ॥

ಎಂಬೆನಿನ್ನೇಂ ತಂತಿಯಿಂದಳ
ಲಿಂ ಬರೆದ ವಾರ್ತೆಯದ ತಿಳಿದಾ
ಸಾಂಬರೂಪಸ್ವಾಮಿ ಹರಿಹರದಿಂದೆ ಪೊರಮಟ್ಟಂ
ನಂಬಿ ತನ್ನಿಂ ಭಕ್ತರೇ ಮಿಗಿ
ಲೆಂಬ ಸೂಕ್ತಿಯ ನಡೆಯುವಾ ಕರು
ಣಾಂಬುನಿಧಿಗೀ ತೆರದ ಪಯಣಂ ತಾಂ ಸಹಜಮಲ್ತೇಂ ॥ ೬ ॥

ಆಗವಿುಸಿ ಶಿಲವಡಿಗೆ ಮೊದಲೇ
ಪೋಗಿ ರುದ್ರಪ್ಪನ ಗೃಹಕ್ಕಾ
ಪ್ಪೇಗಿನಿಂ ಮರಣೋನ್ಮುಖತೆಯಾಂತಾ ಸುಭಕ್ತನಿಗೆ
ನೀಗುವನು ಬೇನೆಯಿದ ತಾಂಭವ
ರೋಗವೈದ್ಯನು ಶಿವನುಃ ಚಿಂತಿಸ
ಲಾಗದೆಂದುರೆ ನುಡಿದು ಧೈರ್ಯವನಿತ್ತು ತದ್ಗುರುವು ॥ ೭ ॥

ಬಳಿಕೆ ನಿಜಮಠಕಾಗವಿುಸುತಂ
ತಳುವದೆಸ್ನಾನಾರ್ಚನಾದಿಯು
ನೊಲವಿನಿಂ ಪೂರೈಸಿ ವರತೀರ್ಥಪ್ರಸಾದಗಳಾ
ಕಳುಹಿಸಿದನಾ ರೋಗಿಗಾತನು
ತಳೆದು ನಿಷ್ಠೆಯ ಸೇವಿಸಿದನವು
ಗಳನು ತದ್ರಾತ್ರಿಯೊಳೊಡೆದವಾ ರುಜೆಯ ಗಡ್ಡೆಗಳು ॥ ೮ ॥

ಒಂದೆರಡು ದಿನಗಳೊಳೆ ತದ್ಯೋ
ಗೀಂದುಕೃಪೆಯಿಂ ರೋಗಮುಕ್ತತೆ
ಯೊಂದಿದಾ ರುದ್ರಪ್ಪನಾ ಸ್ವಾಮಿಗಳ ದರ್ಶನಕೆ
ಬಂದು ವಂದಿಸಿ ಗುರುವರನೆ ನಿ
ನ್ನಿಂದೆ ಪುನರುದ್ಭವವನೊಂದಿದೆ
ನೆಂದು ಪರಿಪರಿಯಿಂದೆ ತನ್ಮಹಿಮೆಯನು ಪೊಗಳಿದನು ॥ ೯ ॥

ಇಂತು ಭಕ್ತರೊಳಿಟ್ಟ ತತ್ಕೃಪೆ
ಯಿಂ ತಿಳಿದ ಬುಧರಧಿಕಕರುಣಾ
ವಂತನಾದಾ ಶಿವನೆ ಗುರುಶಾಂತಾಭಿಧಾನವನು
ತಾಂ ತಳೆಯುತಾಶ್ರಿತಜನರ್ಕಳ
ಸಂತತಂಪೊರೆವೊಂದು ಕಜ್ಜವ
ನಾಂತನಿದು ದಿಟವೆಂದು ಪೊಗಳಿದರಾ ಮಹಾಗುರುವಾ ॥ ೧೦ ॥

ಬಳಿಕೆ ಶೆಲವಡಿಯಲ್ಲಿ ಬೆಳ್ಗಸ
ದಳಿದೆಸೆವ ಪೋಲೀಸಗೌಡರ
ನಿಲಯದಧಿಪತಿಗಾ ವಿರೂಪಾಕ್ಷಾಖ್ಯಗೌಡನಿಗೆ
ಕೆಲದಿನದ ಹಿಂದಾದ ಬೇನೆಯು
ಬಳೆದು ಬಹುಕಷ್ಟಗಳನೊದಗಿಸೆ
ತಿಳಿಯುತದನೂರಪ್ರಮುಖರೊಳ್ ಕೆಲರು ಭಾವಿಕರು ॥ ೧೧ ॥

ಗುರುವನುಗ್ರಹಿಸಿದ ವಿಭೂತಿಯ
ಧರಿಸಲೀತನಿಗಿರ್ದ ಬೇನೆಯು
ಕರಗಿ ಪೋಗುವುದೆಂದರಿಯುತಾಗವಿುಸಿ ತನ್ಮಠಕೆ
ಪರಮ ಪೂಜ್ಯಸ್ವಾಮಿಯಮಳಿನ
ಚರಣಕೆರಗುತ್ತಿರ್ದವರುಗಳ
ಪರಿಕಿಸುತೆ ನಿಮ್ಮಗಳ ಗೌಡನು ಶಿವನೊಳಡಗಿದನು ॥ ೧೨ ॥

ಎಂದೊರೆಯುತಾ ಸ್ವಾಮಿ ಮೌನವ
ನೊಂದೆ ತಧ್ಭಾವಿಕರು ವಿಸ್ಮಯ
ಪೊಂದಿ ಬಂದೀಕ್ಷಿಸುತೆ ಗೌಡನ ಮೃತ ಶರೀರವನು
ಇಂದುಧರ ಸದ್ರೂಪನಾಗುರು
ವೆಂದುದೇ ನಿಜವೆಂದು ತಿಳಿಯು
ತ್ತಿಂದು ತದ್ಗ್ರಾಮಣಿಗೆ ಮಾಡಿದರಂತ್ಯವಿಧಿಗಳನು ॥ ೧೩ ॥

ಬಳಿಕೆ ಗೌಡನ ಸತಿಯು ದುಃಖಾ
ಕುಲೆಯು ವೀರಮ್ಮನು ಬಗಲೊಳಿ
ನ್ನೆಳೆಯ ತನುಜನನಿರಿಸಿ ಕೊಂಡೈತಂದು ತನ್ಮಠಕೆ
ನೆಲಕೆ ತನುವಿತ್ತೆರಗಿ ತದ್ಗುರು
ತಿಲಕನಿಗೆ ಮನೆತನದ ಕಷ್ಟಂ
ಗಳನುಸುರುತಳಲಿದೆಕರಗಿತಾ ವಿರತಗೇ ನೊರೆವೆಂ ॥ ೧೪ ॥

ತಾಯಿ ಬಿಡು ದುಃಖವನು ಶಿವನೇಂ
ಕಾಯದಿರ್ಪನೆ ನಿನ್ನನಾತ್ಮಜ
ನಾಯುರಾರೋಗ್ಯಾದಿಗಳ ಸಲೆಪಡೆದು ಮನೆತನಕೆ
ಶ್ರೇಯಮಂ ತಾಂ ತರುವನೆಂದಾ
ಗೇಯ ಮೂರ್ತಿಯು ನಲ್ವರಕೆಗಳ
ನೀಯೆ ಸಂತಸವಾಂತಳಾವೀರಮ್ಮನಾ ಬಳಿಕೆ ॥ ೧೫ ॥

ಕಡುಸೊಗದ ಬೀಡೆನಿಸಿದಾ ಶೆಲ
ವಡಿಯೊಳಿನ್ನಾ ಶಾನಭೋಗರ
ನಡುಮನೆಯ ವೀರಪ್ಪನವರಾ ಮಾತೆ ಲಿಂಗಮ್ಮಾ
ಬಿಡದೆ ಬಹುದಿನದಿಂದೆ ರೋಗ
ಕ್ಕೆಡೆಯೆನಿಸಿ ಬಳಲುತಿರೆ ಗುರುವಿಂ
ಪಡೆಯುತಂ ವಿಮಳ ಪ್ರಸಾದವ ತಂದು ಕೊಡಲದರಿಂ ॥ ೧೬ ॥

ಜನನಿ ಲಿಂಗವ್ವನಿಗೆ ರುಜೆ ಕೆಲ
ದಿನದೊಳೇ ನಿರ್ನಾಮವಾಗುವು
ದೆನುತೆ ನಿಜಸನ್ನಿಧಿಗೆ ಬಂದಿನ್ನಡಿಗೆರಗುತಿರ್ಪಾ
ಮನೆಯುವರನೀಕ್ಷಿಸುತೆ ತಳುವದೆ
ಘನಮಹಿಮನಾ ಗುರುವು ಶಿವನಿಗೆ
ತನುಜೆಯಾದಳು ನಿಮ್ಮ ತಾಯಿಯು ಪೋಗಿರೆಂದೊರೆಯೇ ॥ ೧೭ ॥

ಪಡೆದ ವಿಸ್ಮಯ ಖೇದಗಳೊಳವ
ರಡಿಯಿಡುತ್ತೊಯ್ಯನೆ ಮನೆಗೆ ಬರೆ
ಮೃಡನಡಿಯೊಳಡಗಿರ್ದಳಾಲಿಂಗಮ್ಮನಾ ಗುರುವು
ನುಡಿದ ನುಡಿ ಪುಸಿಯಾಗದೆಂಬುದ
ನುಡಿದುಕೊಳ್ಳುತ್ತಾಗಳೆಲ್ಲರು
ನಡೆಯಿಸಿದರಾ ಜನನಿಗೈದೆ ಸಮಾಧಿಕಾರ್ಯವನು ॥ ೧೮ ॥

ಮತ್ತಮಾ ಶಿಲವಡಿಯ ಶಿವಭ
ಕ್ತೋತ್ತಮರ ಹಸಬಿಯವರಾ ಜಸ
ವೆತ್ತ ಮನೆತನದಲ್ಲಿ ತಾಂ ಶ್ರೀಶೈಲನಾಮವನು
ಪೆತ್ತ ಭಕ್ತಗೆ ರೋಗದಿಂ ಬಾ
ಯೆತ್ತಿ ಮಾತಾಡದವೊಲಾಗಿರೆ
ಹೊತ್ತು ಚಿಂತೆಯ ಬಸವಲಿಂಗಪ್ಪನು ಮಠಕೆ ಬಂದು ॥ ೧೯ ॥

ಶ್ರೀಗುರುವಿನಡಿಗೆರಗಿ ರೋಗದೊ
ಳಾಗಿರುವ ದುಃಸ್ಥಿತಿಯ ನೊರೆದದ
ನೀಗುವಾಶಿಷವೀಯಬೇಕೆನಃಗೆಂದು ಬೇಡುತಿರೆ
ಪೋಗುವನು ಶಿವನಲ್ಲಿಗಿನ್ನಾ
ರೋಗಿಯೈದುದಿನಕ್ಕೆ ಸುಮ್ಮನೆ
ಹೋಗು ಮನೆಗೆಂದಾತನನು ಕಳುಹಿಸಿದನಾ ವಿಭುವು ॥ ೨೦ ॥

ಇಂತು ಶಿವಸಂಕಲ್ಪವಿದ್ದುದ
ತಾಂ ತಿಳಿಸುತಂ ಮೊದಲೆ ನಮ್ಮ
ಭ್ರಾಂತಿಯಂ ಕಳೆಯುವನು ತದ್ಗುರುವೆಂದು ಬೋಧಿಸುತೀ
ಸಂತರಿನ್ನಾ ಬಸವಲಿಂಗನ
ಚಿಂತೆಯನು ಬಿಡಿಸಿದರು ಮೇಣ್ ಶಿವ
ನಂತಿಕವನೊಂದಿದನು ತಾಂ ಶ್ರೀ ಶೈಲನಾಮಕನು ॥ ೨೧ ॥

ಕೆಲರ ರೋಗಾದಿಗಳ ಕಳೆಯುತೆ
ತಿಳಿಸಿ ಕೆಲವರಿಗಾಗು ಹೋಗುಗ
ಳೊಲವಿನಿಂ ನಿಜಲಿಂಗಪೂಜಾದಿಗಳನುರೆಗೈದು
ಬೆಳಗುವಾ ಗುರುಶಾಂತ ಜಂಗಮ
ತಿಲಕನಡಿಯಂ ಪೊರ್ದಿ ಸುಮತಿಯ
ತಳೆಯುತಿರ್ದರು ಭಕ್ತರೊದಗಿದ್ದ ದುರ್ಘಟನೆಗಳೊಳಂ ॥ ೨೨ ॥

ಇಂತಿರುವ ಸಮಯದೊಳು ತದ್ಗುರು
ಶಾಂತ ಶಿವಯೋಗೀಶ್ವರರ ಪದ
ದಂತಿಕಕ್ಕಾ ಮಣಕವಾಡದ ಭಕ್ತರೈತಂದು
ಸಂತಸದೆ ಸಾಷ್ಟಾಂಗವಂದನ
ಮಂ ತಳುವದೆಸಗುತ್ತೆ ನಿಜ ವೃ
ತ್ತಾಂತಮಂ ತಾವೀತೆರದೆ ಬಿನ್ನೈಸತೊಡಗಿದರು ॥ ೨೩ ॥

ಸ್ವಾಮಿಗಳೆ ತನ್ಮಣಕವಾಡ
ಗ್ರಾಮದಮಳಿನದನ್ನದಾನಿ
ಸ್ವಾಮಿಮಠದ ಚರಾಧಿಕಾರವ ತಮ್ಮ ಹಸ್ತದೊಳೀ
ಪ್ರೇಮದಿಂದಂ ಬಸವರಾಜ
ಸ್ವಾಮಿಗಾಗಿಸಲೆಳಸಿರುವೆವಿ
ನ್ನೀ ಮಹತ್ಕಾರ್ಯಕ್ಕೆ ಸಮ್ಮತಿಯೀಯಬೇಕೆಂದು ॥ ೨೪ ॥

ಬೇಡುತಿರಲದಕೊಪ್ಪಿ ಸಂತಸ
ಗೂಡಿ ತದ್ಗುರುವರನು ತಾಂ ದಯ
ಮಾಡಿಸುತ್ತಂ ಮಣಕವಾಡದ ಮಠಕೆ ಸಂಭ್ರಮದಿಂ
ನಾಡ ಗುರುಚರಭಕ್ತರಿದಿರೋಳ್
ನಾಡೆ ಚರಪಟ್ಟಾಧಿಕಾರವ
ನೀಡಿದನು ತದ್ಬಸವರಾಜ ಸ್ವಾಮಿಗಾ ಬಳಿಕೆ ॥ ೨೫ ॥

ಈ ಮಠದ ನವಗುರುಗಳಾದೀ
ಸ್ವಾಮಿಗಳೊಳಿಟ್ಟಧಿಕತರದ
ಪ್ರೇಮಮಂ ಸಲೆ ನಡೆದುಕೊಂಡೊಡೆ ಸಲಕ ಸಂಪದವು
ಗ್ರಾಮದಲ್ಲಿದರಲ್ಲಿ ಪೆರ್ಚುವು
ದಾ ಮಹಾ ಪೂಜ್ಯಾನ್ನದಾನಿ
ಸ್ವಾಮಿಗಳ ಸತ್ಕೃಪೆಯೊಳೆಂದೊರವರಿಗುರೆ ಕಥಿಸಿ ॥ ೨೬ ॥

ಇತ್ತು ನಲ್ವರಕೆಗಳನೆಲ್ಲರಿ
ಗಿತ್ತು ನವಚರಪತಿಗೆ ಮುದವಂ
ಸ್ತುತ್ಯತದ್ಗುರುವಾಗವಿಸಿ ಶಿಲವಡಿಗೆ ಮೊದಲಂತೆ
ಭೃತ್ಯ ಭಾವದ ಭಕ್ತರಿಗೆ ನಲಿ
ಯುತ್ತೆ ಸದ್ಬೋಧೆಗಳ ಮಾಡುವ
ವೃತ್ತಿಯೊಳ್ ತೊಡಗಿದನು ನಿಜಮಠದಲ್ಲಿ ಸಂತತವು ॥ ೨೭ ॥

ಅಂದು ಶಂಕರದೇವರೈಸಲೆ
ನಂದಿವೇರಿಯ ಮಠದ ಮೇಣ್
ಚೆಲುವಿಂದೆಸೆವ ಕಪ್ಪತದ ಗುಡ್ಡದಮಠದ ವಿಭುತೆಯನು
ಒಂದಿ ತಮ್ಮಾಚರಣೆಯಿಂ ನಲ
ವೊಂದಿಸುತ್ತಿರೆ ಜನತೆಗಾ ಗುಣ
ವೃಂದರಿಗೆ ಜಂಗಮಸುಪಟ್ಟವ ಕೊಡುವ ಕೃತಿಗಾಗಿ ॥ ೨೮ ॥

ವಿರತಿಧನ ಗುರುಃಶಾಂತ ಯೋಗೀ
ಶ್ವರನ ಕರೆವುದಕಖಿಳ ಭಕ್ತರು
ಹರಿಸದಿಂ ಶಿಲವಡಿಗೆ ಬಂದಾ ಪೂಜ್ಯ ಗುರುವರನಾ
ಚರಣಕೊಲವಿಂದೆರಗಿ ಕೈಕೊಂ
ಡಿರುವ ಕಜ್ಜವನೊರೆಯಲದಕಾ
ಪರಮ ಕರುಣಾಮೂರ್ತಿ ಬರಲೊಪ್ಪಿದನು ನಲವಾಂತು ॥ ೨೯ ॥

ನಂದಿವೇರಿಯ ಗುಡ್ಡದಾ ಮಠ
ಕಂದು ತದ್ಭಕ್ತೋತ್ತಮರು ಕರೆ
ತಂದರತಿ ಸಂಭ್ರಮದೊಳಾ ಗುರುಶಾಂತ ಚರಪತಿಯಾ
ಮುಂದುವರಿದುದು ನಾಡನಾಲ್ದೆಸೆ
ಯಿಂದೆ ಬರುವರ ಸಂಖ್ಯೆ ಪರಮಾ
ನಂದಕರತತ್ಪಟ್ಟಬಂಧನದುತ್ಸವಕ್ಕಾಗಿ ॥ ೩೦ ॥

ಬಳಿಕೆ ಶುಭವಾದ್ಯಂಗಳೈಸಲೆ
ಮೊಳಗುತಿರೆ ದುರ್ಗದ ಜಗದ್ಗುರು
ತಿಲಕರಾ ಜಯದೇವವಿಭುಗಳ ನೇತೃತೆಯನಾಂತು
ಶಲವಡಿಯ ಗುರು ತನ್ನಿದಿರೊಳೇ
ಕುಳಿತ ಶಂಕರದೇವರಿಗೆ ವಿಧಿ
ಗಳನಗಲದಂತಾಗಿಸುತೆ ಚರವಿಮಲ ಸಂಸ್ಕೃತಿಯಾ ॥ ೩೧ ॥

ಕೊಟ್ಟು ಮೇಣ್ ತಾಂ ಚಿದುಪದೇಶವ
ಕಟ್ಟಿ ಶಂಕರದೇವರಿಗೆ ಚರ
ಪಟ್ಟಮಂ ಬಳಿಕಾಸಮುತ್ಸವದಲ್ಲಿ ಸರ್ವರಿಗೆ
ಕೊಟ್ಟು ಮಧುರತರ ಪ್ರಸಾದವ
ಪುಟ್ಟಿಸಿದರುರುತೃಪ್ತಿಯಂ ಮನ
ಮುಟ್ಟಿ ಸೇವೆಯುಗೈವ ತನ್ಮಠಭಕ್ತಪುಂಗವರು ॥ ೩೨ ॥

ಇಂತು ತತ್ಕೃತಿಯಂ ಮುಗಿಸಿ ಸಮ
ನಂತರದೆ ಗುರುಶಾಂತಚರಪತಿ
ಯಾಂತು ಜಯದೇವ ಪ್ರಭುಗಳಾಶಿಷವ ತಾಂಬಳಿಕೆ
ಸಂತಸದ ನವಚರ ಪತಿತ್ವವ
ನಾಂತ ಪೂಜ್ಯರಿಗಂ ಸುಭಕ್ತರ
ಸಂತತಿಗೆ ಸಲೆಪರಸಿ ಪೊರಮಟ್ಟನು ನಿಜಸ್ಥಲಕೆ ॥ ೩೩ ॥

ಭಸಿತವಮಂ ಸುಸ್ಫಟಿಕಲಿಂಗವ
ನೆಸಗುತೋರ್ವಗೆ ವೈಷ್ಣವಗೆ ತಾ
ನೊಸೆದು ಕೊಟ್ಟನ್ನವನ ಮೇಣ್ ಶಿವಭಕ್ತನಂಗೈದಾ
ಅಸಮಮಹಿಮೆಯೊಳೆಸೆದ ಪಂಡಿತ
ವಿಸರನುತನಾ ಸಿದ್ಧಲಿಂಗನ
ಲಸಿತಪದಧೂಳಿಯದು ನಮ್ಮಗೆ ಭಸಿತವಾಗಿರಲಿ ॥ ೩೪ ॥

ಪರಮಪಾವನ ಚರಿತವಿದನಾ
ದರದೆ ಪಠಿಸುವ ಕಥಿಸುವಾಲಿಸು
ವರಿಗೆ ತದ್ಗುರುಶಾಂತ ಶಿವಯೋಗೀಶ್ವರನು ಕೃಪೆಯಿಂ
ಚಿರತರಾಯುರರೋಗ ಭಾಗ್ಯವ
ಕರುಣಿಸುವುದಲ್ಲದೆಯೆ ಗುರುಹರ
ಚರರನುಗ್ರಹವಾಗಿಸುವನನವರತವಿದು ನಿಜವು ॥ ೩೫ ॥

೧೨ನೆಯ ಸಂಧಿ ಸಂಪೂರ್ಣಂ ಪದ್ಯಗಳು ೪೬೬ ಕ್ಕೆ ಮಂಗಳಂ

ಶ್ರೀ ಗುರುಶಾಂತ ಶಿವಯೋಗೀಶ್ವರಃ ಪ್ರಸೀದತು

ಹದಿಮೂರನೆಯ ಸಂಧಿ

ಸೂಚನೆ.— ಮತ್ತಮಾ ಗುರುಶಾಂತ ಚರವರ
ರಿತ್ತರುಭಯಸುದೇಶಿಕರಿಗುರೆ
ಪೆತ್ತ ಮುದದಿಂ ಜಂಗಮದ ಪಟ್ಟಾಧಿಕಾರವನು ‖

ಆವ ಗುರುವಿನ ಚಿದುಪದೇಶದೆ
ಜೀವ ಭಾವವ ತೊರೆದು ಜಂಗಮ
ದೇವರಾಗೆಸೆಯುವರೊ ಕೆಲರು ವಿರಕ್ತ ಮಠಗಳೊಳು
ಆ ವಿನುತಗುರುಶಾಂತ ವಿರತಿ [illegible]
ಶ್ರೀ ವಿಭುವ ಜಾನಿಸುವ ನಿರ್ಮಳ [illegible]
ಭಾವವಿರಲೆಮ್ಮಗಳ ಜೀವನಕಾಲದೊಳು ಸತತಂ [illegible] ‖ ೧ ‖

ಬೈಗಿನೊಳು ದಿನವೊಂದರೊಳು ಶಿವ
ಯೋಗಿ ಗುರುಶಾಂತೇಶ್ವರನು ಸೊಗ
ಸಾಗಿ ನಿಜಭಕ್ತರ್ಗೆ ಲಿಂಗಾಂಗಗಳ ಸಮರಸದಾ
ಯೋಗದನುಭವವೊರೆಯುತಿರಲನು
ರಾಗದಿಂದದ ಕೇಳ್ವವರು ಸುಖ
ಸಾಗರದೊಳೀಸಾಡುತಿರ್ದರು ತತ್ಸಮಯದಲ್ಲಿ ॥ ೨ ॥

ಕಂಜಬಂಧುವು ಪಶ್ಚಿಮಾಚಲ
ಕುಂಜರಾಗ್ರವ ನೇರುತಿರಲಾ
ಸಂಜೆಗೆಂಪುರೆ ರಂಜಿಸಿದುದಿನ್ನಟ್ಟಹಾಸದೊಳು
ಸಂಜೆಯೊಳ್ ತಾಂ ಕಾಲನೆಂಬಾ
ನಂಜುಗೊರಲನು ಕುಣಿಯಲುಟ್ಟಾ
ಪಿಂಜರದ ಬಣ್ಣದ ವಸನದುರುಕಾಂತಿಯೆಂಬಂತೆ ॥ ೩ ॥

ಕುವಲಯಾಪ್ತನೊಳುರುವಿರೋಧವ
ತವೆ ಪಡೆದು ಕುವಲಯಕೆ ನೋವೀ
ಯುವ ಸುತೀಕ್ಷ್ಣಕರಂಗಳಾಂತುದರಿಂದೆ ತನಗಿನ್ನು
ಕವಿದ ದುರ್ಯಶವುಂ ಸಹಿಸದೆಯೆ
ರವಿಯು ನೀರೊಳ್ ಬಿದ್ದಳಿದನೆಂ
ಬವೊಲವನು ಮುಳುಗಿದನು ಪಶ್ಚಿಮದಂಬುರಾಶಿಯೊಳು ॥ ೪ ॥

ಬಗೆವೊಡಾಗಳೆ ಸಮ್ಮುದದ ಕಿರು
ನಗೆಯು ಮೂಡಿತು ಕುವಲಯಕ್ಕೀ
ಬಗೆಯ ಶತ್ರುವು ಮಡಿದೊಡೊಗೆಯದೆ ನಗೆಯುದೆಂಬಂತೇ
ಪಗೆಯೆನಿಸಿ ರವಿಗವನು ಗತಿಸಿದ
ಬಗೆಯರಿದ ತಮವೆಂಬದನುಜಂ
ತೆಗೆಯದಾಶ್ರಮಿಸಿದನು ತತ್ಕುವಲಯಮನೇ ನೋಡಿವೇಂ ॥ ೫ ॥

ನಿಜಪತಿಯುಂ ಶಶಿ ಬರುವನೆಂದೇ
ಸೃಜಿತಮಾದಾನಂದದಿಂದಂ
ರಜನಿಯಂಗನೆಯುಟ್ಟ ಕತ್ತಲೆಗಪ್ಪು ಸೀರೆಯೋಳು
ರಜತದಾ ಜರತಾರದಿಂದಂ
ಸೃಜಿಸಿರುವ ಪೊಸಬಗೆಯ ಪೂಗಳೆ
ನಿಜವಿವೆಂಬವೊಲಾಗಸದೆ ಮೂಡಿರಲು ತಾರೆಗಳು ॥ ೬ ॥

ಪೊದೆದು ರಜನೀಕಾಂತೆ ತಾನರ
ಳಿದ ಸುಕುಮುದಾಕ್ಷಿಯೊಳು ನೋಡುವ
ಮುದದ ಸಮಯದೊಳಾಗಮಿಸಿದಾ ಚಂದ್ರಮನು ತನ್ನಾ
ಸುದತಿಯೆನಿಸಿದ ನಿಶೆಯ ಸಲೆನೂಂ
ಕಿದನು ಕರದಿಂಪಿಡಿದು ತಾಂ ಪ
ರ್ಬಿದ ಸುಚಂದ್ರಿಕೆಯೆಂಬ ಪರಮಾನಂದ ಶರಧಿಯೊಳು ॥ ೭ ॥

ಆದ ಮಾವರಿಸಿರ್ದ ಜೊನ್ನದ
ಮೋದಕರದಾ ಕಾಲದೊಳೆ ಗೂ
ಳೇದಗುಡ್ಡದ ಭಕ್ತರಾಗಮಿಸುತ್ತೆ ಶಲವಡಿಗೆ
ಆದಯಾಘನ ಯೋಗಿವರನ ಶು
ಭೋದಯದ ದರ್ಶನವಗೈದಿ
ನ್ನಾದರದೆ ತತ್ಪಾದಪದ್ಮಕೆ ಮಣಿಯುತಾ ಬಳಿಕೆ ॥ ೮ ॥

ಪರಮಪೂಜ್ಯನೆ ನಮ್ಮ ನಗರದ
ವರಮಠಕ್ಕಧಿಪತಿಗಳಾಗಿರ
ಲರುಹರೆನಿಸಿದ ನೀಲಕಂಠಸ ಮಾಖ್ಯದೇಶಿಕರಾ
ಚರಸುಪಟ್ಟವ ತಮ್ಮ ನಿರ್ಮಲ
ಕರದೊಳಾಗಿಸ ಲೆಳಸಿ ಬಂದೆವು
ಕರುಣದಿಂ ಸಮ್ಮತಿಸಬೇಕೆಂದವರು ಬಿನ್ನೈಸೇ ॥ ೯ ॥

ಒಪ್ಪುತದಕಾ ಗುರುವು ಬಂದಾ
ಕಪ್ಪಗೊರಲನ ಭಕ್ತರಿಗೆ ಮನ
ವೊಪ್ಪುವಂತಾಗಿಸುತಮುವರುಪಚಾರಮಂ ಮಠದೊಳ್
ಅಪ್ಪಿದಾನಂದದೊಳು ತನ್ನೊಡ
ನಿಪ್ಪ ತಜ್ಜನರೊಡನೆ ಭಕ್ತಿಯೊ
ಳೊಪ್ಪುವಾ ಗೂಳೇದಗುಡ್ಡಕೆಮುಱುವಗಲೊಳೊಲವಿಂ ॥ ೧೦ ॥

ಬಂದ ತದ್ಗುರುವರನ ಪುರದವ
ರಂದು ಸಂಭ್ರಮ ಸಂಗತೋತ್ಸವ
ದಿಂದೆ ಕರೆತಂದಿರಿಸಿದರು ತನ್ಮಠದೊಳಾ ಬಳಿಕೆ
ಸುಂದರತೆ ನೆಲೆಗೊಳ್ವವೋಲ್ ಪಲ
ವಂದದಿಂದೂರಮಳ ಭಕ್ತರ
ವೃಂದವೈಸಲೆಸಿಂಗರಿಸೆ ತಮ್ಮಠ ಸಭಾಂಗಣಮಂ ॥ ೧೧ ॥

ನವಿಲುಗುಂದದ ಗವಿಮಠದ ಗುಣ
ನಿವಹಸಂಗತ ಬಸವಲಿಂಗ
ಪ್ರವಿಲಸಿತ ದೇಶಿಕರ ನೇತೃತ್ವವನು ತಳೆದಿರ್ಪಾ
ಸುವಿಮಲರು ಪುರದವರು ಭಕ್ತಿಯ
ಭವನವೆನಿಸಿದ ಮಠದೊಳಧಿಕೋ
ತ್ಸವದೊಳಿಂತಾಗಿಸಿದರಾ ಚರಪಟ್ಟವಿಧಿಗಳನು ॥ ೧೨ ॥

ಆಗುತಿರೆ ತೂರ್ಯಸ್ವನಮುದಿ
ನ್ನಾಗಮಜ್ಞರು ಶುಭದಮಜ್ಜನ
ವಾಗಿಸುತ್ತಂ ನೀಲಕಂಠ ಸುದೇಶಿಕರಿಗವರಂ
ಯೋಗಿವರಗುರುಶಾಂತ ಪೂಜ್ಯ
ಶ್ರೀಗಳಡಿಗೆರಗಿಸುತೆ ಸಂಮುಖ
ವಾಗಿ ಕುಳ್ಳಿರಿಸುತ್ತೆ ಮೇಣ್ ಚರಸಂಸ್ಕಾರವೆಲ್ಲವನು ॥ ೧೩ ॥

ಎಸಗೆ ವಿಧಿಯಿಂಚರಸುತೇಜದೊ
ಳೆಸೆಯುವಾ ದೇಶಿಕನಿಗೊಲವಿಂ
ದೆಸಗಿ ಗುರುಃಶಾಂತೇಶ್ವರಂತಾಂಚಿದುಪದೇಶವನು
ಒಸೆದು ಚರಪಟ್ಟವನು ಕಟ್ಟಿದ
ನಸಮುಮುದದಿಂ ಗುರುಚರಾದಿಗ
ಳೆಸಗುವಾ ಶಿವಭಕ್ತಿ ಗೀತಾರವದ ಮಧ್ಯದೊಳು || ೧೪ ||

ಆಗೆ ಗಣಸಂತೃಪ್ತಿ ಮಠದ
ಲ್ಲಾಗೆ ತನ್ನವಚರಪತಿಗೆ ಸೊಗ
ಸಾಗಿರುವ ಪಾಲಿಕೆಯೊಳುತ್ಸವವೂರಪಥಗಳೊಳು
ಆ ಗುರುವ ಪೀಠಾಧಿರೋಹಣ
ವಾಗಿಸುತೆ ತತ್ಪದಕೆ ನೀಡುವು
ದಾಗೆ ಕಾಣಿಕೆಗಳನು ನೆರೆದವರೆಸಗೆ ಮಂಗಳವಾ || ೧೫ ||

ಇಂತು ಕೃತಿಯು ಸಮಾಪ್ತಿಗೈಸಿದದ
ನಂತರದೊಳೆಲ್ಲರಿಗೆ ವರಗುರು
ಶಾಂತಶಿವಯೋಗೀಶ್ವರನು ನಲ್ವರಕೆಗಳನಿತ್ತು
ಸಂತಯಿಸಲವರುಗಳು ಬೀಳ್ಗೊಡೆ
ಚಿಂತಿತಾರ್ಥಪ್ರದನು ತದ್ಗುರು
ವಾಂತನಾ ಶಿಲವಡಿಯ ನಿಜಮಠವಂ ಮಹಾಮುದದೇ || ೧೬ ||

ಆಡಲಿನ್ನೇಂ ನವಿಲುಗುಂದದ
ನಾಡ ಗುರುಚರಭಕ್ತಮುಖ್ಯರು
ಕೂಡುತಿನ್ನಾ ಬಸವಲಿಂಗ ಶ್ರೀಗಳಿಗೆ ಮಠದೋಳ್
ನಾಡೆ ಚರಪಟ್ಟಾಧಿಕಾರವ
ಮಾಡಬೇಕೆಂದಧಿಕ ಮುದದಿಂ
ಮಾಡಿದರು ತಾವೊಂದು ಶುಭಕರದಿನದ ನಿರ್ಣಯವಾ || ೧೭ ||

ಬಳಿಕೆ ವಿದ್ಯಾವಿನಯ ವರ್ತನ
ಕಲಿತರೆನಿಸಿದ ಪೆರ್ಮೆಯುಂ ಸಲೆ
ಗಳಿಸಿರುವ ತದ್ದೇಶಿಕರಿಗೆ ಚರಾಧಿಕಾರವನು
ಶೆಲವಡಿಯ ಗುರುಶಾಂತಚರಕುಲ
ತಿಲಕರಿಂದಾಗಿಸಲು ನಿಶ್ಚಿತ
ಗೊಳಿಸಿ ನಾಡಪ್ರಮುಖರಾ ಗುರುವರಮಠಕೆ ಬಂದು ॥ ೧೮ ॥

ಪರಮ ಪೂಜ್ಯ ಸ್ವಾಮಿಗಳ ಸ
ಚ್ಚರಣಕಮಲಕ್ಕೆರಗಿ ನಿರ್ಣಯಿ
ಸಿರುವ ತಮ್ಮಿಚ್ಛಿತವಸಲೆ ಬಿತ್ತರಿಸಲದ ಕೇಳಿ
ಹರಿಸದಿಂದದಕೊಪ್ಪಿ ಮೇಣ್ ಬಂ
ದಿರುವ ತದ್ಭಕ್ತೋತ್ತಮರನು
ಪಚರಿಪಕೃತಿಯಾಗಿಸಿದರಾ ಶಿವಯೋಗಿಪುಂಗವರು ॥ ೧೯ ॥

ಮರುವಗಲೊಳಾ ಶೆಲವಡಿಯ ಸ
ದ್ಗುರುವನೈಸಲೆ ನವಿಲುಗುಂದಕೆ
ಕರೆದು ತಂದುತ್ಸವದೊಳಾ ವರಗವಿಮಠದೊಳಿರಿಸಿ
ಹರಿಸದಿಂತಚ್ಚರಣ ಕಮಲ
ಕ್ಕೆರಗಿ ತತ್ಪುರದೆಲ್ಲರುಂ ನ
ಲ್ವರಕೆಗಳ ನುರೆಪಡೆದು ಧನ್ಯತೆಯೊಂದುತಾ ಬಳಿಕೆ ॥ ೨೦ ॥

ವರಮಠದೊಳೆಂತಂತೆ ತದ್ಭ
ಕ್ತರ ಗೃಹಂಗಳೊಳಲ್ಲದೆ ಯೆತ
ತ್ಪುರದ ಮುಖ್ಯಪಥಂಗಳೋಳ್ ಶೃಂಗಾರ ರಚನೆಯದು
ಸೆರೆಹಿಡಿಯೆ ನೋಡುವರ ದಿಟ್ಟಿಯ
ಹರಿಸದಿಂದೆ ತದುತ್ಸವಕ್ಕೈ
ತರುವ ನಾಡಸಮಸ್ತ ಗುರುಚರಭಕ್ತ ಸಂಖ್ಯೆಯದು ॥ ೨೧ ॥

ಹಿರಿದೆನಿಸೆ ಕವಿ ವಿಬುಧಗಾಯಕ
ಸರಸಗಮಕಿಗಳುಂ ನೆರೆಯೆ ಬಂ
ದಿರೆನಲಿದು ಶಿವಯೋಗಮಂದಿರಸಾಧಕರು ಬಳಿಕೆ
ಚರಸಮಧಿಕಾರ ಪ್ರದಾನದ
ಸುರುಚಿರದ ಮಂಟಪಕೆ ಶಿಲವಡಿ
ಗುರುವನುರೆ ಕರೆ ತಂದು ಪೀಠದೊಳ್ಳಿದೆ ಕುಳ್ಳಿರಿಸಿ || ೨೨ ||

ಪೊಸತೆನಿಸೆ ಶುಭವಾದ್ಯನಿನದಂ
ಬಸವಲಿಂಗಸುದೇಶಿಕಂಗಿ
ನ್ನೊಸೆದು ಮಜ್ಜನವಾಗಿಸುತೆ ಮಂತ್ರಜ್ಞರಾ ಬಳಿಕೆ
ಮಿಸುಪ ಗುರುಶಾಂತೇಶ್ವರನ ಪದ
ಬಿಸರುಹಕ್ಕೆರಗಿಸುತೆ ಮೇಣ್ ಮುಂ
ದೆಸೆಯೊಳ್ಳೈಸಲೆ ಕುಳ್ಳಿರಿಸಿದಾ ಗುಣವಿಭೂಷಣಗೆ || ೨೩ ||

ಜಂಗಮದ ಸಂಸ್ಕಾರಗಳನುರೆ
ಸಾಂಗವಿಧಿಯಿಂ ಮುಗಿಸೆ ತಚ್ಚರ
ಲಿಂಗತೇಜದೆ ಬಸವಲಿಂಗ ಸಮಾಖ್ಯದೇಶಿಕನು
ಕಂಗೊಳಿಸುತಂ ನೋಳ್ಪ ಭಕ್ತರ
ಕಂಗಳಿಂದಾನಂದವಾರಿ ಕ
ಣಂಗಳುದುರಿಸುತಿರ್ದನಾ ಪಾವನದ ಸಮಯದೊಳು || ೨೪ ||

ಇಟ್ಟು ವರಕರುಣಾರಸಾರ್ದ್ರದ
ದಿಟ್ಟಿಯನು ಗುರುಶಾಂತ ಯೋಗಿಯು
ಕೊಟ್ಟು ಜಂಗಮಸಮುಚಿತ ಜ್ಞಾನೋಪದೇಶವನು
ಕೊಟ್ಟು ಮೇಣ್ ಶುಭದಾಶಿಷಂಗಳ
ದಿಟ್ಟಿ ಮೂರುಳ್ಳವನ ನೆನೆಯುತೆ
ಕಟ್ಟಿದನು ಚರಪಟ್ಟವನು ತದ್ದೇಶಿಕೋತ್ತಮಗೆ || ೨೫ ||

ಬಳಿಕೆ ಬಹು ಸಂಭ್ರಮದೊಳೆಲ್ಲರು
ತೊಳಪ ತನ್ನವಚರಪತಿಯ ಸುವು
ಕಲಿತ ತಿರ್ಯಕ್ಪಾಲಿಕೆಯೊಳೊಲವಿಂದೆ ಕುಳ್ಳಿರಿಸಿ
ಪೊಳಲ ಬೀದಿಗಳಲ್ಲಿ ತನ್ಮಂ
ಗಳಮಹೋತ್ಸವವಾಗಿಸಿದರುರೆ
ಮೊಳಗೆ ಶುಭವಾದ್ಯಗಳು ಮಂತ್ರಸುಘೋಷಬೊಡಗೂಡಿ || ೨೬ ||

ಇಕ್ಕೆಲದೆ ನೆರದಿರ್ದ ಜನಗಳು
ಮಿಕ್ಕ ಭಕ್ತಿಯೊಳಾ ಗುರುವನೆವೆ
ಯಿಕ್ಕದೀಕ್ಷಿಸಿ ಕೈಮುಗಿಯುತಿರೆ ಪರಮಸಂಭ್ರಮವಾ
ತೆಕ್ಕೆಗೊಂಡ ಮಹೋತ್ಸವವಮದು ಮ
ಠಕ್ಕೆ ಬಂದುದು ಮೊದಲೆ ವಿರಚಿಸಿ
ದಕ್ಕರೆಯ ವರಶೂನ್ಯ ಪೀಠದ ಬಳಿಗೆ ತದ್ಗುರುವಾ || ೨೭ ||

ಕರೆದು ತಂದದರಲ್ಲಿ ಸಲೆ ಕು
ಳ್ಳಿರಿಸೆ ಸಭೆಗೈತಂದ ಕವಿಬುಧ
ವರರ ಭಾಷಣಗಳು ಸುಗಾಯಕವಚನಗಾಯನವುಂ
ನೆರೆದವರ ಕರ್ಣದೊಳಗಮೃತವ
ಸುರಿಸೆ ಬಳಿಕಾ ಬಸವಲಿಂಗಸು
ಚರವರೇಣ್ಯನು ಕೊಟ್ಟವರ ಸಂದೇಶವೇನೆನಲು || ೨೮ ||

ದೋಷಹರ ಗುರುಶಾಂತ ಶಿವಯೋ
ಗೀಶರಾಶೀರ್ವಾದ ಬಲದಿಂ
ದೇಶಗತ ಸದ್ಭಕ್ತ ಜನತೋದ್ಧರಣ ಸೇವೆಯೆ ತಾಂ
ಈಶ ಪೂಜೆಯದೆಂಬ ದೃಢ ವಿ
ಶ್ವಾಸವೆನ್ನಲ್ಲಿರ್ಪುದದನೇ
ಪೋಷಿಸುವ ಸದ್ವ್ರತವೆ ಜಂಗಮಕಾಯಕಂ ನಿಸದಂ || ೨೯ ||

ಎಂಬುದಂ ನಾಂ ನಂಬಿ ನಡೆಯುವೆ
ನೆಂಬ ಸಂದೇಶವನು ತಾಂ ಬಗೆ
ದುಂಬಿದೊಲವಿಂದಿತ್ತ ನಾ ಗುರುದೇವನದ ಕೇಳಿ
ತುಂಬಿ ಕಣ್ಣೊಳ್ ಸುಖಜಲವು ಕರ
ದಿಂ ಬಿಡದೆ ತಾಡನವ ನೆಸಗಿದ
ರಿಂಬಿರದವೋಲ್ ಸಭೆಯೊಳೈಸಲೆ ತುಂಬಿರುವ ಜನರು ॥ ೩೦ ॥

ಮುಗಿಯೆ ಗುರುಕಾಣಿಕೆಯ ಸಲ್ಲಿಸು
ವಗಣಿತೋತ್ಸಾಹದ ಕೃತಿಯು ಮೇಣ್
ಮುಗಿಯೆ ಕವಿಬುಧ ಮುಖ್ಯರಿಗೆ ಬಹುಮಾನವಿತರಣವು
ಮುಗಿಯೆ ಮಠಕಾಗಮಿಸಿದೆಲ್ಲಾ
ಬಗೆಯ ಜನಕುಣಬಡಿಸುವುದು ತಾಂ
ಮುಗಿದುದಿದು ಪೊಸತೆಂಬ ಮಾಳ್ಕೆಯೊಳಾ ಮಹೋತ್ಸವವು ॥ ೩೧ ॥

ಬಳಿಕ ಗುರುಶಾಂತೇಶ ಕೃಪೆಯಂ
ತಳೆದ ಗವಿಮಠದೊಡೆಯರವರಿ
ನ್ನೊಲವಿನಿಂದೆ ಸಮಾಜದ ಪ್ರತಿಯೊಂದು ಕಾರ್ಯದೊಳು
ಸಲೆ ತೊಡಗಿಗೈದಾ ಮಹತ್ಕೃತಿ
ಗಳನಿರೀಕ್ಷಿಸಿ ಭಕ್ತಜನಗಳ
ಬಳಗವಾ ಸ್ವಾಮಿಗಳನುಜ್ಞೆಗೆ ಸಿದ್ಧವೆನಿಸಿದುದು ॥ ೩೨ ॥

ತೊಳಪ ಬಾಗಲಕೋಟೆಯೋಳ್ ನೆಲೆ
ಗೊಳಿಸಿ ವಿದ್ಯಾವರ್ಧಕಾಖ್ಯೆಯ
ತಳೆದ ಸಂಘವನದಕೆ ತಾವಧ್ಯಕ್ಷರಾಗಿರ್ದು
ನಲವಿನಿಂ ಬಸವೇಶ್ವರ ಕಲಾ
ಕಲಿತ ಶಾಲೆಯನೊಂದ ಮತ್ತಾ
ಪೊಳಲೊಳೇ ಸಂಸ್ಥಾಪಿಸಿದರಾ ಪೂಜ್ಯ ಗುರುವರರು ॥ ೩೩ ॥

ಆ ನವಿಲಗುಂದದೊಳು ವಿದ್ಯಾ
ದಾನಸಮಿತಿಯು ಶಾಲೆಯಾಗಿಸಿ
ಭೂನುತರು ತಾವೆನಿಸಿ ಮೇಣ್ ಶಿವಯೋಗಮಂದಿರದಾ
ತಾಣದೆಲ್ಲಾ ಧರ್ಮ ಕೃತಿಯ ನಿ
ಜಾನುಭವದಿಂ ಮಾಡಿಸುವ ಸ
ನ್ಮಾನಿತೋಪಾಧ್ಯಕ್ಷ ಪದವಿಯನಾಂತಿರುವರವರು ॥ ೩೪ ॥

ಸಾರತರ ಮಾದಖಿಲಭಾರತ
ವೀರಶೈವ ಮಹಾಸಭೆಯ ಸುವಿ
ಚಾರದಾ ಹದಿನೇಳನೆಯ ಸಮ್ಮೇಳನದ ಜನರಾ
ಭೂರಿಮುದದ ಸ್ವಾಗತವ ನೆರ
ವೇರಿಪಧ್ಯಕ್ಷತೆಯನೊಂದುತೆ
ವೀರಶೈವರಿಗೆಲ್ಲರಿಗೆ ಪರಿಪೂಜ್ಯರೆನಿಸಿದರು ॥ ೩೫ ॥

ಪ್ರತಿಸುವತ್ಸರದಲ್ಲಿ ಮಠದೊಳ್
ನುತಚರಿತರಾ ಸ್ವಾಮಿಗಳು ವಿ
ಶ್ರುತ ಶಿವಾನುಭವಾಧಿವೇಶನವಾಗಿಸುತೆ ಮತ್ತೆ
ಮತಿಯುತರನಾಹ್ವಾನಿಸುತೆ ಬಹು
ಮತಸುಧರ್ಮವಿಚಾರಕಥನಾ
ನ್ವಿತ ಸಭೆಯ ನಡೆಯಿಸುವುದಲ್ಲದೆ ಕೃಷಿಕವರ್ತಕರೇ ॥ ೩೬ ॥

ಆದಿಯಾದವರೇಳ್ಗೆಯೊಂದುವ
ಹಾದಿಯಂಬೋಧಿಸುವ ಸಭೆಗಳ
ನಾ ದಯಾಘನರೆಸಗಿ ಯೋಗ್ಯತೆಯ ಪ್ರಶಸ್ತಿಗಳಾ
ಆದರದೆ ವಿಬುಧರಿಗೆ ಧನವಸ
ನಾದಿಗಳೊಳಾಶೀರ್ವದಿಸುತಂ
ಮೇದಿನೀಸ್ತುತಸಚ್ಚರಿತ್ರವ ನಾಂತು ಶೋಭಿಸುತೇ ॥ ೩೭ ॥

ಹಿರಿಯ ವಾಗ್ಮಿಗಳಾಗಿ ಬರೆಯುವ
ಹಿರಿಮೆಯುಳ್ಳವರಾಗಿ ಜನತೋ
ದ್ಧರಣತತ್ಪರರಾಗಿ ಸಾಹಿತ್ಯಜ್ಞವರರಾಗಿ
ನಿರುತವಾತ್ಮಾಚರಣದಿಂ ಗುರು
ಚರರಿಗಾದರ್ಶಕರೆನಿಸಿ ತಾ
ವಿರುವರಾ ಗುರುಶಾಂತ ಶಿವಯೋಗೀಶ್ವರನ ಕೃಪೆಯಿಂ ॥ ೩೮ ॥

ಬಸವಲಿಂಗಸ್ವಾಮಿಗಳು ಮೇ
ಣಸಮ ಮಹಿಮೆಯನಾಗಿಸುತೆ ಶೋ
ಭಿಸುವ ತೋಂಟದ ಸಿದ್ಧಲಿಂಗನೊಳಿಟ್ಟು ನಿಷ್ಠೆಯನು
ಒಸೆದು ತದ್ಗುರುವಿನ ರಥೋತ್ಸವ
ವೆಸಗುಗುಂ ಪ್ರತಿವತ್ಸರದೊಳಾ
ವಿಶದ ಮತಿಯುತ ಪೂಜ್ಯರಾ ಗುರುಭಕ್ತಿಯೇಂ ಘನವೋ ॥ ೩೯ ॥

ಅವರ ಸೇವಾವ್ರತವು ತನ್ನಯ
ಭವದ ರುಜೆಗೌಷಧವು ದಿಟವೆಂ
ಬುವ ಸುನಿಷ್ಠೆಯನಾಂತಿರುವ ಸೊಲಬಯ್ಯನೆಂಬಾತಂ
ಗವಿಮಠದ ನೆಲೆಯಲ್ಲಿ ತಚ್ಚರ
ಥವರ ಕರುಣಾಪಾತ್ರ ನೆನಿಸುತೆ
ಶಿವಸುಖದೆ ನೆಲಸಿರ್ಪುಮುರೆ ಸತಿಸುತರೊಡನೆ ತಳ್ತು ॥ ೪೦ ॥

ತರುಣಿಯೋರ್ವಳು ಕೊಡವು ಕೆರೆಯೋಳ್
ಮರುತನಿಂದಂ ದೂರವಾಂತಿರೆ
ಮರುಗುತಾವ ಮಹಾತ್ಮನಾಣೆಯನಿಟ್ಟು ಸನಿಹಕ್ಕೆ
ಭರದೊಳದು ಬರುವಂತೆಗೈದಳೊ
ವರಮಹಿಮನಾ ಸಿದ್ಧಲಿಂಗನ
ಚರಣಸಂಸ್ಮರಣಮದು ರಕ್ಷಾಮಣಿಯೆನಿಸಲೆಮಗೆ ॥ ೪೧ ॥

ಪರಮ ಪಾವನ ಚರಿತ ವಿದನಾ
ದರದೆ ಪಠಿಸುವ ಕಥಿಸುವಾಲಿಸು
ವರಿಗೆ ತದ್ಗುರುಶಾಂತ ಶಿವಯೋಗೀಶ್ವರನು ಕೃಪೆಯಿಂ
ಚಿರತರಾಯುರರೋಗ ಭಾಗ್ಯವ
ಕರುಣಿಸುವುದಲ್ಲದೆಯೆ ಗುರುಹರ
ಚರರನುಗ್ರವಾಗಿಸುವನನವರತಮಿದು ನಿಜವು ॥ ೪೨ ॥

೧೩ನೆಯ ಸಂಧಿ ಸಂಪೂರ್ಣಂ ಪದ್ಯಗಳು ೫೦೮ಕ್ಕೆ ಮಂಗಳಂ

ಶ್ರೀ ಗುರುಶಾಂತ ಶಿವಯೋಗೀಶ್ವರಃ ಪ್ರಸೀದತು

ಹದಿನಾಲ್ಕನೆಯ ಸಂಧಿ

ಸೂಚನೆ — ಪರತರನ ಗುರುಶಾಂತ ಯೋಗೀ
ಶ್ವರನ ಕೃಪೆಯಿಂ ಕೆಲರ ಭಕ್ತರ
ಕೊರಗಿಸುವ ಕಷ್ಟಗಳು ಮಿಗೆ ಬಯಲಾದವೀತೆರದೆ

ನಿರುಪಮನ ನಿಶ್ಚಲನ ಕರುಣಾ
ಕರನ ಭಕ್ತಹೃದಂಬುರುಹದಿನ
ಕರನ ತದ್ಗುರುಶಾಂತ ಶಿವಯೋಗೀಂದ್ರ ಪುಂಗವನಾ
ಚರಣ ಪಂಕಜ ಮಧುವನೀಂಟು
ತ್ತಿರುವ ಮಧುಕರರಾಗಿ ಬಾಳು
ತ್ತಿರುವ ಸೈಪೆಮಗೀಯಲೆಂದಾ ಗುರುವ ನುತಿಸುವೆವು ॥ ೧ ॥

ಆ ಲಸಿತ ಶಿಲವಡಿಯೊಳಿನ್ನೊ ಶಿ
ರೋಳದಾ ಚೆನ್ನಪ್ಪನೆಂಬ ಸು
ಶೀಲನಿಗೆ ವಿಷಮಜ್ವರವು ಹದಿನೈದುದಿನದಿಂದೆ
ಪೇಳಲೇಂ ಹಾಸಿಗೆಯ ಹಿಡಿಸುತೆ
ಗೋಳನೊದಗಿಸುತನ್ನ ನೀರಿನ
ಮೇಲೆ ಬಯಕೆಯನಾಗಿಸದೆಯಾತನನು ಕಾಡುತಿರೇ ॥ ೨ ॥

ಬಂದು ತದ್ಬಂಧುಗಳು ಗುರುಪದ
ವೊಂದಿ ವಂದಿಸುತವನಿಗಾದುದ
ನೊಂದ ಬಿಡದಂತುಸುರಲಾ ಕರುಣಾಳು ನಿಜಮಠಕೆ
ಅಂದು ಕರೆಯಿಸಿ ರೋಗಿಯನು ದಿನ
ವೊಂದು ತನ್ನಲ್ಲಿರಿಸಿಕೊಂಡೊಲ
ವಿಂದೆ ವರತೀರ್ಥ ಪ್ರಸಾದಗಳೀಯಲಾತನಿಗೆ ॥ ೩ ॥

ಬಂದ ವಿಷಮಜ್ವರವು ಬಿಟ್ಟುದ
ರಿಂದೆ ಚೆನ್ನಪ್ಪನು ಬಳಿಕೆ ತಾಂ
ನೊಂದ ಮನದಿಂ ಸ್ವಾಮಿ, ನನಗೈತಂದ ಬೇನೆಯೊಳು
ಒಂದೆ ಮರಣವ ನೆಟ್ಟಗಿತ್ತಾ
ನೊಂದದೆಯೆ ಮಕ್ಕಳನು ಬಾಳ್ವುದ
ರಿಂದೆ ಫಲವೇನೆಂದು ತತ್ಪದ ಕೆರಗಲದ ತಿಳಿದು ॥ ೪ ॥

ಒಂದು ಹೋಗಿದೆ ಮೂರುಮಕ್ಕಳು
ಮುಂದೆ ನಿನಗಾಗುವರು ದುಃಖವ
ನೊಂದದಿರು ಪೋಗೆಂದು ಪರಕೆಯನಿತ್ತನಾ ಗುರುವು
ಅಂದು ಕೆಲದಿನಕಾ ಸುಭಕ್ತನು
ನಂದನರ ಮೂವರ ಪಡೆಯುತಾ
ನಂದದಿಂದಿರತೊಡಗಿದನು ತಜ್ಜರವರನ ಕೃಪೆಯಿಂ ॥ ೫ ॥

ಅಪೊಳಲೊಳಿನ್ನೊಮ್ಮೆ ಬಂದು ಸಿ
ರೀಫನವರ ಹುಸೇನ ಸಾಬನು
ಪಾಪ ಹರಗುರು ಸನ್ನಿಧಿಗೆ ನಿಜಸತಿಯನೆರಗಿಸುತೇ
ತಾಪಸಸ್ತುತದೇವನೇ ಬಹು
ತಾಪದಾಯಕ ಭೂತವಿವಳೋಳ್
ವ್ಯಾಪಿಸಿರುವುದು ಯಂತ್ರ ಮಂತ್ರಾದಿಗಳಿಗಿದು ಬಿಡದು ॥ ೬ ॥

ಕಡೆಗೆ ನಿಮ್ಮಡಿಯೊಂದಿದೆನು ನಾಂ
ಕಡುಕರುಣದಿಂದೀ ಪಿಶಾಚವ
ಬಿಡಿಸಿ ರಕ್ಷಿಸಬೇಕೆನುತೆ ಕೈಮುಗಿಯಲಿನ್ನವನಾ
ಮಡದಿಯಂ ಕರೆದೆಂದನಾ ಗುರು
ಪೊಡವಿಹಿರಿಯರು ದೇವರಿರುವುದ
ನುಡಿವರಲ್ಲವೆ ನಂಬುತದ ನೀಂ ಪೋಗು ಪೋಗದೊಡೆ ॥ ೭ ॥

ತಕ್ಕ ಶಿಕ್ಷೆಯದಿಲ್ಲಿ ಬರುವುದು
ನಿಕ್ಕುವಂ ನಿನಗೆಂದು ಚಿತ್ತವ
ನಿಕ್ಕುತಾಕೆಯ ಮೈಯೊಳಿಳೆದಾಕ್ಷಣವೆ ತದ್ಭೂತಂ
ಮಿಕ್ಕಭಯದಿಂದಿವಳೊಳೆಂದುಂ
ಪೊಕ್ಕು ಕಾಡುವುದಿಲ್ಲೆನುತೆ ನೆಲ
ಕಿಕ್ಕಿದೊಡಲಿಂ ನಮಿಸಿ ತದ್ಗುರುವರಗೆ ತೆರಳಿದುದು ॥ ೮ ॥

ಭೂತವದು ಬಿಟ್ಟೋಡೆ ಮೊದಲಿನ
ಮಾತುಮತಿಯುಂ ಸತಿಗೆ ಬರಲು ವಿ
ನೀತಳಾದವಳೊಡನೆ ಸಾಬನು ನಮಿಸಿ ಗುರುಪದಕೆ
ಸಾತಿಶಯ ತತ್ಕೃಪೆಯ ಪೊಗಳಿ ಪು
ನೀತ ಚಿತ್ತದೊಳಾತ್ಮನಿಲಯ
ಕ್ಕಾತನಧಿಕೋಲ್ಲಾಸದಿಂ ತಾಂ ತೆರಳುತಾ ಬಳಿಕೆ ॥ ೯ ॥

ಅಂದು ಮಳೆಯಾಗದೆಯೆ ಜನತೆಯು
ನೊಂದುಕೊಂಡಿರೆ ಗುರುಮಠಕ್ಕೈ
ತಂದು ಸಾಬನು ಬರವು ಬರುಮಂಜಿಕೆಯ ಗುರುವರರಾ
ಮುಂದೆ ವಿವರಿಸಿ ಬೇಡಿಕೊಳುತಿರೆ
ಮುಂದೆ ಬರುವಾ ಸೋಮವಾರಕೆ
ಬಂದು ಹಿರಿಮಳೆಯೆಲ್ಲರಿಗೆ ಕಡುನಲವ ನೀಡುವುದು ॥ ೧೦ ॥

ಎಂದೊರೆಯಲದರಂತೆ ಜಡಿಮಳೆ
ಬಂದು ಮುಳುಗಿಸಿತಖಿಳಜನರಾ
ನಂದಸಾಗರದಲ್ಲಿ ಬಳಿಕೂರವರು ಗುರುಮಠಕೆ
ಬಂದು ತದ್ವರಯೋಗಿಪಾದದ
ಮುಂದೆ ಕಾಯೊಡೆದಾರತಿಯಗೈ
ದೊಂದಿದುರು ಭಕ್ತಿಯೊಳು ಪೊಗಳಿದರಾ ಮಹಾತ್ಮನನು ॥ ೧೧ ॥

ನೃಡಸುಭಕ್ತರೊಳೆಸೆಯುವಾ ಶಿಲ
ವಡಿಯೊಳುರು ಭಕ್ತಿಯನು ಗುರುವರ
ರಡಿಯೊಳಿಟ್ಟಿರೆ ಲಾಂಡೆಯಾ ನರಸಪ್ಪನೆಂಬುವನು
ಮಡದಿಯೆನಿಸಿದ ಸುಂದರಾಬಾ
ಯೊಡನೆ ತಾಂ ನಡಕೊಳ್ಳುತಪರಿಂ
ಪಡೆದ ಪರಕೆಯೊಳೊಗೆಯೆ ಮಗನೋರ್ವನು ಶದಾತ್ಮಜಗೆ ॥ ೧೨ ॥

ಏಕನಾಥಸುನಾಮವಿಟ್ಟು ತ
ದೇಕಮನದಿಂ ಸಲಹಲಾ ಸುವಿ
ವೇಕ ಸುತನಿಗೆ ಹತ್ತನೆಯ ವರ್ಷದೊಳು ರುಜೆ ಬಂದು
ಭೀಕರತೆಯಾಂತವನು ಬದುಕುವು
ದೇ ಕಠಿಣವೆನಿಸಿರಲು ವೈದ್ಯರಿ
ಗೇಕೆ ತೋರಿಸದಿರುವಿರೆನೆ ಪಿತೃಜನರಿಗೂರವರು ॥ ೧೩ ॥

ಗುರುವಿನಾಶೀರ್ವಾದದಿಂದೀ
ತರುಳನೆಮಗೊಗೆದಿರುವನಿವನನು
ಕರುಣದಿಂ ಕಾಪಾಡಲಿಲ್ಲವೆ ಕೊಲ್ಲಲಾ ಸ್ವಾಮಿ
ಪರಿಹರಿಸದೌಷಧವು ಬೇನೆಯು
ಬರಿದೆ ತೋರಿಸಲೇಕೆನಾವೆಂ
ದೊರೆಯುತವರೂರವರಿಗಾ ಗುರುಮಠಕೆ ನಡೆತಂದು ॥ ೧೪ ॥

ಪಡೆದು ಗುರುಪಾದಾಂಬುವಂ ಮೇಣ್
ಸಡಗರದೊಳೈತಂದು ತನುಭವ
ನೊಡಲೊಳದ ಸವರಿದರು ಪಿತೃಗಳು ನಿಷ್ಠೆಯಂತಳ್ತು
ಕಡುಭಯವನೊದಗಿಸಿದ ಬೇನೆಯು
ದಡಗಿತೆರಡೆ ದಿನಕ್ಕೆ ಗುರುವರ
ನಡಿಯನಂಬಿದವರ್ಗೆ ಕೇಡಿಲ್ಲೆಂದರೂರವರು ॥ ೧೫ ॥

ಎನಿತೊ ದಿನಗಳಮೇಲೆ ನರಸ
ಪ್ಪನನು ತದ್ಗ್ರಾಮವನೆ ಬಿಡಿಸುವ
ಘನತರದ ಗಂಡಾಂತರವು ಬಂದೆರಗಿತಾತನಿಗೆ
ಮನದ ದುಗುಡದೆ ಬಂದು ತದ್ವರ
ವಿನಯ ಶೀಲನು ಗುರುವರನ ಪದ
ವನಜಯುಗಳಕ್ಕೆರಗಿ ನುಡಿದನು ತನ್ನ ದುಃಸ್ಥಿತಿಯಾ ॥ ೧೬ ॥

ಎಲ್ಲಿಗಂ ಪೋಗದೆಯೆ ನೀನೂ
ರಲ್ಲಿ ನೆಲಸುವುದೆಂದು ತಚ್ಚರ
ವಲ್ಲಭನು ಪರಸಿದನು ನರಸಪ್ಪನಿಗೆ ಕಷ್ಟಗಳು
ನಿಲ್ಲದೋಡಿದವವನ ಮಂದಿರ
ದಲ್ಲಿ ಸರ್ವರು ಸುಖದ ಜೀವನ
ದಲ್ಲಿರುವರಿದುವರೆಗವಾ ಗುರುವಿನ ಕೃಪಾಬಲದೇ ॥ ೧೭ ॥

ಒಪ್ಪುವಾ ಶಿಲವಡಿಯ ಪೊಳಲೊಳ
ಗಿಪ್ಪ ಸಜ್ಜನನಾಗಿ ಹಕ್ಕೀ
ರಪ್ಪ ಶಿವರುದ್ರಪ್ಪನಿರುವನು ನಾಗಠಾಣದವಂ
ತಪ್ಪದಂತೊಂದುವರೆ ತಿಂಗಳೊ
ಳಿಪ್ಪ ರುಜೆಯವನೊಂದಿರಲು ಮೃತಿ
ಯಪ್ಪಿಕೊಳ್ಳದೆ ಬಿಡದು ತದ್ರೋಗಿಯನೆನಲು ಜನರು || ೧೮ ||

ಆಗಳಾತನ ಪತ್ನಿ ದುಃಖಿತ
ಳಾಗಿರುವ ಲಿಂಗಮ್ಮನಾ ಶಿವ
ಯೋಗಿಗಳ ಸನ್ನಿಧಿಗೆ ಬಂದವರಡಿಗೆ ಹಣೆಯಿಟ್ಟು
ಶ್ರೀಗುರುವೆ ಘನರುಜೆಗೆ ಠಾಂ ಠು
ಠ್ಠಾಗಿರುವ ಮತ್ಪತಿಗೆ ಬಾಯೊಳು
ಪೋಗದೊಂದುಂ ಗುಟುಕು ನೀರಿನ್ನೆನ್ನ ಕೈಬಿಟ್ಟು || ೧೯ ||

ಪೋಗುವನು ನಿನ್ನಡಿಯ ಹರಕೆಯು
ದಾಗದಿರಲಿನ್ನುಳಿಯನೆನುತಂ
ಕೈಗಳಿಂ ಜೋಡಿಸುತೆ ಕಣ್ಣೀರ್ಗರೆದು ಯಾಚಿಸುವಾ
ಆ ಗುಣಾನ್ವಿತಳಳಲ ನುಡಿಗಳ
ವಾ ಗುರುವಿನೆದೆ ಕರಗಿಸಿದವು ವಿ
ರಾಗಿಗಳಿಗನುಕಂಪಮುದಿಸುವುದಲ್ತೆ ದುಃಖಿತರೋಳ್ || ೨೦ ||

ತಾಯೆ ನಿನ್ನಯ ಗಂಡಗಾವುದ
ಪಾಯವಿಲ್ಲವು ನೀನು ದುಃಖದೆ
ನೋಯಲೇಕೆಂದಾಗುರುವು ಮಠದ ಪ್ರಸಾದವನು
ಈಯುತದ ಸೇವಿಸಿದೊಡಾ ರುಜೆ
ಮಾಯವಾಗುವುದೆಂದು ತಜ್ಜಿತ
ಕಾಯಜನು ಕಳುಹಿಸಿದನಾ ಲಿಂಗಮ್ಮನನು ಮನೆಗೆ || ೨೧ ||

ಗುರುವೊರೆದವೋಲ್ ಮಾಡಲಾತನಿ
ಗಿರುವ ರೋಗವು ಮಾಯುವಾದುದು
ಗುರುಮಹಿಮೆಯಿದನರಿದು ಲಿಂಗವ್ವನು ನಿರಂತರವು
ಪರಮನಿಷ್ಠೆಯನಿಟ್ಟಳಾ ಸ
ಚ್ಚರಿತನಡಿಯೊಳ್ ತದ್ಗೃಹದವರು
ಹರಿಸದಿಂದಾಮಠದ ಸೇವೆಯೊಳಿರ್ಕುಮಿದುವರೆಗಂ ॥ ೨೨ ॥

ಬಳಿಕೆ ಶಿಲವಡಿಯಲ್ಲಿರುವ ನೀ
ರಲಿಗೆಯಾ ಗಾಣಿಗರ ಮನೆತನ
ದೊಳು ಜಸವ ಪಡೆದೆಸೆವ ಸಂಕಪ್ಪನ ತನುಜನಾಗಿ
ತೊಳಪ ಪಕ್ಕೀರಪ್ಪಗೊದಗಿದು
ದಳಲನೀಯುವ ಪಾರ್ಶ್ವವಾಯುವು
ಬಳಲುತದರಿಂದವನಿರುವುದನು ನೋಡಿ ಮನೆಯವರು ೨೩ ॥

ಸುರುಚಿರದ ಹುಬ್ಬಳ್ಳಿಗಾತನ
ಕರೆದುತಂದು ಚಿಕಿತ್ಸನಿಲಯದ
ಹಿರಿಯವೈದ್ಯನಿಗೈದೆ ತೋರಿಸಲಾ ಚಿಕಿತ್ಸಕನು
ಇರದು ಸದ್ಯದೊಳೀರುಜೆಯ ಪರಿ
ಹರಿಪ ಮದ್ದೆಮ್ಮಲ್ಲಿ ನಮಗಿ
ನ್ನರಿದು ಸರಿಪಡಿಸುವುದಿವನ ಕರೆದೊಯ್ಯುವುದಾಲಯಕೆ ॥ ೨೪ ॥

ಎಂದುಸುರಲದ ಕೇಳಿ ಮನೆಯವ
ರೊಂದಿ ದುಃಖವ ಮನೆಗವನ ಕರ
ತಂದರಾ ಸಂಕಪ್ಪನನ್ಯೋಪಾಯವಿಲ್ಲೆಂದು
ನೊಂದ ಮನದಿಂ ಕೊನೆಗೆ ಮಠಕ್ಕೈ
ತಂದು - ತದ್ಗುರುಪಾದಪದ್ಮಕೆ
ವಂದಿಸುತೆ ನಿಜತನುಜನಿರವನು ತಿಳಿಸುತಾ ಬಳಿಕೆ ॥ ೨೫ ॥

ಗುರುನಿಂ ತೀರ್ಥಪ್ರಸಾದಗ
ಳುರೆ ಪಡೆದು ತಾಂ ಭಕ್ತಿಯಿಂ ಸ್ವೀ
ಕರಿಸು ನೀನೆಂದಾತ್ಮಜಾತನಿಗೀಯಲದರಿಂದೆ
ಕಿರಿದೆನಿಸುತಾ ವಾಯು ಕೆಲದಿನ
ಕಿರದೆಪೋದುದು ಮನೆಯವರು ತ
ದ್ಗುರು ಮಹಿಮೆಗಚ್ಚರಿಯನೊಂದುತೆ ಪಡೆದರತಿ ಮುದವಾ ॥ ೨೬ ॥

ಆ ಮನೆಯ ಸದ್ಭಕ್ತರಾ ಶ್ರೀ
ಸ್ವಾಮಿಗಳೊಳಿಟ್ಟಧಿಕ ನಿಷ್ಠೆಯ
ನಾ ಮಠದ ಸೇವೆಯನು ತಾವಿದುವರೆಗಮಲಸದೆಯೇ
ಪ್ರೇಮದಿಂಗೈಯುತ್ತೆ ವರಸುಖ
ಧಾಮರಾಗೆಸೆಯುವರು ನಿರ್ಜಿತ
ಕಾಮನಾದಾ ಗುರುವ ನಂಬಿದವರ್ಗೆ ಸುಖಮಿರದೇಂ ॥ ೨೭ ॥

ಇಂತು ತನ್ನನು ನಂಬಿ ನಡೆವರ
ನಂತ ಕಷ್ಟಗಳಂ ಕಳೆವ ಕೃಪೆ
ಯಾಂತ ಗುರುಶಾಂತೇಶ್ವರನ ಮಹಿಮೆಗಳ ನರಿದವರು
ಸಂತತಂ ತಜ್ಜಂಗಮೋತ್ತಮ
ನಂತಿಕಕ್ಕೈತಂದು ತಮ್ಮಗ
ಳಂತರಂಗದ ಬಯಕೆಗಳ ಪಡೆಯುವುದು ಘನವಾಯ್ತು ॥ ೨೮ ॥

ಈತನಾಶ್ರಯಿಸಿದ ಜನರ ಬಹು
ಪಾತಕವ ಪರಿಹರಿಪ ಪರಮಪು
ನೀತನೀತನು ಭಕ್ತಹೃದಯಾಂಭೋಜಭಾಸ್ಕರನು
ಈತನಿಳೆಗವತರಿಸಿದಗತನು
ಜಾತೆಯಾಣ್ಮನು ದಿಟವೆನುತೆಸಂ
ಪ್ರೀತಿಯಿಂ ಕೊಂಡಾಡುತಿರ್ದರು ಬುಧರು ತದ್ಗುರುವಾ ॥ ೨೯ ॥

ಮೂಗುತಿಯು ಕದ್ದವಳದಾವ ಮ
ಹಾಗುರುವಿನಿದಿರಲ್ಲಿ ಕೈಯೆ
ತ್ತಾಗಸಕೆ ಕದ್ದಿಲ್ಲವೆನೆ ತತ್ಕರವು ಗಗನದೊಳೇ
ಬಾಗದೆಯೆ ಬಂಧಿತವುದಾದುದೊ
ಯೋಗಿವರನಾ ಸಿದ್ಧಲಿಂಗನ
ರಾಗದಿಂ ನೆನೆವೊಂದೆಮನವೆಮಗಿರಲಿ ಸಂತತವೂ ॥ ೩೦ ॥

ಪರಮಪಾವನ ಚರಿತವಿದನಾ
ದರದೆ ಪಠಿಸುವ ಕಥಿಸುವಾಲಿಸು
ವರಿಗೆ ತದ್ಗುರುಶಾಂತ ಶಿವಯೋಗಿಶ್ವರನು ಕೃಪೆಯಿಂ
ಚಿರತರಾಯುರರೋಗಭಾಗ್ಯವ
ಕರುಣಿಸುವನಲ್ಲದೆಯೆ ಗುರುಹರ
ಚರರನುಗ್ರಹವಾಗಿಸುವನನವರತವಿದು ನಿಜವು ॥ ೩೧ ॥

೧೪ನೆಯ ಸಂಧಿ ಸಂಪೂರ್ಣಂ ಪದ್ಯಗಳು ೫೩೪ ಕ್ಕೆ ಮಂಗಳಂ

ಶ್ರೀ ಗುರುಶಾಂತ ಶಿವಯೋಗೀಶ್ವರಃ ಪ್ರಸೀದತು

ಹದಿನೈದನೆಯ ಸಂಧಿ

ಸೂಚನೆ— ಪಶುಪತಿಯ ವರತೇಜದಾ ಗುರು
ವೊಸೆದು ನಿಜಮಠದೊಡೆತನಕೆ ತಾಂ
ಬಸವರಾಜಸಮಾಖ್ಯವಟುವಂ ತಂದನೀ ತೆರದಿಂ

ಚರಪತಿಗಳಿಗೆ ಕೆಲವರಿಗೆ ಸಲೆ
ಕರುಣಿಸುತ್ತುಪದೇಶವವರಿಗೆ
ಗುರುವು ತಾನೆನಿಸಿದೊಡಮಾವ ಮಹಾತ್ಮನೋಳ್ ನಿರುತಂ
ಚರಸುಭಕ್ತಿಯೆ ಬಳೆದುದೋ ತ
ತ್ಪರಮ ಗುರುಶಾಂತೇಶ್ವರನ ಪದ
ಸರಸಿಜಂಗಳು ನೀಡಲೆಮಗಾ ಭಕ್ತಿ ಸಂಪದವಾ ॥ ೧ ॥

ದಿನ ದಿನದೊಳಾ ಶಲವಡಿಯ ಮಠ
ದನಘ ಗುರುವಿನ ಸನ್ನಿಧಿಯೊಳುರೆ
ಜನಿಸಿದೊಲವಿಂ ಶಿವಕಥೆಯ ಪೇಳುತ್ತೆ ಶಂಕರನಾ
ಘನತೆಯಂ ವಚಿಸುವರು ಮೇಣದ
ವಿನಯದಿಂ ಕೇಳುವರು ಬರುವುದು
ಗಣನೆಯಂ ಮೀರುತಿರೆ ತತ್ಪುರದವರ ಪುಣ್ಯದೊಳು ॥ ೨ ॥

ಬಳಿಕೆ ಮುರುಗೋಡದೊಳು ನಿಜಮಠ
ದೊಳಗಿರುವ ಶಿವಯೋಗಿಸಂಕುಲ
ತಿಲಕರಾದ ಮಹಾಂತ ಪೂಜ್ಯಸ್ವಾಮಿಗಳ ಪದದಾ
ಅಲಘುದರ್ಶನಕಾಗಿ ಭಕ್ತರ
ಬಳಗಮಂ ಬೆಂಗೊಂಡು ಪೊರಮಡ
ಲೆಳಸಿರಲು ಗುರುಶಾಂತ ಚರಪತಿಯಾಗಮನವಿದನು ॥ ೩ ॥

ತಿಳಿಯುತಿನ್ನಾ ಜೈಲಹೊಂಗಲ
ಪೊಳಲಖಿಳ ಭಕ್ತರ್ಕಳಾ ಚರ
ತಿಲಕನೆಮ್ಮೂರಲ್ಲಿ ಪೂಜೆಯನೊಮ್ಮೆ ತೀರಿಸಲು
ತೊಲಗಿ ದುರಿತವು ಧನ್ಯತೆಯು ಸಲಿ
ನೆಲಸುವುದು ನಮ್ಮಗಳೊಳೆಂದರಿ
ದೊಲವಿನಿಂದಾ ಸ್ವಾಮಿಯಾಗಮನವ ನಿರೀಕ್ಷಿಸುತೇ ॥ ೪ ॥

ಬರುವ ದಾರಿಯು ಕಾಯುತಿರಲಾ
ಗುರುವರೇಣ್ಯನು ಬರಲು ತತ್ಪದ
ಕೆರಗುತೆಲ್ಲರು ತಮ್ಮ ಬಯಕೆಯ ಬಿನ್ನಯಿಸಲವರಾ
ಪರಮಭಕ್ತಿಗೆ ವಶನೆನಿಸಿದಾ
ಚರಪತಿಯು ತದ್ವಾಂಛೆಯಂಗೀ
ಕರಿಸೆ ಸಂಭ್ರಮದಿಂದೆ ತದ್ಯೋಗಿಯನು ಕರೆದೊಯ್ದು ॥ ೫ ॥

ಪುರದ ಸಂಸ್ಕೃತ ಪಾಠಶಾಲೆಯೊ
ಳಿರಿಸಿ ಮೇಣ್ ಪೂಜಾದಿಗಳಿಗ
ಲ್ಲಿರುವ ತಿಪ್ಪೆಯಮಠದೊಳೈಸಲೆ ಸಜ್ಜುಗೊಳಿಸಿದರು
ಹರಿಸದಿಂ ಗುರುಶಾಂತಯೋಗೀ
ಶ್ವರನು ಶಿಲವಡಿ ಭಕ್ತರೊಡನೆಯೆ
ನೆರೆ ಮುಗಿಸಿ ಲಿಂಗಾರ್ಚನಾದಿ ಕ್ರಿಯೆಗಳಂ ಬಳಿಕೆ ॥ ೬ ॥

ಬಂದು ಸಂಸ್ಕೃತ ಪಾಠಶಾಲೆಯೊ
ಳೊಂದಿದಾನಂದದೊಳು ಭಕ್ತರ
ಮುಂದೆ ಮಾಡುತ್ತಿರೆ ಶಿವಾನುಭವ ಪ್ರಬೋಧವನು
ಅಂದು ಶಲವಡಿ ಭಕ್ತರಾ ನೆಲೆ
ಯೊಂದಿ ಸಂಸ್ಕೃತವೋದುವೆಳೆಯರ
ವೃಂದದಲ್ಲಿರುವೋರ್ವ ಮರಿಯನು ತಮ್ಮ ಮಠಕಾಗಿ ॥ ೭ ॥

ಆರಿಸುವುದನು ಬಿನ್ನಯಿಸೆ ತ
ದ್ವೀರವಿರತಗೆ ಗುರುವಿಗಾತನು
ಭೂರಿಮುದದಿಂ ಚಂದ್ರಶೇಖರಶಾಸ್ತ್ರಿಗಳ ಕರೆದು
ತೋರಿಸಿರಿ ನಿಮ್ಮಲ್ಲಿ ಕಲಿವವ
ರಾರು ನಮ್ಮಯ ಮಠಕೆ ಮುಂದಧಿ
ಕಾರಿಯಾಗಲು ಯೋಗ್ಯರೆನಲಾ ಶಾಸ್ತ್ರಿಗಳು ಬಳಿಕೆ ॥ ೮ ॥

ಇಂತೊರೆದರಪ್ಪಗಳೆ ಬೆಳ್ಗ ಸ
ವಾಂತ ರುದ್ರಾಪುರದೊಳಿರುವ ಚ
ರಂತಿ ಮಠದ ಗುಣಾಢ್ಯ ರಾಚಾರ್ಯನಿಗೆ ಸಮ್ಮುದದಾ
ಕಾಂತೆ ಲಿಂಗಾಂಬಿಕೆಯಿರುವಳಾ
ಭ್ರಾಂತಿ ವಿರಹಿತ ದಂಪತಿಗಳಿಗೆ
ಶಾಂತಚಿತ್ತನು ಬಸವರಾಜಸಮಾಖ್ಯ ಸುತನಿರುವಂ ॥ ೯ ॥

ಆಗಳೇ ನಿಜಮಠದ ಚರಪತಿ
ಯಾಗಿ ನಿಯಮಿತನಾಗಿರುವ ನಿ
ನ್ನಾ ಮಗನು ನಮ್ಮಲ್ಲಿ ವಿದ್ಯಾಭ್ಯಾಸವೆಸಗುವನು
ಶ್ರೀಗುರೂತ್ತಮಸೇವೆ ವಿದ್ಯಾ
ರಾಗಮುಂ ಸದ್ವಿನಯಮೇ ಮೊದ
ಲಾಗಿರುವ ವರಗುಣಗಳಿಂ ಶೋಭಿಸುಸ್ತುವನನವರತಂ ॥ ೧೦ ॥

ಆತನಲ್ಲದೆ ಮತ್ತಿತರತನು
ಜಾತರಾ ರಾಚಾರ್ಯರಗಿರ್ಕು
ಪ್ರೀತಿಸುವೆವಾತನನು ನಾವಾತ್ಮಜನ ಮಾಳ್ಕೆಯೊಳು
ಪೂತಚರಿತಾನ್ವಿತನಿರುವನೆಂ
ದಾತರುಳಿನಂ ಗುರುಚರಣಕಂ
ಜಾತಸನ್ನಿಧಿಗೈದೆ ಕರೆಯುತೆ ಶಾಸ್ತ್ರಿಗಳು ಬಳಿಕೆ || ೧೧ ||

ಇನ್ನು ಸಂಸ್ಕೃತಕಾವ್ಯತೀರ್ಥಂ
ಕನ್ನಡದ ಜಾಣಂ ಶಿವಾನುಭ
ವೋನ್ನತಂ ನಿಜಲಿಂಗಪೂಜಾಪರನುವಿೂಛಾತ್ರಂ
ಸನ್ನುತರೆ ನಿಮ್ಮಗಳ ಮಠಕುರೆ
ಮನ್ನಣೆಯ ಮರಿಯಾಗಲರ್ಹತೆ
ಯಂ ನಿಜದೆ ಪಡೆದಿರ್ಪನೆಂದೊರೆದಾ ಸುಗುಣನಿಧಿಯಂ || ೧೨ ||

ನಿಜಪದಕ್ಕೆರಗಿಸಲು ಸುಗುಣ
ವ್ರಜಸಮನ್ವಿತನಾತನಂ ತ
ದ್ದ್ವಿಜಗಭೂಷಾಕಾರಗುರು ಕಡುನಲವಿನಿಂ ನೋಡಿ
ನಿಜಮಠಕ್ಕಧಿಕಾರಿಯಾಗಲು
ಸುಜನನುತಯೋಗ್ಯತೆಯುದಿವನೋಳ್
ನಿಜದೆ ತಾಂ ನೆಲಸಿರ್ಕುವೆಂದುಸುರಿದನು ಭಕ್ತರಿಗೆ || ೧೩ ||

ಬಳಿಕೆ ಪರಕೆಯನಿತ್ತು ತದ್ಗುರು
ತಿಲಕನೆಲ್ಲರಿಗಲ್ಲಿರುವ ನಿ
ರ್ಮಲಮನನ ತದ್ವಸವರಾಜನನಲ್ಲದೆಯೆ ಮತ್ತಂ
ಉಳಿದ ವಿದ್ಯಾರ್ಥಿಗಳ ಮೇಣ್ ಗುಣ
ನಿಳಯುಶಾಸ್ತ್ರಿಗಳಂ ಕರೆದುಕೊಂ
ಡೊಲವಿನಿಂ ಮುರುಗೋಡ ಪಯಣವ ಮುಂದುವರಿಸಿದನು || ೧೪ ||

ಬಂದ ತಚ್ಚರವರನನತ್ಯಾ
ನಂದದಿಂದುತ್ಸವದೆ ಸಲೆಕರೆ
ತಂದರಾ ಮುರುಗೋಡ ಭಕ್ತರು ಮಠಕೆ ಬಳಿಕಲ್ಲಿ
ಇಂದುಧರಕಳೆಯಾಂತ ಶಿವಯೋ
ಗೀಂದುವಾದ ಮಹಂತ ಗುರುವಿಗೆ
ವಂದಿಸುವುದಕ್ಕಿಳೆಗೆ ತನುವಿಡುವಾ ಗುರುವಿನಿದಿರೋಳ್ ॥ ೧೫ ॥

ಮೊದಲೆ ನೆಲಕಿಟ್ಟಂಗಮಂ ಸ
ಮ್ಮುದದೆ ನಮಿಸೆ ಮಹಾಂತಗುರುವೀ
ವಿಧದ ತಜ್ಜಂಗಮವರೇಣ್ಯರ ಭಕ್ತಿಯುನು ಕಂಡು
ಅಧಿಕವಿಸ್ಮಯವೊಂದುತಂ ಬಹು
ವಿಧದೆ ಪೊಗಳುತ್ತಿರ್ದ್ವರವುಳಿನ
ಪದಪಯೋಜಕ್ಕೆರಗಿದುದು ನೆರೆದಿರ್ದ ಜನತತಿಯು ॥ ೧೬ ॥

ಬಳಿಕೆ ಮುರುಗೋಡದ ಮಹಾ ಶ್ರೀ
ಗಳ ಚರಣಕರ್ಪಿಸಲು ತಂದಿ
ರ್ದಲಘುಭಕ್ತಿಯು ಬೆಳ್ಳಿಹಾವುಗೆಗಳನವರ ಮುಂದೆ
ಶಿಲವಡಿಯು ಗುರುವಿರಿಸೆ ತಮ್ಮಯ
ತಲೆಯೊಳವುಗಳನಿಟ್ಟುಕೊಳ್ಳುತೆ
ಮಲರಹಿತನೆನಿಸಿದೆನು ನಾನೀದಿನದೊಳಲ್ಲದೆಯೋ ॥ ೧೭ ॥

ಇಟ್ಟು ನನ್ನೊಳ್ ಕೃಪೆಯು ಮಹಿಮರು
ಕೊಟ್ಟು ಪರಕೆಯು ಪಾದುಕೆಗಳನು
ಮೆಟ್ಟಬಹುದೇನಿವುಗಳೆನ್ನುದ್ಧರಿಸ ಬಂದಿರ್ಕುಂ
ಇಟ್ಟುಕೊಂಡೆನ್ನಲ್ಲಿ ನಿರುತಂ
ನೆಟ್ಟನೇ ಪೂಜಿಸುವೆನಿವುಗಳ
ನಿಟ್ಟೆಯಿಂದೆಂದುಸಿರಿದನು ದುರುದುಂಡಿಯಾ ಗುರುವು ॥ ೧೮ ॥

ಜಂಗಮನು ಪರಸಿದ ಸುವಸ್ತುವು
ತುಂಗತರವೆಂದರಿದ ತಚ್ಚರ
ಪುಂಗವನವರಪೂಜ್ಯಭಾವಕ್ಕಚ್ಚರಿಯನಾಂತಾ
ಲಿಂಗವಂತರು ನೆರೆದವರು ಬಹು
ಭಂಗಿಯಿಂ ಕೊಂಡಾಡತೊಡಗಿದ
ರಂಗಜಾಹಿತರಾ ಮಹಾಂತಸ್ವಾಮಿಗಳ ಬಳಿಕೆ || ೧೯ ||

ಪ್ರೇಮದಿಂ ಮುರುಗೋಡದ ಶ್ರೀ
ಸ್ವಾಮಿಗಳು ಕೆಲವಡಿಯು ಪೂಜ್ಯ
ಸ್ವಾಮಿಯೊಡನುರುಲಿಂಗಪೂಜೆಯು ಸಂಭ್ರಮದೊಳೆಸಗಿ
ಸಾಮರಸ್ಯ ಸುಸೌಖ್ಯದಾಯಕ
ಧಾಮಹಿತತೀರ್ಥಪ್ರಸಾದವ
ನಾ ಮಠದೊಳುರೆ ಸೇವಿಸುತೆ ದಿನವೆರಡ ಕಳೆದಿರಲು || ೨೦ ||

ಕರೆಯಿಸುತೆ ರುದ್ರಾಪುರದೊಳೊಲಿ
ದಿರುವ ರಾಚಯ್ಯನ ಸುಗುಣಗಣ
ಭರಿತಸತಿಯೊಡನಾ ಮಹಾಂತಸ್ವಾಮಿಸನ್ನಿಧಿಗೆ
ಹರಿಸದಿಂ ಕೇಳಿದನು ಕೆಲವಡಿ
ಗುರುವು ತದ್ದಂಪತಿಗಳಂ ನಿಮ
ಗಿರುವ ತನುಜನ ಬಸವರಾಜನ ನಮ್ಮ ಮಠಕಾಗಿ || ೨೧ ||

ಕೊಡುವಿರಾ ನೀವೆಂದು ತಾವಾ
ನುಡಿಗೆ ಸಂಮತಿಸುತ್ತವರ ಸಿರಿ
ಯಡಿಗೆ ವಂದಿಸಿದಾ ಸುದಂಪತಿಗಳಿಗೆ ತದ್ಗುರುವು
ಉಡುಗರೆಗಳಂ ಪರಸಿ ಕಳುಹಿಸಿ
ಕಡುನಲವಿನಿಂ ಬಸವರಾಜಗೆ
ಕೊಡಿಸಿದನು ಶುಭದಾಶಿಷವ ದುರುದುಂಡಿ ಚರವರನಿಂ || ೨೨ ||

ಬಳಿಕೆ ಮುರುಗೋಡಪ್ಪಗಳ ನಿ
ರ್ಮಳ ಚರಣಸನ್ನಿಧಿಯೊಳೈಸಲೆ
ಶಿಲವಡಿಯ ಗುರು ನೆರೆದವರಿಗೆ ಶಿವಾನುಭವದಿರವಾ
ತಿಳಿಸಿ ಮೇಣ್ ದುರದುಂಡಿಯಾ ಶ್ರೀ
ಗಳನು ಬೇಡಿದನಪ್ಪಣೆಯ ತಾಂ
ಶಿಲವಡಿಗೆ ತೆರಳುವುದಕಿನ್ನಾ ಮುದದ ಸಮಯದೊಳು ॥ ೨೩ ॥

ಉಣ್ಣೆಯಾ ಶಾಲೊಂದ ಬಸವನ
ಚಿನ್ನದಾ ಮುದ್ರಿಕೆಯ ಮತ್ತೆ ಸ
ಮುನ್ನತದ ಕರಕಮಲವಲ್ಲದೆ ವಿಮಲಮಂಚವನು
ನನ್ನಿ ನಲ್ಮೆಯೊಳರ್ಪಿಸಿದರಾ
ಸನ್ನುತರು ದುರುದುಂಡಿಯಪ್ಪಗ
ಳಿನ್ನೊರೆವೆನೇಂ ಶಿಲವಡಿಯ ಗುರುಶಾಂತಚರಪತಿಗೆ ॥ ೨೪ ॥

ಪರತರನು ದುರುದುಂಡಿ ಯೋಗೀ
ಶ್ವರನು ಕೃಪೆಯಿಂದಿತ್ತ ಪರಕೆಯ
ಕುರುಹೆನಿಸಿದಾ ವಸ್ತುಗಳನತಿನಿಷ್ಠೆಯಿಂ ಪಡೆದು
ಹರಿಸಗಡಲೊಳಗೀಸುತಂ ತಾಂ
ತೆರಳಿದನು ಶಿಲವಡಿಗೆ ಬೆಂಗೊಂ
ಡಿರೆ ಸುಭಕ್ತರು ಬಸವರಾಜಾನ್ವಿತನು ತದ್ಗುರುವು ॥ ೨೫ ॥

ಗುರು ಪರಸಿದಾ ವಸ್ತುಗಳೊಳಿ
ಟ್ಟಿರುತರದ ಪೂಜ್ಯತೆಯ ತನ್ನ
ಲ್ಲಿರಿಸಿಕೊಂಡಿರ್ದೊಮ್ಮೆಯುಂ ಮಂಚವದನೇರದೆಯೇ
ಇರತೊಡಗಿದಾ ಶಿಲವಡಿಯ ಚರ
ವರನ ಭಕ್ತಿಯ ಕಂಡು ವಿಸ್ಮಯ
ಭರಿತರಾದರು ಸರ್ವರಿದುವರೆಗಿರುವವವು ಮಠದೋಳ್ ॥ ೨೬ ॥

ಇಂದಿಗಂ ದುರದುಂಡಿ ಶಿವಯೋ
ಗೀಂದುವಾ ಶಿಲವಡಿಯ ಚರಪತಿ
ಯಿಂದವರ್ಪಿತವಾದ ಹಾವುಗೆಗಳನಿರಿಸಿಕೊಂಡು
ಒಂದಿ ನಿಷ್ಠೆಯ ಮುಗಿಸಿ ಲಿಂಗಾ
ನಂದ ಪೂಜೆಯನವುಗಳರ್ಚಿಸು
ವೊಂದು ಪದ್ಧತಿಯಾಂತು ನೋಳ್ಪರಿಗಚ್ಚರಿಯನೀವಂ ॥ ೨೭ ॥

ಪರತರರು ಗುರುಶಾಂತಯೋಗೀ
ಶ್ವರರು ಮಿಗೆ ಮುರುಗೋಡದಿಂ ಕಡು
ಹರಿಸದಿಂ ಶಿಲವಡಿಗೆ ಬಂದಾ ಬಳಿಕೆ ಕೆಲದಿನಕೆ
ಹರಿಹರಕೆ ತಮ್ಮೊಡನೆ ಮಠದಾ
ಮರಿಯೆನಿಸಿದಾ ಬಸವರಾಜನ
ಕರೆದುಕೊಂಡೈತಂದು ದುರ್ಗದ ಪೂಜ್ಯ ಗುರುವರರಾ ॥ ೨೮ ॥

ಹರಿಹರಕೆ ಬರಮಾಡಿಕೊಂಡಾ
ವರಜಗದ್ಗುರುಗಳ ಸುಪಾವನ
ಕರದೆ ಕಪನಿಯ ಹಾಕಿಸುತ್ತಾ ಬಸವರಾಜನಿಗೆ
ಹರಿಹರದೊಳಂ ಶಿಲವಡಿಯೊಳಿ
ನ್ನಿರುವ ಮಠಗಳಿಗಾತನಂ ನಿ
ರ್ಧರಿಸಿದರು ಮರಿದೇವರೆಂದಖಿಳರ ಸಮಕ್ಷದೊಳು ॥ ೨೯ ॥

ಬಳಿಕೆ ಶಿಲವಡಿಗಾಗಮಿಸಿ ನಿ
ರ್ಮಳಮಠಕೆ ಪಲವೆಡೆಯ ಚರಪತಿ
ಗಳ ಕರೆಯಿಸುತ್ತವರ ಸಮ್ಮುಖದಲ್ಲಿ ತದ್ಗುರುವು
ತಳೆದ ತನ್ನೊಡೆತನವ ಮುಂದೈ
ಸಲೆ ಪಡೆಯುವಾ ಬಸವರಾಜಗೆ
ನಲವಿನಿಂದಂ ಸುಪ್ರಸಾದಿಯಗೈವನುಗ್ರಹವಾ ॥ ೩೦ ॥

ಕೊಟ್ಟು ತತ್ಸಮಯದೊಳೆ ತನ್ನ
ಲ್ಲಿಟ್ಟ ಭಕ್ತಿಯ ಪಾಶದಿಂದಂ
ಕಟ್ಟುವಡೆದಾ ಚಂದ್ರಶೇಖರ ಶಾಸ್ತ್ರಿಗಂ ಕೃಪೆಯಿಂ
ಕೊಟ್ಟು ತಾಂ ಚಿದನುಗ್ರಹವ ಮೇಣ್
ನಿಷ್ಠೆಯಿಂ ಗಣತೃಪ್ತಿಯಾಗಿಸಿ
ಕೊಟ್ಟನೆಲ್ಲರಿಗೈದೆ ಶುಭದಾ ಶಿಷವನಾಮಹಿಮಂ ॥ ೩೧ ॥

ಆವಮಹಿಮನ ಪೂಜಿಸಿದಳೋ
ದೇವತಾನ್ವಿತಳಾಗಿ ಮಾಯಾ
ದೇವಿ ತಾನುರುಭಕ್ತಿಯಿಂದಂ ಹೊಳಲಗುಂದದೊಳು
ದೇವದೇವನ ಭಕ್ತಿಯುತಜನ
ತಾವಿನುತನಾ ಸಿದ್ಧಲಿಂಗನ
ಪಾವನಾಂಘ್ರಿಯನರ್ಚಿಸುವ ಸದ್ಬುದ್ಧಿಯೆಮಗಿರಲಿ ॥ ೩೨ ॥

ಪರಮಪಾವನ ಚರಿತವಿದನಾ
ದರದೆ ಪಠಿಸುವ ಪೇಳುವಾಲಿಸು
ವರಿಗೆ ತದ್ಗುರುಶಾಂತ ಶಿವಯೋಗೀಶ್ವರನು ಕೃಪೆಯಿಂ
ಚಿರತರಾಯುರರೋಗ ಭಾಗ್ಯವ
ಕರುಣಿಸುವನಲ್ಲದೆಯೆ ಗುರುಹರ
ಚರರನುಗ್ರಹವಾಗಿಸುವನನವರತಮಿದು ನಿಜವು ॥ ೩೩ ॥

೧೫ನೆಯ ಸಂಧಿ ಸಂಪೂರ್ಣಂ ಪದ್ಯಗಳು ೩೩ಕ್ಕೆ ಮಂಗಳಂ

ಶ್ರೀ ಗುರುಶಾಂತ ಶಿವಯೋಗೀಶ್ವರಃ ಪ್ರಸೀದತು

ಹದಿನಾರನೆಯ ಸಂಧಿ

ಸೂಚನೆ— ಶಿಲವಡಿಯ ತದ್ಗುರುವು ನಲವಿಂ
ದುಳವಿಯಾತ್ರೆಯಗೈದ ಬಳಿಕಂ
ತಿಳಿಸಿದನು ತಾಂ ಲಿಂಗದಲ್ಲಡಗುವ ಸಮಯವದನು ॥

ಮಗನ ಮಾಳ್ಕೆಯೊಳಾವಚರಪತಿ
ಯೊಗೆದ ಕೂರ್ಮೆಯೊಳೈದೆ ಪೊರೆಯುವ
ಬಗೆಯನಿಟ್ಟನೊ ಬಸವರಾಜಸಮಾಖ್ಯಶಿಷ್ಯನೊಳು
ನಿಗಮನುತ ವರಚರಣಪಂಕಜ
ಯುಗನ ತದ್ಗುರುಶಾಂತಗುರುವಿನ
ಬಗೆಯಲರೆ ಬಣ್ಣಿಸುವ ಪುಣ್ಯಮದಿರ್ಕೆ ನಮ್ಮೊಳಗೆ ॥ ೧ ॥

ಗುರುಪದದ ಸೇವಾವ್ರತದೊಳೊಲಿ
ದಿರಿಸಿ ವೈಮನಗಳನು ಪಿತೃಜನ
ರಿರುವರೆನಗೆಂಬುದನೆ ಮರೆದಾ ಬಸವರಾಜಾರ್ಯಂ
ಇರುವುದಂ ಪರಿಕಿಸಿದ ಶಿಲವಡಿ
ಹಿರಿಯರಾ ಮರಿದೇವನೆಮ್ಮಯ
ಪುರದ ಪುಣ್ಯದೆ ದೊರೆತನೀಮಠಕೆಂದು ಹಿಗ್ಗಿದರು ॥ ೨ ॥

ಪ್ರತಿದಿನದ ಮುಂಬೆಳಗಿನೊಳು ಗುರು
ನುತಿಯೊಡನೆ ತಾನೆದ್ದು ಮೊಗದೊಳೆ
ದತುಳಮುದದಿಂ ಲಿಂಗಪೂಜಾಗೃಹದ ರಜದೆಗೆದು
ನುತಗುರುವಿನಭವಾರ್ಚೆಗಿಚ್ಛಿತ
ವಿತತವಸ್ತುಗಳುಜ್ಜ್ವ ಮೇಣ್ ತ
ದ್ಧೃತವಸನಗಳನ್ನೈದೆ ಮಡಿಮಾಡಿದಬಳಿಕೆ ಪೋಗಿ ॥ ೩ ॥

ಕ್ಷಿತಿಯನೊಂದದ ಪತ್ರಪುಷ್ಪವ
ಹಿತದೆ ತರುವೀತೆರದ ಸೇವಾ
ವ್ರತವನಾಂತಾ ಬಸವರಾಜಸಮಾಖ್ಯಮರಿದೇವಂ
ನುತಚರಿತ್ರನ ಗುರುವಿನಳ್ತಿಯು
ಸುತನೆನಿಸುತಾ ಪೂಜ್ಯನನು ಸಂ
ತತಮಧಿಕ ಮುದಶರಧಿಯೋಳ್ ಮುಳುಗೇಳಿಸುತ್ತಿರ್ದಂ ॥ ೪ ॥

ಕರ್ಷಕರಿಗಾನಂದಸುಧೆಯಂ
ವರ್ಷಿಸುತ್ತಾಗವಿುಸಿದುದು ತಾಂ
ವರ್ಷಋತುವಾಕಾಲದೊಳು ನವಿಲುಗಳ ಬಳಗಕ್ಕೆ
ಹರ್ಷವಾಯ್ತುಂಚೆಗಳು ದುಃಖಾ
ಕರ್ಷಿತಗಳೆನಿಸಿದವು ಜಡದುಃ
ತ್ಕರ್ಷವದು ಸುಖದುಃಖದಾಯಕವೆಂಬುದೇಂ ಪುಸಿಯೇ ॥ ೫ ॥

ಸುರಪತಿಗೆ ಬಿಳಿಯಾನೆಯಲ್ಲದೆ
ಕರಿಯ ಗಜಗಳು ಮಿರ್ಕುಮವುಗಳು
ಸುರನದಿಯ ನೀರ್ಗುಡಿದು ಬೃಂಹಿತವೆಸಗಿ ಸಾಲ್ಗೊಂಡು
ಸುರಪಥದೊಳುರೆ ನಿಂದಿರುವವೆನೆ
ಭರದೆ ಗುಡುಗುತೆ ನೀಲತಮ ಜಲ
ಧರಗಳೋಳಿಯು ತೋರ್ದುದಾಕಾಲದೊಳುಗಗನದೊಳು ॥ ೬ ॥

ಸುರಪಥದೆ ಸಾಲ್ಗೊಂಡಿರುವ ಜಲ
ಧರವು ಧಾರಾಕಾರ ವೃಷ್ಟಿಯ
ಸುರಿಯೆ ಗಿರಿಕಂದರಗಳಲ್ಲದೆ ಹಳ್ಳಕೊಳ್ಳಗಳುಂ
ಕೆರೆತೊರೆಗಳುಂ ತುಂಬುತಂ ನೆರೆ
ಹರಿಯುತಂ ಭೂತಲವನೆಲ್ಲವ
ಪೊರಿಕಿಪೊಡೆ ಜಲಮಯವನಾಗಿಸಿತಾ ಸಮಯದಲ್ಲಿ ॥ ೭ ॥

ಬಿರುಮಳೆಯ ಹೊಡೆತಕ್ಕೆ ಮರಗಳೊ
ಳಿರುವ ಗೂಡುಗಳೊಡನೆ ಹಕ್ಕಿಯ
ಮರಿಗಳುಂ ನೆಲದಲ್ಲಿ ಹರಿಯುವ ನೀರಿನೊಳು ಬೀಳೇ
ಪರಿಕಿಸುತ್ತಿದೆಕರಿಗಿದಾ ಗುರು
ವರನು ಹಿಡಿತರಿಸುತ್ತವುಗಳನು
ನೆರೆಪೊರೆದ ಪರಿಯಚ್ಚರಿಯನಿತ್ತುದು ಸಮಸ್ತರಿಗೆ ॥ ೮ ॥

ಇಂತುಮಲ್ಲದೆ ಮಠದೊಳಗೆ ಬರಿ
ದಾಂತ ಹೊಟ್ಟೆಯ ಹಸುಗಳಂ ಮೇಣ್
ಸಂತತಂ ನೆಲಸಿರುವ ಹಸಿದ ಬಿಡಾಲನಂ ನೋಡಿ
ಚಿಂತೆಗೊಂಡಾಹಾರವವುಗಳಿ
ಗೆಂತೊಮರುಕದೆ ತಾನೆ ಕೊಡುವನ
ನಂತ ಕರುಣಾನಿಧಿಯು ತದ್ಗುರುಶಾಂತಚರಪತಿಯು ॥ ೯ ॥


ಸರ್ವಜೀವಾವಳಿಗೆ ಲೇಸನೆ
ಸರ್ವಕಾಲದೆ ಬಯಸುತಿರ್ದಾ
ಶರ್ವಶರಣರ ಧರ್ಮಮೂಲದ ದಯೆಯೆ ಮೈವೆತ್ತು
ಉರ್ವಿಯೊಳ್ ಗುರುಶಾಂತನಾಮಕ
ಗರ್ವವಿರಹಿತ ಮೂರ್ತಿಯೆನಿಸುತೆ
ಸರ್ವರಂ ರಕ್ಷಿಸುವನಿಂತೆಂದರಿದವರು ಪೊಗಳೇ ॥ ೧೦ ॥

ಅವರ ಹೊಗಳಿಕೆಯಿಂದೆ ನಸುಹಿ
ಗ್ಗುವುದನುಳಿದಾ ಚರಕುಲೇಶನು
ಭವದ ಜಾಡ್ಯವ ಕಳೆಯುವುಳವಿಕ್ಷೇತ್ರಯಾತ್ರೆಯಂನು
ತವೆನೆಗಳಲೆಳಸುತ್ತ ಭಕ್ತರ
ನಿವಹದೊಡನೆ ಸುಪೂಜ್ಯರೆನಿಸಿದ
ಸುವಿಮಳರ ಗುರುಚರರ ಕರೆದೊಯ್ವುದನು ನಿರ್ಣಯಿಸಿ ॥ ೧೧ ॥

ನವಿಲಗುಂದಕೆ ಬಂದು ಜವದಿಂ
ಭುವನನುತ ಗುರುಶಾಂತ ಮೂರ್ತಿಯು
ಗವಿಮಠದ ತದ್ಬಸವಲಿಂಗಸ್ವಾಮಿಗಳ ಕಂಡು
ಶಿವಮಯದ ನಿಜದರ್ಶನವನಿ
ತ್ತವರಿಗುಳವಿಕ್ಷೇತ್ರಕಾಗಮಿ
ಸುವುದು ನೀವೆಂದೊರೆಯಲವರೀ ತೆರದೊಳುಸುರಿದರು ॥ ೧೨ ॥

ಶ್ರೀ ದಯಾಘನಮೂರ್ತಿಗಳೆ ಗೂ
ಳೀದ ಗುಡ್ಡದ ಮುರುಗಮಠದವ
ರಾದ ಪೂಜ್ಯರು ನೀಲಕಂಠಸ್ವಾಮಿಗಳ್ ಜ್ವರದಾ
ಬಾಧೆಯಿಂ ಬಳಲುವರು ಭೈಷ
ಜ್ಯಾದಿಗಳಿನುಪಚರಿಸಿದೊಡಮದು
ಪೋದುದಿಲ್ಲವರಿರ್ಪರೀಮಠದಲ್ಲಿಯದರಿಂದೆ ॥ ೧೩ ॥

ನನಗೆ ಬರಲನುಕೂಲವಿಲ್ಲೆಂ
ಬನಿತರೋಳ್ ಜ್ವರಬಾಧೆಯಿಂದಂ
ಜನಿಸಿದಳಲಿನ ನೀಲಕಂಠಸ್ವಾಮಿಯೈತಂದು
ಅನಘಮುನದಜ್ಜಯ್ಯನೇ ನೀಂ
ಘನಕೃಪೆಯು ತಳೆದೆನ್ನ ರಕ್ಷಿಪು
ದೆನುತೆ ತದ್ಗುರುಪಾದಪಂಕಜಕೆರಗಲಾ ಬಳಿಕೆ ॥ ೧೪ ॥



ಶ್ರೀ ನಿ. ಪ್ರ. ನೀಲಕಂಠಸ್ವಾಮಿಗಳು ಗುಬ್ಬಿ ಹಾಗು ಗುಳೇದಗುಡ್ಡ

ಕರುಣವೇ ವ್ಯೈವೆತ್ತ ಮಾಳ್ಕೆಯೊ
ಳಿರುವ ತದ್ಗುರುಶಾಂತಯೋಗಿಯು
ಕರಗಿದೆದೆಯಿಂ ಸ್ನಾನ ಲಿಂಗಾರ್ಚನೆಯ ಪೂರೈಸಿ
ಜ್ವರದೆ ಪೀಡಿತನಾದ ತಚ್ಚರ
ವರಗೆ ಲೇಪಿಸಿ ಭಸ್ಮಮಂ ನಿಜ
ಚರಣತೀರ್ಥವನೀಯೆ ಕೆಲನಿಮಿಷಗಳೊಳಾ ಸ್ವಾಮೀ ॥ ೧೫ ॥

ರೋಗಮುಕ್ತತೆಯೊಂದಿ ತಾಂ ಭವ
ರೋಗವೈದ್ಯನೆ ನಿನ್ನ ಕೃಪೆಯಿಂ
ನೀಗಿದೇಂ ಜ್ವರದಳಲನೆಂದತಿಭಕ್ತಿಯಿಂ ಪೊಗಳೇ
ಆಗಳೆಲ್ಲರು ತತ್ಪರಮಶಿವ
ಯೋಗಿಮಹಿಮೆಯ ತಿಳಿದು ಮಿಗೆ ಬೆರ
ಗಾಗಿ ಕೊಂಡಾಡಿದರು ಕೆಲವಡಿಗುರುವಿನುನ್ನತಿಯಾ ॥ ೧೬ ॥

ಬಳಿಕೆ ಗುರುಚರಯುತನು ತದ್ಗುರು
ತಿಲಕನುತ್ತಮಭಕ್ತರೊಡನಿ
ನ್ನುಳಿವಿಸತ್‌ಕ್ಷೇತ್ರಕ್ಕೆ ತೆರಳುತ್ತಲ್ಲಿ ತಾಂ ನಲವಾ
ತಳೆದು ಗಣಸಂತೃಪ್ತಿಯಾಗಿಸಿ
ಮಲರಹಿತದಾಸ್ಥಾನದಲ್ಲಿ
ರ್ದೊಲವನಾಂತಾ ದುರ್ಗದಮಳ ಜಗದ್ಗುರುಗಳಡಿಗೆ ॥ ೧೭ ॥

ಮತ್ತಮುಳಿದಾ ಗುರುಚರರ್ಕಳಿ
ಗಿತ್ತು ಭಕ್ತಿಯ ಕಾಣ್ಕೆಗಳನವ
ರಿತ್ತ ಪರಕೆಯುಪಡೆದು ಕೆಲವಡಿಗಾಗಮಿಸಿ ಬಳಿಕೆ
ನಿತ್ಯದೋಳ್ ಮಠದಲ್ಲಿ ನಡೆಯುವ
ನುತ್ಯಕೃತಿಯೋಳ್ ತೊಡಗಿದನು ತ
ನ್ಮೃತ್ಯುಹರಗುರುಶಾಂತ ಶಿವಯೋಗೀಶ್ವರನು ಮುದದಿಂ ॥ ೧೮ ॥

ಶಲವಡಿಯ ಮಠದಾವರಣದೊಳ್
ಬೆಳೆಯಿಸುತೆ ನೂರೆಂಟು ಸಂಖ್ಯೆಯ
ತೊಳಪ ಬಿಲ್ವದ ವೃಕ್ಷಗಳ ಸಸಿಗಳನು ತಾವಿಟ್ಟು
ನಲಿದರಾಗುರುವರರು ಮತ್ತಂ
ವಿಲಸಿತದ ಷೋಡಶಸುಮಂಟಪ
ಗಳನು ವಿರಚಿಸುತವುಗಳೊಳ್ ಗುರುಜಂಗಮಾಂಘ್ರಿಗಳಾ ‖ ೧೯ ‖

ವಿಮಳಪೂಜೆಯ ಮಾಡಿಸುತೆ ಸಂ
ಭ್ರಮದೊಳಾ ಪೂಜ್ಯರಿಗೆ ವೇಣ್ ಸ
ಕ್ರಮದೆ ಧನವಸನಾದಿಗಳನರ್ಪಿಸುತೆ ಮಠದಲ್ಲಿ
ಅಮಿತಗಣಸಂತೃಪ್ತಿಯಾಗಿಸಿ
ಸುಮುದವಾಂತಾ ಸಚ್ಚರಿತ ಜಂ
ಗಮಧವನ ತದ್ಭಕ್ತಿ ಭಾವವ ಪೊಗಳಿದರು ಬುಧರು ‖ ೨೦ ‖

ಮುಕ್ತಿದಾಯಕನಾಗಿ ಪರಮ ವಿ
ರಕ್ತನಾಗಿ ನಿಜಾಂಘ್ರಿಸೇವಾ
ಸಕ್ತಜನತೇಷ್ಟಪ್ರದೇಶ್ವರನಾಗಿ ತದ್ಗುರುವು
ಭಕ್ತಿಪಥದಲ್ಲಿಂತು ನಡೆವನು
ರಕ್ತಿಯುಳ್ಳವನಾಗುತದ ನಿಜ
ಸೂಕ್ತಿಯಿಂ ಬೋಧಿಸುತೆ ಲೋಕೋದ್ಧಾರವೆಸಗಿದನು ‖ ೨೧ ‖

ಭೂನುತನು ಗುರುವೊಂದು ದಿನವಾ
ಶಾನುಭೋಗರ ಮನೆತನದ ಸು
ಜ್ಞಾನಿ ವೀರಪ್ಪನ ಕರೆಯಿಸುತ್ತೊರೆದನೀತೆರದೆ
ಮಾನನಿಧಿಯೇ ಮೂರುತಿಂಗಳಿ
ಗಾನು ಲಿಂಗದೊಳಡಗುವೆನು ಶಿವ
ನಾಣತಿಯು ಬಂದಿರುವುದಾದುದು ನನ್ನ ಮಣಿಹವದು ‖ ೨೨ ‖

ಮುಂದೆ ಮಠದೀ ಸುವ್ಯವಸ್ಥೆಗೆ
ಕುಂದು ಬಾರದ ತೆರದೆ ಸಲೆ ಮೊದ
ಲಂದದಿಂದಂ ನೋಡಿಕೊಳ್ವುದು ನಿನ್ನ ಹೊಣೆಯೆಂದು
ಎಂದ ಗುರುವರನೀ ಭವಿಷ್ಯದೆ
ನೊಂದ ವೀರಪ್ಪನು ತದಂಘ್ರಿಗೆ
ವಂದಿಸುತ್ತಪ್ಪಗಳೆ ತಾವೀತೆರದನುಜ್ಞೆಯನು ॥ ೨೩ ॥

ನೀಡಬಾರದು ನಮ್ಮ ರಕ್ಷಣ
ಮಾಡುವುದಕೀಲೋಕದೋಳ್ ಕೃಪೆ
ಗೂಡಿತಾವಿರಬೇಕು ಕೆಲದಿವಸಗಳವರೆಗೆಂದು
ಬೇಡುತಿರುವಾ ಸಮಯದೊಳಗಿ
ನ್ನಾಡಲಸದಳವಾದ ದುಃಖದ
ಬೀಡೆನಿಸಿದನು ಬಸವರಾಜಸಮಾಖ್ಯಮುರಿದೇವಂ ॥ ೨೪ ॥

ಆಗಳಾ ಗುರುಶಾಂತವರಶಿವ
ಯೋಗಿಯೊರೆದನು ನೀವು ದುಃಖಿತ
ರಾಗಲುಚಿತವಿದಲ್ಲ ಶಿವನಪ್ಪಣೆಯನನುಸರಿಸಿ
ಹೋಗಿ ಸೇರಲೆಬೇಕು ನಾವಾ
ಭೋಗಿಭೂಷನ ಗರ್ಭದೊಳಗಿದ
ಕಾಗಿ ಶಿವಭಕ್ತರ್ಕಳೊಂದಿರಬೇಕು ಸಂತಸವಾ ॥ ೨೫ ॥

ಒರೆದುದಿಲ್ಲವೆ ಬಸವದೇವರು
ಶರಣರಿಗೆ ಸಂಭವಿಸುತಿರ್ಪುದು
ಮರಣವಲ್ಲದು ನಲವನೀವ ಮಹಾನವಮಿಯೆಂದು
ಅರಿಯುತಾ ವಚನಾರ್ಥವನು ಮಿಗೆ
ತೊರೆದು ಮರಣದ ಭಯವ ಸಮ್ಮುದ
ಶರಧಿಯೆನಿಸಿದ ಶಿವನೊಳೈಕ್ಯವನೊಂದಬೇಕೆಂದು ॥ ೨೬ ॥

ತಿಳಿಸಿ ಸಂತೈಸುತ್ತವರನಾ
ಬಳಿಕೆ ತದ್ಗುರುಪುಂಗವನು ತಾಂ
ನಲವಿನಿಂ ಲಿಂಗಾರ್ಚನೆಗೆ ತೆರಳುತಿರಲದಕಂಡು
ಆಳಲನೆಂತೋ ಸಹಿಸಿ ತನ್ನಯ
ನಿಳಯವೊಂದಲು ಶಾನುಭೋಗನು
ತಳುವದಾಗುರುಸೇವೆಯೋಳ್ ತೊಡಗಿದನು ಮರಿದೇವಂ ॥ ೨೭ ॥

ಆಗಮಿಸುತಿರುವಾವ ವರಶಿವ
ಯೋಗಿಗಾ ಪಥದಲ್ಲಿ ಹರಿಯುವ
ನಾಗಿಣೀ ನದಿಯೆರಡು ಭಾಗಗಳಾದಿ ಕಾಲ್ನಡೆಯಿಂ
ಪೋಗಲಿತ್ತುದೊ ದಾರಿಯಿನ್ನಾ
ಶ್ರೀಗುರೂತ್ತಮಸಿದ್ಧಲಿಂಗನ
ರಾಗದಿಂ ನೆನೆವೊಂದೆ ಮನವಿರಲೆಮ್ಮಗನವರತಂ ॥ ೨೮ ॥

ಪರಮಪಾವನ ಚರಿತವಿದನಾ
ದರದೆ ಪಠಿಸುವ ಪೇಳುವಾಲಿಸು
ವರಿಗೆ ತದ್ಗುರುಶಾಂತ ಶಿವಯೋಗಿಶ್ವರನು ಕೃಪೆಯಿಂ
ಚಿರತರಾಯುರರೋಗ ಭಾಗ್ಯವ
ಕರುಣಿಸುವನಲ್ಲದೆಯೆ ಗುರುಹರ
ಚರರನುಗ್ರಹವಾಗಿಸುವನನವರತವಿದು ನಿಜವು ॥ ೨೯ ॥

೧೬ನೆಯ ಸಂಧಿ ಸಂಪೂರ್ಣಂ ಪದ್ಯಗಳು ೬೦೧ ಕ್ಕೆ ಮಂಗಳಂ

ಶ್ರೀ ಗುರುಶಾಂತ ಶಿವಯೋಗೀಶ್ವರಃ ಪ್ರಸೀದತು

ಹದಿನೇಳನೆಯ ಸಂಧಿ

ಸೂಚನೆ— ಬಸರಾಜ ಸುಶಿಷ್ಯಪುಂಗವ
ಗೆಸೆವ ನಿಜಮತದ ಸ್ವರೂಪವ
ನೊಸೆದು ಬೋಧಿಸಿ ತದ್ಗುರುವು ಲಿಂಗದೊಳು ತಾಂ ಬೆರೆದಂ

ದೋಷವಿರಹಿತ ಬಸವರಾಜಸು
ದೇಶಿಕನ ಹೃದ್ಗೇಹದೊಳು ಸಲೆ
ಭಾಸಿಸುವ ಘನಲಿಂಗವೆನಿಸಿದನಾವ ಗುರುವರನು
ಈಶ ರೂಪವನಾಂತ ವರಚಿ
ದ್ಭಾಸನಾ ಗುರುಶಾಂತ ಶಿವಯೋ
ಗೀಶನೆಮ್ಮಯ ಹೃದಯಪಂಕಜ ಸೂರ್ಯನಾಗಿರಲಿ ॥ ೧ ॥

ಬಳಿಕೆಲಿಂಗದೊಳಡಗುವವಧಿಯ
ತಿಳಿಸಿರುವ ಗುರುಸೂಕ್ತಿ ಪುಸಿಯುಂ
ತಳೆಯದೆಂದಾ ಚಂದ್ರಶೇಖರ ಶಾಸ್ತ್ರಿ ತಾನೊಮ್ಮೆ
ತಳೆದ ಧೃತಿಯಿಂ ತನ್ಮಹಿಮನಡಿ
ದಳಿರಸನಿಹಕೆ ಬಂದು ಪೂಜ್ಯರೆ,
ತೊಳಪ ಮಠಕುರೆಹಿಂದಿರುವ ಬಿಲ್ವದ ಸುವನದಲ್ಲಿ ॥ ೨ ॥

ಮಾಡೆ ನಿಮ್ಮಮಳಿನ ಸಮಾಧಿಯು
ನಾಡೆ ಶೋಭಿಸುತಿರ್ಪುದೆನೆ ನಗೆ
ಗೂಡಿ ಶಾಸ್ತ್ರಿಗಳೇ, ಮಠದ ಮುಂದಕ್ಕೆ ಬರಬೇಕು.
ನೋಡೆ ಹಿಂದಕೆ ಪೋಗುವುದು ಸರಿ
ಗೂಡದೆಂದಾ ಯೋಗಿಪುಂಗವ
ರಾಡಿದುದಕಾ ಶಾಸ್ತ್ರಿಗಳು ಮೌನವನು ಧರಿಸಿದರು || ೩ ||

ಕಳೆಯೆ ಕೆಲದಿವಸಂಗಳಾ ಗುರು
ತಿಲಕನೇ ತಾನೊಂದು ದಿನದೊಳು
ಪಲವೆಡೆಯ ಚರಮೂರ್ತಿಗಳ ಕರೆಯಿಸುತಮವರಿದಿರೋಳ್
ಸಲೆ ಸಮಾಧಿಯ ವಿಷಯಮಂ ನಿ
ಶ್ಚಲದ ಮನದಿಂದಂ ವಿಚಾರಿಸಿ
ನೆಲೆಯನೊಂದಂ ನಿರ್ಧರಿಸಿಕೊಂಡಿರುವುದೆಂದೊರೆದಂ || ೪ ||

ಬಸವರಾಜಸುದೇಶಿಕಂಗಿಂ
ತುಸಿರಿದಾ ನುಡಿ ತಂದುದಧಿಕ
ವ್ಯಸನಮಂ ಕಳೆಗುಂದಿರುವ ತನ್ಮುಖವನೀಕ್ಷಿಸುತೇ
ಒಸರಲೊಡಗಿದವಲ್ಲಿ ಸಲೆ ಮಂ
ಡಿಸಿದ ಮೂರ್ತಿಗಳಕ್ಷಿಯಿಂದಂ
ಬಿಸಿಯ ಕಂಬನಿಗಳವು ನೋಡುತ್ತದನು ಶಿವಯೋಗಿ || ೫ ||

ವಿರತಿಧನರಾಗಿರ್ದ ನಿಮಗಂ
ಬರುವುದಚ್ಚರಿ ಕಂಬನಿಗಳಿವು
ಪರಶಿವನೊಳಡಗುವ ಸುಸಮಯವು ಮುಕ್ತಿಭಾಮಿನಿಯಾ
ಕರವ ಹಿಡಿಯುತ್ತಿರುವ ಮಂಗಳ
ಕರ ಮುಹೂರ್ತವದೆಂದು ತಿಳಿದಾ
ಶರಣರುರೆ ಹಿಗ್ಗುವರೆನುತ್ತಾ ಯೋಗಿವರನೊರೆದು || ೬ ||

ಸಂತಯಿಸುತವರುಗಳ ಕಳಿಸಿದ
ನಂತರದೊಳಾ ಮುಖ್ಯಶಿಷ್ಯನ
ನಂತಿಕಕೆ ಕರೆದಾತನುರುಚಿಂತೆಯನು ಪರಿಹರಿಸಿ
ಶಾಂತಮನನಾಗಿಸುವ ಕತದಿಂ
ದಿಂತು ಬೋಧಿಸತೊಡಗಿದನು ಗುರು
ಶಾಂತಚರಪತಿ ವೀರಶೈವಮತಸ್ವರೂಪವನು ‖ ೭ ‖

ಪರಮಶಿಷ್ಯನೆ ನಮ್ಮಗಷ್ಟಾ
ವರಣವಂಗವು ಮತ್ತೆ ಪಂಚಾ
ಚರಣೆಯುಸುವೆನಿಸುವುದು ಷಟ್ ಸ್ಥಲವಾತ್ಮವಾಗಿರ್ಕುಂ
ಪೊರಿಕಿಸುವೊಡೀ ಮೂರರಿರವನು
ನೆರೆ ತಿಳಿಯಲಾ ವೀರಶೈವದ
ವರಮತದ ವಿಮಲಸ್ವರೂಪದ ನಿಲವು ತಿಳಿಯುವುದು ‖ ೮ ‖

ಮತದ ಸಾಮಾಜಿಕದಖಿಲಸ
ತ್ಕೃತಿಗಳಷ್ಟಾವರಣದಿಂ ಸಂ
ಯುತಗಳೆನಿಸುವುವಿನ್ನು ಪಂಚಾಚಾರಗಳು ನಮ್ಮೊಳ್
ವಿತತನೀತಿಯನುಂಟು ಮಾಡುವ
ವತುಳ ಮತಸಿದ್ಧಾಂತವಾ ವಿ
ಶ್ರುತದ ಷಟ್ ಸ್ಥಲದಲ್ಲಿರುವುದುಸುರುವೆನವುಗಳಿರವಾ ‖ ೯ ‖

ಗುರುವು ಲಿಂಗವು ಜಂಗಮನು ಮೇಣ್
ವರವಿಭೂತಿ ಶಿವಾಕ್ಷಿಯಲ್ಲದೆ
ಹರಸುಮಂತ್ರವು ತೀರ್ಥಮುಂ ಪರಮಪ್ರಸಾದವದು
ಇರುವವಿಂತಾವರಣವೆಂಟಿ
ಲ್ಲರಿಗೆ ದಿನದಿನದಲ್ಲಿಗೈವಾ
ಚರಣೆಗತಿಮುಖ್ಯಗಳೆನಿಸಿ ನಮ್ಮಯ ಸಮಾಜದೊಳು ‖ ೧೦ ‖

ಪರತರರು ಗುರುಲಿಂಗಜಂಗಮ
ರಿರುವರೆಮ್ಮಗುಪಾಸ್ಯ ಮೂರ್ತಿಗ
ಳರಿವೊಡಾ ಮೂರ್ತಿತ್ರಯೋಪಾಸನೆಯಗೈವುದಕೆ
ಇರುವ ಸಾಧನವೆನಿಸಿದವು ತ
ದ್ವರ ವಿಭೂತಿ ಶಿವಾಕ್ಷಿಮನುಗಳು
ವರಫಲವೆ ತೀರ್ಥಪ್ರಸಾದವು ನಮ್ಮುಪಾಸನೆಗೆ ॥ ೧೧ ॥

ನೋಡೆ ಗುರುಹರಚರರ ರೂಪದೆ
ಕೂಡಿರುವ ಲಿಂಗತ್ರಯಂಗಳ
ನಾಡೆ ಸದ್ಭಕ್ತಿಯೊಳುಪಾಸಿಸಬೇಕು ಮತ್ತುಳಿದಾ
ನಾಡದೈವಗಳರ್ಚನಾದಿಯು
ಮಾಡಕೂಡದೆನಿಪ್ಪ ನಿಯಮದೆ
ಕೂಡಿರುವುದೆಮ್ಮಯ ಸಮಾಜದ ಧರ್ಮವಿದನರಿ ನೀಂ ॥ ೧೨ ॥

ಪೊರಿಕಿಪೊಡೆ ಶಿವಸತ್ಸ್ವರೂಪರು
ಗುರುಸುಲಿಂಗಚರರ್ಕಳಿನ್ನಾ
ಹರನ ತೇಜವೆ ಭಸ್ಮವಾತನಿಗಿರ್ಪ ತಿಳಿಗಣ್ಣೇ
ಪರಶಿವಾಕ್ಷಿಯು ಶಿವನನಾಮವೆ
ಪರಮ ಮಂತ್ರವು ತದ್ದಯಾರಸ
ಮರಿಯೆ ತೀರ್ಥವು ತತ್ಪ್ರಸನ್ನತೆಯೇ ಪ್ರಸಾದವದು ॥ ೧೩ ॥

ಎಂದು ನಾವಷ್ಟಾವರಣಗಳೊ
ಳೊಂದಿ ನಿಷ್ಠೆಯ ನಡೆದೊಡೆಮ್ಮೊಳು
ಬಂದು ನೆಲಸಿರ್ಪುದು ನಿರುತಮಾ ಶಿವನ ಸದ್ರೂಪಂ
ಎಂದಿರುವ ಮತಧರ್ಮಮಂ ಬಗೆ
ದಂದು ನಿನ್ನಾಶ್ರಿತರಿಗೈಸಲೆ
ಮುಂದೆ ನೀಂ ಬೋಧಿಸುವುದೆಂದನು ಶಿಷ್ಯಗಾ ಬಳಿಕೆ ॥ ೧೪ ॥

ನೀತಿಯಂ ಪ್ರತಿಪಾದಿಸುವ ವಿ
ಖ್ಯಾತ ಪಂಚಾಚಾರಗಳ ಸಂ
ಪ್ರೀತಿಯಿಂದೀತೆರದೆ ಬೋಧಿಸತೊಡಗಿ ತದ್ಗುರುವು
ಭೂತಲದೆ ಧರ್ಮಾಚರಣೆಯದು
ನೀತಿವಿರಹಿತವಾಗೆ ಸುಫಲೋ
ಪೇತಮಾಗದು ನೀತಿಯೇ ನೆಲಗಟ್ಟು ಧರ್ಮಕ್ಕೇ ॥ ೧೫ ॥

ಮತವನುಳಿದೊಡಮನಘನೀತಿ
ಚ್ಯುತರೆನಿಸದಿರವೇಳ್ಕುಮೆಂಬರು
ನುತಚರಿತರಾ ಶಿವಶರಣರದರಿಂದೆ ನಿನಗಿನ್ನು
ವಿತತ ನೈತಿಕಜೀವನಸಮಾ
ಶ್ರಿತರನಾಗಿಸುತಿರ್ಪ ಸರ್ವೋ
ನ್ನತದ ಪಂಚಾಚಾರದಿರವನು ಕಥಿಪೆನೆಂತೆನಲು ॥ ೧೬ ॥

ಅಂಗಗುಣಗಳನಳಿದು ತಮ್ಮೊಳ್
ಲಿಂಗಗುಣಗಳ ಪಡೆಯುತಿರ್ಪುದೆ
ಲಿಂಗವಿಮಳಾಚರವೆನಿಸುವುದೈದರೊಳಗದು ತಾಂ
ಲಿಂಗವಂತರು ಸತತವಾತ್ಮೀ
ಯಾಂಗದೊಳ್ ಧರಿಸಿರ್ಪ್ಪಲಿಂಗದ
ಸಂಗವಂ ಬಿಡದಾಚರಿಸುವುದಕಾದಿಯೆನಿಸಿರ್ಕುಂ ॥ ೧೭ ॥

ಲಿಂಗಗುಣಗಳ ಪಡೆದೆಸೆಯುವಾ
ಲಿಂಗವಂತರು ಮೆಚ್ಚುವಂತೆ ಮ
ನಂಗೊಳಿಪ ವರ್ತನದೊಳಿರುತಂ ಕಾಯಕವನೊಂದಾ
ಲಿಂಗಪೂಜೆಯುದೆಂದೆ ಗೈದದ
ರಿಂ ಗಳಿಸಿದುದನರ್ಪಿಸುತೆ ಗುರು
ಲಿಂಗಜಂಗಮರಿಗೆ ಮಗುಳ್ದವರಿತ್ತ ಶೇಷವನು ॥ ೧೮ ॥

ಭೂರಿಮುದದಿಂ ಭೋಗಿಸುವ ಕೃತಿ
ವೀರಶೈವರಿಗೊಪ್ಪುವ ಸದಾ
ಚಾರವೆನಿಸುವುದಿನ್ನು ತನ್ನೊಳಗಲ್ಲದೆಯೆ ಮತ್ತಂ
ಸಾರಭಕ್ತರೊಳಾ ಪರಶಿವಾ
ಕಾರಮಂ ಕಂಡವರೊಳಿಡುತಂ
ಗೌರವವ ನಡಕೊಳ್ವುದು ಶಿವಾಚಾರವೆನಿಸುವುದು ॥ ೧೯ ॥

ಹಿಡಿದ ಲಿಂಗವ್ರತದ ಪಥದ
ಲ್ಲಿಡರುಗಳು ಬಂದಡಸಿದೊಡಮವ
ಬಿಡದೆ ಹೊಡೆದೋಡಿಸುವ ವೃತ್ತಿಗಣಾಚರಣಮುಕ್ಕುಂ
ಪಡೆಯದಿರೆ ತಾವಾಚರಣವಿದ
ಪಡೆಯರಿಷ್ಟಾರ್ಥಗಳ ಸಿದ್ಧಿಯು
ನಡೆಯಿಸುವ ನಿಜಧರ್ಮದೊಳಗೆಂದೊರೆವರರಿದವರು ॥ ೨೦ ॥

ಇಂತಿರುವ ನಾಲ್ಕಾಚರಣೆಗಳ
ನಾಂತವರು ನಿರಹಂಕೃತಿಯು ಬಿಡ
ದಂತೆ ತಳೆಯುತೆ ತಮ್ಮ ಪರಮುಸಮಾಜ ಸೇವೆಯನು
ಸಂತಸದೆ ಮಾಡುತ್ತೆ ತಮ್ಮೊಳು
ಶಾಂತಿಸಮತಾದಿಗಳ ಪಡೆವ
ತ್ಯಂತ ಮುಖ್ಯ ಸುವೃತ್ತಿ ಭೃತ್ಯಾಚಾರವೆನಿಸುವುದು ॥ ೨೧ ॥

ವೀರಶೈವರಿಗಿರ್ಪ ಪಂಚಾ
ಚಾರಗಳ ಪರಿಕಿಸುವೊಡವರಾ
ಸಾರಪಂಚಪ್ರಾಣಗಳೆ ತಾವಾಗಿರುವವೆಂದು
ತೋರದಿರದಿವುಗಳ ಸಮಗ್ರ ವಿ
ಚಾರಮಂ ನೀಂ ನಿನ್ನ ಮಠದೊಳ
ನಾರತಂ ಭಕ್ತರ್ಗೆ ಕಥಿಸುವುದೆಂದನಾ ಗುರುವು ॥ ೨೨ ॥

ಬಳಿಕೆ ಮತಸಿದ್ಧಾಂತದುನ್ನತ
ನಿಲಯಮೆನಿಸಿದ ಷಟ್ ಸ್ಥಲದ ನಿ
ರ್ಮಳದ ತತ್ವವ ತಿಳಿಸ ತೊಡಗಿದನಿಂತು ತದ್ಗುರುವು
ತಿಳಿಯೆ ವಿಶ್ವದ ಜನನ ಮುಖ್ಯಂ
ಗಳ ಸದಾಶ್ರಯದೆಡೆಯೆನಿಸಿ ಮಿಗೆ
ಬೆಳಗುವುದರಿಂ ಶಿವನು ತಾಂ ಸ್ಥಲವಾಚ್ಯನೆನಿಸಿದನು ॥ ೨೩ ॥

ಸ್ಥಲ ಸುನಾಮಕ ಶಿವನೆ ತಾನಿ
ನ್ನೆಳಸಿ ಪೂಜಕ ಪೂಜ್ಯಲೀಲೆಯ
ಬಳಿಕೆ ಲಿಂಗಾಂಗಸ್ವರೂಪವನಾಂತನಿರ್ಬಗೆಯಿಂ
ತಿಳಿಯೆ ಲಿಂಗನೆ ಪೂಜ್ಯನಾತನ
ಸಲೆಸಮರ್ಚಿಸುವಂಗನೇ ಮಿಗೆ
ತಳೆದು ಭಕ್ತಿಯ ಪೂಜಕನು ತಾನೆನಿಸಿರುವನರಿ ನೀಂ ॥ ೨೪ ॥

ಶಿವನ ಶಕ್ತಿಯುಮಾತನಂತೆ
ದ್ವಿವಿಧತೆಯನೊಳಗೊಂಡು ಲಿಂಗದೊ
ಳವಿರತಂ ಕಳೆಯೆಂಬ ಪೆಸರಿಂ ಭಕ್ತಿನಾಮದೊಳು
ಸುವಿಮಳಾಂಗನೊಳಿರ್ಪುದಿದರಿಂ
ಸುವಿದಿತಂ ವರವೀರಶೈವಮ
ತವದು ಶಕ್ತಿವಿಶಿಷ್ಟಮೆಂಬುದು ಸರ್ವವಿಬುಧರಿಗೆ ॥ ೨೫ ॥

ಅಂಗಗತ ತದ್ಭಕ್ತಿ ಶಕ್ತಿಯು
ಲಿಂಗದಮಳೋಪಾಸನದೊಳು
ತ್ತುಂಗವಿಕಸನಮಂ ಪಡೆವುದೇ ಮುಕ್ತಿಗತಿಯೆಂಬಾ
ಇಂಗಿತವನರಿದಾಚರಿಸುವಾ
ಭಂಗಿಯೇ ಷಟ್ ಸ್ಥಲದ ಮಾರ್ಗದೆ ಕಂ
ಗೊಳಿಪ ಸಿದ್ಧಾಂತದೊಳದಿರುಳೆಂದು ತಿಳಿ ಮಗನೇ ॥ ೨೬ ॥

ಅಂಗನೊಂದಿದ ತನುಕರಣದೊಳು
ಲಿಂಗವುಂ ತಾನಿರಿಸಿಕೊಂಡು ಮ
ನಂಗೊಳಿಪ ಪೂಜಾದಿಗಳನೆಸಗುವ ಸುಕೃತ್ಯಕ್ಕೆ
ಲಿಂಗವದು ಭೇದಗಳನೊಂದುವ
ಪಾಂಗಿನಿಂ ತದ್ಭೇದವೊಂದುವ
ನಂಗನುಂ ಷಟ್‌ಸ್ಥಲದ ವಿವಿಧತೆಗಿದು ಸುಕಾರಣವು ॥ ೨೭ ॥

ಅಂಗನೊಂದಿದ ಮೂರೊಡಲೊಳಂ
ಲಿಂಗವಿಷ್ಟಪ್ರಾಣ ಸದ್ಭಾ
ವಂಗಳೆಂಬ ಸುನಾಮದಿಂದಂ ಪೂಜೆಗೊಳ್ಳುವುದು
ಅಂಗನುಂ ತಾಂ ಮೂದೆರದ ನಾ
ಮಂಗಳಿಂ ಪೂಜಿಸುವನವುಗಳೆ
ಕಂಗೊಳಿಸುಗುಂ ತ್ಯಾಗಿ ಭೋಗಿಯು ಯೋಗಿಯಿಂತೆಂದು ॥ ೨೮ ॥

ಬಳಿಕೆ ಬಹಿರಿಂದ್ರಿಯಗಳೈದಿ
ನ್ನೊಳಗಿರುವ ಮನವೊಂದು ಕರಣಂ
ಗಳೊಳಿವಾರರೊಳಂ ಸುಪೂಜೆಯ ಕೊಳ್ವಕತದಿಂದೆ
ವಿಲಸಿತಂ ಲಿಂಗವದು ಪರಿವಿಡಿ
ಯೊಳು ತಿಳಿಯಲಾಚಾರಗುರುಶಿವ
ಮಲರಹಿತ ಚರಸುಪ್ರಸಾದ ಮಹಾಭಿಧಾನದೊಳು ॥ ೨೯ ॥

ಬೆಳಗೆ ತತ್ಪೂಜೆಯನು ಮಾಡ
ಲ್ಕೆಳಸುತಂಗಂ ಕ್ರಮದೆ ಭಕ್ತಂ
ತೊಳಪ ಮಾಹೇಶಂ ಪ್ರಸಾದಿ ಪ್ರಾಣಲಿಂಗಿಯು ಮೇಣ್
ಸಲೆ ಶರಣನಿನ್ನೈಕ್ಯನೆಂಬೀ
ವಿಲಸಿತಾಖ್ಯೆಯ ಪಡೆವನಿದೆ ಷಟ್
ಸ್ಥಲದ ಲಿಂಗಾಂಗಳ ಷಡ್ವಿಧ ಭೇದವೆನಿಸುವುದು ॥ ೩೦ ॥

ಮೊದಲ ಭಾವಾದಿತ್ರಯದ ಲಿಂ
ಗದೊಳು ಸಚ್ಚಿತ್ಸುಖದ ವರನಾ
ಮದೊಳಿರುವಕಲೆ ಮತ್ತಮಾಚಾರಾದಿ ಲಿಂಗದೊಳು
ವಿದಿತಮಾದ ನಿವೃತ್ತಿ ಮೊದಲೆನಿ
ಸಿದ ಷಡಾಖ್ಯೆಯ ತಳೆದು ಶೋಭಿಸು
ವುದು ವಿಚಾರಿಸಲಂಗಗತ ತದ್ಭಕ್ತಿ ಶಕ್ತಿಯುು ತಾಂ ॥ ೩೧ ॥

ಸ್ಥೂಲ ಸೂಕ್ಷ್ಮಸುಕಾರಣಾಂಗದೆ
ಕೇಲಿಸಿರ್ಕುಂ ಸತ್ಕ್ರಿಯಾ ಸುವಿ
ಶಾಲ ಸಮ್ಯಗ್ ಜ್ಞಾನಪರಮಾನುಭವ ರೂಪದೊಳು
ಪೇಳಲಿನ್ನೇಂ ಶ್ರದ್ಧೆ ನಿಷ್ಠೆಯುು
ಮಾಳವಾದವಧಾನವನುಭವ
ಪಾಲಸಿತದಾನಂದಮುುಂ ಸಮರಸಮೆನಿಪ ಪೆಸರಿಂ ॥ ೩೨ ॥

ಬೆಳಗುವುದು ಭಕ್ತಾದಿಯಾರು
ಸ್ಥಲದೊಳಾ ಭಕ್ತಿಯನುಪಾನ
ದೊಳು ವಿಕಾಸವನೆಸಗುತಂ ಸಮರಸವಗೈಯಲದೇ
ತಳೆವಮುಕ್ತಿಸ್ಥಿತಿಯೆನಿಸುವುದು
ವಿಲಸಿತದ ಷಟ್ ಸ್ಥಲದ ಪಥದೊಳು
ತಿಳಿಯಿದನುಃ ನೀನೆಂದು ಬಳಿಕಾ ಶಿಷ್ಯಪುಂಗವಗೆ ॥ ೩೩ ॥

ವೀರಶೈವರ ಮತದ ತತ್ವದ
ಸಾರವಿದನನುಭವಿಗಳೊರೆವ ವಿ
ಚಾರದಿಂ ವಿಸ್ತರಿಸಿಕೊಂಡದ ನೀನು ಮಠದಲ್ಲಿ
ಸೇರುವೆಲ್ಲರಿಗುಸುರುತವರು
ದ್ಧಾರಕೃತಿಯೋಳ್ ತೊಡಗಿ ಚಿಂತಾ
ಭಾರವಿರಹಿತನಾಗಿ ಶಾಂತಿಯೊಳಿರ್ದು ಸುಖಿಯಾಗು ॥ ೩೪ ॥

ಎಂದು ಬೋಧಿಸಲಾ ಮಹಾಯೋ
ಗೀಂದುವಿನ ಚರಣಕ್ಕೆರಗಿ ನಲ
ವೊಂದಿದನು ತದ್ಬಸವರಾಜಸಮಾಖ್ಯ ಮರಿದೇವಂ
ಮುಂದೆ ಕೆಲದಿವಸಗಳಿಗಧಿಕಾ
ನಂದಕರ ಶಿವರಾತ್ರಿಯೈತರ
ಲಂದು ತದ್ಗುರುಶಾಂತ ಶಿವಯೋಗೀಶ್ವರರು ನಲವಿಂ ॥ ೩೫ ॥

ಮಾಡಿ ಶಿವಪೂಜೆಯನು ಮಠದೋಳ್
ಕೂಡಿರುವ ಭಕ್ತರಿಗೆ ತೀರ್ಥವ
ನೀಡುತಿನ್ನು ಮಹಾಗಣಾರಾಧನೆಯನಾ ದಿನದೋಳ್,
ಮಾಡಿಸಿದರಾ ಬಳಿಕೆ ದಿನವೆರ
ಡೋಡೆ ಮೂರನೆ ದಿವಸದುದಯದೆ
ಮಾಡುತಾನಂದದೊಳು ನಿಜಲಿಂಗದ ಸಮರ್ಚನೆಯಾ ॥ ೩೬ ॥

ಬಂದು ಮಠದಂತರದ ಪೀಠವ
ನೊಂದಿ ತಮ್ಮಯ ದರ್ಶನಕ್ಕೈ
ತಂದವರಿಗುರೆ ನೀತಿಬೋಧೆಯ ನೆಸಗುತಾ ಬಳಿಕೆ
ಅಂದು ಮಧ್ಯಾಹ್ನದ ಶಿವಾರ್ಚನೆ
ಗೆಂದು ಸಿದ್ಧತೆಗೈದು ಕರೆಯಲು
ಬಂದ ಶಿಷ್ಯನ ಬಸವರಾಜಸುದೇಶಿಕನ ಕಂಡು ॥ ೩೭ ॥

ಬಸವರಾಜನೆ ಕೈಯ ಹಿಡಿದೆ
ಬ್ಬಿಸು ಹೃದಯದೊಳಗೇಕೊ ಶೂಲಿಯು
ನಸು ಜನಿಸಿತೆಂದೊರೆವನಿತರೊಳೆ ಮೂರ್ಛೆ ಸಂಭವಿಸೇ
ವ್ಯಸನದಿಂ ಬಗಲಲ್ಲಿ ಕೈಸೇ
ರಿಸುತೆ ಮೇಲಕ್ಕೆತ್ತಿ ಕುಳ್ಳಿರಿ
ಸುತೆ ನಿರೀಕ್ಷಿಸುತಿರಲು ತಾಂ ಮರಿದೇವರಾಗಳೆ ಮೇಣ್ ॥ ೩೮ ॥

ಗುರುವರನು ಕಣ್ಮುಚ್ಚಿದನು ತ
ಚ್ಚರಣಯುಗದೊಳ್ ಬಿಸಿಯ ಬೂದಿಯು
ಭರದೆ ತಿಕ್ಕಲು ಮತ್ತೆ ಕಣ್ದೆರೆದಾ ಚರೋತ್ತಮನು
ಹೊರಗೆ ಹೋಗುವೆನೆಂದೆರಡ ಸೂ
ಳೊರೆಯೆ ಮರಿದೇವರು ಬಹಿಃಕ್ರಿಯೆ
ಗಿರುವುದೀ ನುಡಿಯೆಂದರಿಯುತಪ್ಪಗಳೆ ನೀವಿನ್ನು ॥ ೩೯ ॥

ಹೊರಗೆ ಹೋಗಲೆಬಾರದಾ ಕ್ರಿಯೆ
ಭರದೊಳಿಲ್ಲಿಯೆ ನಡೆಯಲೆಲ್ಲಾ
ಪರಿಯ ಸೇವೆಗೆ ಸಿದ್ಧನಿರುವೆನು ಬೇರೆಯೋಚನೆಯಾ
ತೊರೆಯಿರೆಂದುರೆ ಬೇಡೆ ತಮ್ಮನೆ
ತೊರೆದೆನೆಲ್ಲವ ನಿನ್ನಪೇಕ್ಷೆಯ
ದಿರುವವಮಾಳ್ಕೆಯೊಳಾಗಲೆಂದಾಶೀರ್ವದಿಸಿ ಬಳಿಕೆ ॥ ೪೦ ॥

ಶಾಲಿವಾಹನ ನೃಪವರನ ಶಕ
ಕಾಲದಾ ಹದಿನೆಂಟು ನೂರರ
ಮೇಲೆ ತಾನೈವತ್ತುಮೂರನೆಯಾ ಸುವತ್ಸರದೊಳ್
ಕೀಲಿಸಿದ ಫಾಲ್ಗುಣದ ಶುದ್ಧದೊ
ಳಾ ಲಸಿತದೆರಡನೆಯ ತಿಥಿಯೊಳ್
ಕಾಲಹರನಾಕಾರದಾ ಶಿವಯೋಗಿ ಪುಂಗವನು ॥ ೪೧ ॥


ಕೊಟ್ಟು ಪರಕೆಯ ನೆರೆದ ಭಕ್ತರಿ
ಗಿಟ್ಟು ತನ್ನಯ ಲಿಂಗದೊಳ್ ಸಲೆ
ದಿಟ್ಟಿಯಂ ದೇಹಸ್ಮೃತಿಯ ತಾಂ ಬಿಟ್ಟು ಶಂಕರನಂ
ನಿಟ್ಟೆಯಿಂ ಜಾನಿಸುತ ಮಾತನೊ
ಳಿಟ್ಟನಾತ್ಮವನಾ ಸಮಯದೊಳ್
ಪುಟ್ಟಿದುದು ಮರಿದೇವರಿಗೆ ಬಹುದುಃಖವೇನೊರೆವೇಂ ॥ ೪೨ ॥

ಶಿಲವಡಿಯ ಹಿರಿಕಿರಿಯರೆಲ್ಲರು
ತಳುವದಾ ಮಠಕೋಡಿ ಬರುತಂ
ತೊಳಪ ಗುರುದರ್ಶನವು ಮುಂದೆಮಗಿಲ್ಲದಾಯ್ತೆಂದು,
ಅಳಲಕಡಲೊಳ್ ಮುಳುಗೆ ನಾಲ್ದೆಸೆ
ಗಳಿಗೆ ತದ್ವಾರ್ತೆಯನು ಮುಖ್ಯರು
ತಿಳಿಸೆ ನಾಡವರಾಗಮಿಸಿದರು ಪವನವೇಗದೊಳು ॥ ೪೩ ॥

ತಂತಿಯಿಂದಂ ತಿಳಿಸಲೀ ವೃ
ತ್ತಾಂತಮಂ ಶಿವಯೋಗಮಂದಿರ
ದಂತರಸ್ಥಿತ ಬಸವಲಿಂಗಸ್ವಾಮಿಗಳಿಗವರು
ಚಿಂತೆಗೊಳಗಾಗುತ್ತೆ ತಮ್ಮಗ
ಳಂತಿಕದ ಗೂಳೇದ ಗುಡ್ಡದ
ಶಾಂತಚಿತ್ತರ ನೀಲಕಂಠಸ್ವಾಮಿಗಳ ಮತ್ತಂ ॥ ೪೪ ॥

ಸುರುಚಿರದ ಕುರವತ್ತಿಯಾ ಚರ
ವರ ಮಹಾದೇವಾಖ್ಯಪೂಜ್ಯರ
ಕರೆದುಕೊಂಡವಸರದೆ ಶಿಲವಡಿಗಾಗಮಿಸೆ ಮತ್ತಂ
ನೆರೆಯುವವರಾದಿಯು ಗದಗು ಸಂ
ಸ್ಫುರಿಪ ಹೊಸಹಳ್ಳಿಯದು ಮೊದಲಾ
ಗಿರುವ ಪುರಗಳ ಚರವರೇಣ್ಯರು ಬಂದರಾ ಬಳಿಕೆ ॥ ೪೫ ॥

ಗುರುಚರಾದಿಗಳೊಡನೆ ತಳ್ತಾ
ಪರಮ ಪೂಜ್ಯರು ಬಸಲಿಂಗಸು
ಚರವರೇಣ್ಯರು ವಾದ್ಯರವದೊಡನಾ ಗುರೂತ್ತಮರಾ
ನಿರುಪಮೋತ್ಸವವೆಸಗುತಂ ಪರ
ತರ ಸಮಾಧಿ ಕ್ರಿಯೆಯನಾಗಿಸಿ
ದರು ಸುನಿಶ್ಚಿತಪೆಡೆಯೊಳಾಮಠದಲ್ಲಿ ಸಕ್ರಮದಿಂ ॥ ೪೬ ॥



ಶ್ರೀ ನಿ. ಪ್ರ. ಗುರುಶಾಂತಮಹಾಸ್ವಾಮಿಗಳವರ ಗದ್ದುಗೆ

ಮುಂದೆ ಮತ್ತಾ ಗದ್ದುಗೆಗೆ ಹ
ನ್ನೊಂದು ದಿನಗಳವರೆಗೆ ಸಕ್ರಮ
ದಿಂದೆ ತದ್ರುದ್ರಾಭಿಷೇಕವ ಮಾಳ್ಪ ಸಮಯದೊಳು
ಬಂದವರಿಗೆಲ್ಲರಿಗೆ ಕಡುನಲ
ವಿಂದೆ ಮಧುರತರ ಪ್ರಸಾದಗ
ಳಿಂದೆ ಸಂತೃಪ್ತಿಯನದಾಗಿಸುತಿರ್ದು ಕೊನೆಯಲ್ಲಿ ‖ ೪೭ ‖

ಒಡೆದ ತೆಂಗುಗಳುದಕವದು ಹೆ
ಮ್ಮಡುವೆಸೆ ಧೂಪಿತಸುಧೂಮವ
ದಡರೆ ನಾಲ್ದೆಸೆಗಳಿಗೆ ಕಪ್ಪುರದಾರತಿಯ ಬೆಳಗು
ಬಿಡದೆ ಪಸರಿಸೆ ಬಳಸಿದೆಲ್ಲರು
ಪಡೆದ ಭಕ್ತಿಯೊಳೇರಿಸುವ ಸುಮ
ದೊಡನಿರುವ ಪತ್ರೆಯೊಳು ಸಲೆ ಮುಳುಗಿರ್ದ ಗದ್ದುಗೆಗೆ ‖ ೪೮ ‖

ಮಂಗಳವು ಗುರುಶಾಂತಗುರುವಿಗೆ
ಮಂಗಳವು ನತದೇವತರುವಿಗೆ
ಮಂಗಳವು ಶಿಲವಡಿಯ ಮಠದ ನವಾಲ್ಲಮ ಪ್ರಭುಗೆ
ಮಂಗಳವು ಶಿವಯೋಗ ಮೂರ್ತಿಗೆ
ಮಂಗಳವು ಚಿದ್ಘನನಿಗೆನುತಂ
ಮಂಗಳವ ಪಾಡಿದರು ಬಳಸಿದ ಸರ್ವರಾ ಬಳಿಕೆ ‖ ೪೯ ‖

ಮನವಲರೆ ಸುಮಹಾಗಣಾರಾ
ಧನೆಯಗೈದರು ಮತ್ತಮಾಗುರು
ವಿನ ಶಿವೈಕ್ಯದಿನಾಚರಣೆಯಂ ಪ್ರತಿಸುವತ್ಸರದೋಳ್
ಅನುಪಮೋತ್ಸಾಹದೊಳು ಶಿಲವಡಿ
ಯುಮಘ ಭಕ್ತಾವಳಿಯೊಡನೆ ಬುಧ
ವಿನುತನಾದಾ ಬಸವರಾಜಸ್ವಾಮಿ ನಡೆಯಿಸುಗುಂ ‖ ೫೦ ‖

ಶಾಲಿವಾಹನ ಭೂವರನ ಶಕ
ಕಾಲದಾ ಹದಿನೆಂಟು ನೂರರ
ಮೇಲಿನೆಪ್ಪತ್ತೆರಡನೆಯ ಸಂವತ್ಸರದ ಮೊದಲಿಂ
ಲೀಲೆಯಾಣ್ಮನ ಶದ್ಗುರೂತ್ತಮ
ನಾ ಲಸಿತ ರಥದುತ್ಸವವ ವರ
ಶೀಲರಾ ಶಿಲವಡಿಯ ಭಕ್ತರು ಗೈವರತಿಮುದದೆ ॥ ೫೧ ॥

ಬೋಳ ಬಸವ ಸ್ವಾಮಿಗಾವ ಕೃ
ಪಾಳು ಷಟ್‌ಸ್ಥಲ ತತ್ವಸಾರವ
ಪೇಳುತಾತನಗಿತ್ತನೋ ನಿಜಚರಸುಪಟ್ಟವನು
ಆ ಲಸಿತ ಗುರುಸಿದ್ಧಲಿಂಗನಿ
ಗಾಳೆನಿಸಿ ಬಾಳುವ ಸುಸೌಖ್ಯ
ಕ್ಕಾಲಯುವುದಾಗಿರಲಿ ನಮ್ಮಯ ಜೀವನಂ ನಿರುತಂ ॥ ೫೨ ॥

ಪರಮಪಾವನ ಚರಿತವಿದನಾ
ದರದೆ ಪಠಿಸುವ ಪೇಳುವಾಲಿಸು
ವರಿಗೆ ತದ್ಗುರುಶಾಂತ ಶಿವಯೋಗಿಶ್ವರನು ಕೃಪೆಯಿಂ
ಚಿರತರಾಯುರರೋಗ ಭಾಗ್ಯವ
ಕರುಣಿಸುವನಲ್ಲದೆಯೆ ಗುರುಹರ
ಚರರನುಗ್ರಹವಾಗಿಸುವನನವರತವಿದು ನಿಜವು ॥ ೫೩ ॥

೧೭ನೆಯ ಸಂಧಿ ಸಂಪೂರ್ಣಂ ಪದ್ಯಗಳು ೬೫೮ಕ್ಕೆ ಮಂಗಳಂ

ಶ್ರೀ ಗುರುಶಾಂತಶಿವಯೋಗೀಶ್ವರಃ ಪ್ರಸೀದತು

ಹದಿನೆಂಟನೆಯ ಸಂಧಿ

ಸೂಚನೆ— ಗುರುಸಮಾಧಿಯ ಭವನದಡಿಗ
ಲ್ಲಿರಿಸುವುತ್ಸವದಲ್ಲಿಯೇ ತಾಂ
ಚರಸುಪಟ್ಟವ ಬಸವರಾಜಸ್ವಾಮಿ ಪಡೆದೆಸೆದಂ

ನೀಗಿ ದುರಹಂಕೃತಿ ಮಮತೆಗಳ
ಭೋಗಿಸುತೆ ಲಿಂಗೋಪಭೋಗವ
ಭೋಗಿಭೂಷಣತೇಜವುಳ್ಳವನಾಗಿ ಶೋಭಿಸಿದಾ
ಶ್ರೀಗುರುವು ಗುರುಶಾಂತ ಪರಶಿವ
ಯೋಗಿ ತಾಂ ಕರುಣಿಸುಗೆ ನಮಗಾ
ಭೋಗಮೋಕ್ಷಗಳೆಂದು ಬೇಡುವೆವಾಕೃಪಾನಿಧಿಯಾ ॥ ೧ ॥

ಮುಗಿಯಲಿಂತಾ ಚರಕುಲೇಂದ್ರನ
ಮಿಗಿಲೆನಿಪ ಗದ್ದುಗೆಯ ಗೈವುದು
ಬಗೆವೊಡಾ ಸದ್ಗುರುಸಮಾಧಿಗೆ ಕಟ್ಟಡವನೊಂದಾ
ಸೊಗಸಿನಿಂದಾಗಿಸುವ ಕಜ್ಜದ
ಬಗೆಯನೆಲ್ಲರ ಮುಂದೆ ತಿಳಿಸಲು
ಬಗೆದು ತಾವಾ ಬಸವರಾಜಸಮಾಖ್ಯದೇಶಿಕರು ॥ ೨ ॥

ಹರಿಹರದ ಮೇಣ್ ಶೆಲವಡಿಯ ಭ
ಕ್ತರನು ಕೂಡಿಸುತೊಂದು ದಿನದೊಳು
ಪರಮಪಾವನ ಬಸವಲಿಂಗಸ್ವಾಮಿ ಸನ್ನಿಧಿಯೋಳ್
ಗುರುಸಮಾಧಿಯ ನವಭವನಮಂ
ವಿರಚಿಸುವ ಸುವಿಚಾರವವರೆ
ಲ್ಲರ ಸಮಕ್ಷದೊಳೊರೆಯೆ ತದ್ದೇಶಿಕರು ಮತ್ತದನೇ ॥ ೩ ॥

ಎಲ್ಲರೊಪ್ಪುವ ಮಾಳ್ಕೆಯಿಂ ತಾ
ವುಲ್ಲಸಿತಮನರಾಗಿ ಕಥಿಸಿದ
ರಲ್ಲಿರುವ ತಚ್ಚಂದ್ರಶೇಖರ ಶಾಸ್ತ್ರಿಗಳು ಬಳಿಕೆ
ಅಲ್ಲಿ ಕಟ್ಟುವ ಕಟ್ಟಡಕ್ಕಡಿ
ಗಲ್ಲನಿರಿಸುವ ಶುಭಕೃತಿಯ ಚರ
ವಲ್ಲಭರ ಮೃತ್ಯುಂಜಯ ಸ್ವಾಮಿಗಳ ಹಸ್ತದೊಳು ॥ ೪ ॥

ಅಲ್ಲಿ ಬಸವಜಯಂತಿ ಶುಭದಿನ
ದಲ್ಲಿ ಮಾಡಿಸವೇಳ್ಕುಮೆಂಬುದ
ನೆಲ್ಲರಂಗೀಕರಿಸಿ ತದನಂತರವೆ ವಿರತಿಯೊಳು
ಬಲ್ಲಿದನ ಗುರುಶಾಂತ ಜಂಗಮ
ವಲ್ಲಭನ ಗದ್ದುಗೆಗೆ ಕಾಯೊಡೆ
ದುಲ್ಲಸಿತ ಚಿತ್ತದೊಳು ಶುಭದಾರತಿಯನೆಸಗಿದರು ॥ ೫ ॥

ಲಿಂಗದೊಳು ಬಯಲಾದ ಗುರುವಿನ
ಮಂಗಳಾಕರಪಾದಪಂಕೇ
ಜಂಗಳಮಳಿನ ದರ್ಶನಮದಿನ್ನಿಲ್ಲಮೆಂಬೊಂದು
ತುಂಗಚಿಂತೆಯನೆಂತೊ ನೀಗಿ ಶು
ಭಾಂಗರಾ ಮರಿದೇವರುನ್ನತ
ಭಂಗಿಯಿಂ ನಿಜಮಠದ ಸತ್ಕೃತಿಯಲ್ಲಿ ತೊಡಗಿದರು ॥ ೬ ॥

ಬಂದುದಿನ್ನು ವಸಂತಋತು ತಾಂ
ತಂದುದೆಲ್ಲರಿಗಧಿಕತರದಾ
ನಂದಮಂ ಸಂಧ್ಯಾಸಮಯದೋಳ್ ಬಯಲ ನೆಲೆಗಳೊಳು
ಬಂದ ಯುವತೀಯುವಕರಿಗೆ ನಲ
ವೊಂದಿಸುವುದಕೆ ಸುಳಿಯ ತೊಡಗಿದ
ನಂದು ಮಂದಾನಿಲನು ತನ್ಮಧುಮಿತ್ರನಾದುದರಿಂ ॥ ೭ ॥

ಗಿಳಿಗಳಿಗೆ ತನಿವಣ್ಣ ಮೇಣ್ ಕೋ
ಗಿಲೆಗಳಿಗೆ ಮೆಲ್ದಳಿರ ಭೃಂಗಾ
ವಳಿಗೆ ಸುಮರಸವುಣಬಡಿಸುವುದಕಾ ಸಮಯದಲ್ಲಿ
ನಲವಿನಿಂ ವನಲಕ್ಷ್ಮಿಗೈಸಿದ
ತೊಳಪ ಭೋಜನ ಶಾಲೆಗಳವೋಲ್
ಫಲಸುಪಲ್ಲವ ಪುಷ್ಪಗಳೊಳೊಪ್ಪಿದವು ಚೂತಗಳು ॥ ೮ ॥

ಮಲ್ಲಿಗೆಯು ಸಂಪಿಗೆಯು ಮೊದಲಾ
ದುಳ್ಳಲರ್ದ ಪೊಸಪೂಗಳಂ ಸಂ
ಫುಲ್ಲ ಮಾನಸರಾಗಿ ಭಕ್ತರು ತಂದುದಯದಲ್ಲಿ
ಎಲ್ಲ ಬಯಕೆಯನ್ನೈದೆ ಕರುಣಿಸ
ಬಲ್ಲ ತದ್ಗುರುವರಸಮಾಧಿಗೆ
ಸಲ್ಲಿಸುವದತ್ಯಧಿಕವಾಯ್ತಾ ಮಧುಸಮಯದಲ್ಲಿ ॥ ೯ ॥

ಪುಣ್ಯಮೂರ್ತಿಗಳೆನಿಸಿದಾ ಬಸ
ವಣ್ಣನವರ ಜಯಂತಿಯಖಿಳರ
ಕಣ್ಣ ಹಬ್ಬವುದಾಗಿ ಬರುವುದಕೆರಡುದಿನ ಮೊದಲೇ
ಪುಣ್ಯಮಯ ಕನ್ನಡದ ನಾಡಿನ
ಗಣ್ಯ ಭಕ್ತಾದಿಗಳು ಸಜ್ಜನ
ಮಾನ್ಯ ತದ್ಗುರುಮಠಕೆ ನಲಿದಾಗಮಿಸತೊಡಗಿದರು ॥ ೧೦ ॥

ಧಾರವಾಡದ ಮುರುಘಮಠದ ಕೃ
ಪಾರಸಾರ್ಣವರಾದ ಭಕ್ತೋ
ದ್ಧಾರಪರ ಮೃತ್ಯುಂಜಯ ಸ್ವಾಮಿಗಳು ತಮ್ಮವರಿಂ
ಸೇರಿ ದಯಮಾಡಿಸಿದರವರನ
ಪಾರ ಮುದದ ಮಹೋತ್ಸವದೊಳಾ
ಪೂರವರು ಕರೆತಂದರಾ ಶಿವಯೋಗಿವರಮಠಕೆ ॥ ೧೧ ॥

ನವಿಲುಗುಂದದ ಗವಿಮಠದ ಚರ
ಧವರೆನಿಸಿ ಶೋಭಿಸುವ ಪಂಡಿತ
ನಿವಹಸನ್ನುತ ಬಸವಲಿಂಗ ಸ್ವಾಮಿಗಳು ಮುದದಿಂ
ಶಿವಮಯನ ಗುರುಶಾಂತಯೋಗಿಯ
ಸುವಿಮಳದ ಮಠಕಾಗಮಿಸುತಿರ
ಲವರನುತ್ಸವದಿಂದೆ ಬಿಜಯಂಗೈಸಿದರು ಬಳಿಕೆ ॥ ೧೨ ॥

ಆದರಣ ಮುರುಗೋಡ ಮೋಹ್ ಗೂ
ಳೇದ ಗುಡ್ಡವು ಗದಗು ಮತ್ತವ
ರಾದಿ ಹೊಸಹಳ್ಳಿಯು ತೊಳಪ ಸವದತ್ತಿ ಕಿತ್ತೂರು
ಮೋದಯುತದಾ ಬೈಲಹೊಂಗಲ
ಭೇದರಹಿತೆಕ್ಕುಂಡಿ ಮಿಗೆ ಸೊಗ
ಸಾದ ಮುನವಳ್ಳಿಯದು ನಂದೀವೇರಿ ಕಟಕೋಳಂ ॥ ೧೩ ॥



ಮಹಾತಪಸ್ವಿ ಶ್ರೀ ನಿ. ಪ್ರ. ಮಹಾಂತಶಿವಯೋಗಿಗಳು
ಶ್ರೀ ದುರುದುಂಡೀಶ್ವರ ಮಠ ಮುರುಗೋಡ

ಮೊದಲೆನಿಸಿದೂರುಗಳ ಚರಪ
ಟ್ಟದ ಮಹಾಸ್ವಾಮಿಗಳು ಬಹು ಸಂ
ಮುದದೆ ನಿಜಭಕ್ತರ್ಕಳೊಡನಾಗಮಿಸುತಿರೆ ಮತ್ತಂ
ಸದಯಕವಿಬುಧಸಕಲಸುಕಲಾ
ವಿದರು ಮೊದಲಾದವರು ತದ್ಗುರು
ಪದಕಮಲದಲ್ಲಿಟ್ಟಧಿಕ ಭಕ್ತಿಯೊಳು ಕೂಡಿದರು ॥ ೧೪ ॥

ಬಸವರಾಜಸುದೇಶಿಕರು ತಾ
ವೊಸೆದು ಬಿನ್ನೈಸಿದುದನೊಪ್ಪುತೆ
ಮಿಸುಪ ತಜ್ಜಯದೇವ ಪೂಜ್ಯ ಜಗದ್ಗುರೂತ್ತಮರು
ಅಸಮಸಖ್ಯದೆ ತಮ್ಮನೈಸಲೆ
ವಶಪಡಿಸಿಕೊಂಡೆಸೆದ ಮಹಿಮಾ
ಲಸಿತಗುರುಶಾಂತೇಶ್ವರನ ಮಠಕಧಿಕ ಮುದದಿಂದೇ ॥ ೧೫ ॥

ಆಗಮಿಸುವುದನರಿಯುತಲ್ಲಿ
ರ್ದಾಗ ಗುರೂತ್ತಮರೆಲ್ಲರುಂ ಸೊಗ
ಸಾಗಿ ಮಹಿತೋತ್ಸವದೆ ಬಿಜಯಂಗೈಸುತಿನ್ನವರಾ
ಭೋಗಮೋಕ್ಷಪ್ರದಪದಾಬ್ಜಕೆ
ರಾಗದಿಂ ವಂದಿಸುತೆ ಮಂಗಳ
ದಾಗರದ ಪರಕೆಗಳ ಪಡೆದೊಂದಿದರು ಕಡು ಸೊಗವಾ ॥ ೧೬ ॥

ಬಳಿಕೆ ಬಸವಜಯಂತಿಯಾ ಶುಭ
ಕಲಿತದಿನದೋಳ್ ವಾದ್ಯಗಳು ಮಿಗೆ
ಮೊಳಗುತಿರೆ ಜಯದೇವ ಸತ್ಪ್ರಭುವರನನುಜ್ಞೆಯನು
ತಳೆದು ಮೃತ್ಯುಂಜಯಮಹಾಶ್ರೀ
ಗಳು ಶಿವೈಕ್ಯರ ಶಿಲವಡಿಯ ಗುರು
ಗಳ ಸಮಾಧಿಯ ಕಟ್ಟಡಕ್ಕೇರ್ಪಟ್ಟ ನಲ್ಮೆಲೆಯೋಳ್ ॥ ೧೭ ॥

ಮಿಸುಪ ತಮ್ಮಗಳಮೃತಹಸ್ತದೊ
ಳೆಸಗಿ ಶಂಕುಸ್ಥಾಪನೆಯ ನೇ
ಹೊಸೆದು ತಾವಡಿಗಲ್ಲನಿಡಲಾಸ್ಥಲದೆ ನೆರೆದಿರ್ದಾ
ಹಸಿತಮುಖಗುರುಚರಸುಭಕ್ತರ
ನಿಸರವೆಸಗಿದ ಜಯ ನಿನಾದವು
ಪಸರಿಸಿದುದೆಣ್ದೆಸೆಯೊಳಾ ಮಂಗಳ ಮುಹೂರ್ತದೊಳು ॥ ೧೮ ॥

ಅಂದು ಜಯದೇವಪ್ರಭುಗಳೊಲಿ
ದೊಂದಿದಧ್ಯಕ್ಷತೆಯ ಸಭೆಯೊಳು
ಹಿಂದುಳಿದ ವರವೀರಶೈವಸಮಾಜದುನ್ನತಿಯಾ
ಮುಂದುವರಿಸುವ ಭಕ್ತಿತತ್ವದ
ಮಂದಿರವ ನಿರ್ಮಿಸಿದ ಕುಶಲತೆ
ಯೊಂದಿದಾ ಬಸವಣ್ಣನವರ ಜಯಂತಿ ಕಾರ್ಯವನು ॥ ೧೯ ॥

ಪರಮ ಸಂಭ್ರಮದಿಂದೆ ತಳ್ತಾ
ಚರಿಸುವಾಸಮಯದೊಳು ಪಂಡಿತ
ವರರು ಬಸವರಸನ ಮಹತ್ಕಾರ್ಯಗಳ ಭಾಷಣವಾ
ಸರಸವಾಣಿಯೊಳೆಸಗಲಧ್ಯ
ಕ್ಷರ ಸಮಾಪ್ತಿಯ ಸಲ್ನುಡಿಗಳಿಂ
ಜೆರೆದ ಪರಕೆಯದಾಗೆ ಮುಗಿಸುತೆ ತಜ್ಜಯಂತಿಯನು ॥ ೨೦ ॥

ಬಳಿಕೆ ಶಿಲವಡಿಭಕ್ತರಾ ಗುರು
ತಿಲಕನಮಳಿನ ಮಠದೊಳೆಲ್ಲರ
ನೊಲವಿನಿಂ ಮಧುರ ಪ್ರಸಾದದೆ ತೃಪ್ತಿಯಾಗಿಸಲು
ತಳೆದ ನಲವಿಂ ಜನರು ತಮ್ಮ
ಸ್ಥಲಗಳಿಗೆ ಪೊರಮಡುವ ಸಮಯದೆ
ವಿಲಸಿತದ ದುರ್ಗದ ಜಗದ್ಗುರುವರರು ಸಮ್ಮದದೇ ॥ ೨೧ ॥

ಬಸವರಾಜಸುದೇಶಿಕರಿಗಿ
ನ್ನೆಸಗಲಾ ಪಟ್ಟಾಧಿಕಾರವ
ಬೆಸಸಿ ಸರ್ವರಿಗೊಂದು ಶುಭದಿನವೇರ್ಪಡಿಸಿ ಬಳಿಕೆ
ಮಿಸುಪ ಜಂಗಮಭಕ್ತಿಯಿಂ ಕರ
ಮೆಸೆಯುವಾ ಮೃತ್ಯುಂಜಯಪ್ಪಗ
ಳಸಮತತ್ಕೃತಿ ಪೂರ್ವಸಿದ್ಧತೆಗಾಗಿ ತನ್ಮಠದೊಳ್ ‖ ೨೨ ‖

ಒಂದು ತಿಂಗಳು ನೆಲಸಿ ವೋಣವ
ರಿಂದನುಜ್ಞೆಯು ಪಡೆದು ಭಕ್ತರ
ವೃಂದವೈಸಲೆ ಸಂಗ್ರಹಿಸುತಂ ಸರ್ವವಸ್ತುಗಳಾ
ಒಂದಿದೊಲವಿಂ ಮಠವ ತಮ್ಮಯ
ಮಂದಿರಂಗಳನೂರ ಬೀದಿಗ
ಳೊಂದುಳಿಯದಂತೆಲ್ಲವಂ ಸಿಂಗರಿಸಿದುದು ಬಳಿಕೆ ‖ ೨೩ ‖

ಬಂದುದಾ ಶುಭದಿನವು ವೋಣ್ಪೈ
ತಂದುದೆಲ್ಲೆಡೆಗಳ ಜನತೆ ನಲ
ವಿಂದೆ ತತ್ಪಟ್ಟಪ್ರದಾನವಗೈವಕತದಿಂದೆ
ಮುಂದುಗೊಂಡುಲ್ಲಸಿತ ಭಕ್ತರ
ವೃಂದಮಂ ಶಿಲವಡಿಯ ತನ್ಮಠ
ವೊಂದಿದರು ತದ್ಬಸವಲಿಂಗಸ್ವಾಮಿಗಳು ಮುದದೆ ‖ ೨೪ ‖

ಮಂಗಳದ ಪಟ್ಟಾಧಿಕಾರದ
ಕಂಗೊಳಿಪ ಮಂಟಪದ ಮಧ್ಯದ
ತುಂಗಪೀಠದೆ ಬಸವಲಿಂಗಶ್ರೀಗಳೊಪ್ಪಿರಲು
ಮಂಗಳದ ವಾದ್ಯಗಳು ಮೊಳಗಲು
ಮಂಗಳದ ಮಜ್ಜನದೆ ವಿಮಲತ
ರಾಂಗನಾದಾ ಬಸವರಾಜಸುದೇಶಿಕನ ನಲವಿಂ ‖ ೨೫ ‖

ಆಗವುಜ್ಜರು ಕರೆದು ತಂದಾ
ಶ್ರೀ ಗುರುವಿನಿದಿರಲ್ಲಿ ತಾವಿ
ನ್ನಾಗಿಸುತೆ ಸಾಷ್ಟಾಂಗವಂದನವಲ್ಲಿ ಕುಳ್ಳಿರಿಸಿ
ಆಗಮ ಕ್ರಮದಿಂದವಾತಸಿ
ಗಾಗಿಸಿದರು ಸುಪೂಜ್ಯಜಂಗಮ
ಗಾಗಬೇಕಾದಖಿಳ ಸಂಸ್ಕಾರಗಳನಾ ಬಳಿಕೆ || ೨೬ ||

ಕೊಟ್ಟು ಶಂಕರಚಿದುಪದೇಶವ
ಕೊಟ್ಟು ನಲ್ವರಕೆಗಳ ಸತ್ಕೃಪೆ
ಯಿಟ್ಟು ಶಿಲವಡಿ ಹರಿಹರಗಳಾ ಮಠಗಳೊಡೆತನದಾ
ಪಟ್ಟವನು ತದ್ದೇಶಿಕನಿಗುರೆ
ಕಟ್ಟಿದರು ಸರ್ವರ ಜಯ ಧ್ವನಿ
ಮುಟ್ಟೆ ನಭವಾ ಬಸವಲಿಂಗಶ್ರೀಗುರೂತ್ತಮರು || ೨೭ ||

ಬಳಿಕೆ ತನ್ನವಗುರುವ ಸುಮುಸಂ
ಕಲಿತ ಪಾಲಿಕೆಯಲ್ಲಿರಿಸುತಂ
ಪೊಳಲ ಬೀದಿಗಳೊಳ್ ತದುತ್ಸವಮಂ ಸುಸಂಭ್ರಮದಿಂ
ಸಲೆ ನಡಸಿ ಕರೆತಂದು ಮಠದೊಳ್
ನೆಲೆಗೊಳಿಸಿದಾ ಶೂನ್ಯಪೀಠದೊ
ಳೊಲವಿನಿಂ ಕುಳ್ಳಿರಿಸುತಾತನಿಗೆಲ್ಲರುಂ ನಮಿಸೇ || ೨೮ ||

ನೆರೆದ ಸಭೆಯೊಳ್ ಬುಧರು ತನ್ನವ
ಚರಪತಿಯ ಸಚ್ಚರಿತ ಕಥನವ
ಹರಿಸದಿಂ ಬಿತ್ತರಿಸೆ ಗುರುಕಾಣಿಕೆಗಳರ್ಪಣವು
ನೆರೆಮುಗಿಯಲುಡುಗರೆಗಳಿಂ ಸ
ತ್ಕರಿಸೆ ಗುರುಚರ ಮುಖ್ಯರಾ ಸಭಿ
ಕರಿಗೆ ತತ್ಪಟ್ಟಾಂಕಿತರ ಸಂದೇಶವಿಂತಾಯ್ತು || ೨೯ ||



ತ್ರಿವಿಧದಾಸೋಹ ಮೂರ್ತಿಗಳಾದ ಲಿಂ ಶ್ರೀ ನಿ. ಪ್ರ. ಮೃತ್ಯುಂಜಯ ಮಹಾಸ್ವಾಮಿಗಳವರು
ಶ್ರೀ ಮುರುಘಾಮಠ, ಧಾರವಾಡ

ಗುರುವು ಬೋಧಿಸುತಿರ್ಪ ಭಕ್ತಿಯ
ಸರಣಿಯಂ ರಕ್ಷಿಸುವುದಕೆ ಸಂ
ಚರಿಸಿ ಭಕ್ತರ ಬಳಗದಲ್ಲಿನ್ನವರ ಭಕ್ತಿಯನು
ನೆರೆ ಪರೀಕ್ಷಿಸುತಿರುವುದೇ ಚರ
ವರರ ಕಾಯಕವದನುನಾಂ ಗೈ
ವುರುತರದ ಶಕ್ತಿಯನು ಗುರುಶಾಂತೇಶ್ವರನು ಕೊಡಲಿ ॥ ೩೦ ॥

ಎಂದು ಬೇಡುವೆನಾಗುರವ ಮ
ತ್ತೊಂದ ಯಾಚಿಸೆನೆಂದು ಕಿರುನಗೆ
ಯಿಂದೆ ಕಥಿಸಿಹ ಬಸವರಾಜಸ್ವಾಮಿವಾಕ್ಯಗಳು
ಒಂದಿಸಿದವೆಲ್ಲರಿಗೆ ಪರಮಾ
ನಂದವಂ ಬಳಿಕಲ್ಲಿ ಗುರುಚರ
ವೃಂದದಡಿಗೆ ಸುಮಂಗಳವ ಮಾಡಿದರು ನೆರೆದವರು ॥ ೩೧ ॥

ಬಸವರಾಜಸ್ವಾಮಿ ಭಕ್ತರ
ವಿಸರದೊಡನಾ ಮಠದೊಳಾಗಿಸು
ತೊಸೆದು ಸರ್ವರಿಗಂ ಪ್ರಸಾದಸುಭೋಗವಾ ಬಳಿಕ
ಹಸಿತಮುಖದಿಂ ಪ್ರಮುಖರಂ ಸಂ
ತಸದೆ ಬೀಳ್ಕೊಟ್ಟನ್ನು ಶುಭದಾ
ಶಿಷಗಳಂ ಮೃತ್ಯುಂಜಯಸ್ವಾಮಿಗಳಿನಲ್ಲದೆಯೇ ॥ ೩೨ ॥

ಬಸವಲಿಂಗಸ್ವಾಮಿ ಮುಖ್ಯರಿ
ನೊಸೆದು ಪಡೆದೆಲ್ಲರನು ಬೀಳ್ಕೊ
ಟ್ಟಸಮ ಮುದದಿಂ ಬಸವರಾಜಸ್ವಾಮಿಯಾ ಬಳಿಕೆ
ಲಸಿತ ನಿಜಗುರುವರ ಸಮಾಧಿಯ
ಪೊಸತೆನಿಪ ಕಟ್ಟಡವನುರಿ ಕ
ಟ್ಟಿಸುವ ಕಜ್ಜದೆ ತೊಡಗಿದನು ಸದ್ಭಕ್ತರೊಡಗೂಡಿ ॥ ೩೩ ॥

ಶೆಲವಡಿಯ ಸವದತ್ತಿಯಾ ನಿ
ರ್ಮಲಮನನು ರುದ್ರಪ್ಪನಾಶ್ರಿತ
ರೆಳಸಿದುದ ಕರುಣಿಸಿದ ಗುರುಶಾಂತೇಶ್ವರನು ಸತತಂ
ನಲವಿನಿಂ ಮಾಡುವ ಶಿವಾರ್ಚನೆ
ಯೊಳು ಸುಸೇವೆಯನೆಸಗುತಿರ್ದನು
ಬಳಿಕವೀರೇಶ್ವರನಾಮಕನು ತತ್ತನುಜನುಂ ಮುದದಾ ॥ ೩೪ ॥

ಬಸವರಾಜಸ್ವಾಮಿಗಳೊಳಸ
ದೃಶದ ಭಕ್ತಿಯನಿಟ್ಟು ನಡೆವನು
ಹಸಬಿ ಚಂಬಣ್ಣನು ಸುಗುಣಿಯೆರಗುಪ್ಪಿ ಬಸವಪ್ಪಂ
ಮಿಸುಪ ಹುರಕಡ್ಲಿಯವರಾ ನಿ
ವ್ಯಸನಿ ರುದ್ರಪ್ಪನು ಗಡಾದ ವಿ
ಲಸಿತ ಚೆನ್ನಪ್ಪನು ಸೊಬರದಾ ಭಕ್ತದುಂಡಪ್ಪಂ ॥ ೩೫ ॥

ತಪ್ಪದೆಯೆ ತಾಂ ದೊಡ್ಡಮನೆ ವೀ
ರಪ್ಪ ನಿನ್ನಾ ಸಣ್ಣಮನೆ ವೀ
ರಪ್ಪನೇ ಮೊದಲಾದ ಕುಲಕರಣಿಯು ನಿಲಯುದವರು
ಒಪ್ಪುವಾ ಪೋಲೀಸ ಪಾಟೇ
ಲಪ್ಪ ಶಂಕರಗೌಡನುಂ ಮಿಗಿ
ಲಪ್ಪ ತೆಗ್ಗಿನ ಮನೆಯ ವೈದ್ಯೋತ್ತಮನು ಹೊಸಮಠದಾ ॥ ೩೬ ॥

ಪರಮ ವೈದ್ಯ ಷಡಕ್ಷರಯ್ಯಗ
ಳಿರಿವೊಡಿವರೇ ಮೊದಲೆನಿಪ ಸ
ಚ್ಚರಿತರಾದಾ ಶೆಲವಡಿಯ ಸದ್ಭಕ್ತರಲ್ಲದೆಯೇ
ಸುರುಚಿರದ ಕುರಹಟ್ಟಿ ಕನ್ನೂ
ರುರುತರದ ನಾವಳ್ಳಿ ಮಂಗಳ
ಕರದ ನಾಯಕನೂರು ಮೊದಲಾದೂರ ಸಜ್ಜನರು ॥ ೩೭ ॥

ನಿರತಿಶಯ ವಿಶ್ವಾಸದಿಂ ತ
ದ್ಗುರುಮಠದ ಸೇವಾನಿರತರಾ
ಗಿರುವುದಲ್ಲದೆ ಬಸವರಾಜಸ್ವಾಮಿಯೊಡಗೂಡಿ
ಹರಿಸದಿಂದೇಳೆಂಟು ವರುಷದ
ವರೆಗೆ ತಾವೆಂಬತ್ತು ಸಾವಿರ
ವಿರುವ ರೂಪ್ಯಗಳಂ ಜನತೆಯಿಂ ಸಂಗ್ರಹಿಸುತದರಿಂ ॥ ೩೮ ॥

ನಿಟ್ಟೆಯಿಂದಂ ಗದ್ದುಗೆಯ ಹೊಸ
ಕಟ್ಟಡವನುರು ಶಿಲೆಗಳಿಂದಂ
ಕಟ್ಟಿಸಿದರಾ ಭವ್ಯತರ ಮಂಟಪವು ನೋಡುವರಾ
ದಿಟ್ಟಿಯಂ ಸೆಳೆದಮಳ ಭಕ್ತಿಯು
ಪುಟ್ಟಸುಗುಮವರಲ್ಲಿ ಗುರುವೇ
ಕಟ್ಟಿಸಿದನಿದನೆಂದು ನಿರಹಂಕೃತಿಯು ತಳೆವಿರ್ದುಂ ॥ ೩೯ ॥

ನಿಖಿಲಭಕ್ತರು ತದ್ಭವನದುರು
ಶಿಖರದೋಳ್ ಕಲಶವನು ಪಂಡಿತ
ಮುಖವಿನುತ ಜಯದೇವಪರಮಜಗದ್ಗುರುಗಳವರಾ
ಸುಖಕರದ ಕರದಿಂದಿಡಿಸುವುದ
ನಖಿಳಜನರೊಡಗೂಡಿ ನಿರುಪಮ
ಸುಖದೆ ನಿರ್ಣಯಿಸುತ್ತೆ ಬಳಿಕೆ ತದುತ್ಸವಕ್ಕಾಗಿ ॥ ೪೦ ॥

ಪೂರ್ವಸಿದ್ಧತೆಯಾಗೆ ಮತ್ತಮ
ಪೂರ್ವ ಶೋಭೆಯೊಳದನು ಗೈಯಲು
ಸರ್ವದಿಶೆಯಿಂ ಗುರುಚರಸುಭಕ್ತಾದಿಗಳು ಮನದೋಳ್
ಪರ್ವಿದುರು ಮೋದದೊಳು ಬಂದರು
ಸರ್ವರಿಷ್ಟಪ್ರದನೆನಿಸಿದಾ
ಶರ್ವತೇಜೋಲಸಿತ ಗುರುಶಾಂತೇಶ್ವರನ ಮಠಕೇ ॥ ೪೧ ॥

ಮೊದಲಿನಿಂದಂ ಸ್ನೇಹರಸದಿಂ
ಹೃದಯಮಂ ತೋಯಿಸಿದ ಮಿತ್ರನ
ಸದಯ ಗುರುಶಾಂತೇಶ್ವರನ ಗದ್ದುಗೆಗೆ ನಿರ್ಮಿಸಿದಾ
ಸದನದುರುಶಿಖರದೊಳು ವರಕಲ
ಶದ ಸುಸಂಸ್ಥಾಪನೆಗೆ ತದ್ದು
ರ್ಗದ ಜಗದ್ಗುರುಗಳು ಮಹಾಮುದದಿಂದ ಪೊರಮಟ್ಟ ॥ ೪೨ ॥

ಕಿರಿಯರಾದ ಜಗದ್ಗುರುಗಳಿಂ
ಬೆರೆದು ದಯಮಾಡಿಸಿದ ತತ್ಪರ
ತರರನುತ್ಸವದಿಂದೆ ಬಿಜಯಂಗೈಸಿ ಮಠದಲ್ಲಿ
ಇರಿಸಿ ನೆರೆದವರೈದೆ ತತ್ಪದ
ಸರಸಿಜಕೆ ವಂದಿಸುತೆ ಮೋಹ್ ನ
ಲ್ಪರಕೆಗಳ ಪಡೆದಧಿಕ ಭಕ್ತಿಯೊಳೊಂದಿದರು ಮುದವಾ ॥ ೪೩ ॥

ಬಳಿಕೆ ಪುಣ್ಯಮುಹೂರ್ತದೋಳ್ ಕಂ
ಗೊಳಿಪ ನೂತ್ನ ಶಿಲಾಸುಮಂಡಪ
ದೊಳಗೆ ತಜ್ಜಯದೇವವಿಭುಗಳ ಪಾದಸನ್ನಿಧಿಯೋಳ್
ಕಲಶದಭಿಷೇಕವನೆಸಗುತೈ
ಸಲೆ ಸುಭಸಿತಾದಿಗಳಿನರ್ಚಿಸಿ
ನಲಿದು ಸುಮಮಾಲಾದಿಗಳೊಳದನ್ನೈದೆ ಸಿಂಗರಿಸೇ ॥ ೪೪ ॥

ಮೊದಲೆ ಬೆಳ್ಳಿಸಗಳಸಮಂ ಸ
ಮ್ಮುದದೆ ನಿಜಮಠದಗ್ರದಲ್ಲಿರಿ
ಸಿದ ಮಹಿತಗುರುಶಾಂತಯೋಗೀಶ್ವರನಿಗಾಗಿಸಿದಾ
ಹೃದಯ ಪರಮಾಲ್ಹಾದಕರಭವ
ನದ ಶಿಖರದೋಳ್ ತತ್ಕೃಪೆಯ ತುಂ
ಬಿದ ಕಲಶವಿದನೊಲಿದು ನಾವೀದಿನದೊಳಿರಿಸುವೆವು ॥ ೪೫ ॥

ಎಂದು ಜಯದೇವಪ್ರಭುಗಳೊಲ
ವಿಂದೆ ತಮ್ಮಯ ಲಸದಮೃತಕರ
ದಿಂದೆ ತತ್ಕಲಶದ ಸುಸಂಸ್ಥಾಪನೆಯನಾಗಿಸಲು
ಒಂದಿನಲವಂಗೈದ ಭಕ್ತರ
ವೃಂದದಾ ಜಯರವದೊಡನೆ ತ
ಳ್ತಂದು ದೆಸೆಗಳನಾವರಿಸಿದುದು ವಾದ್ಯಗಳರವವು ॥ ೪೬ ॥

ಬಳಿಕೆ ಭಕ್ತಾವಳಿಯು ಶಿಲವಡಿ
ಪೊಳಲೊಳಾ ಜಯವಿಭವ ಸದ್ಗುರು
ತಿಲಕರತಿ ಸಂಭ್ರಮದ ತಿರ್ಯಕ್ಪಾಲಿಕೋತ್ಸವವಾ
ನಲವಿನಂ ನಡೆಸುವುದಕಿನ್ನಿರ
ದೆಳಸುತಾಂದೋಳನವಲಂಕೃತಿ
ಗೊಳಿಸತೊಡಗಿತು ಪಂಚಕಲಶಾದಿಗಳೊಳತಿಭರದೇ ॥ ೪೭ ॥

ಮೊಳಗುತಿರೆ ವಾದ್ಯಗಳು ವಿದ್ಯಾ
ವಿಲಸಿತರ ವರವೇದಘೋಷವು
ಬಳೆಯುತಿರೆ ಬಿರುದಾವಳಿಯ ಘೋಷಿಸುವರವದೊಡನೆ
ನಲವಿನಿಂ ಸದ್ಭಕ್ತನಿವಹವು
ಬಳಸಿರಲು ಮಠದಿಂದೆ ಶಿಲವಡಿ
ಪೊಳಲ ಬೀದಿಗೆ ಬಂದುದಾಂದೋಳನ ಮಹೋತ್ಸವವು ॥ ೪೮ ॥

ವರ ವಿಭೂತಿಯು ಫಾಲದಲ್ಲಿರೆ
ಕೊರಳೊಳೊಪ್ಪೆ ಶಿವಾಕ್ಷಿಮಾಲೆಯು
ಧರಿಸಿರುವ ಕಾವಿಯ ಸುವಸನವದಂಗದಲ್ಲೆಸೆಯೇ
ಕಿರು ನಗೆಯೊಳಂ ಶಿವಸುತೇಜದೊ
ಳಿರುವ ಮುಖದಾ ಜಯವಿಭವ ಸ
ದ್ಗುರುವು ಪಾಲಿಕೆಯಲ್ಲಿ ಕಂಗೊಳಿಸುತ್ತಿರುವಪರಿಯಾ ॥ ೪೯ ॥

ಅಕ್ಕರಿಯೊಳೀಕ್ಷಿಸಲು ಬೀದಿಯೊ
ಳಿಕ್ಕೆಲದೊಳೈತಂದು ತಳುವದೆ
ಕಿಕ್ಕಿರಿದ ಜನರವರೆದೆಯೊಳಾಸ್ವಾಮಿದರ್ಶನದಿಂ
ಉಕ್ಕುತಿರೆ ಗುರುಭಕ್ತಿರಸವದು
ಸಿಕ್ಕುವಂ ಪರಶಿವನ ರೂಪವು
ಪೊಕ್ಕುದೀ ಮೂರ್ತಿಯೊಳೆನುತೆ ಕೈಮುಗಿಯ ತೊಡಗಿದರು ॥ ೫೦ ॥

ಪೊಳಲ ಮಧ್ಯದೊಳಿಂತು ಸಂಭ್ರಮ
ಕಲಿತಮಾದುತ್ಸವವು ನಡೆದಾ
ಬಳಿಕೆ ಮಠಕೈತಂದವೋಲಾ ಜಯವಿಭವಗುರುವು
ತೊಳಪ ಜಯದೇವ ಪ್ರಭುಗಳಡಿ
ದಳಿರಿಗುರೆ ವಂದಿಸುತವರ ಕಡು
ನಲವಿನಬ್ಧಿಯ ಪೆರ್ಚಿಸುವ ಶಶಿಯಾಗಿ ಬೆಳಗಿದನು ॥ ೫೧ ॥

ಆದುದುಭಯ ಜಗದ್ಗುರುಗಳುರು
ಪಾದಪಂಕೇಜಗಳ ಮಂಗಳ
ವಾದುದವರಿಂದಾಶಿಷವು ನೆರೆದಿರ್ದ ಜನತತಿಗೆ
ಮೇದಿನಿಗೆ ಪೊಸತೆಂಬ ಮಾಳ್ಕೆಯೊ
ಳಾದುದಾ ಕಲಶಪ್ರತಿಷ್ಠೆಯ
ಮೋದದಾಯಕದುತ್ಸವವು ತಾನಿಂತು ವೈಭವದಿಂ ॥ ೫೨ ॥

ಪರಕೆಯಂ ಪಡೆದಾ ಜಗದ್ಗುರು
ವರರುಭಯರಿಂದವರ ಬೀಳ್ಕೊ
ಟ್ಟುರುತರದ ಭಕ್ತಿಯೊಳು ಮೋಣುತ್ಸವಕೆ ಬಂದಿರ್ದಾ
ಗುರುಚರಾದಿಗಳಂ ಕಳುಹಿ ಸ
ಚ್ಚರಿತರಾದಾ ಬಸವರಾಜಸು
ಚರವರೇಣ್ಯರು ತೊಡಗಿದರು ನಿಜಮಠದ ಕಾರ್ಯದೊಳು ॥ ೫೩ ॥



ಶ್ರೀ ಮ. ನಿ. ಜಗದ್ಗುರುಗಳವರ ಸನ್ನಿಧಿಯಲ್ಲಿ
ಶ್ರೀ ನಿ. ಪ್ರ. ಬಸವಲಿಂಗಮಹಾಸ್ವಾಮಿಗಳು, ನವಿಲುಗುಂದ.
ಹಾಗು
ಶ್ರೀ ನಿ. ಪ್ರ. ಗುರುಶಾಂತಸ್ವಾಮಿಗಳು ಶಿಲವಡಿ

ಆವ ಮಹಿಮನು ಧರೆಯ ಜೀವಿಗ
ಳಾವಳಿಗೆ ಸಲೆ ಲೇಸ ಬಯಸುವ
ಭಾವದಿಂ ಮಾರ್ಜಾಲ ಶಿಶುಗಳಿಗಿತ್ತನೋ ಅಸುವಾ
ಆ ವಿಬುಧನುತಸಿದ್ಧಲಿಂಗನ
ಪಾವನಾಕರ ಭೂತದಯೆಯದು
ಶೀವಿರಲಿ ನಮ್ಮಲ್ಲಿ ತತ್ಕರುಣಾನಿಧಿಯ ಕೃಪೆಯಿಂ || ೫೪ ||

ಪರಮಪಾವನ ಚರಿತವಿದನಾ
ದರದೆ ಪಠಿಸುವ ಪೇಳುವಾಲಿಸು
ವರಿಗೆ ತದ್ಗುರುಶಾಂತ ಶಿವಯೋಗೀಶ್ವರನು ಕೃಪೆಯಿಂ
ಚಿರತರಾಯುರರೋಗ ಭಾಗ್ಯವ
ಕರುಣಿಸುವನಲ್ಲದೆಯೆ ಗುರುಹರ
ಚರರನುಗ್ರಹವಾಗಿಸುವನನವರತವಿದು ನಿಜವು || ೫೫ ||

೧೮ನೆಯ ಸಂಧಿ ಸಂಪೂರ್ಣಂ ಪದ್ಯಗಳು ೫೫ಕ್ಕೆ ಮಂಗಳಂ

ಶ್ರೀ ಗುರುಶಾಂತಶಿವಯೋಗೀಶ್ವರಃ ಪ್ರಸೀದತು

ಹತ್ತೊಂಬತ್ತನೆಯ ಸಂಧಿ

ಸೂಚನೆ— ಗದ್ದುಗೆಗೆ ನಡಕೊಳ್ಳ ಜನರೊಳ
ಗಿದ್ದ ಕಷ್ಟಗಳಳಿಯಲಿನ್ನು ಕು
ಬುದ್ಧಿ ವರ್ತನದವರಿಗಾದುದು ಹಾನಿಯಾತೆರದೆ

ಅನಘನದ್ವಯನತುಳ ಕರುಣಾ
ಘನನು ಚಿಜ್ಜ್ಯೋತಿಸ್ವರೂಪನು
ಮುನಿವಿನುತ ಗುರುಶಾಂತಶಿವಯೋಗೀಶ್ವರನು ನಮ್ಮ
ಮನದ ಮನೆಯಲ್ಲಿದ್ದು ವಾಂಛಿತ
ವನು ಕೊಡುವ ವರದೇವರಾಗಿರ
ಲೆನುತೆ ನುತಿಸುವೆನಾ ಚರೋತ್ತಮನಂಘ್ರಿಯನು ನಿರುತಂ ॥ ೧ ॥

ಬಸವರಾಜಸ್ವಾಮಿಗಳು ಬೆ
ಳ್ಗಸದ ಮಠದಲ್ಲಿದ್ದು ಭಕ್ತರ
ವಿಸರಮಂ ರಕ್ಷಿಸುವ ಕಾರ್ಯದ ಭಾರಮಂ ವಹಿಸಿ
ಅಸಮಶಕ್ತಿಯೊಳೆಸಗುತದನೊ
ಳ್ವೆಸರನ್ನೆಸಲೆ ಪಡೆಯುತಂ ನಿ
ರ್ವ್ಯಸನ ಚರವರರಾಗಿ ಶೋಭಿಸುತಿರ್ದರಾ ಬಳಿಕೆ ‖ ೨ ‖

ಮೃಡಮಯನ ಗುರುಶಾಂತಗುರುವಿನ
ಸಡಗರದ ಗದ್ದುಗೆಯ ಪೊಸ ಕ
ಟ್ಟಡದ ನೆಲಗಟ್ಟಾಗಿಸಲು ಶಿಲವಡಿಯ ಪೊಳಲವನು
ಬಡಗಿಯಾ ಸೊಲಬಣ್ಣನುರೆ ಮುಂ
ಗಡದ ಹಣವನು ಬಳಸಿ ಕೆಲಸವ
ನಡೆಯಿಸದೆ ವಂಚಿಸಿದ ದುರಿತದೆ ಮಡಿಯಲಿನ್ನವನಾ ‖ ೩ ‖

ಸುತನು ದೇವೇಂದ್ರಪ್ಪನಾ ಚರ
ಪತಿಸಮಾಧಿಯ ಕಟ್ಟಡವಗೈ
ವತಿಶಯದ ಕಜ್ಜಕ್ಕೆ ಮೊದಲೇ ಹಣವ ಕೈಕೊಂಡು
ಕೃತಿಯನದನೆಸಗದೆಯೆ ವಂಚನ
ಯುತನೆನಿಸಿದಾ ದ್ರೋಹದಿಂದಂ
ಮೃತಿಯನೊಂದಿದನೇನೊರೆವೆನಾ ಬಳಿಕೆ ರೋಣದೊಳು ‖ ೪ ‖

ಇರಲು ಹುಲುಗಪ್ಪೆಂಬುವೊಡ್ಡನು
ಕರೆಯಿಸುತ್ತಿನ್ನಾತನನು ತ
ದ್ಗುರುವರನ ಗದ್ದುಗೆಯ ಭವನವ ವಿರಚಿಸುವುದಕ್ಕೆ
ಪುರದ ಭಕ್ತರು ನಿಯಮಿಸಿದರಾ
ದುರುಳನುಂ ಕಟ್ಟುವುದ ನಟಿಸುತೆ
ಹಿರಿದೆನಿಪ ಧನವೆಳೆದುಕೊಂಡಲ್ಲಿರದೆ ಮೋಸದೊಳು ‖ ೫ ‖

ರೋಣವನು ಸೇರಿರ್ದ ಪಾಪಾ
ಧೀನಮಾನಸನವನ ಹೇಯು
ಪ್ರಾಣಮಂ ಯಮನೆಳೆದುಕೊಂಡುದನರಿದು ಬುಧಜನರು
ಭೂನುತನ ಗುರುವಿನ ಸಮಾಧಿಗೆ
ದಾನವಾಗೈತಂದ ಧನವನು
ಮಾನವರು ಮೋಸದೊಳು ಪಡೆದೊಡೆ ಜೀವಿಸರು ನಿಸದಂ ॥ ೬ ॥

ಎಂದರಾಬಳಿಕೂರಭಕ್ತರ
ವೃಂದವಿಸ್ಮಾನವಿಲುಗುಂದದೆ
ಬಂದಲಿಂಗಪ್ಪೆಂಬುವೊಡ್ಡನ ಕಟ್ಟಡದ ಕೃತಿಗೆ
ಒಂದಿಸಿರಲಾ ಕೃತಿಸಮಿತಿಜನ
ರಿಂದೆ ಕೂಲಿಗೆ ಮಿಗಿಲೆನಿಪ ಹಣ
ವೊಂದುವುದಕವನವರಿಗೆನಿತೋ ತೊಂದರೆಯ ಕೊಡುತೇ ॥ ೭ ॥

ಕೆಲದಿನವು ಕಟ್ಟಿದೊಡೆ ಸುಮ್ಮನೆ
ಕಳೆದು ಕೆಲದಿವಸಂಗಳಂ ಮೈ
ಯುಳಿಸಿಕೊಂಡವನೊಮ್ಮೆ ಕಲ್ಗಳನೊಡೆವ ಮಳೆಗಳನು
ಕೊಳಲು ತಾಂ ಹುಬ್ಬಳ್ಳಿಗೈತಂ
ದೊಲವಿನಿಂದವುಗಳನು ಕೊಂಡಾ
ಕಲವಡಿಗೆ ಮರಳುತಿರೆ ಮಾರ್ಗದ ಮಧ್ಯದೋಳ್ ಮಳೆಯಿಂ ॥ ೮ ॥

ತುಂಬಿ ಹರಿಯುವ ಬೆಣ್ಣೆಹಳ್ಳವ
ತಾಂ ಬಿಡದೆ ದಾಂಟುತ್ತೆ ಚೀಲದೆ
ತುಂಬಿದುಕ್ಕಿನ ಮಳೆಗಳನು ಹೊತ್ತಿದ್ದ ಭಾರದೊಳು
ಅಂಬುಮಧ್ಯದೆ ಬಿದ್ದು ಮುಳುಗು
ತ್ತಂಬವಣೆಗೊಂಡಳಿದನಾತನ
ಬೆಂಬಿಡದ ದುಷ್ಕರ್ಮವಿಂತಾಗಿಸಿತೆನಲು ಬುಧರು ॥ ೯ ॥



ಶ್ರೀ ನಿ. ಪ್ರ. ಗುರುಶಾಂತಮಹಾಸ್ವಾಮಿಗಳು, ವಿರಕ್ತಮಠ ಶೆಲವಡಿ.
(ಸದ್ಯದ ಪೀಠಾಧಿಕಾರಿಗಳು)

ಕೊನೆಗೆ ರೋಣದೊಳಿರ್ದ ಬಡಿಗೇ
ರನಘಮತಿ ಮಾನಪ್ಪನಾ ಗುರು
ವಿನ ಸಮಾಧಿಯ ನವಭವನಮಂ ಕಟ್ಟಿ ಪೂರೈಸೇ
ಜನರು ದುಷ್ಕರ್ಮಿಗಳೊಳಾಗದ
ಘನತರದ ಕಟ್ಟಡವಿದೀ ಸ
ಜ್ಜನನ ಕೈಯಿಂ ಮುಗಿದುದೆಂದಾತನನು ಪೊಗಳಿದರು || ೧೦ ||

ದುಷ್ಟ ಕೃತಿಗಳ ದುಷ್ಫಲಂಗಳ
ವೆಷ್ಟು ಮಟ್ಟಿಗೆ ದೊರೆತವೆಂಬ
ಸ್ಪಷ್ಟ ಕಲ್ಪನೆಯಾದುದಿಂತಾ ಕಟ್ಟಡದ ಕೃತಿಯೋಳ್
ಶಿಷ್ಟಜನರರಿವಂತೆ ಭಕ್ತಾ
ಭೀಷ್ಟದಾಯಕ ಗುರುಸಮಾಧಿ
ಶ್ರೇಷ್ಠಮಹಿಮೆಗಳಾದವೆಂತೆಂಬುದನು ಕಥಿಸುವೆನು || ೧೧ ||

ವಿಲಸಿತದ ಹುಬ್ಬಳ್ಳಿಯೋಳ್ ಸಲೆ
ನೆಲಸಿರುವ ತಗ್ಗಿನ ಮನೆಯ ಜಸ
ದಳೆದ ಘನವೈದ್ಯರು ವಿರೂಪಾಕ್ಷಪ್ಪನವರೊಮ್ಮೆ
ಶಿಲವಡಿಗೆ ಬಂದಲ್ಲಿರುವ ನಿ
ರ್ಮಳ ಮಠಾಧ್ಯಕ್ಷತೆಯನಾಂತುರೆ
ಬೆಳಗುತಿರ್ಪಾ ಬಸವರಾಜಸ್ವಾಮಿಗಳ ಕಂಡು || ೧೨ ||

ಅವರಡಿಗೆ ಪೊಡಮಟ್ಟು ತಮ್ಮಗೆ
ಕುವರರಿಲ್ಲದ ವಿಷಯವೆತ್ತಲು
ಶಿವಮಯನ ಗುರುಶಾಂತಯೋಗಿಯ ಗದ್ದುಗೆಗೆ ನೀವು
ಸುವಿಮಲದ ಭಕ್ತಿಯೊಳು ನಡಕೊ
ಳ್ಳುವುದರಿಂದಾ ಗುರು ಕೃಪೆಯೊಳೊಗೆ
ಯುವರು ಮಕ್ಕಳು ದಿಟವಿದೆಂದಾ ಸ್ವಾಮಿಗಳು ಪೇಳೇ || ೧೩ ||

ನಂಬುತವರೊರೆದುದನು ತನ್ಮಹಿ
ಷಾಂಬುನಿಧಿಯು ಸಮಾಧಿಗೈಸಲೆ
ಕುಂಬಿಡುತೆ ಪುತ್ರೋದಯದ ಸಂಕಲ್ಪವನು ಮನದೊಳ್
ತುಂಬಿಕೊಂಡುರೆ ನಡೆದುಕೊಳೆ ಸೊಗ
ದಿಂ ಜನಿಸಿದಾತ್ಮಜನು ವರ್ಷವು
ತುಂಬುವುದರೊಳೆ ಜನಿಸಿದನು ತದ್ವೈದ್ಯತಿಲಕರಿಗೇ ॥ ೧೪ ॥

ಮಿಗಿಲೆನಿಪ ಮುದದಿಂದವರು ನ
ಲ್ಮಗನ ಕೂದಲ ತೆಗೆಯಿಸುವುದಾ
ನಿಗಮನುತ ಸದ್ಗುರು ಸಮಾಧಿಯ ಮುಂಗಡೆಯೊಳೆಸಗಿ
ಬಗೆಯಲರೆ ಗಣತೃಪ್ತಿಯಾಗಿಸಿ
ಬಗೆವೊಡಾ ಗದ್ದುಗೆಯೊಳಿರಿಸಲು
ಸೊಗಸಿನಿಂದಿನ್ನೂರು ಮೇಣೈವತ್ತು ತೊಲೆಯಿರುವಾ ॥ ೧೫ ॥

ಬೆಳ್ಳಿಯಿಂ ವಿರಚಿಸಿದ ಮೂರ್ತಿಯ
ಸಲ್ಲಿಸಿದರಾ ಸ್ವಾಮಿಗಳಿಗವ
ರಲ್ಲಿರುವ ಸದ್ಭಕ್ತಿಭಾವಕೆ ಮೆಚ್ಚುತೂರವರು
ಉಲ್ಲಸಿತಮನರಾಗಿ ಗದ್ದುಗೆ
ಯಲ್ಲಿ ಸಿಷ್ಠೆಯನಿಟ್ಟು ನಡಕೊಂ
ಡಲ್ಲಿ ಬಯಕೆಯು ಫಲಿಸದಿರದೆಂದೊರೆಯ ತೊಡಗಿದರು ॥ ೧೬ ॥

ಒರೆವೆನಿನ್ನೊಂದಂ ಪವಾಡವ
ಸುರುಚಿರದ ಕುರಹಟ್ಟಿಯೊಳ್ ನೆಲ
ಸಿರುವ ಕುರುಬರ ಮುದಕಿ ಗಂಗಮ್ಮನು ಮಹಾರುಜೆಯಿಂ
ನಿರವಧಿಕ ದುಃಖವನು ಪಡೆದದ
ಪರಿಹರಿಸಿ ಕೊಳಲಾವ ಮದ್ದುಂ
ದೊರೆಯದಿರೆ ಕಡುಚಿಂತೆಯೊಳಗಾಗಿರ್ದ ಸಮಯದೊಳು ॥ ೧೭ ॥

ಶಿಲವಡಿಯ ಶಿವಯೋಗಿಗಳ ನಿ
ರ್ಮಳ ಸಮಾಧಿಗೆ ನಡೆದುಕೊಂಡೊಡೆ
ತೊಲಗದಿರದೀರೋಗವೆಂದಾ ಗ್ರಾಮದೋರ್ವನು ತಾಂ
ತಿಳಿಸಲಾ ಗಂಗಮ್ಮಗಾಕೆಯು
ತಳುವದೈತಂದಾದಿನದೊಳೇ
ಕೊಳಪ ಗುರುಶಾಂತೇಶ್ವರನ ಗದ್ದುಗೆಗೆ ಪೊಡಮಟ್ಟು ॥ ೧೮ ॥

ಅಲ್ಲಿರುವ ಭಸ್ಮವನು ತಾಂ ಮೈ
ಯಲ್ಲಿ ಲೇಪಿಸಿಕೊಂಡು ಕೆಲ ದಿನ
ವಲ್ಲಿಯೇ ಬಿಡದಿರ್ದು ಮಠದ ಸುಸೇವೆಯೆಸಗುತಿರೆ
ನಿಲ್ಲದೋಡಲು ತನ್ನರೋಗವು
ದುಲ್ಲಸಿತಮನಳಾಗಿ ವೃದ್ಧಿಯು
ಸಲ್ಲಿಸಿದಳುತ್ಸವದ ಪಾಲಿಕೆಗೈಸುತಾ ಮಠಕೆ ॥ ೧೯ ॥

ನುತ್ಯಗುರುವರನುತ್ಸವಕ್ಕ
ತ್ಯುತ್ತಮದ ಪಾಲಿಕೆಯ ಮುದಿತನ
ವೆತ್ತ ಗಂಗಮ್ಮನು ಸಮರ್ಪಿಸಿದುದನರಿದಜನರು
ಕುತ್ತವನು ಪರಿಹರಿಸಿಕೊಳ್ಳಲು
ಪೆತ್ತ ತದ್ಭಕ್ತಿಯ ಹಿರಿಮೆಯನು
ಮತ್ತೆಮತ್ತಂ ಪೊಗಳುತಿರ್ದರು ತುಷ್ಟಚಿತ್ತದೊಳು ॥೨೦॥

ಬಳಿಕೆ ಶಿರಕೋಳದ ಸುಗುಣಸಂ
ಕಲಿತನಾದಾ ರುದ್ರಗೌಡನ
ನಲವಿನೆಡೆಯೆನಿಸಿರ್ದ ಸತಿ ಬಸವಮ್ಮ ಬಹುದಿನದಿಂ
ತಳೆದ ತತ್‌ಕ್ಷಯರೋಗದಿಂದಂ
ಬಳಲುತಂ ಬೇಸತ್ತು ಕೊನೆಯೊಳ್
ಮಲರಹಿತ ಗುರುಶಾಂತಗುರುವಿನ ಗದ್ದುಗೆಗೆ ಬಂದು ॥ ೨೧ ॥

ನೆಲಕೊಡಲನಿಟ್ಟಿರಗಿ ಮಹಿಮನೆ
ಕಳೆಯಬೇಕೆನಗಂಟಿರುವ ರುಜೆ
ಯಳಲನೆನುತಂ ಕೈಮುಗಿದು ಗದ್ದುಗೆಯ ಮುಂದಿರುವಾ
ವಿಲಸಿತದ ಭಸಿತವನು ಮೈಯೊಳ್
ಸಲೆಸವರಿಕೊಳ್ಳುತ್ತೆ ಭಕ್ತಿಯು
ತಳೆದು ಬಲವಂದಳು ತದಮಳ ಸಮಾಧಿಯನು ಬಳಸಿ ॥ ೨೨ ॥

ಇಂತು ಭಕ್ತಿಯು ವಹಿಸುತಂ ರುಜೆ
ಯಾಂತ ಬಸವಮ್ಮನು ನಡೆದುಕೊಳ
ಲೆಂತೊ ಸೊರಗಿಸಿದಾಕ್ಷಯವು ತಾಂ ಕೆಲದಿನಂಗಳೊಳೇ
ಅಂತು ನಾಶವ ಮನೆಯವರ ಕಡು
ಸಂತಸದ ಕಡಲಲ್ಲಿ ಮುಳುಗಿಸ
ಲಾಂತರದ ಕಂಡೂರಜನರತ್ಯಧಿಕ ವಿಸ್ಮಯವಾ ॥ ೨೩ ॥

ಮಡದಿ ರೋಗದೆ ಮುಕ್ತಳಾಗಲು
ಪಡೆದ ನಲವಿಂ ರುದ್ರಗೌಡರು
ಮೃಡಮಯನ ಗುರುವರನ ತತ್ಪಾಲಿಕೆಯ ಮೇಲೊಲವಿಂ
ಇಡಲು ರಜತದ ಪಂಚಕಲಶವ
ಪಡಗರದೆ ಮಾಡಿಸುತೆ ತಂದದ
ಪೊಡಮಡುತೆ ಗದ್ದುಗೆಗೆ ಸಲ್ಲಿಸಿದರು ಸುಭಕ್ತಿಯೊಳು ॥ ೨೪ ॥

ಅಮಿತದಿನದಿಂ ದುಷ್ಟ ರೋಗಾ
ಕ್ರಮಣದಿಂ ಬಹುದುಃಖವೊಂದಿ
ದಮರಗೊಳ್ಳದ ಭರಮಗೌಡನದೊಮ್ಮೆ ಜನರಿಂದೇ
ಸುಮನಸಸ್ಸ್ತುತ ಗುರುಸಮಾಧಿಯ
ಸುಮಹಿತದ ಮಹಿಮೆಯನು ತಿಳಿದು
ತ್ತಮತರದ ನಿಷ್ಠೆಯೊಳು ತಾನೈತಂದು ಶಿಲವಡಿಗೆ ॥ ೨೫ ॥



ಶ್ರೀ ನಿ. ಪ್ರ. ಗುರುಶಾಂತಮಹಾಸ್ವಾಮಿಗಳವರ ಗದ್ದುಗೆಯ ದೃಶ್ಯ
(ವಿರಕ್ತಮಠ)

ವಿಮಳತರ ಮಠದೋಳ್ ಪ್ರವೇಶಿಸು
ತವಿಿತ ಭಕ್ತಿಯೊಳಾ ಸಮಾಧಿಗೆ
ನಮಿಸಿ ಗುರುವಂ ಧ್ಯಾನಿಸುತೆ ತನ್ಮಹಿಮೆಯಂ ಪೊಗಳಿ
ಸುಮನದಿಂ ತತ್ಸಮ್ಮುಖದ ನಿರು
ಪಮ ಸುಭಸ್ಮವ ಧರಿಸಿ ರೋಗಾ
ಕ್ರಮಿತ ದೇಹದೊಳ್ಳದೆ ಜೋಡಿಸಿ ಕೈಗಳಾ ಗೌಡಂ ‖ ೨೬ ‖

ಗುರುವೆ ಮರೆವೊಕ್ಕಿರುವೆನಾಂ ತ್ವ
ಚ್ಚರಣಯುಗಮಂ ನನ್ನ ಬೇನೆಯ
ಪರಿಹರಿಸಿ ಕಾಪಾಡು ಕರುಣದೊಳೆಂದು ಯಾಚಿಸುತೇ
ಇರಲು ಕೆಲದಿನವಲ್ಲಿ ಸಮನಂ
ತರದೊಳತಿಭೀಕರದ ರುಜೆ ಕ
ಣ್ಮರೆಯುದಾದುದು ತಚ್ಚರೇಂದ್ರನ ಮಹಿಮೆಯುರು ಬಲದಿಂ ‖ ೨೭ ‖


ನಿರತಿಶಯ ದುಃಖಕ್ಕೆ ನೆಲೆಯಾ
ಗಿರುವ ಭೀಕರತರದ ರೋಗದ
ಕುರುಹದೆನಿತಿಲ್ಲದೆಯೆ ಪೋದುದರಿಂದೆ ಗೌಡನು ತಾಂ
ಮರುಭವವ ಪಡೆದಂತೆ ಹಿಗ್ಗಿನ
ಶರನಿಧಿಯೊಳೀಸಾಡಿ ತದ್ಗುರು
ವರನು ಮಹಿಮಾರ್ಣವನು ದಿಟವೆಂಬುದನು ನಂಬಿದನು ‖ ೨೮ ‖

ಬಳಿಕೆ ಭರಮನಗೌಡನಾ ಗುರು
ಗಳ ಸಮಾಧಿಯ ಕಟ್ಟಡದ ಮೇ
ಲೊಲವಿನಿಂ ಸುರುಚಿರದ ಶಿಖರವ ಕಟ್ಟಿಸುತ್ತಲ್ಲಿ
ಸಲೆಗಣಾರಾಧನೆಯನಾಗಿಸಿ
ಚಲಿಸದುನ್ನತ ತರದ ಭಕ್ತಿಯ
ತಳೆದನಾ ಮಠದೊಡೆಯರಾದ ಸ್ವಾಮಿಗಳ ಪದದೋಳ್ ‖ ೨೯ ‖

ಆವ ಗುರುವು ಶಿವಾನುಭವವ ಮ
ಹಾವಿರತರಿಗೆ ಬೋಧಿಸುವ ತ
ತ್ಪಾವನದ ಸಮಯಡೊಳಗೆರಗಿದ ಭೀಕರದ ಸಿಡಿಲಿಂ
ತೀವಿದೊಲವಿಂ ಪೂಜೆಗೊಂಡನೊ
ಭೂವಿನುತನಾ ಸಿದ್ಧಲಿಂಗ
ಶ್ರೀ ವಿಭುವಿನಂಘ್ರಿಗಳ ಜಾನಿಪ ಸೌಖ್ಯವೆಮಗಿರಲಿ ॥ ೩೦ ॥

ಪರಮಪಾವನ ಚರಿತವಿದನಾ
ದರದೆ ಪಠಿಸುವ ಪೇಳುವಾಲಿಸು
ವರಿಗೆ ತದ್ಗುರುಶಾಂತ ಶಿವಯೋಗೀಶ್ವರನು ಕೃಪೆಯಿಂ
ಚಿರತರಾಯುರರೋಗ ಭಾಗ್ಯವ
ಕರುಣಿಸುವನಲ್ಲದೆಯೆ ಗುರುಹರ
ಚರರನುಗ್ರಹವಾಗಿಸುವನನವರತಮಿದು ನಿಜವು ॥ ೩೧ ॥

೯ನೆಯ ಸಂಧಿ ಸಂಪೂರ್ಣಂ ಪದ್ಯಗಳು ೩೪ಂಕ್ಕೆ ಮಂಗಳಂ



ಶ್ರೀ ಮ. ನಿ. ಜ. ಜಯದೇವ ಮುರುಘರಾಜೇಂದ್ರ
ಮಹಾಸ್ವಾಮಿಗಳವರ ಅನುಷ್ಠಾನ
(ಶ್ರೀ ಗುರುಶಾಂತ ಸ್ವಾಮಿಗಳವರ ಗದ್ದುಗೆಯ ಮೇಲೆ)

ಶ್ರೀ ಗುರುಶಾಂತ ಶಿವಯೋಗೀಶ್ವರಃ ಪ್ರಸೀದತು

ಇಪ್ಪತ್ತನೆಯ ಸಂಧಿ

ಸೂಚನೆ — ಶೆಲವಡಿಯ ಗುರುಶಾಂತ ಜಂಗಮ
ತಿಲಕನಮಳ ಸಮಾಧಿಯಿಂ ಜನ
ರೆಳಸಿದುರುಫಲಗಳನು ಪಡೆವುದು ಮುಗಿಯದಂತಿರ್ಕುಂ

ಆವ ಗುರುವಿನ ಮುಕ್ತಚೇತನ
ವಾವಗಂ ಶೆಲವಡಿಯ ಮಠದ ಸು
ಪಾವನದ ಗದ್ದುಗೆಯೊಳಿರ್ಪುದೊ ಜಾಗರಸ್ಥಿತಿಯಿಂ
ಆ ವಿಭುವು ಗುರುಶಾಂತ ಜಂಗಮ
ದೇವನೆಮ್ಮೆದೆಗದ್ದುಗೆಯೊಳಿ
ನ್ನಾವಗಂ ನೆಲಸಿರಲಿ ತಾನೆಂದೆರೆವೆವಾತನನು ॥ ೧ ॥

ಶುದ್ಧತರ ಶಿವಶಾಂತಯೋಗಿಗ
ಳಿದ್ದ ಸಮಯದೊಳವರೊಳಿಟ್ಟ ವಿ
ಶುದ್ಧನಿಷ್ಠೆಯು ಬಸವರಾಜಸ್ವಾಮಿಚಿತ್ತದೊಳು
ಇದ್ದುದಾಶ್ರಿತ ಭಕ್ತಜನತೆಯ
ನುದ್ಧರಿಸುವುರು ಮಹಿಮೆಯುಳ್ಳಾ
ಗದ್ದುಗೆಯೊಳಂ ತನ್ಮಹಿತ ಗುರುಭಕ್ತಿಯನುಪಮವು ॥ ೨ ॥

ಬೈಲಹೊಂಗಲದಲ್ಲಿ ಬೆಳಗುವ
ಸಾಲಿಮಠದವರಾದ ಸದ್ಗುಣ
ಶಾಲಿ ದುಂಡಯ್ಯಗಳ ಸತಿಯುಡಿವಮ್ಮನಿಗೆ ವಿಧಿಯಿಂ
ಕೀಲಿಸಿದ ಮಲರೋಗವಾವರ
ಶೀಲೆಯನು ಬಹುದಿನಗಳಿಂದಂ
ಪೇಳಲಸವಳದಳಲುರಿಗೆ ನೊಂಕಿರ್ದಳಕಟದಿಂದೆ ॥ ೩ ॥

ಕಂಡವೈದ್ಯರ ಕೈಯನುದ್ದನು
ಕೊಂಡೊಡಂ ರೋಗವದು ತಾಂ ಕೊನೆ
ಗೊಂಡುದಿಲ್ಲಡಿವಮ್ಮನುಂ ಮಿಗೆ ಬಳಲಿ ಬೆಂಡಾಗಿ
ಚಂಡಿಕಾಧವ ಸನ್ನುತಿಯ ಕೈ
ಕೊಂಡು ಬೇರಾವುದನು ಮೇಣ್ ಬಗೆ
ಗೊಂಡಿರದ ಸಮಯದೊಳ್ ಶಿವಶಿವಾ ಗಮೊಕ್ತ ಮಾರಾ ॥ ೪ ॥

ವರಸಮಾಧಿಯ ಮಹಿಮೆಯಂ ಕೆಲ
ಹಿರಿಯರಿಂದುರೆ ಕೇಳಿ ರೋಗದೆ
ಕೊರಗುತಿರ್ದಡಿವಮ್ಮನಾಗಮಿಸುತ್ತೆ ಶಿಲವಡಿಗೆ
ಸುರುಚಿರದ ಮಠದಲ್ಲಿ ಶೋಭಿಸು
ತಿರುವ ಗದ್ದುಗೆಯಲ್ಲಿ ನಂಬಿಕೆ
ಯಿರಿಸಿ ತಾಂ ನಡೆಕೊಳ್ಳತೊಡಗಿದ ಕೆಲದಿವಸಗಳೊಳೇ ॥ ೫ ॥

ಅಳಿಯೆ ಮಲರೋಗವದು ತದ್ಗುಣ
ನಿಳಯಳಿಗೆ ಮೇಣಾ ಸುಭಕ್ತೆಯು
ಮಲರಹಿತಮನದಲ್ಲಿ ಗುರುಪದನಿಷ್ಠೆ ದಿನ ದಿನಕೇ
ಬಳೆಯುತಂ ಪ್ರತಿವರ್ಷದೊಳ್ ಮಠ
ದೊಳಗೆ ನಡೆಯುತ್ತಿರುವ ತದ್ಗುರು
ತಿಲಕ ಪುಣ್ಯದಿನಾಚರಣೆಗಾಗಮಿಸುತಿದುವರೆಗಂ ॥ ೬ ॥

ಮಾಡಿಸುತೆ ಮಧುರ ಪ್ರಸಾದವ
ನೀಡಿ ಗುರುಚರ ಭಕ್ತ ಮುಖ್ಯರಿ
ಗೋಡಿಸುತೆ ನಿಜಮನದ ಚಂಚಲತೆಯನು ನಿಷ್ಠೆಯೊಳು
ಕೂಡಿ ತದ್ಗುರುಮಹಿಮೆಗಳ ಕೊಂ
ಡಾಡಿ ಭಕ್ತಿಯ ಪಾಲ್ಗಡಲೊಳೀ
ಸಾಡಿ ತನ್ನಾತ್ಮಕ್ಕೆ ಶಾಂತಿಯ ಪಡೆದು ಪೋಗುವಳು ॥ ೭ ॥

ಮತ್ತಮಾ ಶಲವಡಿಪೊಳಲ ಸವ
ದತ್ತಿ ಯೀಶ್ವರನಾಮಕಗೆ ಸ
ದ್ವೃತ್ತ ಭಕ್ತಗೆ ಪಾರ್ಶ್ವವಾಯುವು ಬರುತಮೊಡಗಣ್ಣಾ
ಎತ್ತಿ ರೆಪ್ಪೆಯ ಬಡಿವುದನು ನಿಲಿ
ಸುತ್ತೆ ಮೇಣ್ ಬಾಯೋರೆಯಾಗಿಸು
ತತ್ಯಧಿಕ ದುಃಖಕ್ಕೆ ಬೀಡೆನಿಸಿರ್ದ ಸಮಯದೊಳು ॥ ೮ ॥

ಅಪ್ಪಿ ಚಿಂತೆಯ ನೋಡಲೈತಂ
ದಿಪ್ಪ ಹುರುಕಡ್ಲಿಯ ವಿರೂಪಾ
ಕ್ಷಪ್ಪನಿಂತು ಸುರಿದನು ಕೇಳಿನ್ನೀಶ್ವರಪ್ಪನೆ ನೀಂ
ಬಪ್ಪ ಬಹುರೋಗಗಳ ಕಳೆಯು
ತ್ತಿಪ್ಪ ಮಹಿಮೆಯನಾಂತು ಗುರುಶಾಂ
ತಪ್ಪಗಳ ಗದ್ದುಗೆಯು ನಮ್ಮೂರಲ್ಲಿಯೇ ಇರ್ಪ್ಪಂ ॥ ೯ ॥

ಸನಗೆ ಮೊದಲೀ ವಾಯುವೈತಂ
ದೆನಿತೊ ದುಃಖವನಿತ್ತುದಿನ್ನೋ
ರ್ವನಿಗೆ ತೋರಿಸದಂತೆ ನಾಂ ಗದ್ದುಗೆಯ ಭಸ್ಮದೊಳೇ
ಘನರುಜೆಯ ಪರಿಹರಿಸಿಕೊಂಡೆನು
ಜನಿಸಿದೀರೋಗಕ್ಕೆ ನೀಂ ಮ
ದ್ದನು ಹುಡುಕದಿರು ಬೇರೆಡೆಯೋಳಾ ಗುರುಸಮಾಧಿಯನು ॥ ೧೦ ॥

ಮರೆವುಗುವುದೊಂದೇ ಪಥವು ನಿನ
ಗಿರುವುದೆನಲಾ ನುಡಿಯ ನಂಬುತೆ
ಪರಮ ಭಕ್ತಿಯೊಳೀಶ್ವರಪ್ಪನು ಗದ್ದುಗೆಗೆ ಬಂದು
ಧರಿಸಿಕೊಂಡಲ್ಲಿರುವ ಭಸ್ಮವ
ಕರವ ಮುಗಿದೆನ್ನಪ್ಪನೇ ನೀಂ
ಪರಿಹರಿಸು ರೋಗವಿದನೆನುತಂ ಬೇಡಿಕೊಳೆ ಬಳಿಕಂ ॥ ೧೧ ॥

ಮಾಯಮಾದುದು ಕೆಲದಿನದೊಳೇ
ವಾಯುವದು ಕಾಣದಯೆ ತನ್ನಯ
ಬಾಯಿಯೆಡಗಣ್ಣುಂ ಮೊದಲವೋಲಾಗಲಾ ಭಕ್ತಂ
ಕಾಯಜಾಹಿತರೂಪನಾ ಜಿತ
ಮಾಯ ಗುರುಶಾಂತೇಶ್ವರನ ಮಹಿ
ಮಾಯತನವೇ ತತ್ಸಮಾಧಿಯದೆಂದು ನಂಬಿದನು ॥ ೧೨ ॥

ಸುರುಚಿರದ ಶೆಲವಡಿಯೊಳೊಲವಿಂ
ದಿರುವನೊರ್ವನು ನಾಗನೂರಿನ
ಕುರುಬರಾ ಮುದಕಪ್ಪನಾತನ ಮಗಳು ಹನುಮವ್ವಾ
ನೆರೆಸುಗರ್ಭವಧರಿಸಿ ಸಮ್ಮುದ
ಭರಿತಳಾಗಿರೆ ಹಡೆವ ಸಮಯದೆ
ಬರುವ ಬೇನೆಗಳೇಳದಯೆ ತಡೆಯಲು ತದಂಗನೆಗೆ ॥ ೧೩ ॥

ಪೇಳಲಿನ್ನೇಂ ಬಿಲ್ಲವಾಯುವ
ದೇಳುತತಿ ಕಷ್ಟವನು ಕೊಟ್ಟರೆ
ನಾಲಿಗೆಯು ತಾಂ ಕಡಿದುಕೊಂಡವಳೆಳಲು ತೊಡಗಿದಳು
ತಾಳಿ ಚಿಂತೆಯು ಮನೆಯ ಜನರಾ
ಕಾಲದೊಳ್ ಸಲೆ ಜಾಣತನದೊಳ್
ಮೇಲೆನಿಸಿ ಪೆಸರಾಂತ ವೈದ್ಯನ ಭರದೆ ಕರೆತಂದು ॥ ೧೪ ॥

ತೋರಿಸಲು ತದ್ವೈದ್ಯನಧಿಕವಿ
ಚಾರದಿಂದೆ ಪರೀಕ್ಷಿಸುತ್ತಿ
ನ್ನೀರುಜೆಯು ಪರಿಹಾರವಾಗದು ಬದುಕಳಿವಳೆಂದು
ತೋರುತಿದೆ ನನಗೆನುತೆ ಪೋಗಲು
ಭೂರಿಚಿಂತೆಯು ತುಂಬಿಕೊಂಡುದು
ಬೇರೆಮಾರ್ಗವ ಕಾಣದಿರುವಾ ಮನೆಯವರ ಮನದೊಳ್ ॥ ೧೫ ॥

ಆಗಳಾ ಮುದುಕಪ್ಪನಾ ಭವ
ರೋಗ ವೈದ್ಯೋತ್ತಮ ಪರಮಶಿವ
ಯೋಗಿಯಿತನುಭವೆಯ ಬದುಕಿಸಲಿಲ್ಲದಿರಲಸುವಾ
ಪೋಗಿಸಲಿತಾನೆಂದು ನಿಶ್ಚಿತ
ನಾಗಿ ಮಠಕಾಗಮಿಸಿ ಭರದಿಂ
ದಾ ಗುರುವಿನಮಳಿನ ಸಮಾಧಿಗೆ ನಮಿಸಿ ಕೈಮುಗಿದು ॥ ೧೬ ॥

ಅಲ್ಲಿರುವ ಭಸ್ಮವನು ತೆಗೆದೊ
ಯ್ದುಲ್ಲಸಿತಮನನಾಗಿ ರೋದನ
ದಲ್ಲಿರುವ ಮಗಳಂಗಕೈಸಲೆ ಪೂಸೆ ತಾಸಿನೊಳೇ
ನಿಲ್ಲದೆಯೆ ಹಡೆದೆರಡುಗಂಡುಗ
ಳೆಲ್ಲರಾ ದುಃಖಾನ್ವಿತದ ಮನ
ದಲ್ಲಿ ಕಡುಸಂತಸವ ಮೂಡಿಸಿದಳು ತದಾತ್ಮಜೆಯು ॥ ೧೭ ॥

ಮಂಗಳವು ಗುರುಶಾಂತ ಮೂರ್ತಿಗೆ
ಮಂಗಳವು ತತ್ಪರವು ಚರಿತೆಗೆ
ಮಂಗಳವು ತದ್ವಸನರಾಜಶ್ರೀಗಳಡಿಗಳಿಗೆ
ಮಂಗಳವು ಶಿವಯೋಗಿಪುಂಗವ
ಜಂಗಮೋತ್ತಮ ಲೀಲೆಗಳೊಳುರೆ
ಕಂಗೊಳಿಸುವೀ ಸತ್ಪ್ರಬಂಧವ ಕೇಳ್ವ ಸರ್ವರಿಗೆ || ೨೬ ||

ಮೆರೆವ ಬಳ್ಳಾರಿ ಪ್ರದೇಶದೊ
ಳುರುತರರ ಲಿಂಗಾಂಗಿಗಳ ಸ
ಚ್ಚರಿತಕೆಡೆಯಾದೇಳುಬೆಂಚಿಯೆನಿಪ್ಪ ಹಳ್ಳಿಯೊಳು
ಗುರುಮಠಾಧಿಪರಾಗಿ ಸದ್ಗುಣ
ಭರಿತರಾಗಿ ಸುಕೀರ್ತಿಯೊಂದಿದ
ನಿರುಪಮರ ನಿಲಾಂಬಿಕಾನಯನಾರ್ಯರಾತ್ಮಜನು || ೨೭ ||

ಪರಮ ಗುರುಹರಚರಕೃಪಾಗತ
ಸರಸ ಕವಿತಾ ಮೋದಯುತನಾ
ಗಿರುವ ನಾಗೇಶನು ಮಹಾಶಿವಯೋಗಿ ಯೆನಿಸಿರ್ದಾ
ನಿರುಪಮನ ಗುರುಶಾಂತ ಜಂಗಮ
ವರನ ಭವ್ಯಚರಿತ್ರವಿದ ಸಲೆ
ವಿರಚಿಸಿದನಾ ಪೂಜ್ಯಮಹಿಮನೊಳಿಟ್ಟ ಭಕ್ತಿಯೊಳು || ೨೮ ||

ಶಾಲಿವಾಹನ ಭೂವರನ ಶಕ
ಕಾಲದಾ ಹದಿನೆಂಟುನೂರರ
ಮೇಲಿನೆಂಬತ್ತಾಗೆ ಮೇಣ್ ನಾಲ್ಕನೆಯ ಶುಭಕೃತುವೋಳ್
ಕೇಲಿಸಿರ್ದಾ ಮಾರ್ಗಶೀರ್ಷ ವಿ
ಶಾಲ ಬಹುಳ ಪ್ರತಿಪದನ್ವಿತ
ದಾಲಸಿತ ಬುಧವಾರದೋಳ್ ಮುಗಿದುದು ಚರಿತ್ರವಿದು || ೨೯ ||

ನಿತ್ಯ ನಿರಘ ನಿರಂಜನಶ್ರೀ
ನುತ್ಯ ಜಂಗಮ ಸಾರ್ವಭೌಮನ
ಸತ್ಯ ಶುದ್ಧ ಸುಕಾಯಕದೆ ಭಕ್ತಿಯನು ವರ್ಧಿಸಿದಾ
ಮೃತ್ಯುಹರ ಗುರುಸಿದ್ಧಲಿಂಗನ
ಭೃತ್ಯರಾಗುವ ಸಂಪದವನೆಮ
ಗಿತ್ತು ರಕ್ಷಿಸಲೆಂದು ಬೇಡುವೆನಾ ಮಹಾ ಪ್ರಭುವಾ ॥ ೩೦ ॥

ಪರಮಪಾವನ ಚರಿತವಿದನಾ
ದರದೆ ಪಠಿಸುವ ಪೇಳುವಾಲಿಸು
ವರಿಗೆ ತದ್ಗುರುಶಾಂತ ಶಿವಯೋಗೀಶ್ವರನು ಕೃಪೆಯಿಂ
ಚಿರತರಾಯುರರೋಗ ಭಾಗ್ಯವ
ಕರುಣಿಸುವನಲ್ಲದೆಯೆ ಗುರುಹರ
ಚರರನುಗ್ರಹವಾಗಿಸುವನನವರತವಿದು ನಿಜವು

೨೦ನೆಯ ಸಂಧಿ ಸಂಪೂರ್ಣಂ ಪದ್ಯಗಳು ೭೭೦ಕ್ಕೆ ಮಂಗಳಂ

ಶ್ರೀ ಗುರುಶಾಂತ ಶಿವಯೋಗೀಶ್ವರ ಚರಿತ್ರಂ ಸಂಪೂರ್ಣಂ

ಶ್ರೀ

ಶ್ರೀ ಗುರುಶಾಂತ ಶಿವಯೋಗೀಶ್ವರ
ಪುರಾಣ ಪ್ರಕಟನೆಗೆ
ಸಹಾಯ ಸಲ್ಲಿಸಿದವರ ಹೆಸರುಗಳ ವಿವರ

ಶ್ರೀ	ನಿ. ಪ್ರ. ನೀಲಕಂಠಸ್ವಾಮಿಗಳು ಗುಬ್ಬಿ, ಗುಳೇದಗುಡ್ಡ		೩೦೧
ಶ್ರೀ	ನಿ. ಪ್ರ. ಶಿವಮೂರ್ತಿಸ್ವಾಮಿಗಳು, ಅವರಾದಿ		೧೦೧
ಶ್ರೀ	ನಿ. ಪ್ರ. ಶಂಕರಸ್ವಾಮಿಗಳು, ನಂದಿವೇರಿ		೧೦೧
ಶ್ರೀ	ಶಂಕರಗೌಡ್ರು ಪೋಲೀಸಪಾಟೇಲ, ಶಿಲವಡಿ		೧೦೧
,,	ವೀರಪ್ಪನವರು ಸಂಣಮನಿ	,,	೧೦೧
,,	ವಿರಪ್ಪನವರು ನಡುವಿನಮನಿ	,,	೧೦೧
,,	ಶಾಂತಪ್ಪನವರು ದೊಡ್ಡಮನಿ	,,	೧೦೧
,,	ಡಾ. ಷಡಕ್ಷರಯ್ಯನವರು ಹೊಸಮಠ	,,	೧೦೧
,,	ಚೆಂಬಂಣ ಶೆಟ್ರು ಹಸಿಬಿ	,,	೧೦೧
,,	ದುಂಡಪ್ಪನವರು ಸೊಬರದ	,,	೧೦೧
,,	ಈಶ್ವರಪ್ಪನವರು ಸವದತ್ತಿ	,,	೧೦೧
,,	ಬಸಪ್ಪನವರು ಯರಗುಪ್ಪಿ	,,	೧೦೧
,,	ಬಸವಂಣೆಪ್ಪನವರು ಮುಗಳಿ	,,	೧೦೧
,,	ಶಾಂತಪ್ಪನವರು ಹಸಿಬಿ	,,	೧೦೧
,,	ಈರಪ್ಪನವರು ಜಡಿ	,,	೧೦೧
,,	ವೀರಪ್ಪನವರು ತೆಗ್ಗಿನಮನಿ	,,	೧೦೧
,,	ಚನ್ನಪ್ಪನವರು ಗಡಾದ	,,	೧೦೧
,,	ಈರಣ್ಣಾ ಹುರಕಡ್ಲಿ	,,	೧೦೧
,,	ರುದ್ರಪ್ಪನವರು ಹುರಕಡ್ಲಿ	,,	೧೦೧
,,	ಚನಬಸಪ್ಪನವರು ಕುರಹಟ್ಟಿ	,,	೧೦೧
,,	ಸಂಣವೀರಪ್ಪ ಹಸಿಬಿ	,,	೧೦೧
,,	ಬಸಪ್ಪನವರು ಯಮ್ಮಿ	,,	೧೦೧
,,	ಶಿವಪ್ಪನವರು ನಾಯ್ಕರ	,,	೧೦೧
,,	ಶಿವಪ್ಪನವರು ದೇಸಾಯಿ	,,	೧೦೧
,,	ಫಕ್ಕೀರಪ್ಪನವರು ನೀರಲಗಿ	,,	೧೦೧
,,	ವೀರಪ್ಪನವರು ನೀರಲಗಿ	,,	೧೦೧

ಶ್ರೀ ಶಂಕ್ರಪ್ಪನವರು ಕುಬಸದ	,,	೧೦೧
,, ದೊಡ್ಡವೀರಪ್ಪನವರು ತೋಟದ	,,	೧೦೧
ಶ್ರೀಮತಿ ಚನ್ನವ್ವನವರು ಗಡಾದ	,,	೧೦೧
,, ತಿಪ್ಪವ್ವನವರು ಸಿಂಗಾಡಿ	,,	೧೦೧
,, ಗಂಗವ್ವನವರು ಜಂಪಣಶೆಟ್ರು, ನವಿಲಗುಂದ		೧೦೧
ಶ್ರೀ ಬಸನಗೌಡ್ರು, ಕುರಹಟ್ಟಿ		೧೦೧
,, ಬಸನಗೌಡ್ರು ಚಿಕ್ಕೊಪ್ಪ		೧೦೧
,, ಬಸವರಾಜ ಫಡೀಸೂರ, (ಶ್ರೀ ಸಿದ್ಧಲಿಂಗೇಶ್ವರ ನಾಟಕ ಕಂಪನಿ ಒಡೆಯರು)		೬೧
,, ಗಂಗಾಧರಶಾಸ್ತ್ರಿಗಳು ಚಿತ್ತರಗಿ (ಶ್ರೀ ಕುಮಾರ ವಿಜಯ ನಾಟಕ ಕಂಪನಿ ಒಡೆಯರು)		೧,೧೦.
,, ರಾಚಪ್ಪನವರು ಜಂಗಮಮುನಿ ಸಾ॥ ಗದಗ		೧೦೧
,, ರುದ್ರಗೌಡ್ರು ಶಿರಕೊಳ್ಳ		೧೦೧
,, ವೀರಭದ್ರಪ್ಪನವರು, ಅಬ್ಬಿಗೇರಿ		೧೦೧
,, ಮುರಿಗೆಪ್ಪನವರು ಮಾನ್ವಿ ಸಾ॥ ಗದಗ		೫೧
,, ಈರಪ್ಪ ದಾನಪ್ಪ ಗಾಣಿಗೇರ ಸಾ॥ ಶೆಲವಡಿ		೫೧
,, ಸಿದ್ಧಪ್ಪ ನೀರಲಗಿ ಸಾ॥ ಶೆಲವಡಿ		೫೧
,, ಫಕ್ಕೀರಪ್ಪ ನಡ್ಮಳ್ಳಿ ಸಾ॥ ಶೆಲವಡಿ		೫೧
ಶ್ರೀಮತಿ ಗುರವ್ವ ಅಂಗಡಿ ಸಾ॥ ಶೆಲವಡಿ		೫೧
ಶ್ರೀಮತಿ ಫಕ್ಕೀರವ್ವ ಬಸಾಪೂರ		೧೦೧